ಶುಕ್ರವಾರ, ಜುಲೈ 16, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 197 | ಪುಟ 14 + 4
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ತಮ್ಮ 15 ವರ್ಷಗಳ ಸಿನಿ ಪಯಣದಲ್ಲಿ ಹಲವು ಏರಿಳಿತ ಕಂಡ ಗಣೇಶ್, ಇದೀಗ 'ಗಾಳಿಪಟ-2' ಹಾರಿಸುತ್ತಿದ್ದಾರೆ. ಯೋಗರಾಜ್ ಭಟ್ಟರೊಂದಿಗಿನ ನಂಟು ತೆರೆದಿಟ್ಟಿದ್ದಾರೆ.

ಆಳ-ಅಗಲ ಡ್ರೋನ್ ಕಡಿವಾಣ ಸಡಿಲ

ಆಗಸ್ಟ್ 26–ಸೆ.2ವರೆಗೆ ಜೆಇಇ-ಮುಖ್ಯ ಪರೀಕ್ಷೆ 7

'ನಕಲಿ ಖಾತೆ' ಹಾವಳಿ; ಇಲ್ಲ ಕಡಿವಾಣ 6

ಸೆನ್ಸೆಕ್ಸ್	ನಿಫ್ಟಿ	₹/$
53,158 ▲	15,924 ▲	74.54 ▲

ಐಪಿಸಿ 124 ಎ(ದೇಶದ್ರೋಹ) ಸೆಕ್ಷನ್ ಅಪಾರ ದುರ್ಬಳಕೆಗೆ 'ಸುಪ್ರೀಂ' ಕಳವಳ

ಬ್ರಿಟಿಷರ ಕಾನೂನು ಇನ್ನೂ ಏಕೆ?

ನವದೆಹಲಿ (ಪಿಟಿಐ): ಮಹಾತ್ಮ ಗಾಂಧಿಯಂತಹ ವ್ಯಕ್ತಿಗಳನ್ನು 'ಮೌನ'ವಾಗಿಸಿ ಸ್ವಾತಂತ್ರ್ಯ ಚಳವಳಿಯನ್ನು ದಮನ ಮಾಡುವ ಉದ್ದೇಶದಿಂದ ಬ್ರಿಟಿಷರು ರಚಿಸಿದ್ದ ಭಾರತೀಯ ದಂಡ ಸಂಹಿತೆಯ(ಐಪಿಸಿ) 124 (ಎ)(ದೇಶದ್ರೋಹ) ಸೆಕ್ಷನ್ ಅನ್ನು ಏಕೆ ಕೈಬಿಡಬಾರದು ಎಂದು ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಗುರುವಾರ ಪ್ರಶ್ನಿಸಿದೆ. ಈ ಕಾನೂನು ಅಪಾರವಾಗಿ ದುರ್ಬಳಕೆ ಆಗುತ್ತಿರುವುದರ ಬಗ್ಗೆ ನ್ಯಾಯಾಲಯವು ಕಳವಳವನ್ನೂ ವ್ಯಕ್ತಪಡಿಸಿದೆ.

ಐಪಿಸಿಯ 124 (ಎ) ಸೆಕ್ಷನ್ ಅನ್ನು ಪ್ರಶ್ನಿಸಿ ಭಾರತೀಯ ಸಂಪಾದಕರ ಕೂಟ ಮತ್ತು ಮೈಸೂರಿನವರಾದ ಮೇಜರ್ ಜನರಲ್ ಎಸ್.ಜಿ. ಒಂಬತ್ತುಕೆರೆ ಅವರು ಸಲ್ಲಿಸಿರುವ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಒಪ್ಪಿದೆ. ಕಾನೂನಿನ ದುರ್ಬಳಕೆಯೇ ಅತ್ಯಂತ ದೊಡ್ಡ ಕಳವಳವಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರ ನೇತೃತ್ವದ ಪೀಠವು ಹೇಳಿದೆ.

ಮಹಾತ್ಮ ಗಾಂಧಿ, ಗೋಖಲೆ ಮತ್ತು ಇತರರನ್ನು ಮೌನವಾಗಿಸಲು ಬ್ರಿಟಿಷರು ಬಳಸಿದ ಅದೇ ಕಾನೂನನ್ನು ಸ್ವಾತಂತ್ರ್ಯ ಪಡೆದು 75 ವರ್ಷಗಳ ಬಳಿಕವೂ ಬಳಸುವ ಅಗತ್ಯ ಇದೆಯೇ ಎಂದು ಸರ್ಕಾರದ ಪರವಾಗಿ ಹಾಜರಾಗಿದ್ದ ಅಟಾರ್ನಿ ಜನರಲ್ ಅವರನ್ನು ಪೀಠವು ಪ್ರಶ್ನಿಸಿದೆ. ಕೇಂದ್ರಕ್ಕೆ ನೋಟಿಸ್ ನೀಡಿದೆ.

ದೇಶದ್ರೋಹ ವಿರುದ್ಧದ ಸೆಕ್ಷನ್ ಅನ್ನು 'ಅಪಾರವಾಗಿ ದುರ್ಬಳಕೆ' ಮಾಡಲಾಗಿದೆ. ನ್ಯಾಯಾಲಯವು ರದ್ದುಪಡಿಸಿ ಬಹುಕಾಲ ಆಗಿದ್ದರೂ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66 ಎ ಕೂಡ ಇದೇ ರೀತಿಯ ದುರ್ಬಳಕೆ ಆಗಿದೆ. ಒಂದು ಮರಕ್ಕಾಗಿ ಬಡಗಿಯು ಇಡೀ ಕಾಡನ್ನೇ ಕಡಿದುದಕ್ಕೆ ಇದನ್ನು ಹೋಲಿಸಬಹುದಾಗಿದೆ ಎಂದು ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ಹೃಷಿಕೇಶ್ ರಾಯ್ ಅವರಿದ್ದ ಪೀಠವು ಹೇಳಿದೆ.

7ನೇ ಪುಟ ನೋಡಿ

ಸರ್ಕಾರದ ಸಮರ್ಥನೆ

124 ಎ ಸೆಕ್ಷನ್ ಅನ್ನು ಅಟಾರ್ನಿ ಜನರಲ್ ಕೆ.ಕೆ.ವೇಣುಗೋಪಾಲ್ ಸಮರ್ಥಿಸಿಕೊಂಡಿದ್ದಾರೆ. ಈ ಸೆಕ್ಷನ್ ಕಾನೂನಿನ ಭಾಗವಾಗಿ ಇರಬೇಕು. ಅದನ್ನು ರದ್ದುಪಡಿಸಬಾರದು ಎಂದು ಹೇಳಿದ್ದಾರೆ. ಸೆಕ್ಷನ್‌ನ ದುರ್ಬಳಕೆ ತಡೆಗೆ ಮಾರ್ಗಸೂಚಿಯನ್ನು ನ್ಯಾಯಾಲಯವು ರೂಪಿಸಬಹುದು ಎಂದು ಅವರು ಸಲಹೆ ಕೊಟ್ಟಿದ್ದಾರೆ. ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ನೆರವು ನೀಡುವಂತೆ ವೇಣುಗೋಪಾಲ್ ಅವರನ್ನು ಕೋರಲಾಗಿದೆ.

ಗಾಜು ಒಡೆದವರ ಮೇಲೆ ದೇಶದ್ರೋಹ ಪ್ರಕರಣ

ಚಂಡೀಗಡ: ಕೇಂದ್ರ ಕೃಷಿ ಕಾಯ್ದೆಗಳ ವಿರುದ್ಧ ಹರಿಯಾಣದ ಸಿರ್ಸಾದಲ್ಲಿ ಈಚೆಗೆ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ರೈತರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. ಪ್ರತಿಭಟನೆ ವೇಳೆ ಅಲ್ಲಿಗೆ ಭೇಟಿ ನೀಡಿದ್ದ ರಾಜ್ಯದ ವಿಧಾನಸಭೆ ಸ್ಪೀಕರ್ ರಣಬೀರ್ ಗಂಗ್ವಾ ಅವರ ಕಾರಿನ ಮೇಲೆ ದಾಳಿ ನಡೆದಿತ್ತು. ಕಾರಿನ ಗಾಜು ಒಡೆದಿತ್ತು. ಈ ಸಂಬಂಧ 100ಕ್ಕೂ ಹೆಚ್ಚು ರೈತರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. 8

- ಕೇದಾರ್‌ನಾಥ್ ಸಿಂಗ್ ಪ್ರಕರಣದಲ್ಲಿ (1962) ಈ ಸೆಕ್ಷನ್ ಅನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು
- ಅಪರಾಧ ದಾಖಲೆ ಬ್ಯೂರೊ ಪ್ರಕಾರ, ಈ ಸೆಕ್ಷನ್ ಅಡಿ ಆಗಿರುವ ಶಿಕ್ಷೆ ಪ್ರಮಾಣ ಶೇ 3.3 ಮಾತ್ರ

ಮೋದಿ, ಶಾ ಭೇಟಿಗಾಗಿ ಬಿಎಸ್‌ವೈ ದೆಹಲಿಗೆ

ಬೆಂಗಳೂರು: ರಾಜ್ಯ ಸಚಿವ ಸಂಪುಟ ಪುನಾರಚನೆಗೆ ಒಪ್ಪಿಗೆ ಪಡೆಯಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಶುಕ್ರವಾರ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಲಿದ್ದಾರೆ. 7

ಒಳ ಪುಟಗಳು

ಮಳೆ : ಅಲ್ಲಲ್ಲಿ ಭೂಕುಸಿತ: ಸಂಚಾರ ಅಸ್ತವ್ಯಸ್ತ 8

ಬ್ರೇಕ್ ಇನ್‌ಸ್ಪೆಕ್ಟರ್ ಬಳಿ 30 ನಿವೇಶನ! 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಹಕಾರ ಸಂಘಕ್ಕೆ ಚುನಾವಣೆ ಸಚಿವ ಸಂಪುಟ ಸಭೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಸಂಘಗಳು, ಸೊಸೈಟಿಗಳು, ಎಪಿಎಂಸಿಗಳ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು.

ಸಹಕಾರ ಇಲಾಖೆ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳು, ಸೊಸೈಟಿಗಳು, ಎಪಿಎಂಸಿಗಳಲ್ಲಿ ಅವಧಿ ಮುಗಿದ ನಿರ್ದೇಶಕ ಮಂಡಳಿಗಳಿಗೆ ಚುನಾವಣೆ ನಡೆಸಲಾಗುವುದು. ಆದರೆ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಡಿಸೆಂಬರ್‌ವರೆಗೆ ಚುನಾವಣೆ ನಡೆಸದಿರಲು ಸಭೆಯಲ್ಲಿ ನಿರ್ಧರಿಸಲಾಗಿದೆ. ಕೋವಿಡ್ ಕಾರಣದಿಂದ ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವುದು ಬೇಡ ಎಂದು ತೀರ್ಮಾನಿಸಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

'ಎಷ್ಟು ಸಹಕಾರ ಸಂಘಗಳು, ಸೊಸೈಟಿ ಮತ್ತು ಎಪಿಎಂಸಿಗಳಲ್ಲಿ ಚುನಾವಣೆ ನಡೆಸಬೇಕು ಎಂಬ ಮಾಹಿತಿ ಇನ್ನಷ್ಟೇ ಕಲೆ ಹಾಕಬೇಕು. ರಾಜ್ಯ ಚುನಾವಣಾ ಆಯೋಗವೇ ಚುನಾವಣೆ ನಡೆಸಲಿದೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಆಮ್ಲಜನಕ ಉತ್ಪಾದನಾ ಘಟಕಕ್ಕೆ ಪ್ರೋತ್ಸಾಹ

ಬೆಂಗಳೂರು: ವೈದ್ಯಕೀಯ ಆಮ್ಲಜನಕ ಉತ್ಪಾದನಾ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಮಾಡುವವರಿಗೆ ಆರ್ಥಿಕ ಪ್ರೋತ್ಸಾಹ ನೀಡುವ ಯೋಜನೆಗೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ರಾಜ್ಯದಲ್ಲಿ 9 ಉತ್ಪಾದನಾ ಘಟಕಗಳಿವೆ. ಒಟ್ಟು 815 ಟನ್ ಉತ್ಪಾದನಾ ಸಾಮರ್ಥ್ಯವಿದ್ದು, 5,700 ಟನ್ ದಾಸ್ತಾನು ಸಾಮರ್ಥ್ಯವಿದೆ. ಇವೆರಡರ ಪ್ರಮಾಣ ಹೆಚ್ಚಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಹೂಡಿಕೆ ಮಾಡುವ ಉದ್ಯಮಿಗಳಿಗೆ ರಿಯಾಯ್ತಿಗಳನ್ನು ನೀಡಲಾಗುವುದು ಎಂದು ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು. ಆಮ್ಲಜನಕ ಉತ್ಪಾದನಾ ಘಟಕದ ಬಂಡವಾಳ ವೆಚ್ಚದ ಮೇಲೆ ಶೇ 25 ರಷ್ಟು ಸಹಾಯಧನ, ಮೂರು ವರ್ಷಗಳವರೆಗೆ ವಿದ್ಯುತ್ ಮೇಲಿನ ತೆರಿಗೆಯಿಂದ ಸಂಪೂರ್ಣ ವಿನಾಯ್ತಿ, ವಿದ್ಯುತ್ ಶುಲ್ಕ ಪಾವತಿಯಲ್ಲೂ ಪ್ರತಿ ಟನ್ ಆಮ್ಲಜನಕ ಉತ್ಪಾದನೆ ಮೇಲೆ ₹1,000 ಸಬ್ಸಿಡಿ ನೀಡಲಾಗುವುದು. ನೋಂದಣಿ ಮತ್ತು ಮುದ್ರಾಂಕದ ಸ್ಟ್ಯಾಂಪ್ ಡ್ಯೂಟಿಯಲ್ಲಿ ಶೇ 100 ರಷ್ಟು ವಿನಾಯ್ತಿ, ಭೂಪರಿವರ್ತನೆಗಾಗಿ ಪಾವತಿಸುವ ಶುಲ್ಕವನ್ನು ಶೇ 100 ರಷ್ಟು ಮರುಪಾವತಿ ಮಾಡಲು ಒಪ್ಪಿಗೆ ನೀಡಲಾಗಿದೆ ಎಂದರು.

ಆ್ಯಸಿಡ್ ದಾಳಿ: ನಾಲ್ವರಿಗೆ ಜೀವಾವಧಿ ಶಿಕ್ಷೆ; ₹ 20 ಲಕ್ಷ ದಂಡ

ಚಿಕ್ಕಮಗಳೂರು: ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಮೆಣಸೆ ಗ್ರಾಮದ ವಿಚ್ಛೇದಿತ ಮಹಿಳೆಗೆ ಆ್ಯಸಿಡ್ ಎರಚಿದ್ದ ಪ್ರಕರಣದಲ್ಲಿ ನಾಲ್ವರಿಗೆ ಜೀವಾವಧಿ ಶಿಕ್ಷೆ ಹಾಗೂ ತಲಾ ₹5 ಲಕ್ಷ ದಂಡ ವಿಧಿಸಿ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಗುರುವಾರ ಆದೇಶ ನೀಡಿದೆ. 7B

ಬಡ ವಿದ್ಯಾರ್ಥಿಗಳಿಗೆ ಊಟ, ವಸತಿ ಉಚಿತ

ಬೆಂಗಳೂರು: ಕೆಂಗೇರಿ ಹೋಬಳಿ ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮವು ಬಡ ಹಾಗೂ ಅನಾಥ ಗಂಡು ಮಕ್ಕಳಿಗೆ 1ನೇ ತರಗತಿಯಿಂದ ಪಿಯುಸಿವರೆಗಿನ (6 ರಿಂದ 18 ವರ್ಷ) ವ್ಯಾಸಂಗದ ಅವಧಿಯಲ್ಲಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಉಚಿತವಾಗಿ ಕಲ್ಪಿಸಲಿದೆ.

'ಈ ಮಕ್ಕಳಿಗೆ ಆಶ್ರಮದಲ್ಲಿ ಪಾಠ ಕೂಡ ಹೇಳಿಕೊಡಲಾಗುತ್ತದೆ. ಭಾರತೀಯ ಸಂಸ್ಕೃತಿ ಪರಿಚಯಿಸುವ ಕೆಲಸವೂ ಮಾಡಲಾಗುತ್ತದೆ. ವಿದ್ಯಾರ್ಥಿಗಳು ಆಶ್ರಮದ ಸುತ್ತಲಿನ ಶಾಲೆ ಮತ್ತು ಕಾಲೇಜುಗಳಿಗೆ ದಾಖಲಾಗಬಹುದು. ಆಸಕ್ತರು ಕೂಡಲೇ ಅರ್ಜಿ ಸಲ್ಲಿಸಬಹುದು' ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ 9731004160 ಅಥವಾ 6364117435.

ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲು ಬಿಬಿಎಂಪಿಯ ದಕ್ಷಿಣ ವಲಯದ ಎಲ್ಲ ವಾರ್ಡ್‌ಗಳಲ್ಲಿ 'ಮನೆ ಮನೆ ಸಮೀಕ್ಷೆ'ಯನ್ನು ನಡೆಸಲಾಗುತ್ತಿದೆ.

ಸಮೀಕ್ಷೆ ನಡೆಸುವವರು ಮನೆ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಾರ್ವಜನಿಕರು ಸೂಕ್ತ ಮಾಹಿತಿ ಒದಗಿಸಿ ಸಹಕಾರ ನೀಡುವಂತೆಯೂ ದಕ್ಷಿಣ ವಲಯದ ಜಂಟಿ ಆಯುಕ್ತರು ಕೋರಿದ್ದಾರೆ.

'ಸಮೀಕ್ಷೆಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಸರ್ಕಾರೇತರ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು, ಸ್ವ-ಸಹಾಯ ಗುಂಪುಗಳು ಪಾಲಿಕೆಯ ದಕ್ಷಿಣ ವಲಯದ ಜಂಟಿ ಆಯುಕ್ತರನ್ನು ಖುದ್ದಾಗಿ ಇದೇ 16ರ ಒಳಗೆ ಸಂಪರ್ಕಿಸಬಹುದು' ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ವಿಳಾಸ: ಜಂಟಿ ಆಯುಕ್ತರು (ದಕ್ಷಿಣ), ಬಿಬಿಎಂಪಿ ವಾಣಿಜ್ಯ ಸಂಕೀರ್ಣ ಕಟ್ಟಡ, ಎರಡನೇ ಬ್ಲಾಕ್, ಜಯನಗರ, ಬೆಂಗಳೂರು.

ಸಂಪರ್ಕ: 9480685540/ 9480684080

ಡ್ರಗ್ಸ್ ಜಪ್ತಿ: ಅಕ್ರಮವಾಗಿ ನೆಲೆಸಿದ್ದ 38 ಮಂದಿ ಬಂಧನ

ವಿದೇಶಿಯರ 65 ಮನೆಗಳ ಮೇಲೆ ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಮೇಲೆ ಇತ್ತೀಚೆಗಷ್ಟೇ ದಾಳಿ ಮಾಡಿ ಆಯುಧ ಹಾಗೂ ಡ್ರಗ್ಸ್ ಜಪ್ತಿ ಮಾಡಿದ್ದ ಸಿಸಿಬಿ ಪೊಲೀಸರು, ನಗರದಲ್ಲಿ ನೆಲೆಸಿರುವ ವಿದೇಶಿಗರ 65 ಮನೆಗಳ ಮೇಲೆ ಗುರುವಾರ ಬೆಳಿಗ್ಗೆ ದಾಳಿ ಮಾಡಿದರು.

ಡ್ರಗ್ಸ್ ಮಾರಾಟ ಮಾಡುತ್ತಿದ್ದ ಹಾಗೂ ಅಕ್ರಮವಾಗಿ ನೆಲೆಸಿದ್ದ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಸಿಸಿಬಿ ತಂಡಗಳು, ಏಕಕಾಲದಲ್ಲಿ ದಾಳಿ ಮಾಡಿ ಮನೆಗಳಲ್ಲಿ ಪರಿಶೀಲನೆ ನಡೆಸಿದವು.

ಪೂರ್ವ ವಿಭಾಗ, ಈಶಾನ್ಯ ವಿಭಾಗ, ವೈಟ್‌ಫೀಲ್ಡ್ ವಿಭಾಗದ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ವಿದೇಶಿಯರು ನೆಲೆಸಿದ್ದಾರೆ. ಕಮ್ಮನಹಳ್ಳಿ, ಬಾಣಸವಾಡಿ, ಸಂಪಿಗೆಹಳ್ಳಿ, ರಾಮಮೂರ್ತಿನಗರ ಹಾಗೂ ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ವಿದೇಶಿಯರ ಸಂಖ್ಯೆ ಹೆಚ್ಚಿದೆ.

ಅಪರಾಧ ಹಿನ್ನೆಲೆಯುಳ್ಳವರ ಹಾಗೂ ವಿವಿಧ ಪ್ರಕರಣದಲ್ಲಿ ಬಂಧಿತರಾದವರು ನೀಡಿದ ಹೇಳಿಕೆ ಆಧರಿಸಿ ಪಟ್ಟಿ ಸಿದ್ಧಪಡಿಸಿದ್ದ ಪೊಲೀಸರು, ಅಂಥ ವಿದೇಶಿಯರ ಮನೆಗಳ ಮೇಲೆ ದಾಳಿ ಮಾಡಿ ಮಾಹಿತಿ ಕಲೆಹಾಕಿದರು. ಡಿಸಿಪಿ, 6 ಎಸಿಪಿ, 20 ಇನ್‌ಸ್ಪೆಕ್ಟರ್ ಹಾಗೂ 100 ಸಿಬ್ಬಂದಿ ದಾಳಿಯಲ್ಲಿದ್ದರು.



ದಾಳಿ ವೇಳೆ ಜಪ್ತಿ ಮಾಡಲಾದ ಡ್ರಗ್ಸ್

'ಡ್ರಗ್ಸ್ ಸಾಗಣೆ ಹಾಗೂ ಮಾರಾಟ ವಿರುದ್ಧ ಕಾರ್ಯಾಚರಣೆ ನಡೆಯುತ್ತಿದೆ. ಕೆಲ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿಗಳು, ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ ಮಾಹಿತಿ ಇತ್ತು. ಅದರನ್ವಯ ವಿದೇಶಿಯರ ಮನೆಗಳ ಮೇಲೆ ದಾಳಿ ನಡೆಸಿ ತಪಾಸಣೆ ನಡೆಸಲಾಯಿತು' ಎಂದು ಸಿಸಿಬಿ ಜಂಟಿ ಕಮಿಷನರ್ ಸಂದೀಪ್ ಪಾಟೀಲ ಹೇಳಿದರು.

'ನೈಜೀರಿಯಾ ಪ್ರಜೆಯೊಬ್ಬನ ಮನೆಯಲ್ಲಿ 90 ಎಕ್ಸ್‌ಟೆಸಿ ಮಾತ್ರೆಗಳು ಹಾಗೂ ಮತ್ತೊಬ್ಬನ ಮನೆಯಲ್ಲಿ ಗಾಂಜಾ ಸಿಕ್ಕಿದೆ. ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಇಬ್ಬರನ್ನೂ ಬಂಧಿಸಲಾಗಿದೆ' ಎಂದೂ ತಿಳಿಸಿದರು.

ಅಕ್ರಮ ವಾಸವಿದ್ದ 38 ಮಂದಿ ಬಂಧನ: ವೀಸಾ ಅವಧಿ ಮುಗಿದರೂ ತಮ್ಮ ದೇಶಕ್ಕೆ ವಾಪಸು ಹೋಗದೇ ಅಕ್ರಮವಾಗಿ ನೆಲೆಸಿದ್ದ 38 ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ದಾಳಿ ಸಂದರ್ಭದಲ್ಲಿ ವಿದೇಶಿಯರ ವೀಸಾ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಲಾಯಿತು. 38 ಮಂದಿ ಬಳಿ ಯಾವುದೇ ದಾಖಲೆಗಳು ಇರಲಿಲ್ಲ. ವೀಸಾ ಇದ್ದರೂ ಅವಧಿ ಮುಗಿದಿತ್ತು' ಎಂದು ಸಂದೀಪ್ ಪಾಟೀಲ ಹೇಳಿದರು.

'ಡ್ರಗ್ಸ್ ಪ್ರಕರಣದಲ್ಲಿ ವಿದೇಶಿಯರು ಹೆಚ್ಚಾಗಿ ಭಾಗಿಯಾಗುತ್ತಿದ್ದಾರೆ. ಅಂಥವರ ಮೇಲೆ ನಿಗಾ ವಹಿಸಲಾಗಿದೆ. ಡ್ರಗ್ಸ್ ವಿರುದ್ಧದ ಕಾರ್ಯಾಚರಣೆ ಮುಂದುವರಿಯಲಿದೆ' ಎಂದೂ ತಿಳಿಸಿದರು.

'ಮನೆ ಮಾಲೀಕರಿಗೆ ಎಚ್ಚರಿಕೆ'

'ವಿದೇಶಿಯರ ದಾಖಲೆಗಳನ್ನು ಪರಿಶೀಲನೆ ಮಾಡದೇ ಹೆಚ್ಚಿನ ಬಾಡಿಗೆ ಆಸೆಗಾಗಿ ಮನೆ ನೀಡುವ ಮಾಲೀಕರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ಹೇಳಿದರು.

'ಬಾಡಿಗೆ ನೀಡುವ ಮುನ್ನ ದಾಖಲೆ ಪರಿಶೀಲನೆ ನಡೆಸುವುದು ಕಡ್ಡಾಯ. ವಿದೇಶಿ ಬಾಡಿಗೆದಾರರ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಗೆ ಮಾಲೀಕರು ಮಾಹಿತಿ ನೀಡಬೇಕು' ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

ಎಂಎಸ್‌ಐಎಲ್ ಮಳಿಗೆಗೆ ಪರವಾನಗಿ ಎತ್ತಿ ಹಿಡಿದ ಹೈಕೋರ್ಟ್

ಬೆಂಗಳೂರು: ರಾಜ್ಯದಲ್ಲಿ ಎಂಎಸ್‌ಐಎಲ್ ಮದ್ಯ ಮಳಿಗೆ ತೆರೆಯಲು ಪರವಾನಗಿ ನೀಡಿದ ಸರ್ಕಾರದ ತೀರ್ಮಾನವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಅಬಕಾರಿ ನಿಯಮ 3(11-ಸಿ) ಉಲ್ಲಂಘಿಸಿ ಎಂಎಸ್‌ಐಎಲ್ ಮಳಿಗೆಗೆ ಪರವಾನಗಿ ನೀಡಲಾಗಿದೆ ಎಂದು ಖಾಸಗಿ ಮದ್ಯದ ಅಂಗಡಿಗಳ ಮಾಲೀಕರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಪೀಠ, ಈ ಆದೇಶ ನೀಡಿದೆ.

'ಒಂದು ಪ್ರದೇಶದ ಜನಸಂಖ್ಯೆ ಆಧರಿಸಿ ಮದ್ಯದ ಅಂಗಡಿಗಳಿಗೆ ಪರವಾನಗಿ ನೀಡಬೇಕು. ಎಂಎಸ್‌ಐಎಲ್‌ಗೆ ಪರವಾನಗಿ ನೀಡುವಾಗ ಅಕ್ಕ-ಪಕ್ಕ ಇರುವ ಯಾವುದೇ ಮದ್ಯದ ಅಂಗಡಿ ಪರವಾನಗಿ ರದ್ದುಗೊಳಿಸಿಲ್ಲ. ಹೀಗಾಗಿ ಎಂಎಸ್‌ಐಎಲ್‌ಗೆ ಪರವಾನಗಿ ನೀಡಿರುವುದನ್ನು ಪ್ರಶ್ನಿಸುವ ಅಧಿಕಾರ ಅರ್ಜಿದಾರರಿಗೆ 'ಇಲ್ಲ' ಎಂದು ಎಂಎಸ್‌ಐಎಲ್ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ ವಾದಿಸಿದರು.

'ಸರ್ಕಾರದ ಈ ತೀರ್ಮಾನ ಅಸಂವಿಧಾನಿಕ ಎಂದು ಹೇಳಲು ಆಗುವುದಿಲ್ಲ. ಆದರೆ, ಸರ್ಕಾರದ ಏಜೆನ್ಸಿ ಏಕಸ್ವಾಮ್ಯ ಸೃಷ್ಟಿಸುವ ಸಾಧ್ಯತೆ ಇದೆ' ಎಂದು ಪೀಠ ಹೇಳಿತು.

ಜೋಯಾಲುಕ್ಕಾಸ್‌ನಲ್ಲಿ ಬ್ಯಾಂಗಲ್ ಫೆಸ್ಟ್

ಬೆಂಗಳೂರು: 'ಜೋಯಾಲುಕ್ಕಾಸ್ 2021ನೇ ಆವೃತ್ತಿಯ ಬ್ಯಾಂಗಲ್ ಫೆಸ್ಟ್‌ನಲ್ಲಿ ಉತ್ತಮ ಕೊಡುಗೆಗಳು ಲಭ್ಯವಿವೆ. ಈ ಮೇಳದಲ್ಲಿ ಗ್ರಾಹಕರು ತಮ್ಮ ಇಷ್ಟದ ಬಳೆ ಖರೀದಿಯ ಮೇಲೆ ಮೇಕಿಂಗ್ ಚಾರ್ಜ್‌ನಲ್ಲಿ ಶೇ 30ರಷ್ಟು ಉಳಿತಾಯ ಮಾಡಬಹುದು' ಎಂದು ಜೋಯಾಲುಕ್ಕಾಸ್ ಕಂಪನಿ ತಿಳಿಸಿದೆ.

'ಬ್ಯಾಂಗಲ್ ಫೆಸ್ಟ್' ಇದುವರೆಗಿನ ನಮ್ಮ ಕೆಲವು ಅತ್ಯುತ್ತಮ ವಿನ್ಯಾಸ-ಗಳನ್ನು ಪ್ರದರ್ಶಿಸುತ್ತದೆ. ದೊಡ್ಡ ಉಳಿತಾಯದೊಂದಿಗೆ ವೈವಿಧ್ಯಮಯ ಬಳೆ ಸಂಗ್ರಹವನ್ನು ಹೊಂದಲು ಗ್ರಾಹಕರನ್ನು ನಾವು ಆಹ್ವಾನಿಸುತ್ತಿದ್ದೇವೆ' ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜಾಯ್ ಅಲುಕ್ಕಾಸ್ ಹೇಳಿದ್ದಾರೆ.

ಸರ್ಕಾರ ಇತ್ತೀಚೆಗೆ ಚಿನ್ನಾಭರಣಗಳಿಗೆ ಹಾಲ್‌ಮಾರ್ಕ್ ಕಡ್ಡಾಯಗೊಳಿಸಿದೆ. ವಿಶೇಷ ಕೊಡುಗೆಯ ಅವಧಿಯಲ್ಲಿ, ಗ್ರಾಹಕರು ತಮ್ಮ ಹಳೆಯ ಚಿನ್ನಾಭರಣಗಳನ್ನು ಹೊಚ್ಚ ಹೊಸ 916 ಬಿಐಎಸ್ ಹಾಲ್‌ಮಾರ್ಕ್ ಆಭರಣದೊಂದಿಗೆ ವಿನಿಮಯ ಮಾಡಿಕೊಳ್ಳಲು ಅವಕಾಶವಿದೆ. ಅಲ್ಲದೆ, ಜೋಯಾಲುಕ್ಕಾಸ್‌ನಲ್ಲಿ ಖರೀದಿಸಿದ ಎಲ್ಲಾ ಆಭರಣಗಳ ಮೇಲೆ ಉಚಿತ ನಿರ್ವಹಣೆ ಮತ್ತು ಒಂದು ವರ್ಷದ ಉಚಿತ ವಿಮೆಯನ್ನು ಪಡೆಯಬಹುದು. ಆಗಸ್ಟ್ 3ರವರೆಗೆ ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದ ಎಲ್ಲ ಜೋಯಾಲುಕ್ಕಾಸ್ ಷೋರೂಂಗಳಲ್ಲಿ ಈ ಕೊಡುಗೆಗಳು ಇರಲಿವೆ ಎಂದು ಅವರು ತಿಳಿಸಿದ್ದಾರೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 16ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಕೆ.ಕೆ. ಆಸ್ಪತ್ರೆ ರಸ್ತೆ ಮತ್ತು ಎನ್‌ಇಎಸ್ ಬಸ್ ನಿಲ್ದಾಣ ರಸ್ತೆ, ರೈಲ್ವೆ ಪರ್ಯಾಯ ರಸ್ತೆ, ಟೆಲಿಕಾಂ ಬಡಾವಣೆ, ತಲಕಾವೇರಿ ಬಡಾವಣೆ, ಬಾಹುಬಲಿ ನಗರ, ಅಟ್ಟೂರು ಬಡಾವಣೆ, ಮುನೇಶ್ವರ ಬಡಾವಣೆ, ಸಂತೋಷ ನಗರ, ವೀರಸಾಗರ ಮುಖ್ಯ ರಸ್ತೆ, ಮಹಾತ್ಮ ಗಾಂಧಿ ಬಡಾವಣೆ, ಕೆನರಾ ಬ್ಯಾಂಕ್ ಬಡಾವಣೆ, ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ, ಧನಲಕ್ಷ್ಮಿ ಬಡಾವಣೆ, ಪಾರ್ವತಮ್ಮ ಬಡಾವಣೆ, ಮರಿಯಪ್ಪನಪಾಳ್ಯ. ಸುಬ್ರಮಣ್ಯ ನಗರ 7 ಮತ್ತು 8ನೇ ಮುಖ್ಯರಸ್ತೆ, ಎಲ್. ಎನ್. ಪುರ, ದೇವಯ್ಯ ಪಾರ್ಕ್, ವಯ್ಯಾಲಿಕಾವಲ್, ನೆಹರೂ ನಗರ, ಮಲ್ಲೇಶ್ವರ 11ನೇ ಮುಖ್ಯರಸ್ತೆ, ಹೊಸ ಬಿಇಎಲ್ ರಸ್ತೆ, ಜಲದರ್ಶಿನಿ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ಆಹಾರ ನಿಗಮದ ಉಗ್ರಾಣಗಳ ಮೇಲೆ ತನಿಖಾ ದಳದಿಂದ ದಾಳಿ

ಕಾಳಸಂತೆಗೆ ಸಾಗಿಸುತ್ತಿದ್ದ ಪಡಿತರ ರಾಗಿ, ಅಕ್ಕಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಡಿತರ ಚೀಟಿದಾರರಿಗೆ ವಿತರಿಸಲು ಪೂರೈಕೆಯಾಗಿದ್ದ ಆಹಾರ ಧಾನ್ಯಗಳನ್ನು ಯಶವಂತಪುರದಲ್ಲಿರುವ ರಾಜ್ಯ ಆಹಾರ ನಿಗಮದ ಉಗ್ರಾಣಗಳಿಂದಲೇ ಕಾಳಸಂತೆಗೆ ಸಾಗಿಸಲು ಯತ್ನಿಸುತ್ತಿದ್ದವರನ್ನು ಗುರುವಾರ ಪತ್ತೆ ಹಚ್ಚಿರುವ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ತನಿಖಾ ದಳ, 65 ಚೀಲ ರಾಗಿ, 95 ಕ್ವಿಂಟಲ್ ಅಕ್ಕಿ ಮತ್ತು ಮೂರು ಲಾರಿಗಳನ್ನು ವಶಪಡಿಸಿಕೊಂಡಿದೆ.

ಕಾಳಸಂತೆಗೆ ಆಹಾರ ಧಾನ್ಯ ಸಾಗಿಸುತ್ತಿರುವ ಮಾಹಿತಿ ಆಧರಿಸಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಜಂಟಿ ನಿರ್ದೇಶಕ ಡಾ.ಕೆ. ರಾಮೇಶ್ವರಪ್ಪ ನೇತೃತ್ವದ ತಂಡ ಗುರುವಾರ ಮಧ್ಯಾಹ್ನ ಯಶವಂತಪುರದಲ್ಲಿರುವ ಉಗ್ರಾಣಗಳ ಮೇಲೆ ದಾಳಿಮಾಡಿ, ತಪಾಸಣೆ ನಡೆಸಿದೆ. ಆಗ ಉಗ್ರಾಣಗಳ ಆವರಣದಿಂದ ತರಾತುರಿಯಲ್ಲಿ ಹೊರಹೋಗುತ್ತಿದ್ದ ಲಾರಿಯೊಂದನ್ನು ಹಿಡಿದು ತಪಾಸಣೆ ನಡೆಸಿದಾಗ, ಬಿಲ್ ಇಲ್ಲದ 65 ಚೀಲ ರಾಗಿ ಪತ್ತೆಯಾಗಿದೆ.

'ರಾಗಿಯನ್ನು ಸಾಗಿಸುತ್ತಿದ್ದ ಕೆಎ–01 ಎಡಿ–3629 ಸಂಖ್ಯೆಯ ಲಾರಿಯನ್ನು ವಶಪಡಿಸಿಕೊಳ್ಳಲಾಗಿದೆ. ಲಾರಿ ಮಾಲೀಕ ಹಾಸನದ ಫಯಾಜ್ ಮತ್ತು ಚಾಲಕನ ವಿರುದ್ಧ ಯಶವಂತಪುರ ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಯಾವ ಉಗ್ರಾಣದಿಂದ ರಾಗಿಯನ್ನು ಲಾರಿಗೆ ತುಂಬಿಸಲಾಗಿತ್ತು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಅಕ್ಕಿ ಬಿಟ್ಟು ಪರಾರಿ:

ಇನ್ನೊಂದು ಪ್ರಕರಣದಲ್ಲಿ, ನಗರದ ಹೆಗ್ಗನಹಳ್ಳಿಯ ಚೌಡೇಶ್ವರಿ ನಗರದ ಮಂಜುನಾಥ ನ್ಯಾಯಬೆಲೆ ಅಂಗಡಿ ಹೆಸರಿನಲ್ಲಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ 93.45 ಕ್ವಿಂಟಲ್ ಅಕ್ಕಿಯನ್ನು ಯಶವಂತಪುರದಲ್ಲಿರುವ ಎನ್‌ಜಿಜಿ–1 ಉಗ್ರಾಣದಲ್ಲಿ ಬಿಲ್ ಮಾಡಲಾಗಿತ್ತು. ಆದರೆ, ಕಾರ್ಯಾಚರಣೆ ಆರಂಭವಾಗುತ್ತಿದ್ದಂತೆಯೇ ಅಕ್ಕಿಯನ್ನು ಸಾಗಿಸಲು ಬಂದವರು ತಪ್ಪಿಸಿಕೊಂಡು ಓಡಿಹೋಗಿದ್ದಾರೆ.

'ಮಂಜುನಾಥ ನ್ಯಾಯಬೆಲೆ ಅಂಗಡಿ ಮಾಲೀಕನ ಹೆಸರಿನಲ್ಲಿ ಮಂಜುನಾಥ್ ಆರ್ ಮತ್ತು ಅವರ ಮಗ ಮುನಿರಾಜು ಎಂಬುವವರು ಪಡಿತರ ಅಕ್ಕಿಯನ್ನು ಕಾಳಸಂತೆಗೆ ಕೊಂಡೊಯ್ಯಲು ಯತ್ನಿಸುತ್ತಿದ್ದುದು ಕಂಡುಬಂದಿದೆ. ನ್ಯಾಯಬೆಲೆ ಅಂಗಡಿ ಮಾಲೀಕ ಲಕ್ಷ್ಮೀನಾರಾಯಣ, ಮಂಜುನಾಥ್ ಆರ್ ಮತ್ತು ಮುನಿರಾಜು ಎಂಬುವವರ ವಿರುದ್ಧ ಪ್ರತ್ಯೇಕ ದೂರು ದಾಖಲಿಸಲಾಗಿದೆ' ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

ಯಶವಂತಪುರ ಎಪಿಎಂಸಿ ಯಾರ್ಡ್ ಆವರಣದಲ್ಲಿ ರಾಜ್ಯ ಆಹಾರ ನಿಗಮದ ಐದು ಉಗ್ರಾಣಗಳು ಒಂದೇ ಕಡೆ ಇವೆ. ಅಲ್ಲಿ ಕೆಎ–19 ಸಿ–7791 ಮತ್ತು ಕೆಎ–16 ಎ–2978 ಸಂಖ್ಯೆಯ ಎರಡು ಖಾಲಿ ಲಾರಿಗಳು ಕಾರ್ಯಾಚರಣೆ ವೇಳೆ ಪತ್ತೆಯಾಗಿವೆ. ಅಧಿಕೃತವಾಗಿ ಪಡಿತರ ಸಾಗಣೆಗೆ ಸಂಬಂಧ ಪಡದ ಈ ಲಾರಿಗಳನ್ನು ಕಾಳಸಂತೆಗೆ ಆಹಾರ ಧಾನ್ಯ ಸಾಗಿಸಲು ತಂದಿರುವ ಅನುಮಾನ ವ್ಯಕ್ತವಾಗಿದೆ. ಎರಡೂ ಲಾರಿಗಳನ್ನು ರಾಮೇಶ್ವರಪ್ಪ ನೇತೃತ್ವದ ತಂಡ ವಶಕ್ಕೆ ಪಡೆದು, ಪೊಲೀಸರಿಗೆ ಒಪ್ಪಿಸಿದೆ.

ರೇವಾ ವಿ.ವಿ: ನೂತನ ಕೋರ್ಸ್‌ಗಳ ಉದ್ಘಾಟನೆ

ಯಲಹಂಕ: ಕೋವಿಡ್ ಸಾಂಕ್ರಾಮಿಕ ರೋಗದಿಂದ ಪೋಷಕರನ್ನು ಕಳೆದುಕೊಂಡಿರುವ ವಿದ್ಯಾರ್ಥಿಗಳನ್ನು ದತ್ತು ಪಡೆದು, ಉಚಿತವಾಗಿ ಶಿಕ್ಷಣ ನೀಡಲು ನಿರ್ಧರಿಸಲಾಗಿದೆ ಎಂದು ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಹೇಳಿದರು.



ಪಿ.ಶ್ಯಾಮರಾಜು

ಪ್ರಸಕ್ತ ಶೈಕ್ಷಣಿಕ ವರ್ಷದ ನೂತನ ಕೋರ್ಸ್‌ಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಕೆಲವು ಕುಟುಂಬಗಳಲ್ಲಿ ದುಡಿಯುತ್ತಿದ್ದ ಒಬ್ಬರೇ ಪೋಷಕರು ಉದ್ಯೋಗ ಕಳೆದುಕೊಂಡು ಶುಲ್ಕ ಭರಿಸಲು ಸಾಧ್ಯವಾಗದ ಪರಿಸ್ಥಿತಿಯಿದ್ದರೆ ಅಂತಹ ವಿದ್ಯಾರ್ಥಿಗಳಿಗೂ ಅತಿ ಕಡಿಮೆ ವೆಚ್ಚದಲ್ಲಿ ಶಿಕ್ಷಣ ನೀಡಲಾಗುವುದು' ಎಂದರು.

ವಿಶ್ವವಿದ್ಯಾಲಯದಲ್ಲಿ ಡಿಜಿಟಲೀಕರಣದ ಸೌಲಭ್ಯ ಅಳವಡಿಸಿಕೊಂಡಿರುವುದರಿಂದ ವಿದ್ಯಾರ್ಥಿಗಳಿಗೆ ವೃತ್ತಿ ಅಭಿವೃದ್ಧಿ ಕೇಂದ್ರದ ಮೂಲಕ ಆನ್‌ಲೈನ್ ತರಬೇತಿ ನೀಡಲಾಗಿದ್ದು, ಇತ್ತೀಚೆಗೆ ನಡೆದ ಆನ್‌ಲೈನ್ ನೇಮಕಾತಿಯಲ್ಲಿ ಪ್ರತಿಷ್ಠಿತ ಕಂಪನಿಗಳಲ್ಲಿ ಶೇ 100ರಷ್ಟು ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

ರೊಬೊಟಿಕ್ಸ್, ಆಟೋಮೋಷನ್ ಸೇರಿದಂತೆ 24 ನೂತನ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. ಪ್ರಸ್ತುತ ಆರೋಗ್ಯ ಮುಖ್ಯವಾಗಿರುವುದರಿಂದ ಈ ಸಲ ಆರೋಗ್ಯ ಹಾಗೂ ಕೃಷಿ ಮತ್ತು ರಕ್ಷಣೆಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕಳೆದ ವರ್ಷ 10 ಸರ್ಕಾರಿ ಶಾಲೆಗಳನ್ನು ದತ್ತು ಪಡೆಯಲಾಗಿತ್ತು. ಕೋವಿಡ್ ಪರಿಸ್ಥಿತಿಯಿದ್ದರೂ ಸಹ 'ಇ ವಿಷಯ' ಘೋಷಿಸುವ ಉಪಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಾಲೆಗಳಲ್ಲಿ 12 ಪ್ರಮಾಣೀಕೃತ ಕೋರ್ಸ್‌ಗಳನ್ನು ಒಳಗೊಂಡಂತೆ 15 ಗಂಟೆಗಳಲ್ಲಿ ತಂತ್ರಜ್ಞಾನ, ಸಾಮಾನ್ಯಜ್ಞಾನ, ವಿಜ್ಞಾನ ಮತ್ತು ಮಾನವಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳನ್ನು ಕಲಿಸಲಾಗುತ್ತಿದೆ. ಕೆಲವು ಶಾಲೆಗಳಲ್ಲಿ ಶೌಚಾಲಯ, ಕಾಂಪೌಂಡ್ ಮತ್ತಿತರ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿ ಮೇಲ್ದರ್ಜೆಗೇರಿಸಲಾಗುವುದು ಎಂದರು.

ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಎನ್.ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೇಕೆದಾಟು: ಒಟ್ಟು 2,500 ಹೆಕ್ಟೇರ್ ಜಮೀನು ಗುರುತು

ಪರ್ಯಾಯ ಭೂಮಿ ಹಂಚಿಕೆಗೆ ಪ್ರಸ್ತಾವ

• ಆರ್.ಜಿತೇಂದ್ರ

ರಾಮನಗರ: ಬಹು ನಿರೀಕ್ಷಿತ ಮೇಕೆದಾಟು ಅಣೆಕಟ್ಟೆ ನಿರ್ಮಾಣದಿಂದ ಸಾವಿರಾರು ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶ ಮುಳುಗಡೆ ಆಗಲಿದ್ದು, ಅದಕ್ಕೆ ಪ್ರತಿಯಾಗಿ ಅಷ್ಟೇ ಪ್ರಮಾಣದ ಅರಣ್ಯ ಬೆಳೆಸಲು ಸಿದ್ಧತೆ ನಡೆದಿದೆ. ಇದಕ್ಕಾಗಿ ಸದ್ಯದಲ್ಲೇ ರಾಮನಗರ ಜಿಲ್ಲಾಡಳಿತದಿಂದ ಅರಣ್ಯ ಇಲಾಖೆಗೆ ಭೂಮಿ ಹಸ್ತಾಂತರವೂ ಆಗಲಿದೆ.

ಜಿಲ್ಲೆಯಲ್ಲಿರುವ ಸಂಗಮ–ಮೇಕೆದಾಟು ಪ್ರದೇಶದಲ್ಲಿ ಕಾವೇರಿ ನದಿಗೆ ₹ 9 ಸಾವಿರ ಕೋಟಿ ವೆಚ್ಚದಲ್ಲಿ ಅಣೆಕಟ್ಟೆ ನಿರ್ಮಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಜಲಾಶಯಕ್ಕಾಗಿ ಸುಮಾರು 4,996 ಹೆಕ್ಟೇರ್ ಪ್ರದೇಶವು ಮುಳುಗಡೆ ಆಗಲಿದ್ದು, ಇದರಲ್ಲಿ 4716 ಹೆಕ್ಟೇರ್ ಅರಣ್ಯ ಪ್ರದೇಶವೇ ಆಗಿದೆ. ಅದರಲ್ಲಿಯೂ 2,800 ಹೆಕ್ಟೇರ್‌ನಷ್ಟು ಪ್ರದೇಶವು ಕಾವೇರಿ ವನ್ಯಧಾಮಕ್ಕೆ ಸೇರಿದೆ.

ಮುಳುಗಡೆ ಆಗಲಿರುವ ಶೇ 95ಕ್ಕೂ ಹೆಚ್ಚು ಜಮೀನು ಅರಣ್ಯವೇ ಆಗಿರುವ ಕಾರಣ ಯೋಜನೆಗೆ ಅನುಮತಿ ದೊರೆಯುವುದು ವಿಳಂಬ ಆಗುತ್ತಿದೆ. ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನಲ್ಲಿ ಸುಮಾರು 2,500 ಹೆಕ್ಟೇರ್, ಮಂಡ್ಯ ಜಿಲ್ಲೆಯ ಮುತ್ತತ್ತಿ ಅರಣ್ಯ ಪ್ರದೇಶ ಹಾಗೂ ಚಾಮರಾಜನಗರದ ಹನೂರು ಅರಣ್ಯ ವಲಯ ಸೇರಿ 2,200 ಸಾವಿರ ಹೆಕ್ಟೇರ್‌ನಷ್ಟು ಕಾಡು ಮುಳುಗಡೆ ಆಗಲಿದೆ.



ಮೇಕೆದಾಟು ಪ್ರದೇಶ

ಪ್ರಜಾವಾಣಿ ವಿಶೇಷ

ಇದಕ್ಕೆ ಪ್ರತಿಯಾಗಿ ರಾಮನಗರ ಜಿಲ್ಲೆಯಲ್ಲಿ 2,500 ಹೆಕ್ಟೇರ್‌ನಷ್ಟು ಸರ್ಕಾರಿ ಭೂಮಿಯನ್ನು ಜಿಲ್ಲಾಡಳಿತವು ಅರಣ್ಯ ಇಲಾಖೆಗೆ ಹಸ್ತಾಂತರಿಸಲಿದೆ. ಈಗಾಗಲೇ ಇದಕ್ಕಾಗಿ 30 ಕಡೆಗಳಲ್ಲಿ ಸ್ಥಳ ಗುರುತಿಸಲಾಗಿದ್ದು, ಇನ್ನೊಂದು ವಾರದಲ್ಲಿ ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸುವುದಾಗಿ ಜಿಲ್ಲಾಧಿಕಾರಿ ಕೆ. ರಾಕೇಶ್‌ಕುಮಾರ್ ತಿಳಿಸಿದರು.

ಯೋಜನೆಯ ವ್ಯಾಪ್ತಿಗೆ ಒಳಪಡುವ ಇತರ ಜಿಲ್ಲೆಗಳಾದ ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಯಲ್ಲೂ ಇದೇ ಮಾದರಿಯಲ್ಲಿ ಕಂದಾಯ ಇಲಾಖೆಯು ಅರಣ್ಯ ಇಲಾಖೆಗೆ ಮುಳುಗಡೆ ಆಗುವಷ್ಟೇ ವಿಸ್ತೀರ್ಣದ ಜಮೀನನ್ನು ಪ್ರತಿಯಾಗಿ ಬಿಟ್ಟುಕೊಡಬೇಕಿದೆ. ಹೀಗೆ ಪಡೆದುಕೊಂಡ ಭೂಮಿಯಲ್ಲಿ ಕಾಡು ಬೆಳೆಸುವ ಯೋಜನೆಯನ್ನು ಇಲಾಖೆ ಮಾಡಲಿದೆ. ಮಂಡ್ಯದಲ್ಲಿ 2 ಸಾವಿರ ಹಾಗೂ ಚಾಮರಾಜನಗರದಲ್ಲಿ 1 ಸಾವಿರ ಹೆಕ್ಟೇರ್ ಭೂಮಿ ಅರಣ್ಯ ಇಲಾಖೆಗೆ ಸಿಗುವ ನಿರೀಕ್ಷೆ ಇದೆ.

ಜಿಲ್ಲಾಡಳಿತವು ನೀಡುವ ಜಮೀನು ಡೀಮ್ಡ್ ಫಾರೆಸ್ಟ್ ಆಗಿದ್ದಲ್ಲಿ 1:2 ಅನುಪಾತದಲ್ಲಿ ಹಾಗೂ ಕಾಡಂಚಿನ ಇಲ್ಲವೇ ಕಂದಾಯ ಭೂಮಿ ಆಗಿದ್ದಲ್ಲಿ 1:1 ಅನುಪಾತದಲ್ಲಿ ಜಮೀನು ಬಿಟ್ಟುಕೊಡಬೇಕಿದೆ.

JAWAHAR NAVODAYA VIDYALAYA, DODDABALLAPUR, BANGALORE RURAL

Date:15.07.2021

TENDER NOTIFICATION

Sealed Tenders are invited from the reputed firms/manufacturers/suppliers/ distributors/ Services for the supply of following items to this Vidyalaya for the year 2021-22.

1. RICE, 2. GROCERIES, 3. VEGETABLES & FRUITS, 4. BAKERY ITEMS, 5. EGG AND CHICKEN, 6. BLANKET, BED SHEET, TOWEL, PILLOW COVER, MATTRESS & PILLOW (RUBBERIZED COIR AND FOAM TOPPING), 7. BELT AND TIE T SHIRT, TRACKSUIT, SWEATERS, 8. WHITE & BLACK SCHOOL SHOES, HAWAI SLIPERS, SOCKS, 09. READYMADE UNIFORM, 10. SCHOOL BAG, 11. UNIFORM WASHING & PRESSING, 12. HAIR CUTTING, 13. TOILETORY ITEMS, 14. SPORTS EQUIPMENTS, 15. FURNITURE, 16. LABOUR OUTSOURCING, 17. VEHICLE ON HIRE NEED BASIS / VEHICLE ON CONTRACT, 18. SCRAP ITEMS, 19. SALE OF TAMARIND, MANGO CROP etc, 20. SALE OF OLD MILK COVERS/ OLD OIL TINS/ MESS WASTE & OLD NEWS PAPERS etc. 21. M&R ITEMS - Electrical and Plumbing/ Painting/ Cement/ Tiles/ CC beds with study table/ cobble stones/ paver blocks with labour or without labour.

The Tender documents/details may be obtained from the Office of the Principal, Jawahar Navodaya Vidyalaya, Doddaballapura, Bangalore Rural Dist. between **9.00 A.M to 4.00 P.M** on all working days by paying an amount of Rs. 200/- (Two hundred) by cash which is non refundable or the tender schedule can be downloaded from the Vidyalaya website https://www.navodaya.gov.in/nvs/nvs-school/ BANGALORERURAL/en/ home. The last date for sale of tender forms is 06.08.2021 by 1.00 PM and the submission of sealed tender is 07.08.2021 by **4.00 PM** by **BY HAND/SPEED /REGISTERED POST/ COURIER.** The tenders will be opened on **09.08.2021 at 11.30 am** in the Office of the Principal, Jawahar Navodaya Vidyalaya, Doddaballapura, Bangalore Rural District.

Sd/-PRINCIPAL

ಕರ್ನಾಟಕ ಸರ್ಕಾರ

ನಗರಸಭೆ ಚಿಂತಾಮಣಿ

ಇ–ಪ್ರೊಕ್ಯೂರ್‌ಮೆಂಟ್ ಮೂಲಕ KW-1 & KW-2 ದಸ್ತಾವೇಜಿನಲ್ಲಿ ಟೆಂಡರ್ ಅಧಿಸೂಚನೆ ಸಂಖ್ಯೆ: ನಸಚಿ/ತಾಶಾ/ಸಿಆರ್/02/2021–22 ದಿನಾಂಕ: 05.07.2021

ಪೌರಾಯುಕ್ತರು ನಗರಸಭೆ ಚಿಂತಾಮಣಿ ಚಿಕ್ಕಬಳ್ಳಾಪುರ ಜಿಲ್ಲೆ ಇವರು ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕೆಟಿಪಿಪಿ 2000ರ ಅಧಿನಿಯಮದಡಿಯಲ್ಲಿ 2020–21ನೇ ಸಾಲಿನ 15ನೇ ಹಣಕಾಸು ಬೇಸಿಕ್ ಅನುದಾನದಲ್ಲಿ ಮತ್ತು ನಗರಸಭೆ ನಿಧಿಯಡಿ **ರೂ.48.50 ಲಕ್ಷಗಳಿಗೆ** ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು, ಇಂಡೆಂಟ್ ಸಂಖ್ಯೆಗಳು, **DMA/2021-22/WS/ WORK_INDENT117759,115866,** ಟೆಂಡರ್ ಆಹ್ವಾನಿಸಿರುತ್ತಾರೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಡೆ **ದಿನಾಂಕ: 19.07.2021 ಸಂಜೆ 5.00 ಗಂಟೆ ವರೆಗೆ,** ಟೆಂಡರ್ ತೆರೆಯುವ **ದಿನಾಂಕ: 22.07.2021 ರಂದು ಬೆಳಿಗ್ಗೆ 11.00 ಗಂಟೆ ನಂತರ** ಅಥವಾ ಸದರಿ ದಿನದಂದು ಸರ್ಕಾರಿ ರಜೆ ಇದ್ದಲ್ಲಿ ನಂತರದ ಕೆಲಸದ ದಿನ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಾಗಿ **http://eproc.karnataka.gov.in** ವೆಬ್‌ಸೈಟ್‌ನಲ್ಲಿ ಸಂಪರ್ಕಿಸಬಹುದು

ಸಹಿ/–	ಸಹಿ/–	ಸಹಿ/–
ಅಧ್ಯಕ್ಷರು,	ಉಪಾಧ್ಯಕ್ಷರು,	ಪೌರಾಯುಕ್ತರು
ನಗರಸಭೆ, ಚಿಂತಾಮಣಿ.	ನಗರಸಭೆ, ಚಿಂತಾಮಣಿ.	ನಗರಸಭೆ, ಚಿಂತಾಮಣಿ.

ವಾ.ಸಾ.ಸಂ.ಇ./ ಚಿಕ್ಕಬಳ್ಳಾಪುರ/ ಆರ್.ಓ.ಸಂಖ್ಯೆ80/ಎಂಸಿಎ/ 2021–22

3M ಇಂಡಿಯಾ ಲಿಮಿಟೆಡ್

(CIN: L31300KA1987PLC013543)

ನೋಂದಾಯಿತ ಕಛೇರಿ: ಪ್ಲಾಟ್ ನಂ. 48–51, ಇಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100, **ಕಾರ್ಪೊರೇಟ್ ಕಛೇರಿ:** ವಿವರ್ಕ್ ಪ್ರೆಸ್ಟೀಜ್ ಸೆಂಟ್ರಲ್, 3ನೇ ಮಹಡಿ, 36 ಇನ್‌ಫೆಂಟ್ರಿ ರಸ್ತೆ, ಟಸ್ಕರ್ ಟೌನ್, ಬೆಂಗಳೂರು–560 001. ದೂರವಾಣಿ: 080–22231414, ಫ್ಯಾಕ್ಸ್: 080–2223 1450, ಇಮೇಲ್: investorhelpdesk.in@mmm.com, ವೆಬ್‌ಸೈಟ್: www.3m.com/in

34ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಕುರಿತಂತೆ ಸದಸ್ಯರಿಗೆ ಸೂಚನೆ

ಆತ್ಮೀಯ ಸದಸ್ಯರೇ,

1. ಎಜಿಎಂ ನೋಟಿಸಿನಲ್ಲಿ ತಿಳಿಸಲಾಗಿರುವಂತಹ ವ್ಯವಹಾರಗಳನ್ನು ನಡೆಸುವ ಸಲುವಾಗಿ 'ಕಂಪನಿ'ಯು ತನ್ನ 34ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಗುರುವಾರ, 2021ರ ಆಗಸ್ಟ್, 26ರಂದು ಬೆಳಿಗ್ಗೆ 10.30 ಗಂಟೆಗೆ (ಭಾ.ಕಾ.) ವಿಡಿಯೊ ಕಾನ್ಫರೆನ್ಸ್ (VC) / ಇತರ ಶ್ರವಣ ದೃಶ್ಯ ಮಾಧ್ಯಮಗಳ (OAVM) ಮೂಲಕ, ಸದಸ್ಯರ ಭೌತಿಕ ಹಾಜರಾತಿ ಇಲ್ಲದೆಯೇ, ಕಾರ್ಪೊರೇಟ್ ಸಚಿವಾಲಯವು ಹೊರಡಿಸಿರುವ 2020ರ ಏಪ್ರಿಲ್ 08, 2020ರ ಏಪ್ರಿಲ್ 13 ಮತ್ತು 2020ರ ಮೇ, 05 ದಿನಾಂಕಗಳಂದು ಅನುಕ್ರಮವಾಗಿ ಹೊರಡಿಸಿರುವ ಸಂ. 14/2020, 17/2020, 20/2020 ಮತ್ತು 02/2021 ಸಾಮಾನ್ಯ ಸುತ್ತೋಲೆಗಳ (ಒಟ್ಟಾಗಿ 'ಎಂಸಿಎ ಸುತ್ತೋಲೆಗಳು' ಎಂದು ಉಲ್ಲೇಖಿಸಲಾಗುವುದು) ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಹೊರಡಿಸಿರುವ 2020ರ ಮೇ, 12 ಹಾಗೂ 2021 ಜನವರಿ, 15 ದಿನಾಂಕಗಳಂದು ಅನುಕ್ರಮವಾಗಿ ಹೊರಡಿಸಿರುವ SEBI/HO/CFD/ CMD1/CIR/P/2020/79 ಮತ್ತು SEBI/HO/CFD/CMD2/ CIR/P/2021/11 ಸುತ್ತೋಲೆಗಳ ಪ್ರಕಾರ ನಡೆಸಲಾಗುವುದು ಎಂದು ಈ ಸೂಚನೆಯನ್ನು ನೀಡಲಾಗಿದೆ. ಎಜಿಎಂ ವ್ಯವಹರಣೆಗಳನ್ನು ಕಂಪನಿಯ ನೋಂದಾಯಿತ ಕಛೇರಿಯಲ್ಲಿಯೇ ನಡೆಸಲಾಗಿದೆ ಎಂದು ಪರಿಗಣಿಸಲಾಗುವುದು ಮತ್ತು ಇದನ್ನೇ ಎಜಿಎಂ ಸ್ಥಳವೆಂದು ಭಾವಿಸಲಾಗುವುದು.
2. ಕಂಪನಿ/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರುವ ಶೇರುದಾರರಿಗೆ ಸದರಿ ಸುತ್ತೋಲೆಗಳ ಅನುಸಾರ 'ಎಜಿಎಂ'ನ ಸೂಚನೆಯ ಮತ್ತು 2020–21ನೇ ಸಾಲಿನ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಸಕಾಲದಲ್ಲಿ ಇಮೇಲ್ ಮೂಲಕ ಮಾತ್ರವೇ ಕಳುಹಿಸಲಾಗುವುದು.
3. 'ಎಜಿಎಂ'ನಲ್ಲಿ ವಿದ್ಯುನ್ಮಾನ ವಿಧಾನದಲ್ಲಿ ಮತಚಲಾವಣೆ ಹಾಗೂ VC / OAVM ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಕಂಪನಿಯು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (NSDL) ಸಂಸ್ಥೆಯನ್ನು ನೇಮಕಮಾಡಿಕೊಂಡಿದೆ.
4. 2020–21ನೇ ವಿತ್ತೀಯ ವರ್ಷದ ವಾರ್ಷಿಕ ವರದಿಯ ಜೊತೆಗೆ ಎಜಿಎಂ ಸೂಚನೆಯನ್ನು ಕೂಡ ಕಂಪನಿಯ **https://www.3mindia.in/3M/en_IN/company-in/about-3m/financial-facts-local/** ಹಾಗೂ ಸ್ಟಾಕ್ ಎಕ್ಸ್‌ಚೇಂಜುಗಳಾದ ಬಿಎಸ್‌ಇ ಲಿಮಿಟೆಡ್ ನ **www.bseindia.com** ಮತ್ತು ಎನ್‌ಎಸ್‌ಡಿಎಲ್ ನ **www.nseindia.com/** ವೆಬ್‌ಸೈಟುಗಳಲ್ಲಿ ಮತ್ತು ಇ–ಮತದಾನದ ಏಜೆನ್ಸಿಯಾದ ಎನ್‌ಎಸ್‌ಡಿಎಲ್ ನ **https://www.evoting.nsdl.com** ವೆಬ್‌ಸೈಟಿನಲ್ಲಿ ಕೂಡ ಹಾಕಲಾಗುವುದು.
5. ತಮ್ಮ ಇಮೇಲ್‌ಗಳನ್ನು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸಿಕೊಂಡಿರದ ಸದಸ್ಯರು ಈ ಮಾಹಿತಿಯನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರಾದ ಕೆಫಿನ್ ಟೆಕ್ನಾಲಜಿಸ್ ಪ್ರೈವೇಟ್ ಲಿಮಿಟೆಡ್‌ನ (ಹಿಂದೆ: ಕಾರ್ವಿ ಫಿನ್‌ಟೆಕ್ ಪ್ರೈವೇಟ್ ಲಿಮಿಟೆಡ್) **https://karisma.kfintech.com/emailreg** ವಿಳಾಸಕ್ಕೆ ಕಳುಹಿಸಿ ತಮ್ಮ ಇಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಶೇರುಗಳನ್ನು ವಿದ್ಯುನ್ಮಾನ ರೂಪದಲ್ಲಿ ಹೊಂದಿರುವ ಸದಸ್ಯರು ತಕ್ಷಣವೇ ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿಸಿಕೊಳ್ಳುತ್ತೇವೆ.
6. ಕಂಪನಿಯು, ಎಜಿಎಂ ಸಂದರ್ಭದಲ್ಲಿ ರಿಮೋಟ್ ಇ–ಮತದಾನ ಹಾಗೂ ಇ–ಮತದಾನ ಎರಡೂ ವಿಧಾನಗಳಲ್ಲಿ ಮತ ಚಲಾಯಿಸಲು ಸದಸ್ಯರಿಗೆ ವಿದ್ಯುನ್ಮಾನ ಸೌಲಭ್ಯಗಳನ್ನು ಒದಗಿಸುತ್ತದೆ. ಎಜಿಎಂ ನೋಟಿಸಿನಲ್ಲಿ ಉಳಿದ ವಿಷಯಗಳ ಜೊತೆಗೆ ಡೀಮ್ಯಾಟ್ ರೂಪದಲ್ಲಿ, ಭೌತಿಕ ರೂಪದಲ್ಲಿ ಶೇರುಗಳನ್ನು ಹೊಂದಿರುವ ಹಾಗೂ ಇಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿರದ ಸದಸ್ಯರು ಯಾವ ರೀತಿಯಲ್ಲಿ ಮತ ಚಲಾಯಿಸಬಹುದು ಎಂಬುದರ ಬಗ್ಗೆ ತಿಳಿಸಲಾಗುವುದು. ಭೌತಿಕ ಹಾಜರಾತಿ ಇಲ್ಲದೆಯೇ VC/OAVM ನಲ್ಲಿ ಭಾಗವಹಿಸಿ ಮತ ಚಲಾಯಿಸುವ ಬಗ್ಗೆ ಎಜಿಎಂ ನೋಟಿಸಿನಲ್ಲಿ ನೀಡಿರುವ ಸೂಚನೆಗಳನ್ನು ಓದಿಕೊಳ್ಳಬೇಕಾಗಿ ಸದಸ್ಯರನ್ನು ವಿನಂತಿಸಿಕೊಳ್ಳುತ್ತೇವೆ. VC/OAVM ನಲ್ಲಿ ಭಾಗವಹಿಸುವ ಸದಸ್ಯರನ್ನು ಕಂಪನಿಗಳ ಅಧಿನಿಯಮ, 2013ರ ಕಲಮು 103ರ ಅಡಿಯಲ್ಲಿ ಹೇಳಿರುವಂತೆ ಹಾಜರಿರಬೇಕಾದ ಕನಿಷ್ಠ ಸದಸ್ಯರ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಕಂಪನಿಯ ಸದಸ್ಯರ ಮಾಹಿತಿ ಮತ್ತು ಅನುಕೂಲಕ್ಕಾಗಿ ಮೇಲಿನ ಈ ಮಾಹಿತಿಯನ್ನು ನೀಡಲಾಗುತ್ತಿದ್ದು ಇದು ಎಂಸಿಎ ಸುತ್ತೋಲೆಗಳು ಹಾಗೂ ಸೆಬಿ ಸುತ್ತೋಲೆಗಳ ಅನ್ವಯ ಇರುತ್ತದೆ.

3M ಇಂಡಿಯಾ ಲಿಮಿಟೆಡ್‌ಗಾಗಿ
ವಿ. ಶ್ರೀನಿವಾಸನ್
ಕಂಪನಿ ಸೆಕ್ರೆಟರಿ

ಸ್ಥಳ: ಬೆಂಗಳೂರು
ದಿನಾಂಕ: ಜುಲೈ 13, 2021

PUBLIC NOTICE

The General Public are hereby notified that my client proposes to purchase the Schedule Property belonging to Mr.Lakshminarayana, S/o.Late.Sanjeevappa and his family members, residents of Baagooru Village, Anugondanahalli Hobli, Hosakote Taluk, Bangalore Rural District.

The General Public are hereby notified that if any person/s having any claim/s in respect of the Schedule Property or objections for the proposed sale transaction, may lodge their claims/objections with documentary proof to reach the undersigned within 7 days from the date of publication of this notice, failing which, thereafter my client shall proceed to complete the sale transaction and claims/objections received beyond the stipulated period will not be entertained.

SCHEDULE PROPERTY

All that piece and parcel of the immovable property being an Agricultural Dry Land bearing Survey No.55/4 (Old Survey No.55/1) of Ganagaluru Village, Anugondanahalli Hobli, Hosakote Taluk, measuring 2 Acres 08 Guntas, including 9.08 Guntas of Kharab Land, presently within the revenue administrative jurisdiction of the Ganagalur Grama panchayat and including all rights and privileges thereto and bounded as follows :

East by : Private Road (Survey No.55/1)
West by : Survey No.57
North by : Land belonging to Mr.Iyappa
South by : Road

N.JAIPRAKASH RAOVEENA RAO
N.ASHOK KUMAR
JAYPEE ASSOCIATES "LAW FIRM"
No.38, "KRISHNA", 1st Cross, Malleswaram
BANGALORE - 560 003.
Ph. No: 080-2356360, 23468742
E-mail :contact@jaypeeassociates.com
Place : Bangalore , Date : 14.07.2021

PUBLIC NOTICE

Publics are hereby informed that my client **M/s. DS-Max Properties Pvt. Ltd.**, having its office at No. 1854, 17th Main, 30th 'B' Cross, HBR Layout, 1st Stage, 5th Block, Bangalore - 43 and intend to enter into Absolute Sale Deed with the Owner/s **Smt. Parvathamma** d/o. Sri. Yellappa, w/o. Sri. Y. Pillappa, **Sri. P. Sanjay** s/o. Sri. Y. Pillappa, **Ms. Sangeetha** d/o. Sri. Y. Pillappa, **Sri. Y. Venkatesh** s/o. Sri. Yellappa, **Smt. Sujatha** w/o. Sri. Y. Venkatesh, **Sri. V. Somashekar** s/o. Sri. Y. Venkatesh, **Ms. V. Sowmya** d/o. Sri. Y. Venkatesh, **Smt. Y. Radhamma** d/o. Sri. Yellappa, **Smt. Y. Sujatha** d/o. Sri. Yellappa, **Sri. Y. Shankarappa** s/o. Sri. Yellappa, **Smt. Dhanalakshmi** w/o. Sri. Y. Shankarappa, **Master. S. Nuthan** s/o. Sri. Y. Shankarappa (minor) Rep; by its Natural Guardian of his father Sri. Y. Shankarappa, **Kumari. S. Sanjana** d/o. Sri. Y. Shankarappa (minor) Rep; by its Natural Guardian of his father Sri. Y. Shankarappa, **Sri. Y. Ramesh** s/o. Sri. Yellappa, **Smt. Jyothi. Y.** w/o. Sri. Y. Ramesh, **Master. R. Tejas Samrat** s/o. Sri. Y. Ramesh (minor) Rep; by its Natural Guardian of his father Sri. Y. Ramesh, **Master. R. Siri Samrat** s/o. Sri. Y. Ramesh (minor) Rep; by its Natural Guardian of his father Sri. Y. Ramesh and **Smt. Y. Jayanthi** d/o. Sri. Yellappa, all are residing at Bendiganahalli Village, Neralur Post, Attibele Hobli, Anekal Taluk, Bangalore Urban District are the absolute owner/s in respect of converted land property bearing Old Sy. No. **58/1**, New Sy. No. **58/5**, which measuring **1 acre 37 guntas**, out of **5 acres 31 guntas**, situated at **Bendiganahalli Village**, Attibele Hobli, Anekal Taluk, Bangalore Urban District, in vide; Conversion Order dated **28/12/2000**, in Order No. **ALN:SR(A):32/99-2000**, for residential use, issued by Special Deputy Commissioner, Bangalore District and bounded on

East by :Land of Sy. No. 58/2,
West by :Park,
North by: Land of Sy.No. 58/1 & 58/4
South by: Road.

Any person or any authority or any promoters having any asserting right, title, interest and claims to oppose for Absolute Sale Deed of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **10** days from the date of this notice, if any objections fails to comply, my client shall take further steps for entering into Absolute Sale Deed of property.

LINGARAJ. S. NADA GOUDA., ADVOCATE
#1854, 17th Main, 30th 'B' Cross
HBR Layout, 1st Stage, 5th Block,
Bangalore - 560 043.
Mob : 96204 74780 , 94481 35970

(ಲೋಕೋಪಯೋಗಿ ಇಲಾಖೆ)

ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಮಾನವ ಆಧಾರಿತ ಅಲ್ಪಾವಧಿ ಟೆಂಡರ್ ಅಧಿಸೂಚನೆ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 09/2021–22 ದಿನಾಂಕ: 13.07.2021

(ರಸ್ತೆ ನಿರ್ವಹಣೆ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 ರಂತೆ ಟೆಂಡರ್ ಆಹ್ವಾನ)

ಕಾಮಗಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಏಕ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿದ್ದು, ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಸೂಚನೆ:– ಮೇಲಿನ ಕಾಮಗಾರಿಗಳ ಬಗ್ಗೆ ಕೆ.ಡಬ್ಲ್ಯೂ–1ರ ದಸ್ತಾವೇಜಿನ ಸೂಚನೆಗಳನ್ನು ಪಾಲಿಸುವುದು. **(1)** ಟೆಂಡರ್ ಫಾರಂಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ: **15.07.2021 (ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ). (2)** ಖಾಲಿ ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ: **17.07.2021 (ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ). (3)** ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **19.07.2021 (ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ).** ಟೆಂಡರ್‌ಗಳನ್ನು ಸಾಧ್ಯವಾದರೆ ದಿನಾಂಕ: **19.07.2021** ರಂದು ಸಂಜೆ **4.30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಎಸ್. ಮನೋಜ್‌ಕುಮಾರ್, ಕಾರ್ಯಪಾಲಕ ಇಂಜಿನಿಯರ್ (ಪ್ರಭಾರ),
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ.

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ84/ಎಂ.ಸಿ.ಎ/2021–22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆ.ಆರ್.ಮಾರುಕಟ್ಟೆ, ಕಲಾಸಿಪಾಳ್ಯ ಮಾರುಕಟ್ಟೆ ನಿರ್ಬಂಧ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೃಷ್ಣರಾಜೇಂದ್ರ ಮಾರುಕಟ್ಟೆ ಹಾಗೂ ಕಲಾಸಿಪಾಳ್ಯ ಸಗಟು ಮಾರುಕಟ್ಟೆಗಳ ಮಳಿಗೆಗಳು ಕೋವಿಡ್ ನಿಯಂತ್ರಣ ಮಾರ್ಗ ಸೂಚಿಗಳನ್ನು ಅನುಸರಿಸಿ ವಹಿವಾಟು ಪುನರಾರಂಭಿಸುವುದಕ್ಕೆ ಬಿಬಿಎಂಪಿ ಅನುಮತಿ ನೀಡಿದೆ.

ವ್ಯಾಪಾರ ವಹಿವಾಟಿನ ಮೇಲೆ ವಿಧಿಸಿದ್ದ ನಿರ್ಬಂಧ ತೆರವಿನ ಆದೇಶ ಕೈ ಸೇರುತ್ತಿದ್ದಂತೆಯೇ ಕೆ.ಆರ್. ಮಾರುಕಟ್ಟೆಯ ಕೆಲವು ಮಳಿಗೆಗಳು ಗುರುವಾರವೇ ಕಾರ್ಯಾರಂಭ ಮಾಡಿವೆ.

ಕೋವಿಡ್ ಎರಡನೇ ಅಲೆ ನಿಯಂತ್ರಣಕ್ಕಾಗಿ ಸರ್ಕಾರ ಲಾಕ್‌ಡೌನ್ ಜಾರಿಗೊಳಿಸಿದ ಬಳಿಕ ಈ ಎರಡೂ ಮಾರುಕಟ್ಟೆಗಳಲ್ಲಿ ವ್ಯಾಪಾರ ವಹಿವಾಟು ಸ್ಥಗಿತಗೊಂಡಿತ್ತು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಲಾಕ್‌ಡೌನ್ ಅನ್ನು ಹಂತ ಹಂತವಾಗಿ ತೆರವುಗೊಳಿಸಲಾಗಿದೆ. ಆದರೂ, ಈ ಎರಡು ಮಾರುಕಟ್ಟೆಗಳಲ್ಲಿ ಜನಜಂಗುಳಿ ಉಂಟಾಗುವ ಸಾಧ್ಯತೆ ಹೆಚ್ಚು ಇದ್ದುದರಿಂದ ಇವುಗಳಲ್ಲಿ ವಹಿವಾಟು ಪುನರಾರಂಭ ಮಾಡಲು ಬಿಬಿಎಂಪಿ ಅನುಮತಿ ನೀಡಿರಲಿಲ್ಲ.

ಈ ಮಾರುಕಟ್ಟೆಗಳ ಪುನರಾರಂಭಕ್ಕೆ ಅನುಮತಿ ನೀಡಬೇಕು ಎಂದು ಕೋರಿ ಇಲ್ಲಿನ ವರ್ತಕರ ಸಂಘಗಳು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿದ್ದವು.

‘ಹೆಚ್ಚೂ ಕಡಿಮೆ ಮೂರು ತಿಂಗಳುಗಳಿಂದ ವ್ಯಾಪಾರ ವಹಿವಾಟು ನಡೆಯದ ಕಾರಣ ಈ ಎರಡೂ ಮಾರುಕಟ್ಟೆಗಳ ವರ್ತಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರು. ಈ ಮಾರುಕಟ್ಟೆಗಳನ್ನು ನೆಚ್ಚಿಕೊಂಡಿದ್ದ ರೈತರಿಗೂ ಇದರಿಂದ ಸಮಸ್ಯೆ ಆಗಿತ್ತು. ಇಲ್ಲಿನ ಮಳಿಗೆಗಳು ವಹಿವಾಟು ಪುನರಾರಂಭ ಮಾಡಲು ಬಿಬಿಎಂಪಿಯು ಅನುಮತಿ ನೀಡಿರುವುದು ಸ್ವಾಗತಾರ್ಹ’ ಎಂದು ಕಲಾಸಿಪಾಳ್ಯ ಸಗಟು ಮಾರುಕಟ್ಟೆಯ ವ್ಯಾಪಾರಿಗಳ ಸಂಘದ ಅಧ್ಯಕ್ಷ ಆರ್.ವಿ.ಗೋಪಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಏಪ್ರಿಲ್ ಕೊನೆಯ ವಾರದಿಂದ ಬಂದ್ ಆಗಿದ್ದ ಕೆ.ಆರ್.ಮಾರುಕಟ್ಟೆ ಭಾಗಶಃ ಆರಂಭವಾಗಿದೆ. ಕಲಾಸಿಪಾಳ್ಯ ಮಾರುಕಟ್ಟೆಯಲ್ಲಿ ಭಾನುವಾರ ಬೆಳಿಗ್ಗೆ ವಹಿವಾಟನ್ನು ಆರಂಭಿಸಲಿದ್ದೇವೆ. ಕಲಾಸಿಪಾಳ್ಯದ ಸಗಟು ಮಾರುಕಟ್ಟೆಯನ್ನು ಸಿಂಗೇನ ಅಗ್ರಹಾರಕ್ಕೆ ಸ್ಥಳಾಂತರ ಮಾಡಿದ್ದರಿಂದ ಇಲ್ಲಿನ ವರ್ತಕರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದರು’ ಎಂದು ಅವರು ತಿಳಿಸಿದರು.

‘ಕೋವಿಡ್ ನಿಯಂತ್ರಣಕ್ಕೆ ಸರ್ಕಾರ ಹೊರಡಿಸಿರುವ ಮಾರ್ಗಸೂಚಿ ಅನುಸರಿಸಿ ವಹಿವಾಟು ನಡೆಸಲಿದ್ದೇವೆ. ಇನ್ನು ಕೋವಿಡ್‌ನಿಂದ ಲಾಕ್‌ಡೌನ್ ಮಾಡಬೇಕಾದ ಪರಿಸ್ಥಿತಿ ಬಂದರೂ ಸಗಟು ಮಾರುಕಟ್ಟೆಯನ್ನು ಯಾವುದೇ ಕಾರಣಕ್ಕೂ ಬೇರೆ ಕಡೆಗೆ ಸ್ಥಳಾಂತರ ಮಾಡಬಾರದು. ಇದರಿಂದ ವರ್ತಕರಿಗೆ, ರೈತರಿಗೆ ಹಾಗೂ ಗ್ರಾಹಕರಿಗೆ ಅನನುಕೂಲವಾಗಲಿದೆ’ ಎಂದರು.

‘ಸ್ಟ್ಯಾನ್ ಸ್ವಾಮಿಯವರಿಗೆ ಸಂತ ಪದವಿ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಿವಾಸಿಗಳ ಕಲ್ಯಾಣಕ್ಕಾಗಿ ಹೋರಾಡಿ ಮಡಿದ ಫಾದರ್ ಸ್ಟ್ಯಾನ್ ಸ್ವಾಮಿಯವರಿಗೆ ಸಂತ ಪದವಿ ನೀಡಬೇಕು ಎಂದು ಪೋಪ್ ಫ್ರಾನ್ಸಿಸ್ ಅವರಿಗೆ ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ ಮನವಿ ಮಾಡಿದೆ.

ನಗರದಲ್ಲಿ ಗುರುವಾರ ಆನ್‌ಲೈನ್‌ನಲ್ಲಿ ನಡೆದ ಸಭೆಯಲ್ಲಿ ಸಂಘದ ಅಧ್ಯಕ್ಷ ರಫಾಯಲ್ ರಾಜ್ ಅವರು ಈ ವಿಷಯ ಮಂಡಿಸಿದರು. ಭಾರತದಲ್ಲಿರುವ ರೋಮ್‌ನ ರಾಯಭಾರಿ ಹಾಗೂ ಭಾರತದ ಧರ್ಮಾಧ್ಯಕ್ಷರ ಕೂಟಕ್ಕೆ ಪತ್ರ ಬರೆದು ಈ ಬಗ್ಗೆ ಮನವಿ ಮಾಡಿಕೊಳ್ಳಲು ನಿರ್ಧರಿಸಲಾಯಿತು.

ಲೇಖಕ ಬಂಜಗೆರೆ ಜಯಪ್ರಕಾಶ್ ಮಾತನಾಡಿ, ‘ಆದಿವಾಸಿಗಳ ಕಲ್ಯಾಣಕ್ಕಾಗಿ ಜೀವನವನ್ನೇ ಮುಡುಪಾಗಿಟ್ಟವರು ಸ್ಟ್ಯಾನ್ ಸ್ವಾಮಿಯವರು. ಕಠಿಣವಾದ ಯುಎಪಿಎ ಜಾರಿ ಮಾಡುವ ಮೂಲಕ ಪ್ರಭುತ್ವವು ಅವರ ಸಾವಿಗೆ ಕಾರಣವಾಗಿದೆ. ಈ ಕಾಯ್ದೆ ರದ್ದತಿಗೆ ಎಲ್ಲರೂ ಹೋರಾಡಬೇಕು’ ಎಂದರು.

ಫಾದರ್ ಸೈಮನ್ ಬರ್ತಲೊಮಿಯೊ ಅಧ್ಯಕ್ಷತೆ ವಹಿಸಿದ್ದರು. ಸಿ. ಮರಿಜೋಸೆಫ್ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಎ. ದೇವ ಕುಮಾರ್, ಶಿವಸುಂದರ್ ಹಾಜರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಮಾರಸಂದ್ರ ಗ್ರಾಮದಲ್ಲಿ ನೂತನ ಬಸ್ ತಂಗುದಾಣ ಉದ್ಘಾಟಿಸಿದ ಶಾಸಕ ಕೃಷ್ಣಬೈರೇಗೌಡ, ಗ್ರಾಮಸ್ಥರೊಂದಿಗೆ ನಿಲ್ದಾಣದಲ್ಲಿ ಕುಳಿತು ಖುಷಿಪಟ್ಟರು. ಜಿ.ಪಂ. ಸದಸ್ಯೆ ಸುಷ್ಮಾ ಮುನಿರಾಜು, ತಾ.ಪಂ. ಸದಸ್ಯ ನಾಗರಾಜ್, ಗ್ರಾ.ಪಂ. ಅಧ್ಯಕ್ಷೆ ಆಂಜಿನಮ್ಮ ನಾಗರಾಜ್, ಉಪಾಧ್ಯಕ್ಷೆ ಕಮಲಮ್ಮ ಮುನಿರಾಮಣ್ಣ ಇತರರು ಇದ್ದಾರೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಮಾರಸಂದ್ರ ಮತ್ತು ಮಾರೇನಹಳ್ಳಿ ಗ್ರಾಮದಲ್ಲಿ ಎಸ್.ಸಿ.ಪಿ ಯೋಜನೆಯಡಿಯಲ್ಲಿ ₹16 ಲಕ್ಷ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ₹10 ಲಕ್ಷ ವೆಚ್ಚದಲ್ಲಿ ಮಾರಸಂದ್ರ ಗ್ರಾಮದಲ್ಲಿ ನಿರ್ಮಿಸಿರುವ ನೂತನ ಬಸ್ ತಂಗುದಾಣವನ್ನೂ ಸಾರ್ವಜನಿಕರ ಸೇವೆಗೆ ಸಮರ್ಪಿಸಿದರು.

ಕೊಡಿಗೇಹಳ್ಳಿ ವಾರ್ಡ್ ವ್ಯಾಪ್ತಿಯ ಟಾಟಾ ನಗರದಲ್ಲಿ ₹7 ಲಕ್ಷದಲ್ಲಿ ಕೈಗೆತ್ತಿಕೊಂಡಿರುವ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕರು, ‘ಜಾಲಾ ಹೋಬಳಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಸಂಪರ್ಕ ರಸ್ತೆಗಳು, ಕಾಂಕ್ರೀಟ್ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿ ಬಹುತೇಕ ಮೂಲಸೌಲಭ್ಯಗಳನ್ನು ಒದಗಿಸಲಾಗಿದೆ’ ಎಂದರು.

ಧನ್ಯವಾದಗಳು ಮತ್ತು ಅಭಿನಂದನೆಗಳು

ಕೇಂದ್ರ ಸರ್ಕಾರದ ಸಚಿವ ಸಂಪುಟಕ್ಕೆ ಕರ್ನಾಟಕದಿಂದ ಮೊದಲ ಬಾರಿಗೆ ಗರಿಷ್ಠ ಆರು ಸಚಿವರನ್ನು ನೇಮಿಸಿದಕ್ಕಾಗಿ ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರಿಗೆ ಹೃತ್ಪೂರ್ವಕ ಧನ್ಯವಾದಗಳು ಹಾಗೂ ಸಚಿವ ಸ್ಥಾನವನ್ನು ಅಲಂಕರಿಸಿರುವ ಎಲ್ಲಾ ಸಚಿವರಿಗೆ ಹಾರ್ದಿಕ ಅಭಿನಂದನೆಗಳು.

ಶ್ರೀಮತಿ ನಿರ್ಮಲಾ ಸೀತಾರಾಮನ್
ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರಗಳ ಸಚಿವರು

ಶ್ರೀ ಪ್ರಹ್ಲಾದ್ ಜೋಶಿ
ಸಂಸದೀಯ ವ್ಯವಹಾರಗಳು, ಗಣಿ ಮತ್ತು ಕಲ್ಲಿದ್ದಲು ಸಚಿವರು

ಶ್ರೀ ರಾಜೀವ್ ಚಂದ್ರಶೇಖರ್
ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವರು

ಕು. ಶೋಭಾ ಕರಂದ್ಲಾಜೆ
ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವರು

ಶ್ರೀ ಎ. ನಾರಾಯಣ ಸ್ವಾಮಿ
ಸಮಾಜ ಕಲ್ಯಾಣ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವರು

ಶ್ರೀ ಭಗವಂತ ಖೂಬಾ
ನವೀನ ಮತ್ತು ನವೀಕರಿಸಬಲ್ಲ ಇಂಧನ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವರು

ಪ್ರಕಟಣೆ: ಬಿಜೆಪಿ – ಕರ್ನಾಟಕ

75 Mahindra Rise.

ಹೊಸ ಮಹೀಂದ್ರಾ ಎಲೆಕ್ಟ್ರಿಕ್ ಟ್ರಿಯೋ

ಇಲೆಕ್ಟ್ರಿಕ್ 3-ವ್ಹೀಲರ್. ಲಿಥಿಯಮ್-ION ಟೆಕ್ನಾಲಜಿಯೊಂದಿಗೆ.

ಇಂಧನದ ವೆಚ್ಚದಲ್ಲಿ ಪ್ರತಿ ವರ್ಷ ₹45 000.00* ಉಳಿತಾಯ*

- ಶ್ರೇಣಿಯಲ್ಲಿ ಸರ್ವೋತ್ತಮ 8kw ಪವರ್
- 150,000 kmಗೂ ಅಧಿಕ ಬ್ಯಾಟರಿ ಲೈಫ್
- ಚಲಾಯಿಸುವ ವೆಚ್ಚ ಕೇವಲ 50* ಪೈಸೆ/km
- ಚಿಂತೆ ರಹಿತ ಪ್ರಯಾಣಕ್ಕಾಗಿ 3** ವರ್ಷದ ವಾರಂಟಿ
- 3 ಗಂಟೆ 50 ನಿಮಿಷಗಳಲ್ಲಿ ಪೂರ್ಣ ಚಾರ್ಜ್
- ಅತ್ಯಧಿಕ ಪೇಲೋಡ್ 550**kg
- ನಿರ್ವಹಣಾ ವೆಚ್ಚ ₹1/km##
- ಆಧುನಿಕ ಲಿಥಿಯಂ ಅಯಾನ್ ಬ್ಯಾಟರಿ

ಇಂಧನದ ವೆಚ್ಚದಲ್ಲಿ ಪ್ರತಿ ವರ್ಷ ₹60 000.00* ಉಳಿತಾಯ*

*ಸಾಂಪ್ರದಾಯಿಕ IC ಎಂಜಿನ್ ಮತ್ತು ಎಲ್‌ಪಿಜಿ ಆಟೋದೊಂದಿಗೆ ಹೋಲಿಸಿದಾಗ. FAME ಸಬ್ಸಿಡಿ ಬದಲಾಗಬಹುದಾದ ಒಂದು ಅಂಶವಾಗಿದೆ.
**ವಾರಂಟಿ 3 ವರ್ಷ /80000 ಕಿ.ಮೀ ಯಾವುದು ಮೊದಲೋ ಅದು. *ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.

PPS MAHINDRA	SIDDHANTH MOTORS	ANANT CARS AUTO PVT LTD	INDIA GARAGE BANGALORE	HONNASIRI MAHINDRA
Kengeri, HBR layout, Indira Nagar Kanakpura Road, Chitanamani, Devanahalli, Kanakpura 9311243644	Anekal, Hoskote, Chamrajpet, Kolar, Chikkaballapur, Hosur Road 7428494638	Mysore Road, KR Puram, Ramnagar, Malur, Chandapur 7428494640	Lalbagh Road, Kolar, Chikkaballapur, Bidadi, Sarjapur, Peenya: 7428494641	Tumkur 7428494637

ಹೆಚ್ಚು ಸ್ವಚ್ಛವಾದ ಅಡುಗೆ ಮಾಡಲು ಭಾರತದ ಮೊಟ್ಟ ಮೊದಲ ಉಕ್ಕುವಿಕೆ ನಿಯಂತ್ರಿತ ಮುಚ್ಚಳದ ಪ್ರೆಷರ್ ಕುಕ್ಕರ್

ಸ್ವಚ್ಛ್ ಪ್ರೆಷರ್ ಕುಕ್ಕರ್
- ಉಕ್ಕುವಿಕೆಯನ್ನು ನಿಯಂತ್ರಿಸಲು ಆಳವಾದ ಮುಚ್ಚಳ
- ದೀರ್ಘ ಬಾಳಿಕೆ ಬರುವ ಉಬ್ಬುವಿರೋಧಿ ತಳ
- ಗ್ಯಾಸ್ ಮತ್ತು ಇಂಡಕ್ಷನ್‌ಗಳಿಗೆ ಸರಿಹೊಂದುತ್ತದೆ

ಡಿಜಿಟಲ್ ಪ್ರಿ ಸೆಟ್ ಟೈಮರ್ ಇರುವ ಭಾರತದ ಮೊದಲ ವೆಟ್ ಗ್ರೈಂಡರ್

PWG 09 ವೆಟ್ ಗ್ರೈಂಡರ್
- ಉತ್ತಮ ಗುಣಮಟ್ಟದ ರುಬ್ಬುವ ಕಲ್ಲುಗಳು
- ಸ್ಟೈನ್ ಲೆಸ್ ಸ್ಟೀಲ್ ಡ್ರಮ್
- ಚೊಕ್ಕಟ ಟೇಬಲ್ ಟಾಪ್ ವಿನ್ಯಾಸ
- ಪೂರ್ವಯೋಜನೆ ಮಾಡಬಹುದಾದ ಡಿಜಿಟಲ್ ಟೈಮರ್

ಆವಿಷ್ಕಾರವನ್ನು ಅನ್‌ಲಾಕ್ ಮಾಡಿ. ಅನುಕೂಲತೆಯನ್ನು ಅನ್‌ಲಾಕ್ ಮಾಡಿ.
ಯಾವುದೇ ಬ್ರಾಂಡಿನ ಅಡುಗೆಮನೆ ಸಾಮಾನನ್ನು ಅದು ಯಾವುದೇ ಸ್ಥಿತಿಯಲ್ಲಿರಲಿ ಎಕ್ಸ್‌ಚೇಂಜ್ ಮಾಡಿಕೊಳ್ಳಿ ಹಾಗೂ ಪ್ರೆಸ್ಟೀಜ್ ನಿಂದ ವಿಶಿಷ್ಟವಾದ ಆವಿಷ್ಕಾರವನ್ನು ಮನೆಗೆ ಕೊಂಡೊಯ್ಯಿರಿ.

5 ಪದರ ಬಾಳಿಕೆಬರುವ ನಾನ್-ಸ್ಟಿಕ್ ಕೋಟಿಂಗ್ ಇರುವ ಭಾರತದ ಮೊಟ್ಟ ಮೊದಲ ಕುಕ್‌ವೇರ್

ಗ್ರ್ಯಾನೈಟ್ ಕುಕ್‌ವೇರ್
- ಬಾಳಿಕೆ ಬರುವ 5 ಪದರದ ಉತ್ಕೃಷ್ಟ ನಾನ್ ಸ್ಟಿಕ್ ಕೋಟಿಂಗ್
- ಡಿಶ್‌ವಾಷರ್ ಸೇಫ್

ಮೋಟಾರಿನ ಮೇಲೆ 5-ವರ್ಷ ವಾರಂಟಿ ಇರುವ ಶಕ್ತಿಶಾಲಿ ಮಿಕ್ಸರ್ ಗ್ರೈಂಡರ್

ಡಿಲೈಟ್ 750 ಪ್ಲಸ್
- 750 ವಾಟ್ ನ ಅಪ್ಪಟ ತಾಮ್ರದ ಶಕ್ತಿಶಾಲಿ ಮೋಟಾರ್
- 3 ಸ್ಟೈನ್ ಲೆಸ್ ಸ್ಟೀಲ್ ಜಾರ್ ಗಳು ಮತ್ತು ಒಂದು ಜರಡಿಯುಳ್ಳ ಜ್ಯೂಸರ್
- ಮೋಟಾರಿನ ಮೇಲೆ 5-ವರ್ಷ ವಾರಂಟಿ

ನಿಮ್ಮ ಆಹಾರವನ್ನು ಬ್ಯಾಕ್ಟೀರಿಯಾ ಮತ್ತು ವೈರಸ್ ರಹಿತವಾಗಿ ಇಡುತ್ತದೆ

ಹಣ್ಣು ಮತ್ತು ತರಕಾರಿ ಕ್ಲೀನರ್
- ರಾಸಾಯನಿಕಗಳನ್ನು ತೆಗೆದುಹಾಕುತ್ತದೆ ಹಾಗೂ ಹಾನಿಕಾರಕ ಬ್ಯಾಕ್ಟೀರಿಯಾವನ್ನು ನಾಶಪಡಿಸುತ್ತದೆ
- ಮಾಂಸ ಮತ್ತು ಸಮುದ್ರ ಆಹಾರದ ವಾಸನೆ ತೆಗೆಯುತ್ತದೆ
- ಆಹಾರದ ತಾಜಾತನ ಕಾಪಾಡುತ್ತದೆ
- ನಿರ್ವಹಣೆಯ ಅಗತ್ಯವಿಲ್ಲ

ಭಾರತದ ಅತ್ಯಂತ ತೆಳುವಾದ ಕುಕ್‌ಟಾಪ್, ಈಗ ಸ್ಮಾರ್ಟ್ ಗ್ಲಾಸ್ ಮೇಲೆ ಜೀವನಪರ್ಯಂತ ವಾರಂಟಿಯೊಂದಿಗೆ

ಎಡ್ಜ್ ಗ್ಯಾಸ್ ಸ್ಟವ್
- ಅಲ್ಟ್ರಾ ಸ್ಲಿಮ್ ಬಾಡಿ
- ಬಾಳಿಕೆಯುಳ್ಳ ವಿನ್ಯಾಸ
- ಸ್ಮಾರ್ಟ್ ಗ್ಲಾಸ್ ಮೇಲೆ ಜೀವನಪರ್ಯಂತ ವಾರಂಟಿ
- ಜ್ವಾಲೆ ರಕ್ಷಕದೊಂದಿಗೆ ಪ್ಯಾನ್ ಸಪೋರ್ಟ್

ನೀರಿನೊಂದಿಗೆ ಮತ್ತು ಒಣ ಸ್ವಚ್ಛತೆಗೆ ಒಂದೇ ವ್ಯಾಕ್ಯೂಮ್ ಕ್ಲೀನರ್

ಟೈಫೂನ್ 05 ವ್ಯಾಕ್ಯೂಮ್ ಕ್ಲೀನರ್
- ಶಕ್ತಿಶಾಲಿ 1200 ವಾಟ್ ಮೋಟಾರ್
- ಆಧುನಿಕ ಹೆಪಾ ಫಿಲ್ಟರ್
- 10ಲೀ ಡಸ್ಟ್ ಕಂಪಾರ್ಟ್‌ಮೆಂಟ್

WET & DRY CLEANING

ಎಕ್ಸ್‌ಚೇಂಜಿನ ಮೇಲೆ ಆಕರ್ಷಕ ರಿಯಾಯಿತಿ ಪಡೆಯಿರಿ

ಪ್ರೆಷರ್ ಕುಕ್ಕರ್‌ಗಳು	ಕುಕ್‌ವೇರ್	ಮಿಕ್ಸರ್ ಗ್ರೈಂಡರ್‌ಗಳು	ಗ್ಯಾಸ್ ಸ್ಟವ್‌ಗಳು	ಇಂಡಕ್ಷನ್ ಕುಕ್‌ಟಾಪ್‌ಗಳು	ಚಿಕ್ಕ ಚಿಕ್ಕ ಉಪಕರಣಗಳು	ವಾಟರ್ ಪ್ಯೂರಿಫೈಯರ್‌ಗಳು	ವಾಕ್ಯೂಮ್ ಕ್ಲೀನರ್‌ಗಳು
20%-37% ಕಡಿತ*	28%-57% ಕಡಿತ*	32%-41% ಕಡಿತ*	26%-40% ಕಡಿತ*	33%-43% ಕಡಿತ*	25%-55% ಕಡಿತ*	27%-37% ಕಡಿತ*	29%-33% ಕಡಿತ*

*ಷರತ್ತುಗಳು ಅನ್ವಯಿಸುತ್ತವೆ. ಎಲ್ಲ ಡಿಸ್ಕೌಂಟ್‌ಗಳು ಎಮ್‌ಆರ್‌ಪಿ ಮೇಲೆ ಮಾತ್ರ. ಆಯ್ದ ಡೀಲರ್ ಔಟ್‌ಲೆಟ್‌ಗಳಲ್ಲಿ ದಾಸ್ತಾನು ಇರುವವರೆಗೆ ಮಾತ್ರ. ಬದಲಾವಣೆ ಬೆಲೆಯು ಖರೀದಿಸಿದ ಸಾಮಾನು ಮತ್ತು ಹಿಂತಿರುಗಿಸಲಾಗುವ ಹಳೆಯ ಸಾಮಾನುಗಳನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ : 10 ಲೀ ಅಲ್ಯೂಮಿನಿಯಂ ಪ್ರೆಷರ್ ಕುಕ್ಕರ್‌ಗೆ ಬದಲಾವಣೆಯ ಮೇಲೆ ನೀವು 2 ಲೀ ಪಾಪ್ಯುಲರ್ ಪ್ರೆಷರ್ ಕುಕ್ಕರ್ ಖರೀದಿಸಿದರೆ, ವಾಸ್ತವದ ಡಿಸ್ಕೌಂಟ್ ರೂ.420 ಆಗಿರುತ್ತದೆ. ವಾಸ್ತವಿಕ ಬದಲಾವಣೆ ಕೊಡುಗೆ ಬೆಲೆಯ ಬಗ್ಗೆ ತಿಳಿದುಕೊಳ್ಳಲು, ದಯವಿಟ್ಟು ಆಯ್ದ ಡೀಲರ್ ಅಂಗಡಿಗಳಲ್ಲಿ ಲಭ್ಯವಿರುವ ಯಾವುದಕ್ಕಾದರೂ ಏನನ್ನಾದರೂ ಬದಲಾವಣೆ ಕೊಡುಗೆ ಬೆಲೆ ಪಟ್ಟಿಯನ್ನು ನೋಡಿರಿ. ಹಿಂತಿರುಗಿಸಬಹುದಾದ ಹಳೆಯ ಸಾಮಾನುಗಳೆಂದರೆ ಅಲ್ಯೂಮಿನಿಯಮ್ ಮತ್ತು ಸ್ಟೈನ್‌ಲೆಸ್ ಸ್ಟೀಲ್ ಪ್ರೆಷರ್ ಕುಕ್ಕರ್‌ಗಳು, ಅಲ್ಯೂಮಿನಿಯಮ್ ಕುಕ್‌ವೇರ್ (ಕನಿಷ್ಠ 400 ಗ್ರಾಂ ಪಾತ್ರ ತೂಕ), ಗ್ಯಾಸ್ ಸ್ಟವ್‌ಗಳು (ಕನಿಷ್ಠ 2 ಬರ್ನರ್‌ಗಳು), ಮಿಕ್ಸರ್ ಗ್ರೈಂಡರ್‌ಗಳು (ಹಳೆಯ ಮಿಕ್ಸರ್ ಗ್ರೈಂಡರ್ ಮೋಟಾರ್ ಮತ್ತು ಎರಡು ಸ್ಟೈನ್‌ಲೆಸ್ ಸ್ಟೀಲ್ ಜಾರ್ ಹೊಂದಿರಬೇಕು), ಇನ್‌ಡಕ್ಷನ್ ಕುಕ್ ಟಾಪ್‌ಗಳು, ರೈಸ್‌ಕುಕ್ಕರ್‌ಗಳು, ಚಿಮ್ನಿಗಳು, ಹಾಬ್‌ಗಳು, ಓಟಿಜಿಗಳು, ಕೆಟಲ್, ಟೋಸ್ಟರ್‌ಗಳು, ಇಸ್ತ್ರಿ ಪೆಟ್ಟಿಗೆಗಳು, ಮೈಕ್ರೋವೇವ್ ಅವನ್, ಜ್ಯೂಸರ್‌ಗಳು, ಬ್ಲೆಂಡರ್‌ಗಳು, ಗ್ರಾವಿಟಿ ವಾಟರ್ ಪ್ಯೂರಿಫೈಯರ್‌ಗಳು ಮತ್ತು ವಾಕ್ಯೂಮ್ ಕ್ಲೀನರ್‌ಗಳು.

Prestige
ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?

MADE WITH PRIDE IN INDIA | TOLL-FREE Prestige CARE 1800-123-334411 BSNL/MTNL Customers 080 - 6846 9897 (Toll) | Follow 'TTK Prestige' on | PRESTIGE XPERT on WhatsApp 97423 34411 | www.ttkprestige.com | ttk

Prestige Xclusive

Bull Temple Rd, Ph: 26609012; **Malleswaram,** Ph: 9448282470/48506605; **Rt Nagar Main Rd,** Ph: 41698761; **Ganganagar Cbi Rd,** Ph: 43705914; **Wheeler Rd,** Ph: 25803080; **Kattriguppe Circle,** Ph: 40900685; **Vijayanagar,** Ph: 41330034; **Hsr Bda Cmplx,** Ph: 25726991; **Marathahalli,** Ph: 42197088; **Sanjaynagar,** Ph: 41258300; **Banaswadi Ring Rd,** Ph: 41634115; **Jayanagar,** Ph: 43705308/9845066549; **J.P.Nagar,** Ph: 41122235; **Hessarghatta Main Road,** Ph: 28370400; **Rajarajeshwari Ngr,** Ph: 28603540; **Kengeri Stl Town,** Ph: 28485296; **Rajajinagar,** Ph: 41731224; **B.T.M.Layout,** Ph: 40939168; **Hulimavu Gate,** Ph: 42192747; **Sarjapura Rd,** Ph: 42038646/41557606; **Konankunte Cross, Ph:** 26860350; **Nagharabhavi Bda Cmplx, Ph:** 23585086/9739004750; **Begur,** Ph: 8073408322; **Vidyaranayapura,** Ph: 9845518824; **Wilson Grdn,** Ph: 42194509/9480010720; **Brookefield,** Ph: 28541555; **Ramamurthy Nagar,** Ph: 420449545; **Kr Puram,** Ph: 8861494277; **Hennur Rd Kothanur, Ph:** 9880186569; **Cambridge Layout, Ph:** 42074468; **Kaggadaspura,** Ph: 7306666610; **Kammanahalli,** Ph: 41606044; **Whitefield,** Ph: 40907273; **Chandapura,** Ph: 27805955; **Hoskote,** Ph: 27932227; **Dommasandra,** Ph: 9611423555; **Jalahalli Cross,** Ph: 40903143; **Uttarahalli,** Ph: 9986879095; **Anjananagr Magadi Rd,** Ph: 23281206; **Kadugodi,** Ph: 8123042234; **Hosur Rd Huskur Gate,** Ph: 8553442596/9606406009; **Yelahanka Newtown,** Ph: 8668034376; **Jayamahal Ext,** Ph: 41616484; **Mahalakshmi Lyt,** Ph: 23572233; **Jpnagar 7th Phase,** Ph: 41465855; **Kumaraswamy Lyt,** Ph: 26664702/9739011252; **Chandralyt,** Ph: 9845146418; **Channasandra,** Ph: 9986369569; **Sheshadripuram, Ph:** 23460336/8711090976; **Kasturingr,** Ph: 41692899; **Tc Palya,** Ph: 9740333334; **Thanisandra,** Ph: 25445668; **Attibele,** Ph: 9341221525; **Bagalur,** Ph: 9980130808; **Sarjapura Town,** Ph: 9036373175; **Hosa Rd Junction,** Ph: 9845597099; **Mathikere,** Ph: 6366636592; **Basaveshwara Nagar,** Ph: 9739591008; **Thalagatapura,** Ph: 996411688; **Koramangala,** Ph: 9742901122; **Hegganahalli,** Ph: 28360289; **Gottigere,** Ph: 41675270; **Amruthahalli, Ph:** 9141169883; **Ullal,** Ph: 9686646565; **Sahakar Nagar,** Ph: 7019376734; **Nelamangala,** Ph: 9632356627; **Chikkaballapur,** Ph: 9845737576; **Kolar,** Ph: 9738882584; **Channapatna,** Ph: 9686661294; **Madhugiri,** Ph: 9611552805; **Chinthamani,** Ph: 984558018; **Bagepalli,** Ph: 8722270643; **Gauribidanur,** Ph: 8317399465; **Bangarpet,** Ph: 9740739795; **Srinivaspura,** Ph: 7348847151.

Also Available At : Jayanagar: Sarathy, Ph: 41210047; Vishaals, Ph: 08022447285; Anjana Super Stores, Ph: 41301836, 7019537414; Kitchen Mart, Ph: 26652885; Aravinda, Ph: 41301989; **Bank Colony:** Vardhaman Ind, Ph: 22428300; **Banashankari:** Patel Agn, Ph: 26714285; Patel Ktchen Apl, Ph: 9079061706; Chamundi Ind, Ph: 26712633; **Chamarjpet:** Vadiraj Stores, Ph: 41517646; **Dvg Rd:** Santosh Steel Centre, Ph: 26601138; **Isro Layout:** Bhumi Kitchen, Ph: 9916830850; **Jp Nagar:** Dream Mart, Ph: 8310402324; Surya Kitchen World, Ph: 9449762988; Arhanth Home Appl, Ph: 9980606809; **Kanakapura Rd:** Royal Mart, Ph: 28425777/25535835; **Padmanab Nagar:** Royal Mart, Ph: 9886088993; **Puttenahalli:** Jyothi Home App, Ph: 41301415; **Uthrahalli:** Royal Mart, Ph: 26394114; **Mysore Road:** The Karnataka Metal Industry, Ph: 9449342727; **Amruthahalli:** Kaveri Home Apl, Ph: 9742375898; **Ayyappa Nagar:** Top Mart Super Mkt, Ph: 7204448111; Food Land Super Market, Ph: 9108246032; Akarshan, Ph: 9611106497; **Babusapalya:** Karnataka Home Apl, Ph: 8105754544; **Basaveshwar Nagar:** Bigday Hyper Market, Ph: 9972517344; Mahaveer Home App, Ph: 9844173501; Modern Colln, Ph: 23583440; Aadhinath Kitchen Gal, Ph: 41220555; **Gayathri Ngr:** J.K.Steel, Ph: 23320853; **Bagalgunte:** Royal Mart, **Ph:** 9538000072; **Chandra Layout:** Usha Kw, Ph: 9886679900; Pavan Kitchen World, Ph: 8618028319; Milan Home App, Ph: 9008685700; **Ganganagar:** Salem Industries, Ph: 41284470; **Fraser Town:** Carry Fresh, **Ph:** 7306711557; **Hesargatta Main Rd:** Royal Mart, Ph: 28398200; **Hrbr Layout:** Bhavani Home App, Ph: 9845916164; **Kamanhalli:** Maruthi Home Appl, Ph: 8880050050; H M Traders, Ph: 9980075613; **Malleshwaram:** Deviprasad Home Apl, Ph: 23343411, 23311188; Bright Novelty, Ph: 23343505; Hanuman Home Appl, Ph: 23345482; **Mathikere:** M.Bhawarlals Inc, Ph: 41724740; Maharaja Agency, Ph: 41278050; Shoba Home Appliances, Ph: 9845042335; Mataji Home App, Ph: 7019185987; **Hegganahlli:** Foodland Hyper Market, Ph: 9108246032; **Malleshpalya:** Bajrang Home Appl, Ph: 9449526463; **Magadi Road:** Royal Mart, Ph: 23584498/23284575; S N Home World, Ph: 9880096355; Kundan Electronic, Ph: 9741420612; **Annaporneshwari Nagar:** Deepak Home App, Ph: 9148912736; **M S Palya:** Royal Mart Ph: 8147014079; **N.Narayanpura:** Yellow Mart, Ph: 8553666059; **Rajajinagar:** Mahalakshmi Metal House, Ph: 23355994; Rathna Sales, Ph: 23375566; Dhanalakshmi Kitchen World, Ph: 41285801; Dhanalakshmi Industries, Ph: 41285802; Jayalakshmi Kw, Ph: 9844755146; R S Mart Ph: 6363602929; Pooja Stl Cent, Ph: 23327014; **Rajankunte:** Rmr Super Market, Ph: 9108636912; **Rr Nagar:** Pawan K/W, Ph: 9739207043; Milan Home App, Ph: 28605619; **T C Palya:** Rhk Super Mkt, Ph: 9731668995; Hkgn Gaslink, Ph: 9008000454; **Ulsoor:** Aishwarya Pranam Home Needs, Ph: 41471829,9902788429; Pranama Steel Centre, Ph: 9448053781; **Udaynagar:** Mother India, Ph: 9036189765; **Vijayanagar:** Vijaylaxmi Kw, Ph: 9845022284; Mahendras, Ph: 23141126; Maruthi Home Appl, Ph: 8904689155; **Vidyarnapura:** Praksh K W, Ph: 8050620877; Mahalakshmi Steel House, Ph: 9663375159; **Yelahanka:** Royalmart, Ph: 41705760; Mutha Electricals, Ph: 22971920; Sai Kitchen World, Ph: 9632811797; **KGF:** Prakash Home Appliances, Ph: 08153-260773; **Bangarpet:** Kumar Stores, Ph: 9845935240; **Kolar:** Reddy Electronics, Ph: 9844472531; Rakesh Electronics, Ph: 9880634555; **Malur:** Eddy Electronics, Ph: 9844435121; **Vijayapura:** Rm City, Ph: 27666396; Reddy Electronics, Ph: 9900336061; **Devanahalli:** New Sowmya Electronics, Ph: 9141335210. **For Franchisee Enquiry Contact: Karthik N, Ph: 9944377884.**

ಪ್ರಜಾವಾಣಿ facebook LIVE
FB.com/prajavani.net

ಸಿಬಿಎಸ್‌ಇ
ರದ್ದಾದ ಪರೀಕ್ಷೆ ಮತ್ತು ಫಲಿತಾಂಶದ ಮಾನದಂಡ

ಕೋವಿಡ್ ಹಿನ್ನೆಲೆಯಲ್ಲಿ ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಈ ಬಾರಿ 10 ಮತ್ತು 12ನೇ ತರಗತಿ ಪರೀಕ್ಷೆಯನ್ನು ರದ್ದುಗೊಳಿಸಿದ್ದು ಗೊತ್ತೇ ಇದೆ. ವಿದ್ಯಾರ್ಥಿಗಳ ಆಂತರಿಕ ಮೌಲ್ಯಮಾಪನದ ಆಧಾರದ ಮೇಲೆ ಫಲಿತಾಂಶ ನೀಡುವುದಾಗಿ ಹೇಳಲಾಗಿದ್ದು, ಈ ಬಗ್ಗೆ ಸಮಗ್ರ ಮಾಹಿತಿ ನೀಡಿ, ವಿಶ್ಲೇಷಿಸಲಿದ್ದಾರೆ

ಶ್ರೀಲತಾ ರಾವ್ ಪ್ರಿನ್ಸಿಪಾಲ್, ಡಾ.ಎಂ.ರಾಮಣ್ಣ ಶೆಟ್ಟಿ ಸ್ಮಾರಕ ಇಂಗ್ಲಿಷ್ ಮಾಧ್ಯಮ ಹೈಸ್ಕೂಲ್ (ನಿಟ್ಟೆ ಎಜುಕೇಷನ್ ಟ್ರಸ್ಟ್), ತೋಕೂರು, ಮಂಗಳೂರು

ಸಂದರ್ಶಕರು: ಚೇತನಾ ಸಿ.ಎಚ್.
ಹಿರಿಯ ಶಿಕ್ಷಕಿ, ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್, ಬೆಂಗಳೂರು

ನೀವೂ ಪ್ರಶ್ನೆ ಕೇಳಬಹುದು

ಇಂದು ಸಂಜೆ 3ಕ್ಕೆ

'ಪಕ್ಷ ಸಂಘಟನೆಗೆ ರಾಜ್ಯ ಪ್ರವಾಸ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷವನ್ನು ಸಂಘಟಿಸಲು ರಾಜ್ಯದಾದ್ಯಂತ ಪ್ರವಾಸ ಕೈಗೊಳ್ಳುತ್ತೇನೆ. ಸ್ವತಂತ್ರವಾಗಿ ಅಧಿಕಾರಕ್ಕೆ ಬರುವುದೇ ಗುರಿ. ಚುನಾವಣೆಗೆ ಒಂದು ವರ್ಷದ ಮೊದಲೇ ಅಂದರೆ, ಜ. 15ರೊಳಗೆ ಕನಿಷ್ಠ 150 ಕ್ಷೇತ್ರಗಳಿಗೆ ಪಕ್ಷದ ಅಭ್ಯರ್ಥಿಗಳನ್ನು ಘೋಷಿಸಲಾಗುವುದು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಮುಂಬರುವ ಜಿಲ್ಲಾ, ತಾಲ್ಲೂಕು ಪಂಚಾಯಿತಿ ಮತ್ತು 2023ರ ವಿಧಾನಸಭೆ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ಮತ್ತು ಪಕ್ಷ ಸಂಘಟನೆಗೆ ಸಂಬಂಧಿಸಿದಂತೆ ಪಕ್ಷದ ಕಚೇರಿ ಜೆ.ಪಿ. ಭವನದಲ್ಲಿ ಬೆಳಗಾವಿ, ಚಿಕ್ಕೋಡಿ ಲೋಕಸಭಾ ಕ್ಷೇತ್ರ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಮುಖಂಡರ ಜೊತೆ ಗುರುವಾರ ಅವರು ಚರ್ಚೆ ನಡೆಸಿದರು.



ಎಚ್.ಡಿ. ಕುಮಾರಸ್ವಾಮಿ

ಸಭೆಗೂ ಮೊದಲು ಸುದ್ದಿಗಾರರ ಜತೆ ಮಾತನಾಡಿದ ಕುಮಾರಸ್ವಾಮಿ, 'ಮುಂದಿನ ಬುಧವಾರದವರೆಗೆ ಪಕ್ಷದ ಜಿಲ್ಲಾಮಟ್ಟದ ನಾಯಕರ ಜೊತೆ ಚರ್ಚಿಸುತ್ತೇನೆ. ಪದಾಧಿಕಾರಿಗಳ ನೇಮಕದ ಬಗ್ಗೆಯೂ ನಿರ್ಣಯ ತೆಗೆದುಕೊಳ್ಳಲಾಗುವುದು' ಎಂದರು.

'ಕೋವಿಡ್ ಸೋಂಕು ಸಂಪೂರ್ಣ ನಿಯಂತ್ರಣಕ್ಕೆ ಬಂದ ಬಳಿಕ ಜಿಲ್ಲಾ ಪ್ರವಾಸ ಕೈಗೊಳ್ಳುತ್ತೇನೆ. ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ಪ್ರಾದೇಶಿಕ ಪಕ್ಷದ ಅಗತ್ಯದ ಬಗ್ಗೆ ಜನರಿಗೆ ಮನವರಿಕೆ ಮಾಡುತ್ತೇನೆ. ಹೊಸದೊಂದು ಬದಲಾವಣೆಗೆ ಪ್ರಾದೇಶಿಕ ಪಕ್ಷದ ಪಾತ್ರದ ಬಗ್ಗೆಯೂ ತಿಳಿಸುತ್ತೇನೆ' ಎಂದರು.

'ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಆಡಳಿತ ನಡೆಸುವಾಗ ದೆಹಲಿಯಿಂದ ಇಲ್ಲಿಗೆ ಉಸ್ತುವಾರಿಗಳು ಬರುತ್ತಾರೆ. ರಾಜ್ಯಕ್ಕೆ ಅವರು ಬರುವ ಉದ್ದೇಶವಾದರೂ ಏನು? ಕರ್ನಾಟಕ ಸಂಪದ್ಭರಿತ ರಾಜ್ಯವಾಗಿದ್ದು, ಅವರು ಇಲ್ಲಿನ ಸಂಪತ್ತನ್ನು ಲೂಟಿ ಮಾಡಲು ಬರುತ್ತಾರೆ. ಚುನಾವಣೆ ನಡೆಯುವ ರಾಜ್ಯಗಳಿಗೆ ಸಂಪತ್ತು ಕಳುಹಿಸುವುದಷ್ಟೆ ಅವರ ಕೆಲಸ' ಎಂದು ಆರೋಪಿಸಿದರು.

ಶಾಸಕ ಬಂಡೆಪ್ಪ ಕಾಶೆಂಪೂರ, ವಿಧಾನಪರಿಷತ್ ಸದಸ್ಯ ಶ್ರೀಕಂಠೇಗೌಡ, ಜಿಲ್ಲಾ ಘಟಕಗಳ ಜಿಲ್ಲಾ, ತಾಲ್ಲೂಕು ಘಟಕಗಳ ಅಧ್ಯಕ್ಷರು, ಹಾಲಿ ಹಾಗೂ ಮಾಜಿ ರಾಜ್ಯಸಭಾ ಸದಸ್ಯರು, 2018 ಮತ್ತು 2019ರ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಸಭೆಯಲ್ಲಿದ್ದರು.



ಗುಂಡ್ಲುಪೇಟೆ ತಾಲ್ಲೂಕಿನ ಅಲತ್ತೂರು ಗ್ರಾಮದಲ್ಲಿ ವಿದ್ಯುತ್ ತಂತಿ ಬೇಲಿಗೆ ಸಿಲುಕಿ ಮೃತಪಟ್ಟ ಆನೆಯನ್ನು ಅರಣ್ಯಾಧಿಕಾರಿಗಳು ವೀಕ್ಷಿಸಿದರು

ವಿದ್ಯುತ್ ತಂತಿಗೆ ಸಿಲುಕಿ ಆನೆ ಸಾವು

ಗುಂಡ್ಲುಪೇಟೆ: ತಾಲ್ಲೂಕಿನ ಅಲತ್ತೂರು ಗ್ರಾಮದಲ್ಲಿ ಕಾಡುಹಂದಿ ತಡೆಗೆ ಅಳವಡಿಸಿದ್ದ ವಿದ್ಯುತ್ ತಂತಿ ಬೇಲಿಗೆ ಸಿಲುಕಿ 40 ವರ್ಷದ ಹೆಣ್ಣು ಆನೆ ಗುರುವಾರ ಮೃತಪಟ್ಟಿದೆ.

ಗ್ರಾಮದ ಜಗನ್ನಾಥ್ ಎಂಬುವವರು ತಮ್ಮ ಜಮೀನಿಗೆ ನೆಲಗಡಲೆ ಬಿತ್ತನೆ ಮಾಡಿದ್ದರು. ಬೆಳೆ ರಕ್ಷಣೆಗೆಂದು ಜಮೀನಿನ ಸುತ್ತಲೂ ತಂತಿ ಕಟ್ಟಿ, ಅಕ್ರಮವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿದ್ದರು ಎಂಬುದು ಗೊತ್ತಾಗಿದೆ.

ಈ ಗ್ರಾಮವು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ ಅರಣ್ಯ ವಲಯ ವ್ಯಾಪ್ತಿಗೆ ಬರಲಿದ್ದು, ಅರಣ್ಯಾಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದಾರೆ. ಆನೆ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಜಮೀನು ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ.

7 ಡಿವೈಎಸ್ಪಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 7 ಡಿವೈಎಸ್ಪಿ/ಎಸಿಪಿಗಳನ್ನು ವರ್ಗಾವಣೆಗೊಳಿಸಿ ಪೊಲೀಸ್ ಸಿಬ್ಬಂದಿ ಮಂಡಳಿ ಗುರುವಾರ ಆದೇಶ ಹೊರಡಿಸಿದೆ.

ವರ್ಗಾವಣೆಯಾದವರು: ಎಚ್. ಶ್ರೀನಿವಾಸ್: ತುಮಕೂರು ನಗರ ಉಪ ವಿಭಾಗ, ಎಚ್.ಜೆ. ತಿಪ್ಪೇಸ್ವಾಮಿ; ಸಿಟಿಎಸ್‌ಬಿ ಬೆಂಗಳೂರು, ಕಿಶೋರ್ ಭರಣಿ; ಮಾರತ್ತಹಳ್ಳಿ ಉಪವಿಭಾಗ, ಶಾಂತಮಲ್ಲಪ್ಪ; ವೈಟ್‌ಫೀಲ್ಡ್ ಉಪವಿಭಾಗ, ಅನ್ವರ್ ಅಲಿ; ಚೆಸ್ಕಾಂ ವಿಚಕ್ಷಣಾ ದಳ, ಎಂ.ಇ.ಮನೋಜ್‌ಕುಮಾರ್; ಸಿಐಡಿ, ಎಂ. ಜಗದೀಶ್;ಲೋಕಾಯುಕ್ತ.

ರಾಜ್ಯ ಕೋವಿಡ್ ಅಂಕಿ–ಅಂಶ

28,78,564 ▲	ಒಟ್ಟು ಸೋಂಕಿತರು (28,76,587 ನಿನ್ನೆಯ ವಿವರ)
32,383 ▼	ಸಕ್ರಿಯ ಪ್ರಕರಣಗಳು
28,10,121 ▲	ಗುಣಮುಖರಾದವರು
36,037 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,977	▼
ಗುಣಮುಖ	3,188	▲
ಸಾವು	48	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ವಿಧಾನಸೌಧ ಆವರಣದಲ್ಲಿ ಬಸವೇಶ್ವರರ ಪ್ರತಿಮೆ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿ ಜಗಜ್ಯೋತಿ ಬಸವೇಶ್ವರರ ಪ್ರತಿಮೆ ಸ್ಥಾಪಿಸುವ ಪ್ರಸ್ತಾವಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

'ಪ್ರತಿಮೆಯನ್ನು ಯಾವ ಜಾಗದಲ್ಲಿ ಸ್ಥಾಪಿಸಬೇಕು, ಅದರ ವೆಚ್ಚ ಎಷ್ಟು ಎಂಬುದರ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ಧರಿಸಲಿದೆ. ಬಸವಣ್ಣನವರು ವಚನ ಬರೆಯುತ್ತಿರುವ ರೀತಿಯ ಪ್ರತಿಮೆ ಸ್ಥಾಪಿಸುವುದು ಸೂಕ್ತ ಎಂಬ ಅಭಿಪ್ರಾಯ ಸಂಪುಟ ಸಭೆಯಲ್ಲಿ ವ್ಯಕ್ತವಾಯಿತು' ಎಂದು ಬೊಮ್ಮಾಯಿ ಹೇಳಿದರು. ಚಾಲುಕ್ಯ ವೃತ್ತದಲ್ಲಿ ಬಸವೇಶ್ವರ ಪ್ರತಿಮೆ ಇರುವಾಗ ಮತ್ತೊಂದು ಪ್ರತಿಮೆ ಔಚಿತ್ಯವಿದೆಯೇ ಎಂಬ ಚರ್ಚೆಯೂ ಶುರುವಾಗಿದೆ.

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ

ನಂ. 17, 'ಜಯನಿವಾಸ', ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು–560004.
ದೂರವಾಣಿ: 080–26610326, ಫ್ಯಾಕ್ಸ್: 080–26611030, ಇ–ಮೇಲ್: dca-ka@nic.in

ಸಂಖ್ಯೆ: ಲೆಪಶಾ/ಇತರೆ/ಸಿಎಅ/10/2021–22 ದಿನಾಂಕ: 09–07–2021

ಪ್ರಕಟಣೆ

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯು ರಾಜ್ಯದಲ್ಲಿರುವ ಸಹಕಾರ ಸಂಘಗಳ ಲೆಕ್ಕಪರಿಶೋಧನೆಗೆ ಅರ್ಹ ಸನ್ನದು ಲೆಕ್ಕಪರಿಶೋಧಕರುಗಳ ಹೆಸರು ಮತ್ತು ಫರ್ಮ್‌ಗಳನ್ನು ನೋಂದಣಿ ಮಾಡಿ ಪ್ಯಾನಲ್ ಪಟ್ಟಿ ನಿರ್ವಹಿಸುತ್ತಿದ್ದು, ರಾಜ್ಯದಲ್ಲಿರುವ 44,767 ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ಪ್ರತಿವರ್ಷ ಆಗಸ್ಟ್ 31 ರೊಳಗಾಗಿ ಪೂರ್ಣಗೊಳಿಸಬೇಕಿರುತ್ತದೆ. ಈ ಹಿನ್ನಲೆಯಲ್ಲಿ ರಾಜ್ಯದಲ್ಲಿ ಸನ್ನದು ಲೆಕ್ಕಪರಿಶೋಧಕರವರುಗಳು ಇಲಾಖಾ ಪ್ಯಾನಲ್‌ನಲ್ಲಿ ನೋಂದಣಿ ಮಾಡಿಕೊಳ್ಳಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 63(1) ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 29–ಬಿ ರಂತೆ ಈ ಕೆಳಕಂಡಂತೆ ಅರ್ಹತೆಗಳನ್ನು ಹೊಂದಿರಬೇಕಿರುತ್ತದೆ.

1) ಚಾರ್ಟರ್ಡ್ ಲೆಕ್ಕಿಗರ ಅಧಿನಿಯಮ 1949 ರ ಅರ್ಥ ವಿವರಣೆಯಲ್ಲಿ ಬರುವ ಸನ್ನದು ಲೆಕ್ಕಿಗ. 2) ಕನಿಷ್ಠ 3 ವರ್ಷಗಳ ಲೆಕ್ಕಪರಿಶೋಧನೆ ಮಾಡಿರುವ ಅನುಭವ. 3) ಕನ್ನಡ ಭಾಷೆಯ ವ್ಯವಹಾರ ಜ್ಞಾನ ಹೊಂದಿರುವವರು.

ತಮ್ಮ ಹೆಸರು / ಫರ್ಮ್‌ಗಳನ್ನು ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ ಇಲ್ಲಿ ನೋಂದಾಯಿಸಿಕೊಳ್ಳಲು ಅರ್ಜಿಯನ್ನು ಇಲಾಖೆಯ ವೆಬ್‌ಸೈಟ್: www.sahakaradarpana.kar.nic.in ನಿಂದ ಪಡೆದು, ಭರ್ತಿಮಾಡಿ ವೆಬ್‌ಸೈಟ್‌ನಲ್ಲಿ ನಮೂದಿಸಿರುವ ಈ ಕೆಳಕಂಡ ಅವಶ್ಯಕ ದಾಖಲೆಗಳನ್ನು ಸ್ಕ್ಯಾನ್ ಮಾಡಿ (ಮೊಹರು ಹಾಗೂ ಸಹಿಯೊಂದಿಗೆ) ಅರ್ಜಿಯೊಂದಿಗೆ ಲಗತ್ತಿಸಿ ಇ–ಮೇಲ್: ddca-audit-ka@nic.in ಮುಖಾಂತರ ಹಾಗೂ ಮೇಲ್ಕಂಡ ದಾಖಲೆಗಳ ಹಾರ್ಡ್‌ಕಾಪಿ (ಖಾಯಂ ಪ್ರತಿ)ಯನ್ನು ಮೇಲ್ಕಂಡ ವಿಳಾಸಕ್ಕೆ ಕಳುಹಿಸಬಹುದಾಗಿದ್ದು, ಅರ್ಹ ಸನ್ನದು ಲೆಕ್ಕಪರಿಶೋಧಕರು ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು: 1) Certificate of Membership 2) Certificate of Practice 3) Document Pertaining Kannada Knowledge 4) Notarized Partnership Deed 5) Firm Registration Certificate 6) Latest Firm Constitution Certificate (downloaded from ICAI website) 7) RBI Unique Code Document (if applicable) 8) DISA Certificate (if available).

ಸಹಿ/–
ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು

ವಾಸಾಸಂಇ/ಬೆಂ.ನ/ಅಡ್ವರ್ಟೋರ್/816/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,

ಲಸಿಕೆ ಸಂಸ್ಥೆ ಆವರಣ, 2ನೇ ರೇಲ್ವೆಗೇಟ್ ಹತ್ತಿರ, ಟಿಳಕವಾಡಿ, ಬೆಳಗಾವಿ–590006

ಸಂ:ಡಿ.ಪಿ.ಎಂ.ಯು/ಎನ್.ಹೆಚ್.ಎಂ/ಬೆ/47/2021–22 ದಿನಾಂಕ: 15/07/2021

ಗುತ್ತಿಗೆ ನೇಮಕಾತಿ ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ(ನಗರ/ಗ್ರಾಮೀಣ) ಬೆಳಗಾವಿ ಜಿಲ್ಲೆಯಲ್ಲಿ ಖಾಲಿ ಇರುವ ವಿವಿಧ ವೃಂದಗಳ ಹುದ್ದೆಗಳನ್ನು ಮೆರಿಟ್ ಕಂ ರೋಸ್ಟರ್ ಆಧಾರದ ಮೇಲೆ ನೇಮಕಾತಿ ನಿಯಮಾವಳಿಗಳನ್ವಯ ಒಂದು ವರ್ಷದ ಅವಧಿಗೆ ಗುತ್ತಿಗೆ ಅಧಾರದ ಮೇಲಿನ ನೇಮಕಾತಿಗಾಗಿ ಅರ್ಜಿಯನ್ನು ಆವ್ಹಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಈ ಕೆಳಕಾಣಿಸಿದ ಕಾಲಮಿತಿಯಲ್ಲಿ ಅರ್ಜಿ ಸಲ್ಲಿಸಬಹುದು.

1) ಸ್ತ್ರೀ ರೋಗ ತಜ್ಞ ವೈದ್ಯರು(ಹುದ್ದೆ)–04(ಸಂಖ್ಯೆ)– ರೂ.1,10,000/–(ಮಾಸಿಕ ವೇತನ), 2) ಚಿಕ್ಕಮಕ್ಕಳ ತಜ್ಞ ವೈದ್ಯರು–08– ರೂ.1,10,000/–, 3)ಅರವಳಿಕೆ ತಜ್ಞ ವೈದ್ಯರು–05– ರೂ.1,10,000/–, 4) ಜನರಲ್ ಸರ್ಜನ್–02– ರೂ.1,10,000/–, 5) ಜನರಲ್ ಮೆಡಿಸನ್–04– ರೂ.1,10,000/–, 6) ಚರ್ಮರೋಗ ತಜ್ಞ ವೈದ್ಯರು–04– ರೂ.1,10,000/–, 7) ಇ.ಎನ್.ಟಿ ತಜ್ಞ ವೈದ್ಯರು–03– ರೂ.1,10,000/–, 8) 24*7 ಆಯುಷ್ಯ ವೈದ್ಯರು–04– ರೂ.25,000/–, 9) ಆರ್.ಬಿ.ಎಸ್.ಕೆ ವೈದ್ಯರು–03– ರೂ.45,000/– MBBS/ ರೂ.25,000/-BAMS, 10) ಶುಶ್ರೂಷಕಿಯರು–24*7 ಪಿ.ಹೆಚ್.ಸಿ–41, ಆರ.ಬಿ.ಎಸ್.ಕೆ–5, ಬಿ.ಸಿ.ಟಿ.ವಿ ವಾಹನ–2, ಎನ್.ಯು.ಹೆಚ್.ಎಂ–4– ರೂ.13,225/–, 11) ನೇತ್ರ ಸಹಾಯಕರು ಆರ್.ಬಿ.ಎಸ್.ಕೆ–02– ರೂ.13,225/–, 12) ಫಾರ್ಮಾಸಿಸ್ಟ್ ಎನ್.ಯು.ಹೆಚ್.ಎಂ–01– ರೂ.13,800/–, 13) ಕಿ.ಪ್ರ.ಶಾಲಾ ತಂತ್ರಜ್ಞರು ಎನ್.ಯು.ಹೆಚ್.ಎಂ–01– ರೂ.14,000/–, 14) ಕಿ.ಮ.ಆ. ಸಹಾಯಕಿಯರು–ಎನ್.ಹೆಚ್.ಎಂ–3, ಎನ್.ಯು.ಹೆಚ್.ಎಂ–7– ರೂ.11,500/–, 15) ಕಿ.ಪು.ಆ. ಸಹಾಯಕರು–12– ರೂ.11,500/–, 16) Audiologist NPPCD-01- ರೂ.11,500/–, 17)Audiometric Assistant NPPCD-01- ರೂ.15,000/–, 18) District Programme Manager-01- ರೂ.40,000/–, 19) Block Programme Manager-01– ರೂ.18,384/–, 20) District ASHA co-ordinator/Comm. Mobilizer-01- ರೂ.11,500/–, 21) Block community Mobilizer Asha Mentor-01- ರೂ.11,500/–

ಅರ್ಜಿಗಳನ್ನು ವಿತರಿಸುವ ದಿ:17.07.2021 ರಿಂದ 26.07.2021 ಮುಂಜಾನೆ 10.00 ಮಧ್ಯಾಹ್ನ 03.00 ಘಂಟೆಯವರೆಗೆ (ರಜಾ ದಿನ ಹೊರತು ಪಡಿಸಿ ಮೇಲಿನ ವಿಳಾಸದ ಕಚೇರಿಯಲ್ಲಿ) 2) ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ದಿ: 27.07.2021 ರಿಂದ ದಿ: 29.07.2021 ಮದ್ಯಾಹ್ನ 03.00 ಘಂಟೆಯವರೆಗೆ(ಕೊನೆ ದಿನ ರಜೆ ಆದಲ್ಲಿ ಮರುದಿನ), 3) ಅರ್ಜಿಯ ಶುಲ್ಕ: ಇತರೆ ಹುದ್ದೆಗೆ ಸಾಮಾನ್ಯ/ಓ.ಬಿ.ಸಿ ರೂ.200/– ಪ.ಜಾ/ಪ.ಪಂ. ರೂ.50/– ವೈದ್ಯ ಹುದ್ದೆಗೆ ಸಾಮಾನ್ಯ/ಓ.ಬಿ.ಸಿ ರೂ.500/– ಪ.ಜಾ/ಪ.ಪಂ. ರೂ.100/–

ಷರುತ್ತಗಳು

1) ಅಂಚೆ ಮೂಲಕ ಅಥವಾ ಖುದ್ದಾಗಿ ಅವಧಿ ಮೀರಿದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ, 2) ಸ್ಥಳಿಯ ಜಿಲ್ಲೆಯ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆ ನೀಡಿದ ನಂತರ ಸ್ಥಳಿಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಮಾತ್ರ ಬೇರೆ ಜಿಲ್ಲೆಯ ಅಭ್ಯರ್ಥಿಗಳ ಅರ್ಜಿಯನ್ನು ಪರಿಗಣಿಸಲಾಗುವುದು, 3) ರಿಕ್ತ ಸ್ಥಾನಗಳು ಅವಶ್ಯಕತೆಗನುಗುಣವಾಗಿ ಹೆಚ್ಚು ಅಥವಾ ಕಡಿಮೆ ಮಾಡುವ ಅಧಿಕಾರವನ್ನು ಆಯ್ಕೆ ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ, 4) ಮಿಸಲಾತಿ ಕೋರುವವರು ಸಂಬಂದಪಟ್ಟ ಎಲ್ಲ ದಾಖಲಾತಿಗಳು (ಕ.ಮಾ.ಅ, ಗ್ರಾಮೀಣ, ಯೋ.ನಿ, ಅಂ.ವಿ, ಮಾ.ಸೈ, ಜಾತಿ ಪ್ರಮಾಣ ಪತ್ರ ಚಾಲ್ತಿಯಲ್ಲಿರುವ ಇತ್ಯಾದಿ) ಲಗತ್ತಿಸುವದು, 5) ಮೇಲಿನ ಎಲ್ಲ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಅರ್ಜಿ ನಮೋನೆಯಲ್ಲಿ ನಮೂದಿಸಲಾಗಿದ್ದು ಅದರನ್ವಯ ದಾಖಲೆಗಳನ್ನು ಅರ್ಜಿಗೆ ಲಗತ್ತಿಸಕ್ಕದ್ದು, 6) ಸಾಮಾನ್ಯ, 2ಎ, 2ಬಿ, 3ಎ, 3ಬಿ. ಪ್ರವರ್ಗಕ್ಕೆ ಲಗತ್ತಿಸಬೇಕಾದ ದಾಖಲೆಯ ವಿವರಗಳನ್ನು ಅರ್ಜಿ ಪಾರ್ಮದಲ್ಲಿ ವಿವರವಾಗಿ ನಮೂದಿಸಿದ್ದು ತಪ್ಪದೆ ಓದಿಕೊಳ್ಳತಕ್ಕದ್ದು ಹಾಗೂ ಅಗತ್ಯ ದಾಖಲೆಗಳನ್ನು ಲಗತ್ತಿಸುವುದು.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು ಬೆಳಗಾವಿ

DIPR/BGM/RO-NO-402/MCA/2021-22

ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ

ಕೊಡಗು ಜಿಲ್ಲೆ, ಮಡಿಕೇರಿ, ದೂರವಾಣಿ ಸಂಖ್ಯೆ: 08272–229983
ಟೆಂಡರ್‌ಸಂ:ಯೋಸಅ:ಗಿಉಯೋ:ಎ5:ಸಿಆರ್:01:2021–22, ದಿನಾಂಕ; 14.07.2021

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಷಯ: 2021–22ನೇ ಸಾಲಿಗೆ ಕೊಡಗು ಜಿಲ್ಲೆಯ ಪರಿಶಿಷ್ಟ ವರ್ಗದ ಜೇನುಕುರುಬ, ಎರವ, ಸೋಲಿಗ, ಕುಡಿಯ ಹಾಗೂ ಕಾಡುಕುರುಬ ಜನಾಂಗದವರಿಗೆ ಪೌಷ್ಠಿಕಾಂಶದ ಆಹಾರಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಆಹಾರ ಪದಾರ್ಥಗಳ ಪೂರೈಕೆಗಾಗಿ ಅಲ್ಪಾವಧಿ ಮರು ಟೆಂಡರ್ ಕರೆಯುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂ:ಸಕಇ:207:ಪವಯೋ:2018 ದಿನಾಂಕ: 22.07.2019. 2) ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿರವರ ಟಿಪ್ಪಣಿ ಅನುಮೋದನೆ ದಿನಾಂಕ: 13.07.2021

* * * * *

ಕೊಡಗು ಜಿಲ್ಲೆಯ ಪರಿಶಿಷ್ಟ ವರ್ಗದ ಜೇನುಕುರುಬ, ಎರವ, ಸೋಲಿಗ, ಕುಡಿಯ ಹಾಗೂ ಕಾಡುಕುರುಬ ಜನಾಂಗದವರಿಗೆ ಪೌಷ್ಠಿಕ ಆಹಾರ ಯೋಜನೆಯನ್ನು ಅನುಷ್ಠಾನಗೊಳಿಸಲು ವಿತರಿಸಲು ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ ಪ್ರತಿ ಕುಟುಂಬಕ್ಕೆ ಶುದ್ಧೀಕರಿಸಿದ 8 ಕೆ.ಜಿ ಅಕ್ಕಿ, 3 ಕೆ.ಜಿ ತೊಗರಿಬೇಳೆ, 1 ಕೆ.ಜಿ ಕಡಲೆಕಾಳು, 1 ಕೆ.ಜಿ ಕಡಲೆಬೀಜ (ಶೇಂಗಾಬೀಜ), 1 ಕೆ.ಜಿ. ಅಲಸಂದೆ ಕಾಳು, 1 ಕೆ.ಜಿ. ಹುರುಳಿಕಾಳು, 1 ಕೆ.ಜಿ. ಹೆಸರುಕಾಳು, 1 ಕೆ.ಜಿ. ಸಕ್ಕರೆ, 1 ಕೆ.ಜಿ. ಬೆಲ್ಲ, 30 ಮೊಟ್ಟೆ, 2 ಲೀ. ಅಡುಗೆ ಎಣ್ಣೆ ಹಾಗೂ ಅರ್ಧ ಕೆ.ಜಿ. ನಂದಿನಿ ತುಪ್ಪವನ್ನು 2021–22ನೇ ಸಾಲಿಗೆ ಸರಬರಾಜು ಮಾಡಲು ಅರ್ಹ ವ್ಯಕ್ತಿ/ಸಂಸ್ಥೆಗಳಿಂದ 'ಇ–ಪ್ರೊಕ್ಯೂರ್‌ಮೆಂಟ್ (eproc.karnataka.gov.in) ಮೂಲಕ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದ್ದು, ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ದಿ: 29.07.2021 ಕಡೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ (eproc.karnataka.gov.in) ಹಾಗೂ ಕಛೇರಿಯನ್ನು ಸಂಪರ್ಕಿಸಲು ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಜಿಲ್ಲಾ ಪಂಚಾಯತ್ ಭವನ, ಕೊಡಗು ಜಿಲ್ಲೆ, ಮಡಿಕೇರಿರವರು ಕೋರಿರುತ್ತಾರೆ.

ಸಹಿ/– ಯೋಜನಾ ಸಮನ್ವಯಾಧಿಕಾರಿ,
ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಕೊಡಗು ಜಿಲ್ಲೆ, ಮಡಿಕೇರಿ

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ
ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(20ಇ)2021–22 / (50ಇ/2020–21) :21–22 :ಎಇ–1 ದಿನಾಂಕ: 14.07.2021

ಟೆಂಡರ್ ಪ್ರಕಟಣೆ / 3ನೇ ಕರೆ
(ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಲೆಕ್ಕಶೀರ್ಷಿಕೆ:- '**8443** ಠೇವಣಿ ಕೊಡುಗೆ'ಯಡಿ ಮಂಗಳೂರು ತಾಲೂಕಿನ ಕುಡುಪು ಅನಂತಪದ್ಮನಾಭ ದೇವಸ್ಥಾನದ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ, ಶೌಚಾಲಯ, ಹೈಮಾಸ್ಟ್ ಲೈಟ್ ಹಾಗೂ ಇಂಟರ್‌ಲಾಕ್ ನಿರ್ಮಾಣ (ಟೆಂಡರಿಗಿಟ್ಟ ಮೊತ್ತ ರೂ. 44.62 ಲಕ್ಷ, ಇ.ಎಂ.ಡಿ. ರೂ. 89,250/–) ರ ಕಾಮಗಾರಿಗೆ **ಟೆಂಡರ್ ಆಹ್ವಾನಿಸಲಾಗಿದೆ.** ಮತ್ತು

ಈ ಕಛೇರಿಯ ಪ್ರಕಟಣೆ ಸಂಖ್ಯೆ: ಲೋ.ಇ:ಮಂ.ವಿ:ಟಿ.ಎನ್.ಡಿ(50ಇ)2020–21:ಎಇ–1: ದಿನಾಂಕ: 14.12.2020 ರ ಪ್ರಕಟಣೆಗೆ ಸಂಬಂಧಿಸಿದಂತೆ **ಲೆಕ್ಕಶೀರ್ಷಿಕೆ 5054–04–337–0–01–154 ಜಿಲ್ಲಾ ಮತ್ತು ಇತರ ರಸ್ತೆಗಳು – ಸುಧಾರಣೆ**'ಯಡಿ ಅಳಪೆ ದಕ್ಷಿಣ 50ನೇ ವಾರ್ಡಿನ ಪಡೀಲ್ ರೈಲ್ವೇ ಬ್ರಿಡ್ಜ್‌ನಿಂದ ಜಲ್ಲಿಗುಡ್ಡೆವರೆಗೆ ರಸ್ತೆ ಅಭಿವೃದ್ಧಿ 131853 (ಸಾಮಾನ್ಯ ವರ್ಗ, ಟೆಂಡರಿಗಿಟ್ಟ ಮೊತ್ತ: '41.83 ಲಕ್ಷ, ಇ.ಎಂ.ಡಿ. ರೂ. 83,700/–) ರ ಕಾಮಗಾರಿಗೆ **3ನೇ ಕರೆಯಾಗಿ ಟೆಂಡರ್ ಆಹ್ವಾನಿಸಲಾಗಿದೆ.**

ಈ ಮೇಲಿನ ಕಾಮಗಾರಿಗಳಿಗೆ ಟೆಂಡರನ್ನು ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್ ಮುಖಾಂತರ **ದಿನಾಂಕ: 03.08.2021 ರ** ಅಪರಾಹ್ನ 4.00 ಗಂಟೆ (16:00 ಗಂಟೆ) ಒಳಗೆ ಸಲ್ಲಿಸತಕ್ಕದು. **ಈ ಪ್ರಕಟಣೆಗೆ ಸಂಬಂಧಿಸಿದಂತೆ ಮುಂದಿನ ವಿಸ್ತರಣೆ /ಕರೆ / ತಿದ್ದುಪಡಿ/ ಟೆಂಡರು ಮುಂದೂಡಿಕೆ ಪ್ರಕಟಣೆಯನ್ನು ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ನೀಡಲಾಗುವುದು.**

ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಟೆಂಡರು ಡಾಕ್ಯುಮೆಂಟ್‌ಗಳನ್ನು Download ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಮತ್ತು ಅಂತರ್‌ಜಾಲದ ಮೂಲಕ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

DIPR / MNG / 261/ MPL / 21-22

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ

ಕೇಂದ್ರ ಕಛೇರಿ, ಡಾ: ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 29

ಕಹಾಮ/ಅಭಿ/ಡೇರಿ– ಖರೀದಿ/2021–22 ದಿನಾಂಕ: 12.07.2021

ಇ–ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ (ಆರ್.ಎಫ್.ಕ್ಯೂ.) ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳಿ ನಿಯಮಿತ, ಬೆಂಗಳೂರು, ವತಿಯಿಂದ ಈ ಕೆಳಕಂಡ ಪ್ರದೇಶದಲ್ಲಿ ಡೇರಿ ಘಟಕವನ್ನು ಖರೀದಿಸುವ ಸಲುವಾಗಿ, ಆಸಕ್ತಿಯುಳ್ಳ ಅರ್ಹ ಡೇರಿ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ (Technical & Financial) ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ www.eproc.karnataka.gov.in ಮೂಲಕ ಟೆಂಡರ್‌ನ್ನು ಸಲ್ಲಿಸಬಹುದಾಗಿದೆ. (Help desk E-mail: hphelpdesk.blr@intarvo.com helpline no.080-22371090, 22340060, 22340948)

"ಗೋವಾ ರಾಜ್ಯದ ಪಣಜಿ / ಪೋಂಡ ನಗರದ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿತವಾಗಿರುವ 1 ಲಕ್ಷ ಲೀ. – 1.5 ಲಕ್ಷ. ಲೀ. ಸಾಮರ್ಥ್ಯಕ್ಕೆ ವಿಸ್ತರಿಸಬಹುದಾದ ಹಾಲಿನ ಸಂಸ್ಕರಣೆ, ಪ್ಯಾಕಿಂಗ್ ಹಾಗೂ ಇನ್ನಿತರೆ ಅಗತ್ಯ ಸೌಲಭ್ಯಗಳನ್ನು ಹೊಂದಿರುವ ಡೇರಿ ಘಟಕ".

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ 16.07.2021 ರಿಂದ 18.08.2021 ರ ಸಾಯಂಕಾಲ 04 ಘಂಟೆಯವರೆಗೆ
2. ಇ.ಎಂ.ಡಿ ಮೊತ್ತ – ರೂ.10 ಲಕ್ಷ
3. ಪ್ರೀ– ಬಿಡ್ ಸಭೆಯ ದಿನಾಂಕ:28.07.2021
4. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:18.08.2021 ರ ಸಾಯಂಕಾಲ 04 ಘಂಟೆಯವರೆಗೆ
5. ಟೆಂಡರ್‌ಗಳನ್ನು (ಕವರ್–1) ತೆರೆಯುವ ದಿನಾಂಕ:20.08.2021 ರಂದು ಬೆಳಿಗ್ಗೆ 11:30 ಘಂಟೆಗೆ
6. ಟೆಂಡರ್ ದಾಖಲೆಗಳು ಗಣನೀಯವಾಗಿ ಹೆಚ್ಚಿನ ಗಾತ್ರದ್ದಾಗಿದ್ದು, ಆಸಕ್ತಿಯುಳ್ಳ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವುದರ ಜೊತೆಗೆ ಮುಚ್ಚಿದ ಲಕೋಟೆಯಲ್ಲಿಯೂ ಟೆಂಡರ್ ದಾಖಲೆಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕಹಾಮ ರವರ ಹೆಸರಿಗೆ / ಸಂಸ್ಥೆಯ ವಿಳಾಸಕ್ಕೆ ದಿನಾಂಕ:20.08.2021 ರೊಳಗಾಗಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080 – 26096888 / 26096869 ರಲ್ಲಿ ಕಛೇರಿ ದಿನಗಳಲ್ಲಿ ಸಂಪರ್ಕಿಸಬಹುದಾಗಿದೆ.

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಅಭಿಯಂತರ–2)

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ

ಕೇಂದ್ರ ಕಛೇರಿ, ಡಾ: ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 29

ಸಂಖ್ಯೆ: ಕಹಾಮ/ಅಭಿ/ಹಾವೇರಿ–ಡೇರಿ.ಮೆ./2021–22 ದಿನಾಂಕ 13.07.2021

ಇ–ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ (ಆರ್.ಎಫ್.ಕ್ಯೂ.) ಪ್ರಕಟಣೆ

ಧಾರವಾಡ ಹಾಲು ಒಕ್ಕೂಟಕ್ಕಾಗಿ ಹಾವೇರಿ ಜಿಲ್ಲೆಯ ಜಂಗಮಕೊಪ್ಪ ಗ್ರಾಮದಲ್ಲಿ 1 ಲಕ್ಷ ಲೀ. ಸಾಮರ್ಥ್ಯದ ಹಾಲು ಸಂಸ್ಕರಣಾ ಡೇರಿ ಹಾಗೂ ಯು.ಹೆಚ್.ಟಿ. ಪ್ಯಾಕಿಂಗ್ ಘಟಕ ಯೋಜನೆಯನ್ನು ಪಿ.ಪಿ.ಪಿ. ಮಾದರಿ ವಿನ್ಯಾಸ, ನಿರ್ಮಾಣ, ಆರ್ಥಿಕ, ಕಾರ್ಯಾಚರಣೆ ಮತ್ತು ವರ್ಗಾಯಿಸುವುದು (DBFOT) ಅಡಿಯಲ್ಲಿ ಅನುಷ್ಟಾನಗೊಳಿಸಲು ಕರೆದಿರುವ ಆರ್.ಎಫ್.ಕ್ಯೂ. ಟೆಂಡರ್.

ಧಾರವಾಡ ಹಾಲು ಒಕ್ಕೂಟದ ಕೋರಿಕೆಯನ್ವಯ, ಕರ್ನಾಟಕ ಹಾಲು ಮಹಾ ಮಂಡಳಿಯು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ಪಿ.ಪಿ.ಪಿ. ಮಾದರಿಯಲ್ಲಿ ಒಕ್ಕೂಟಕ್ಕಾಗಿ ಹಾವೇರಿ ಜಿಲ್ಲೆಯ ಜಂಗಮಕೊಪ್ಪ ಗ್ರಾಮದಲ್ಲಿ 1 ಲಕ್ಷ ಲೀ. ಸಾಮರ್ಥ್ಯದ ಹಾಲು ಸಂಸ್ಕರಣಾ ಡೇರಿ ಹಾಗೂ ಯು.ಹೆಚ್.ಟಿ. ಪ್ಯಾಕಿಂಗ್ ಘಟಕ ಯೋಜನೆಯನ್ನು ವಿನ್ಯಾಸ, ನಿರ್ಮಾಣ, ಆರ್ಥಿಕ, ಕಾರ್ಯಾಚರಣೆ ಮತ್ತು ವರ್ಗಾಯಿಸುವುದು (DBFOT) ಅಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಕಹಾಮವು ಈ ಯೋಜನೆಯ ಅನುಷ್ಠಾನಕ್ಕಾಗಿ ಅರ್ಹ ಸಂಸ್ಥೆಗಳನ್ನು ನೊಂದಾಯಿಸಿಕೊಳ್ಳಲು (Short list) ಪ್ರೋಪೊಸಲ್ ಅನ್ನು ಅಹ್ವಾನಿಸಲಾಗಿದೆ. ಆಸ್ತಕರು ವೆಬ್‌ಸೈಟ್ www.eproc.karnataka.gov.in ರ ಮೂಲಕ ಟೆಂಡರನ್ನು (ಆರ್.ಎಫ್.ಕ್ಯೂ.) ಸಲ್ಲಿಸಬಹುದಾಗಿದೆ. (Help desk E-mail: hphelpdesk.blr @intarvo.com & helpline no: 080-22371090, 22340060, 22340948)

1. ಟೆಂಡರ್ (ಆರ್.ಎಫ್.ಕ್ಯೂ.) ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ 16.07.2021 ರಿಂದ 18.08.2021 ರ ಸಾಯಂಕಾಲ 04.00 ಘಂಟೆಯವರೆಗೆ.
2. ಪ್ರೀ–ಅಪ್ಲಿಕೇಷನ್ ಕಾನ್ಫರೆನ್ಸ್ ದಿನಾಂಕ 28.07.2021 ರ ಮಧ್ಯಾಹ್ನ 3.30 ಘಂಟೆಗೆ.
3. ಟೆಂಡರುಗಳನ್ನು (ಆರ್.ಎಫ್.ಕ್ಯೂ.) ಸಲ್ಲಿಸಲು ಕೊನೆಯ ದಿನಾಂಕ 18.08.2021 ರ ಸಾಯಂಕಾಲ 04.00 ಘಂಟೆವರೆಗೆ.
4. ಟೆಂಡರುಗಳನ್ನು (ಆರ್.ಎಫ್.ಕ್ಯೂ.) ತೆರೆಯುವ ದಿನಾಂಕ 20.08.2021 ರಂದು ಬೆಳಿಗ್ಗೆ 11.30 ಘಂಟೆಗೆ.

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಅಭಿಯಂತರ–1)

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ
ಕಾರ್ಯನಿರ್ವಾಹಕ ಇಂಜಿನಿಯರ್‌ರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಕೊಪ್ಪಳ.

ಸಂ: ಕಾನಿಇಂ/ಪಂರಾಇಂ/ವಿಕೊ/5054ಹೆಚ್ಚುವರಿ/ಟೆಂಡರ್/2021–22/591 ದಿ: 12.07.2021

ಟೆಂಡರ್ ಪ್ರಕಟಣೆ (ತೃತೀಯ ಕರೆ)

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1,2,3,4ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ "ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2019–20ನೇ ಸಾಲಿನ 5054 ಹೆಚ್ಚುವರಿ ಮೊತ್ತ ಯೋಜನೆ2019–20ನೇ ಸಾಲಿನ ಅನುದಾನದ ಅಡಿಯಲ್ಲಿನ ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ರಸ್ತೆ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಭಾಗವಹಿಸಬಹುದು. **ಸಾಮಾನ್ಯ ಸೂಚನೆಗಳು:** (1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. (2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. (3) ನಿಗಧಿತ ಇ.ಎಂ.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಈ ಕೆಳಗೆ ಸಹಿ ಮಾಡಿದ ಕಚೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 08539–220845 ರಿಂದ ಮಾಹಿತಿ ಪಡೆಯುವುದು ಮತ್ತು ಅಂತರಜಾಲದ ಮೂಲಕ ವೆಬ್‌ಸೈಟ್ http://eproc.karnataka.gov.in ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ: **15.07.2021ರ ನಂತರ** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ: **ಕಾಮಗಾರಿಗಳ ಮುಂದೆ ವಿವರ ನೀಡಿದಂತೆ**. ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **15.07.2021 ಸಮಯ 4.40** ನಿಮಿಷ. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **30.07.2021 ಸಮಯ 4.40 ಗಂಟೆ**. ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್) (ಕೆಡ್ಬ್ಯೂ–1, 2ರ ಕಾಮಗಾರಿಗಳಿಗೆ ಆರ್ಥಿಕ ಬಿಡ್ ಸಹ ತೆರೆಯಲಾಗುವುದು): **31.07.2021 ರಂದು ಕಚೇರಿ ಸಮಯದಲ್ಲಿ**. ಆರ್ಥಿಕ ಬಿಡ್ ತೆರೆಯುವ ದಿನಾಂಕ: ಕೆಡಬ್ಲ್ಯೂ–3, 4ರ ಕಾಮಗಾರಿಗಳ ಆರ್ಥಿಕ ಬಿಡ್‌ನ್ನು ಸಮಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು. **ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಂ.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.**

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ.ವಿಭಾಗ,ಕೊಪ್ಪಳ

ಡಿಐಪಿಆರ್/ಕೊಪ್ಪಳ/165/ಎಂಸಿಎ/2021–22

ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ

ದೂರವಾಣಿ ಸಂಖ್ಯೆ:08352–278539, ಸಹಾಯವಾಣಿ:08352–222474
ಫ್ಯಾಕ್ಸ್:08352–278532, Website:www.bijapurcity.gov.in
E-mail ID:itstaff_ulb_bijapur@yahoo.co.in

ನಂ:ಮನಪಾವಿ/ಲೋ.ಇ/ಟೆ.ಪ್ರ/2021–22 ದಿನಾಂಕ:13.07.2021

ಇ–ಪ್ರೊಕ್ಯೂರ್‌ಮೆಂಟ್ 2ನೇ ಕರೆ ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಯಾವತ್ತೂ ಗುತ್ತಿಗೆದಾರರಿಗೆ ಈ ಮೂಲಕ ತಿಳಿಸುವದೇನೆಂದರೆ, ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನಾ (MGNVY) ಅನುದಾನದಲ್ಲಿನ ಈ ಕೆಳಗಿನ ನಿರ್ವಹಣೆ **ಕಾಮಗಾರಿಯನ್ನು** ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರ ನಿಬಂಧನೆಗೆ ಒಳಪಟ್ಟು ಟೆಂಡರನ್ನು ಕರೆಯಲಾಗಿದೆ. ಕಾರಣ ಇಚ್ಛೆಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸಲ್ಲಿಸಬಹುದಾಗಿದೆ. ಕಾಮಗಾರಿಗಳ ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ (www.eproc.karnataka. gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮಹಾನಗರ ಪಾಲಿಕೆ ಕಾರ್ಯಾಲಯದ ಲೋಕೋಪಯೋಗಿ ವಿಭಾಗದಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕಾಮಗಾರಿಗಳ ಹೆಸರು: [MGNVY Fund] Package No. 06 1) Development of Internal Roads from Lingad Road to Chalukya Nagar Graveyard and Shahpur Agsi, Kalal Galli, Mullagasi internal Roads in Ward No.06 and 2) Development of Roads in Mahaeshwar Mangal Bhavan to Lingad gudi road mijugati house to mallu Loni House, Lingad gudi road (SC) to M.I. Rathod House, From Joshi House to Patil House, Dr. Ullagaddi house to Inamdar Saleem Baradol House to Siddhivinayak Temple Chalukya Nagar West side in Ward No.06. **ಅಂದಾಜು ಮೊತ್ತ ರೂ. 500.00 ಲಕ್ಷಗಳು. ಕೆಲಸದ ಅವಧಿ: 09 ತಿಂಗಳು.**

1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:21.08.2021** ರಂದು ಸಾಯಂಕಾಲ 4.00 ಘಂಟೆಗೆ. 2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 23.08.2021 ರಂದು ಸಾಯಂಕಾಲ 4.30 ಘಂಟೆಗೆ.** 3) ಟೆಂಡರ್ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30.08.2021** ರಂದು ಸಾಯಂಕಾಲ 5.00 ಘಂಟೆಗೆ.

ಈ ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ವಿಜಯಪುರ ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/164/ಎಂಸಿಎ/2021–22

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ

Phone No : 08372-238782 Fax No. 08372-237268
E.Mail : eepwdgad@gmail.com

ನಂ:ಕಾನಿಇಂಗ:ಲೋಇ:ಪಿಬಿ–:ವಿವಿಧ:2021–22/918 ದಿನಾಂಕ : 15–07–2021

ತಿದ್ದುಪಡಿ ಟೆಂಡರ್ / ಅವಧಿ ವಿಸ್ತರಣೆ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ನಂ: 720 ದಿ:– 03–07–2021 ರಲ್ಲಿ ಗದಗ ವಿಭಾಗದ ಪ್ರಕಟಿಸಲಾದ ಟೆಂಡರ್ ಪ್ರಕಟಣೆಯು ತಿದ್ದುಪಡಿ ಟೆಂಡರ್ / ಅವಧಿ ವಿಸ್ತರಣೆ ಪ್ರಕಟಣೆ ಹೊಡಿಸಲಾಗಿದೆ. ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **1046.42** ಲಕ್ಷ ಬದಲಾಗಿ ರೂ. **1051.14** ಲಕ್ಷಗಳು, ಗದಗ ವಿಭಾಗದಡಿ ಬರುವ ಗದಗ, ರೋಣ, ಮುಂಡರಗಿ, ಶಿರಹಟ್ಟಿ ಹಾಗೂ ನರಗುಂದ ತಾಲೂಕಿನ ಒಟ್ಟು 82 ಕಾಮಗಾರಿಗಳ ಬದಲಾಗಿ 67 ಕಾಮಗಾರಿಗಳು, (ಗರಿಷ್ಟ ಮೊತ್ತ ರೂ. **41.16** ರ ಬದಲಾಗಿ ರೂ. **78.91** ಲಕ್ಷ) ಇ–ಪ್ರೊಕ್ಯೂರಮೆಂಟ್ (E- Procurement)ಸ್ಟ್ಯಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲೂ– 1, 2 ಬದಲಾಗಿ ಕೆ ಡಬ್ಲ್ಯೂ 1, 2 ಹಾಗೂ 3 ಹಾಗೂ ಈ 67 ಕಾಮಗಾರಿಗಳ ಪೈಕಿ 46 ಕಾಮಗಾರಿಗಳು ಸಾಮಾನ್ಯ ವರ್ಗದವರಿಗೆ, ಎಂದು ಓದಿಕೊಳ್ಳುವದು ಉಳಿದ ಇನ್ನಿತರ ಯಾವುದೇ ಬದಲಾವಣೆಗಳು ಇರುವದಿಲ್ಲ ಹೆಚ್ಚಿನ ಮಾಹಿತಿಗಾಗಿ ಹಾಗೂ ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.eproc.karnataka.gov.in/ ದಲ್ಲಿ ನೋಡಿಕೊಳ್ಳಬಹುದು. ಹಾಗೂ ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಟೆಂಡರ ವಿವರ ಪಶ್ನೋತ್ತರ ದಿನಾಂಕ : **24–07–2021**, ಟೆಂಡರ್ ಸಲ್ಲಿಸುವ ದಿನಾಂಕ : **27–07–2021** ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ : **29–07–2021** ಆರ್ಥಿಕ ಬಿಡ್ ತೆರೆಯುವ ದಿನಾಂಕ : **30–07–2021**

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ

ವಾಸಾಸಂಇ/ಗದಗ/ಎಂ.ಸಿ.ಎ/165/2021–22

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)

ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
ಫೋ. ನಂ.:08194–230102, ಫ್ಯಾಕ್ಸ್:08194–230102, ಇ–ಮೇಲ್ :eeubp.d5cta@gmail.com

ಕ್ರ.ಸಂ:ಕಾಇಂ/ವಿಜನಿನಿ/ಭಮೇಯೋ/ವಿ–5/ಚಿ/ಪ್ರಕೃತಿ ವಿಕೋಪ/ಟೆಂಡರ್/2021–22/ 399 ದಿನಾಂಕ: 09.07.2021.

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ 2ನೇ ತಿದ್ದುಪಡಿ ಪ್ರಕಟಣೆ

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ **ಕ್ರ.ಸಂ:ಕಾಇಂ/ವಿಜನಿನಿ/ಭಮೇಯೋ/ ವಿ–5/ಚಿ/ಪ್ರಕೃತಿ ವಿಕೋಪ/ಟೆಂಡರ್/2021–22/ 01 ರಿಂದ 03 ದಿನಾಂಕ: 01.04.2021 ರಲ್ಲಿ 03 ಕಾಮಗಾರಿಗಳ** ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. (ಇಂಡೆಂಟ್‌ನಂ. VJNL/ 2021-22/FP/WORK_INDENT1659, VJNL/2021-22/FP/ WORK_INDENT 1661, VJNL/2021-22/FP/WORK_INDENT 1665) ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರ್ ಪ್ರಕಟಣೆಯಲ್ಲಿನ ಟೆಂಡರ್‌ಪ್ರಕ್ರಿಯೆಯ ದಿನಾಂಕಗಳನ್ನು ಮಾರ್ಪಾಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಯ ಮಾರ್ಪಾಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತಿವೆ. 1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:09.08.2021 ಸಂಜೆ 5.00 ಗಂಟೆಯವರೆಗೆ 2) ಪ್ರಿ–ಬಿಡ್ ಸಭೆಯ ದಿನಾಂಕ:10.08.2021ರಂದು ಬೆಳಗ್ಗೆ 11.00 ಗಂಟೆಗೆ ಮುಖ್ಯಇಂಜಿನಿಯರ್, ವಿಜನಿನಿ, ಭಮೇಯೋ, ವಲಯ ಚಿತ್ರದುರ್ಗ ಕಛೇರಿಯಲ್ಲಿ ನಿಗಧಿಪಡಿಸಲಾಗಿದೆ 3) **ಟೆಂಡರ್‌ನ್ನು ದಿನಾಂಕ: 12.08.2021 ರಂದು ಸಂಜೆ 4.00 ಗಂಟೆ ವರೆಗೆ ಸಲ್ಲಿಸಬಹುದಾಗಿದೆ** 4) ತಾಂತ್ರಿಕ ಬಿಡ್ಡುಗಳನ್ನು ದಿನಾಂಕ: 13.08.2021ರಂದು ಸಂಜೆ 04.30 ಗಂಟೆ ನಂತರ ತೆರೆಯಲಾಗುವುದು. 5) ಆರ್ಥಿಕ ಬಿಡ್ಡನ್ನು "ತಾಂತ್ರಿಕ ಬಿಡ್ ಅನುಮೊದನೆಯಾದ ನಂತರ" ತೆರೆಯಲಾಗುವುದು. ಉಳಿದ ಉಪ ವಿಧಿಗಳಲ್ಲಿ / ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಟೆಂಡರ್‌ನಲ್ಲಿನ ಮುಂದಿನ ಇತರೆ ಬದಲಾವಣೆ, ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಭಮೇಯೋ, ವಿಭಾಗ ನಂ.5, ಚಿತ್ರದುರ್ಗ.

DIPR/CTA/MCA/ 261/2021-22

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಬಳ್ಳಾರಿ ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ

ಸಂ.ಕಾನಿಅ/ಗ್ರಾಕುನೀ&ನೈ/ವಿಬ/ಜೆ.ಇ/JJM/DMF/KKRDB/2021-22/653 ದಿನಾಂಕ: 15–07–2021

ಇ–ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ – 2000ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ವ್ಯಾಪ್ತಿಯಲ್ಲಿ ಜಲ ಜೀವನ ಮಿಷನ್ ಯೋಜನೆ ಕಾರ್ಯಕ್ರಮದಡಿ ಅನುಮೋದನೆಯಾಗಿರುವ ಬಳ್ಳಾರಿ ತಾಲೂಕಿನ ಜಲ್ ಜೀವನ್ ಮಿಷನ್ ಯೋಜನೆಯಡಿ Augumentation ಕಾಮಗಾರಿ ಹಾಗೂ ಡಿ.ಎಂ.ಎಫ್ ಮತ್ತು ಕೆ.ಕೆ.ಆರ್.ಡಿ.ಬಿ ಯೋಜನೆಯಡಿ ಬಳ್ಳಾರಿ ಮತ್ತು ಸಿರುಗುಪ್ಪ ತಾಲೂಕಿನ ಪೈಪ್ ಲೈನ್ ಮತ್ತು ಓ.ಹೆಚ್.ಟಿ ನಿರ್ಮಾಣದ ಕಾಮಗಾರಿಗಳನ್ನು ಇ–ಸಂಗ್ರಹಣ ವೇದಿಕೆ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಇಲಾಖಾ ನಿಯಮಾವಳಿ ಮೇರೆಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ **ದಿನಾಂಕ: 15–07–2021** ರಿಂದ Download ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 30–07–2021 ರಂದು ಸಂಜೆ 4:00** ರವರೆಗೆ ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 31–07–2021** ರ **ಸಮಯ ಸಂಜೆ 5:00 ಗಂಟೆ** ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆಯನ್ನು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದವರಿಗೆ ತಿಳಿಸಲಾಗುವುದು. ಹಾಗೂ **ದಿನಾಂಕ: 26–07–2021** ರಂದು ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಜಿಲ್ಲಾ ಪಂಚಾಯತಿ ಆವರಣ ಬಳ್ಳಾರಿ ಕಚೇರಿಯಲ್ಲಿ ಕರೆಯಲಾಗಿದೆ. ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯ ಇ–ಮೇಲ್ eerdwsd.bly@gmail.com ಹಾಗೂ ವೆಬ್‌ಸೈಟ್ www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.

‘ದಮನಕಾರಿ ನೀತಿ: ಜನಸಂಖ್ಯಾ ನಿಯಂತ್ರಣ ಅಸಾಧ್ಯ’

ಪ್ರಜಾವಾಣಿ ಸಂವಾದ

ಬೆಂಗಳೂರು: ‘ಜನಸಂಖ್ಯಾ ನಿಯಂತ್ರಣ ನೀತಿ ಜನರಿಗೆ ಸಂದೇಶವಂತೆ ಇರಬೇಕೇ ಹೊರತು ಸಂಖ್ಯಾಸಂದಿಯೋಗಗಬಾರದು. ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ಕುಟುಂಬಗಳಿಗೆ ಸರ್ಕಾರಿ ಸೌಲಭ್ಯ ಕಡಿತಗೊಳಿಸುತ್ತೇವೆ ಎನ್ನುವುದು ಸಂವಿಧಾನ ವಿರೋಧಿ ಕ್ರಮ. ದಮನಕಾರಿ, ಹಿಂಸಾತ್ಮಕ ಹಾಗೂ ಭಯ ಹುಟ್ಟಿಸುವ ಇಂತಹ ನೀತಿಗಳಿಂದ ಜನಸಂಖ್ಯೆಗೆ ಕಡಿವಾಣ ಹಾಕುವುದು ಅಸಾಧ್ಯ. ಜನಪರವಾದಂತಹ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳಿಂದ ಮಾತ್ರ ಗುರಿ ಮುಟ್ಟುವುದು ಸಾಧ್ಯ...’

‘ಎರಡಕ್ಕಿಂತ ಹೆಚ್ಚು ಮಕ್ಕಳಿದ್ದರೆ ಸರ್ಕಾರಿ ಸೌಲಭ್ಯಕ್ಕೆ ಕತ್ತರಿ ಸರಿಯೇ’ ವಿಷಯ ಕುರಿತು ‘ಪ್ರಜಾವಾಣಿ’ ಗುರುವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು. ಚರ್ಚೆಯ ಸಂಕ್ಷಿಪ್ತ ಸಾರ ಇಲ್ಲಿದೆ.

‘ಇದು ಬಿಜೆಪಿ ನೀತಿ ಅಲ್ಲ’



‘ಇದು ನಮ್ಮ ಸರ್ಕಾರ ಅಥವಾ ಪಕ್ಷದ ನೀತಿಯಲ್ಲ. ಸ್ವಾತಂತ್ರ್ಯ ನಂತರ ಈ ದೇಶ ಆಳಿದ ಎಲ್ಲಾ ಸರ್ಕಾರಗಳು ಜನಸಂಖ್ಯೆ ನಿಯಂತ್ರಿಸಲು ಹಲವು ನೀತಿಗಳನ್ನು ರೂಪಿಸಿವೆ. ಅಸ್ಸಾಂ ಮತ್ತು ಉತ್ತರ ಪ್ರದೇಶದಲ್ಲಿ ಅನುಷ್ಠಾನಗೊಳಿಸಿರುವ ಕಾನೂನು ಇದರ ಮುಂದುವರಿದ ಭಾಗವಷ್ಟೇ’.

‘ಬಿಹಾರ, ಉತ್ತರ ಪ್ರದೇಶ ಹಾಗೂ ಅಸ್ಸಾಂನಲ್ಲಿ ಸಂತಾನ ಫಲವಂತಿಕೆ ಪ್ರಮಾಣ ಇತರ ರಾಜ್ಯಗಳಿಗಿಂತಲೂ ಅಧಿಕವಾಗಿದೆ. ರಾಜ್ಯದ ಸಂಪನ್ಮೂಲವನ್ನು ಸರ್ವರಿಗೂ ಸಮನಾಗಿ ಹಂಚುವ, ಎಲ್ಲರಿಗೂ ಸೌಲಭ್ಯ ಕಲ್ಪಿಸುವ, ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ಉದ್ದೇಶದಿಂದ ಉತ್ತರ ಪ್ರದೇಶ ಹಾಗೂ ಅಸ್ಸಾಂ ರಾಜ್ಯಗಳು ಜನಸಂಖ್ಯಾ ನಿಯಂತ್ರಣ ನೀತಿ ಜಾರಿಗೆ ತಂದಿವೆ. ಇದನ್ನು ಯಾರಾದರೂ ದ್ವೇಷ ಕೋನದಲ್ಲಿ ನೋಡಬಾರದು. ಇದು ರಾಜ್ಯಗಳ ಹಿತದೃಷ್ಟಿಯಿಂದ ಮಾಡಿರುವ ಗುಣಾತ್ಮಕ ಕಾನೂನು. ಹೀಗಾಗಿ ಎಲ್ಲರೂ ಸ್ವಾಗತಿಸಬೇಕು’.

‘ಈ ಕಾನೂನು 2022ರಿಂದ ಜಾರಿಗೆ ಬರಲಿದೆ. ಈಗಾಗಲೇ ಐದು, ಹತ್ತು, ಹನ್ನೆರಡು ಮಕ್ಕಳು ಹೊಂದಿರುವ ಕುಟುಂಬಗಳಿಗೆ ಇದು ಅನ್ವಯವಾಗುವುದಿಲ್ಲ. ಬಲವಂತವಾಗಿ ಯಾರ ಮೇಲೂ ಇದನ್ನು ಹೇರಲಾಗುತ್ತಿಲ್ಲ. ಒಂದೇ ಮಗು ಪಡೆದ ಕುಟುಂಬಕ್ಕೆ ₹1 ಲಕ್ಷ ನೀಡುವುದಾಗಿ ಸರ್ಕಾರವೇ ಪ್ರಕಟಿಸಿದೆ. ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ಜನರನ್ನು ಗಮನದಲ್ಲಿಟ್ಟುಕೊಂಡು ಇಂತಹ ಹಲವು ಪ್ರೋತ್ಸಾಹಕ ಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಈ ನೀತಿ ಬಗ್ಗೆ ಜನರಲ್ಲಿ ಗೊಂದಲ ಹಾಗೂ ಭಯ ಮೂಡಿಸುವ ಕೆಲಸಕ್ಕೆ ಯಾರೂ ಮುಂದಾಗಬಾರದು’.

‘ನಿರ್ದಿಷ್ಟವಾಗಿ ಒಂದು ವರ್ಗವನ್ನು ಗುರಿಯಾಗಿಸಿಕೊಂಡು ಈ ನೀತಿ ರೂಪಿಸಿಲ್ಲ. ಇದು ಅಭಿವೃದ್ಧಿಪರವಾದ ನಿಲುವು’.

-ಗೋ.ಮಧುಸೂದನ್, ಬಿಜೆಪಿ ಪ್ರಮುಖ

‘ಕಾನೂನುಗಳಿಂದ ಯಾವ ಪ್ರಯೋಜನವೂ ಇಲ್ಲ’

‘ಜನಸಂಖ್ಯೆ ಹೆಚ್ಚಳವು ಅಭಿವೃದ್ಧಿಗೆ ಮಾರಕ ಎಂದು ಹಲವರು ವಾದಿಸುತ್ತಾರೆ. ಈ ಸಂಪನ್ಮೂಲವನ್ನು ಅಭಿವೃದ್ಧಿಗೆ ಪೂರಕವಾಗಿಯೂ ಬಳಸಿಕೊಳ್ಳಬಹುದು ಎಂಬ ವಾದವೂ ಇದೆ. ದಬ್ಬಾಳಿಕೆಯಿಂದ ಜನಸಂಖ್ಯಾ ನಿಯಂತ್ರಣ ನೀತಿ ಜಾರಿಗೊಳಿಸುವುದು ಸರಿಯಲ್ಲ’.

‘1979ರಲ್ಲಿ ಚೀನಾದಲ್ಲಿ ಜನಸಂಖ್ಯಾ ನಿಯಂತ್ರಣ ನೀತಿ ಅನುಷ್ಠಾನಗೊಂಡಿತ್ತು. ದಂಪತಿ ಒಂದೇ ಮಗು ಹೊಂದಬೇಕು ಎಂಬ ಕಾನೂನು ತಂದಿದ್ದರು. ಅಂತಹ ಕುಟುಂಬಕ್ಕೆ ವಿಶೇಷ ಸವಲತ್ತುಗಳನ್ನೂ ಒದಗಿಸುವ ಕೆಲಸ ಅಲ್ಲಿನ ಸರ್ಕಾರ ಮಾಡಿತ್ತು. ಹೀಗಾಗಿ ಮೂರೇ ವರ್ಷದಲ್ಲಿ ಶೇ 35ರಷ್ಟು ಜನಸಂಖ್ಯೆ ನಿಯಂತ್ರಿಸಲು ಸಾಧ್ಯವಾಗಿತ್ತು. ಅದೇ ರೀತಿ ನಮ್ಮಲ್ಲೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಿಂದಿನ ಒಂದು ದಶಕದಲ್ಲಿ ಜನರನ್ನು ಜಾಗೃತಗೊಳಿಸಲು ಪ್ರಯತ್ನಿಸಿದ್ದರ ತತ್ಪರಿಣಾಮ ಯಶಸ್ಸು ಕಾಣುತ್ತಿದ್ದೇವೆ’.

‘1971ರಿಂದ 1981ರ ಅವಧಿಯಲ್ಲಿ ಭಾರತದಲ್ಲಿ ಶೇ 2.5 ರಷ್ಟು ಜನಸಂಖ್ಯೆ ಬೆಳವಣಿಗೆ ದರ ಇತ್ತು ಎಂದು 2018-19ರ ಭಾರತೀಯ ಆರ್ಥಿಕ ಸಮೀಕ್ಷಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. 2011 ರಿಂದ 2016ರಲ್ಲಿ ಈ ಪ್ರಮಾಣ ಶೇ 1.6ರಷ್ಟು ಎಂಬುದನ್ನು ಅದರಲ್ಲಿ ತಿಳಿಸಲಾಗಿತ್ತು’.

‘ವರದಕ್ಷಿಣೆ ಪಡೆಯುವುದು, ಬಾಲ್ಯ ವಿವಾಹ ಮಾಡುವುದು ಅಪರಾಧ ಎಂದು ಕಾನೂನು ಮಾಡಲಾಗಿದೆ. ಹಾಗಂತ ಇವು ನಿಂತು ಹೋಗಿವೆಯೇ? ಕಾನೂನಿನಿಂದ ಯಾವ ಪ್ರಯೋಜನವೂ ಇಲ್ಲ. ಜಾಗೃತಿ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಜನಸಂಖ್ಯಾ ನಿಯಂತ್ರಣ ನೀತಿ ಒಂದು ರಾಜ್ಯಕ್ಕೆ ಸೀಮಿತವಾಗಬಾರದು. ಇದು ರಾಷ್ಟ್ರೀಯ ನೀತಿಯಾಗಬೇಕು’.

-ವಿ.ಎಸ್.ಉಗ್ರಪ್ಪ, ಕಾಂಗ್ರೆಸ್ ಮುಖಂಡ

‘ಮಹಿಳೆಯರನ್ನು ಸುಶಿಕ್ಷಿತರನ್ನಾಗಿ ಮಾಡಿ’



‘ಉತ್ತೇಜನ ನಿರುತ್ತೇಜನದ ಮೂಲಕ ರೂಪಿಸುವ ಜನಸಂಖ್ಯಾ ನೀತಿಯು ಮಾನವ ಹಕ್ಕುಗಳಿಗೆ ಮಾರಕವಾದುದು’ ಎಂದು ಮಾನವ ಹಕ್ಕುಗಳ ಆಯೋಗ ಬಹಳ ವರ್ಷಗಳ ಹಿಂದೆಯೇ ಹೇಳಿದೆ. ಕೆಲವು ರಾಜ್ಯಗಳಲ್ಲಿ ಸಂತಾನ ಫಲವಂತಿಕೆ ದರ ಹೆಚ್ಚಿರಬಹುದು. ಆದರೆ ದೇಶದಲ್ಲಿ ಜನಸಂಖ್ಯಾ ಬೆಳವಣಿಗೆ ಏರುಗತಿ ಪಡೆದಿಲ್ಲ ಎಂಬುದನ್ನು ತಜ್ಞರೇ ಸ್ಪಷ್ಟಪಡಿಸಿದ್ದಾರೆ. ಕರ್ನಾಟಕ, ಕೇರಳ, ಆಂಧ್ರಪ್ರದೇಶದ ರಾಜ್ಯಗಳು ಜನಸಂಖ್ಯೆ ನಿಯಂತ್ರಿಸಲು ಹೇಗೆ, ಇದಕ್ಕಾಗಿ ಆ ರಾಜ್ಯಗಳು ಅನುಸರಿಸಿದ ನೀತಿ ಎಂತಹದು ಎಂಬುದನ್ನು ಅರ್ಥಮಾಡಿಕೊಂಡು ಮುಂದಡಿ ಇಡಬೇಕು. ಇತಿಹಾಸದಿಂದ ಯಾವುದೇ ಪಾಠವನ್ನೂ ಕಲಿಯುತ್ತಿಲ್ಲ ಎಂಬುದಕ್ಕೆ ಉತ್ತರ ಪ್ರದೇಶ ಸರ್ಕಾರದ ನೀತಿ ಸಾಕ್ಷಿಯಾಗಿದೆ’.

‘ಮಹಿಳೆಯರನ್ನು ಸುಶಿಕ್ಷಿತರನ್ನಾಗಿ ಮಾಡಿದಾಗ ಮಾತ್ರ ಜನಸಂಖ್ಯೆ ನಿಯಂತ್ರಣ ಸಾಧ್ಯ ಎಂಬುದಕ್ಕೆ ನಮ್ಮ ಮುಂದೆ ಹಲವು ನಿದರ್ಶನಗಳಿವೆ. ಬಡತನ, ಅನಕ್ಷರತೆ, ಮಹಿಳೆಯರ ಮೇಲಿನ ಹಿಂಸೆ, ಕೌಟುಂಬಿಕ ದೌರ್ಜನ್ಯ ಹೆಚ್ಚಿರುವೆಡೆ ಜನಸಂಖ್ಯೆ ಬೆಳವಣಿಗೆ ಅಧಿಕವಾಗಿರುತ್ತದೆ. ಉತ್ತರ ಪ್ರದೇಶ ಸರ್ಕಾರದ ನೀತಿಯು ಯಾವ ವರ್ಗಕ್ಕೆ ಅಪಾಯ ತಂದೊಡ್ಡಲಿದೆ ಎಂಬುದು ಸ್ಪಷ್ಟವಾಗಿದೆ. ಉತ್ತರ ಪ್ರದೇಶದಂತಹ ರಾಜ್ಯಗಳು ಜನಸಂಖ್ಯೆಯ ಗುಣಾತ್ಮಕ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕ ಉತ್ತಮಪಡಿಸುವತ್ತ ಗಮನಹರಿಸಬೇಕು’.

‘ಜನಸಂಖ್ಯಾ ನಿಯಂತ್ರಣ ಎಂಬ ಪದವೇ ನಕಾರಾತ್ಮಕ. ಆ ಪದವನ್ನು ಈಗ ಸಮಾಜಶಾಸ್ತ್ರ ಹಾಗೂ ಅರ್ಥಶಾಸ್ತ್ರದಲ್ಲಿ ಬಳಸುತ್ತಿಲ್ಲ. ಸಾಮಾಜಿಕ ಅಭಿವೃದ್ಧಿಯ ಮೂಲಕ ಜನಸಂಖ್ಯಾ ಅಭಿವೃದ್ಧಿಯನ್ನು ನಿಯಂತ್ರಿಸಬೇಕು’.

-ಟಿ.ಆರ್.ಚಂದ್ರಶೇಖರ್, ಲೇಖಕ ಹಾಗೂ ಅರ್ಥಶಾಸ್ತ್ರಜ್ಞ

ಪೂರ್ಣ ಸಂವಾದ ವೀಕ್ಷಿಸಲು: https://www.facebook.com/prajavani.net/videos

ಬಿ.ಕೆ. ಸುಮಿತ್ರಾ ಸೇರಿ ಮೂವರಿಗೆ ಕಸಾಪ ದತ್ತಿ ಪ್ರಶಸ್ತಿ

ಬಿ.ಕೆ. ಸುಮಿತ್ರಾ

ಟಿ.ಎನ್. ಪದ್ಮಾ

ಗಂಗಾಂಬಿಕಾ ಪಾಟೀಲ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಕೆ. ಮೋಹನ್‌ದೇವ್ ಆಳ್ವ ಹಾಗೂ ಡಾ.ಎಂ.ಕೆ. ಶೈಲಜಾ ಆಳ್ವ ದತ್ತಿ ಪ್ರಶಸ್ತಿ’ಗೆ ಗಾಯಕರಾದ ಬಿ.ಕೆ. ಸುಮಿತ್ರಾ ಹಾಗೂ ಪ್ರೊ.ಟಿ.ಎನ್. ಪದ್ಮಾ ಆಯ್ಕೆಯಾಗಿದ್ದಾರೆ.

‘ಟಿ. ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿ’ಗೆ ಲೇಖಕಿ ಅಕ್ಕ ಗಂಗಾಂಬಿಕಾ ಪಾಟೀಲ ಭಾಜನರಾಗಿದ್ದಾರೆ. ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ನೇತೃತ್ವದಲ್ಲಿ ಗುರುವಾರ ಈ ಆಯ್ಕೆಗಳು ನಡೆದಿವೆ.

‘ಕೆ. ಮೋಹನ್‌ದೇವ್ ಆಳ್ವ ಹಾಗೂ ಡಾ.ಎಂ.ಕೆ. ಶೈಲಜಾ ಆಳ್ವ ದತ್ತಿ ಪ್ರಶಸ್ತಿ’ಯು ತಲಾ ₹ 30 ಸಾವಿರ ನಗದು ಹಾಗೂ ‘ಟಿ. ಗಿರಿಜಾ ಸಾಹಿತ್ಯ ದತ್ತಿ ಪ್ರಶಸ್ತಿ’ಯು ₹ 15 ಸಾವಿರ ನಗದು ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಮೊಬೈಲ್ ಆ್ಯಪ್ ಮೂಲಕ ಬೆಳೆ ಸಮೀಕ್ಷೆ ● ಫೆಬ್ರುವರಿಯಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ

ಎಲ್ಲ ಜಿಲ್ಲೆಗಳಲ್ಲೂ ಸರ್ಕಾರಿ ಗೋಶಾಲೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಗೋಶಾಲೆಗಳನ್ನು ಆರಂಭಿಸಲು ಸರ್ಕಾರ ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಮತ್ತು ಸಂಸದೀಯ ಸಚಿವ ಬಸವರಾಜ ಬೊಮ್ಮಾಯಿ ಈ ವಿಷಯ ತಿಳಿಸಿದರು.

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ಜಾರಿ ಮಾಡಿದ ಕಾರಣ, ಜಾನುವಾರುಗಳ ಸಂರಕ್ಷಣೆಗೆ ಗೋಶಾಲೆಗಳನ್ನು ನಿರ್ಮಿಸಲು ಸರ್ಕಾರ ತೀರ್ಮಾನಿಸಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ಗೋಶಾಲೆ ನಿರ್ಮಿಸುವ ಉದ್ದೇಶಕ್ಕೆ ಮೊದಲ ಹಂತದಲ್ಲಿ ₹15 ಕೋಟಿ ನೀಡಲಾಗುವುದು. ಕೆಲಸದ ಪ್ರಗತಿಯನ್ನು ನೋಡಿಕೊಂಡು ಹೆಚ್ಚುವರಿ ಹಣ ನೀಡಲಾಗುತ್ತದೆ ಎಂದು ಅವರು ಹೇಳಿದರು.

ಈ ಬಾರಿ ಬೆಳೆ ಸಮೀಕ್ಷೆಯನ್ನು ಮೊಬೈಲ್ ಆ್ಯಪ್ ಮೂಲಕವೇ ನಡೆಸಲು ತೀರ್ಮಾನಿಸಲಾಗಿದೆ. ರೈತರು ಮೊಬೈಲ್ ಆ್ಯಪ್ ಮೂಲಕ ತಮ್ಮ ಕೃಷಿ ಜಮೀನಿನ ಮಾಹಿತಿ ನೀಡಬೇಕು. ಇದಕ್ಕೆ ಅವರು ಖಾಸಗಿ ವ್ಯಕ್ತಿಗಳ ನೆರವು ಪಡೆಯಬಹುದು. ಇದಕ್ಕಾಗಿ ₹48 ಕೋಟಿ ಅನುಮೋದನೆ ನೀಡಲಾಗಿದೆ ಎಂದರು.



ಬಸವರಾಜ ಬೊಮ್ಮಾಯಿ

ಹೂಡಿಕೆದಾರರ ಸಮಾವೇಶ: 2022 ರ ಫೆಬ್ರುವರಿ 9,10 ಮತ್ತು 12 ರಂದು ಬೆಂಗಳೂರು ಅರಮನೆ ಮೈದಾನದಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ‘ಇನ್ವೆಸ್ಟ್ ಕರ್ನಾಟಕ 2022’ ನಡೆಸಲು ತೀರ್ಮಾನಿಸಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಬಡ್ತಿಗಾಗಿ ಸಾಮಾನ್ಯ ಹಿರಿತನ ಪಟ್ಟಿ: ಕಂದಾಯ ಇಲಾಖೆಯಲ್ಲಿ ಬಡ್ತಿಗಾಗಿ ಸಾಮಾನ್ಯ ಹಿರಿತನ ಪಟ್ಟಿ ಸಿದ್ಧಪಡಿಸಲು ಒಪ್ಪಿಗೆ ನೀಡಲಾಗಿದೆ ಎಂದು ಬೊಮ್ಮಾಯಿ ತಿಳಿಸಿದರು.

ಈ ಮೊದಲು ನೇರವಾಗಿ ಶೇ 30, ಎಸ್‌ಡಿಎಯಿಂದ ಶೇ 30 ಮತ್ತು ಗ್ರಾಮಲೆಕ್ಕಿಗರಿಂದ ಶೇ 40 ಬಡ್ತಿ ನೀಡಲಾಗುತ್ತಿತ್ತು. ಹಳೆ ಪದ್ಧತಿ ಕೈಬಿಟ್ಟು ಸಾಮಾನ್ಯ ಹಿರಿತನ ಪಟ್ಟಿ ಮಾಡಬೇಕು ಎಂದು ಕಂದಾಯ ಇಲಾಖೆಯ ಸಿಬ್ಬಂದಿಯ ವಿವಿಧ ಸಂಘಟನೆಗಳು ಬೇಡಿಕೆ ಮಂಡಿಸಿದ್ದವು. ಅದಕ್ಕೆ ಸಭೆಯಲ್ಲಿ ಒಪ್ಪಿಗೆ ನೀಡಿದೇವೆ ಎಂದರು.

ಇದರ ಪರಿಣಾಮ 3,059 ಎಸ್‌ಡಿಎ, 3,847 ಗ್ರಾಮ ಲೆಕ್ಕಿಗ ಮತ್ತು 2,400 ಎಫ್‌ಡಿಎ ಹುದ್ದೆಗಳ ಸಾಮಾನ್ಯ ಹಿರಿತನ ಪಟ್ಟಿ ತಯಾರಿಸಲು ಒಪ್ಪಿಗೆ ನೀಡಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಜೆಒಸಿ ಕೋರ್ಸ್‌ಗಳು ಪಿಯುಸಿಗೆ ತತ್ಸಮಾನ

ಉದ್ಯೋಗ ಆಧಾರಿತ ಕೋರ್ಸ್‌ಗಳನ್ನು (ಜೆಒಸಿ) ಇನ್ನು ಮುಂದೆ ಪಿಯುಸಿಗೆ ತತ್ಸಮಾನ ಎಂದು ಪರಿಗಣಿಸಲು ತೀರ್ಮಾನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಸಚಿವ ಬೊಮ್ಮಾಯಿ ತಿಳಿಸಿದರು.

ಪ್ರಮುಖ ತೀರ್ಮಾನಗಳು:

- 139 ಕೈದಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆಗೆ ಶಿಫಾರಸು
- ರಾಯಚೂರು ಜಿಲ್ಲೆ ದೇವದುರ್ಗದಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಕಟ್ಟಡ ನಿರ್ಮಿಸಲು ₹58 ಕೋಟಿ ಆಡಳಿತಾತ್ಮಕ ಅನುಮೋದನೆ
- ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆಗಾಗಿ (ಜಿಟಿಟಿಸಿ)₹31.66 ಕೋಟಿ ವೆಚ್ಚದಲ್ಲಿ ಬೆಳಗಾವಿ ಮತ್ತು ಮಂಗಳೂರಿನಲ್ಲಿ ಕಟ್ಟಡವನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ
- ಮೈಸೂರಿನ ಲಲಿತ ಮಹಲ್ ಪ್ಯಾಲೆಸ್ ಹೋಟೆಲ್‌ನ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಯಾವುದಾದರೂ ಹೋಟೇಲ್ ನಡೆಸುವವರಿಗೆ ವಹಿಸಲು ಜಂಗಲ್ ಲಾಡ್ಜಸ್ ಮತ್ತು ರೆಸಾರ್ಟ್ ಲಿಮಿಟೆಡ್‌ಗೆ ಅನುಮತಿ ನೀಡಲಾಗಿದೆ.
- ಶಿರಗುಪ್ಪಾ ಪಟ್ಟಣಕ್ಕೆ 2,500 ಎಂಎಲ್ ಸಾಮರ್ಥ್ಯದ ಜಲಾಶಯ ನಿರ್ಮಿಸಲು ಯೋಜನಾ ಪರಿಷ್ಕೃತ ವೆಚ್ಚ ₹45.46 ಕೋಟಿಗೆ ಒಪ್ಪಿಗೆ
- 2019 ರ ಪ್ರವಾಹದ ಸಂದರ್ಭದಲ್ಲಿ ಮನೆ ಕಳೆದುಕೊಂಡವರಿಗೆ ಮನೆ ಕಟ್ಟಿಸಲು ಆರ್ಥಿಕ ನೆರವು ನೀಡುವ ಸಂಬಂಧ ಆದೇಶ ಹೊರಡಿಸಲಾಗಿತ್ತು. ಆದೇಶವನ್ನು ದೃಢೀಕರಿಸಲಾಗಿದೆ.
- ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಮೆಡ್ಲೇರಿ, ರಾಹುತನಕಟ್ಟೆ ಕೆರೆ ಸೇರಿ 18 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ವಿಸ್ತೃತ ಯೋಜನಾ ವರದಿ(-ಡಿಪಿಆರ್) ತಯಾರಿಸಲು ₹206 ಕೋಟಿಗೆ ಅನುಮತಿ
- ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಮುಕ್ಕಂಪಿ ಮತ್ತು ಐದು ಕೆರೆಗಳನ್ನು ತುಂಬಿಸುವ ಯೋಜನೆಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್)ತಯಾರಿಸಲು ₹93 ಕೋಟಿ ಆಡಳಿತಾತ್ಮಕ ಒಪ್ಪಿಗೆ ನೀಡಲು ತೀರ್ಮಾನ
- ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ಸುತ್ತಮುತ್ತಲಿನ ಪ್ರದೇಶದಲ್ಲಿ 1,100 ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ₹240 ಕೋಟಿಗೆ ಆಡಳಿತಾತ್ಮಕ ಒಪ್ಪಿಗೆ
- ಗದಗ ಪಶುವೈದ್ಯ ಶಾಲೆಯ ಮೂರನೇ ಹಂತದ ಕಾಮಗಾರಿಗೆ ₹30 ಕೋಟಿ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ

‘ರಾಮಕೃಷ್ಣಾಶ್ರಮದ ಸ್ವಾಮೀಜಿಗಳ ವರ್ತನೆ ಸರಿಯಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಸ್ವಾಮಿ ವಿವೇಕಾನಂದರು ಬಂದಿದ್ದರು ಎಂಬ ಕಾರಣಕ್ಕೆ ಇಲ್ಲಿನ ಎನ್‌ಟಿಎಂ ಶಾಲೆಯ ಜಾಗವನ್ನು ಕೇಳುತ್ತಿರುವ ರಾಮಕೃಷ್ಣಾಶ್ರಮದ ಸ್ವಾಮೀಜಿಗಳ ವರ್ತನೆ ಸರಿಯಲ್ಲ’ ಎಂದು ಸಾಹಿತಿ ದೇವನೂರ ಮಹಾದೇವ ಗುರುವಾರ ಇಲ್ಲಿ ಟೀಕಿಸಿದರು.

‘ಇವರ ವರ್ತನೆ ಗಮನಿಸಿದರೆ ಯಾವುದೇ ವಿರಕ್ತರು, ಮಹಾತ್ಮರು ಹಾಗೂ ಯತಿಗಳನ್ನು ಮನೆಗೆ ಕರೆಯಬಾರದು ಎನಿಸುತ್ತದೆ. ಒಂದು ವೇಳೆ ಸ್ವಾಮೀಜಿಗಳು ಭೇಟಿ ನೀಡಿದ್ದ ನೆಲಕ್ಕೆ ಬೆಲೆ ಬಂದಾಗ, ಈ ಭೂಮಿ ಮಠಕ್ಕೆ ಬೇಕೆಂದು ಅವರ ಅನುಯಾಯಿಗಳು ಹೇಳಬಹುದು’ ಎಂದು ಆತಂಕ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಎನ್‌ಟಿಎಂ ಶಾಲೆ ಉಳಿವಿಗಾಗಿ ಗುರುವಾರ ಒಡನಾಡಿ ಸಂಸ್ಥೆಯ ಕಾರ್ಯಕರ್ತರು ನಡೆಸಿದ ಪ್ರತಿಭಟನೆಯಲ್ಲಿ ಸಾಹಿತಿ ದೇವನೂರ ಮಹಾದೇವ ಭಾಗಿಯಾದರು –ಪ್ರಜಾವಾಣಿ ಚಿತ್ರ

‘140 ವರ್ಷಗಳ ಹಿಂದೆ ಬಾಲಕಿಯರಿಗಾಗಿ ತೆರೆದ ಪ್ರಥಮ ಶಾಲೆ ಎಂಬ ಹೆಗ್ಗಳಿಕೆಗೆ ಎನ್‌ಟಿಎಂ ಶಾಲೆ ಪಾತ್ರವಾಗಿದೆ. ಹೀಗಾಗಿಯೇ, ಈ ಶಾಲೆಯ ನೆಲಕ್ಕೆ ಒಂದು ನೆನಪಿದೆ, ಆಶಯವಿದೆ, ಜೀವಚೈತನ್ಯವಿದೆ. ಇದಕ್ಕೆ ಬೆಲೆ ಕಟ್ಟಲಾಗದು. ಶಾಲೆಯ ನೆಲವನ್ನು ದೇಶದ ಸಂವೇದನಾಶೀಲರು ಕಾಪಾಡಿಕೊಳ್ಳಬೇಕು’ ಎಂದು ಕರೆ ನೀಡಿದರು.

ಎನ್‌ಟಿಎಂ ಶಾಲೆಯನ್ನು ಸ್ಥಳಾಂತರ ಮಾಡಿ ವಿವೇಕ ಸ್ಮಾರಕ ನಿರ್ಮಿಸಬೇಕೆಂದು ರಾಮಕೃಷ್ಣ ಆಶ್ರಮ ಒತ್ತಾಯಿಸುತ್ತಿದೆ. ಇದನ್ನು ವಿರೋಧಿಸಿ ಶಾಲೆ ಉಳಿವಿಗೆ ಆಗ್ರಹಿಸಿ ‘ಎನ್‌ಟಿಎಂ ಶಾಲೆ ಉಳಿಸಿ ಹೋರಾಟ ಸಮಿತಿ’ ನೇತೃತ್ವದಲ್ಲಿ ಶಾಲೆಯ ಮುಂಭಾಗ 18 ದಿನಗಳಿಂದ ಪ್ರತಿಭಟನೆ ನಡೆಯುತ್ತಿದೆ. ಒಡನಾಡಿ ಸೇವಾ ಸಂಸ್ಥೆಯ ಕಾರ್ಯಕರ್ತರು ಗುರುವಾರ ಬೀದಿ ನಾಟಕ ಪ್ರದರ್ಶಿಸುವ ಮೂಲಕ ನಡೆಸಿದ ಪ್ರತಿಭಟನೆಯಲ್ಲಿ ದೇವನೂರ ಮಹಾದೇವ ಭಾಗಿಯಾಗಿದ್ದರು.

ಬಹಿರಂಗ ಚರ್ಚೆ: ಕಟೀಲ್‌ಗೆ ಶಿವಕುಮಾರ್ ಆಹ್ವಾನ

ಚಿತ್ರದುರ್ಗ: ಬಸವ ಜಯಂತಿ ದಿನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಿದ್ದರಾಮಯ್ಯ ಅವರು ನುಡಿದಂತೆ ನಡೆದಿದ್ದಾರೆ. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಿಸಿದ ಪೈಕಿ ಶೇ 95ರಷ್ಟು ಭರವಸೆಗಳನ್ನು ಈಡೇರಿಸಿದ್ದಾರೆ. ಈ ಕುರಿತು ಬಿಜೆಪಿ ಬಹಿರಂಗ ಚರ್ಚೆಗೆ ಬರಲಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸವಾಲು ಹಾಕಿದರು.

ಸಿದ್ದರಾಮಯ್ಯ ಅವರ ಕುರಿತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮಾಡಿದ ಆರೋಪಕ್ಕೆ ಸಂಬಂಧಿಸಿ ಚಿತ್ರದುರ್ಗದಲ್ಲಿ ಡಿ.ಕೆ.ಶಿವಕುಮಾರ್ ಗುರುವಾರ ಪ್ರತಿಕ್ರಿಯಿಸಿದರು. ಸಿದ್ದರಾಮಯ್ಯ ಆಡಳಿತದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

‘ಸಿದ್ದರಾಮಯ್ಯ ಅವರು ಕೊಟ್ಟ ಮಾತಿಗೆ ತಪ್ಪಿಲ್ಲ. ಅವರ ಅಧಿಕಾರಾವಧಿಯಲ್ಲಿ ಉತ್ತಮ ಆಡಳಿತವನ್ನೇ ನೀಡಿದ್ದಾರೆ. ಬಿಜೆಪಿಯಲ್ಲಿ ಅಧಿಕಾರಕ್ಕೆ ನಡೆಯುತ್ತಿರುವುದು ಮ್ಯೂಸಿಕಲ್ ಚೇರ್ ಅಲ್ಲವೇ’ ಎಂದು ಪ್ರಶ್ನಿಸಿದರು.

‘ಇಂಧನ ಬೆಲೆ ಏರಿಕೆ ವಿರುದ್ಧ ಮೊದಲ ಹಂತದ ಪ್ರತಿಭಟನೆ ನಡೆದಿದೆ. ಮುಂದಿನ ಹೋರಾಟದ ರೂಪುರೇಷೆಯ ಬಗ್ಗೆ ರಾಷ್ಟ್ರಮಟ್ಟದಲ್ಲಿಯೂ ಚರ್ಚೆ ನಡೆಯುತ್ತಿದೆ. ತಾರ್ಕಿಕ ಅಂತ್ಯ ಕಾಣುವ ವರೆಗೆ ಹೋರಾಟ ಮುಂದುವರಿಯಲಿದೆ’ ಎಂದು ಹೇಳಿದರು.

ವಿದ್ಯಾರ್ಥಿ ವೇತನ: ಏಕೀಕೃತ ತಂತ್ರಾಂಶ ಅಭಿವೃದ್ಧಿ

ಬೆಂಗಳೂರು: ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ನೇರವಾಗಿ ವಿದ್ಯಾರ್ಥಿಗಳ ಆಧಾರ್ ಜೋಡಣೆಯ ಬ್ಯಾಂಕ್ ಖಾತೆಗೆ ಜಮೆ ಮಾಡಲು ‘ಏಕೀಕೃತ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ’ವನ್ನು ಇ-ಆಡಳಿತ ಇಲಾಖೆ ಅಭಿವೃದ್ಧಿಪಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಈ ಬಗ್ಗೆ ಮಾಹಿತಿ ನೀಡಿದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಇ-ಆಡಳಿತ) ರಾಜೀವ್ ಚಾವ್ಲಾ, ‘ವಿದ್ಯಾರ್ಥಿ ವೇತನಕ್ಕೆ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶವನ್ನು ರೂಪಿಸಿದ ಮೊದಲ ರಾಜ್ಯ ಕರ್ನಾಟಕ. ಈ ತಂತ್ರಾಂಶ ಸಂಪೂರ್ಣ ಆನ್‌ಲೈನ್ ವ್ಯವಸ್ಥೆಯಾಗಿದ್ದು, ನಕಲಿ ಹಾಗೂ ಬೇರೆ ಫಲಾನುಭವಿಗಳಿಗೆ ಹಣ ಪಾವತಿಗೆ ಅವಕಾಶ ಇಲ್ಲ’ ಎಂದರು.

‘ವಿದ್ಯಾರ್ಥಿಯ ಆಧಾರ್ ಜೋಡಣೆಯಿರುವ ಬ್ಯಾಂಕ್ ಖಾತೆಗೆ ವಿದ್ಯಾರ್ಥಿ ವೇತನವನ್ನು ಡಿಬಿಟಿ ಮಾಡಲಾಗುವುದು. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ https://ssp.karnataka.gov.in ಗೆ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ https://ssp.postmatric.karnataka.gov.in ಗೆ ಲಾಗಿನ್ ಆಗಿ ಆಧಾರ್ ಸಂಖ್ಯೆ ಮತ್ತು ಹೆಸರು, ಎಸ್‌ಎಟಿಎಸ್ ಗುರುತು, ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಆರ್‌.ಡಿ. ಸಂಖ್ಯೆ ಸಲ್ಲಿಸಬೇಕು’ ಎಂದರು.

ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್ ಮೂಲಕ ಕೃತ್ಯ ● ನಿತ್ಯವೂ 20ಕ್ಕೂ ಹೆಚ್ಚು ಪ್ರಕರಣ ದಾಖಲು

‘ನಕಲಿ ಖಾತೆ’ ಹಾವಳಿ: ಇಲ್ಲ ಕಡಿವಾಣ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಫೇಸ್‌ಬುಕ್, ಇನ್‌ಸ್ಟಾಗ್ರಾಂ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳ ಹಾವಳಿ ಹೆಚ್ಚಾಗಿದ್ದು, ಈ ವಂಚನೆ ಜಾಲಕ್ಕೆ ಸಿಲುಕಿ ಸಾವಿರಾರು ಮಂದಿ ಹಣ ಕಳೆದುಕೊಳ್ಳುತ್ತಿದ್ದಾರೆ.

ಜಾಲತಾಣಗಳಲ್ಲಿ ಖಾತೆ ಹೊಂದಿರುವವರ ಫೋಟೊ ಹಾಗೂ ವೈಯಕ್ತಿಕ ವಿವರ ಕದಿಯುತ್ತಿರುವ ಸೈಬರ್ ವಂಚಕರು, ಅವರ ಹೆಸರಿನಲ್ಲೇ ನಕಲಿ ಖಾತೆ ತೆರೆದು ಸ್ನೇಹಿತರಿಗೆ ರಿಕ್ವೆಸ್ಟ್ ಕಳುಹಿಸುತ್ತಿದ್ದಾರೆ. ‘ತುರ್ತು ಸಹಾಯ ಬೇಕಾಗಿದೆ’ ಎಂಬ ಸಂದೇಶವನ್ನು ಕಳುಹಿಸಿ ಹಣ ಪಡೆದು ವಂಚಿಸುತ್ತಿದ್ದಾರೆ.

ಇಂಥ ಕೃತ್ಯಗಳ ಬಗ್ಗೆ ಸೈಬರ್ ಕ್ರೈಂ ಠಾಣೆಗಳಲ್ಲಿ ನಿತ್ಯವೂ 20ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಪೊಲೀಸರಿಂದ ಪ್ರಕರಣ ಭೇದಿಸುವುದು ವಿಳಂಬವಾಗುತ್ತಿದ್ದು, ಇದು ವಂಚಕರಿಗೆ ಮತ್ತಷ್ಟು ಅನುಕೂಲ ಮಾಡಿಕೊಟ್ಟಿದೆ.

‘ನಕಲಿ ಖಾತೆ ಬಗ್ಗೆ ದೂರು ಕೊಟ್ಟಿದ್ದೆ. ಎಫ್‌ಐಆರ್ ದಾಖಲಿಸಿದ್ದು ಬಿಟ್ಟರೆ ತನಿಖೆಯಲ್ಲಿ ಪ್ರಗತಿ ಕಂಡುಬಂದಿಲ್ಲ. ನಕಲಿ ಖಾತೆಗಳ ಸಂಖ್ಯೆ ನಿತ್ಯವೂ ಹೆಚ್ಚುತ್ತಿದ್ದು, ಇದಕ್ಕೆ ಕಡಿವಾಣ ಯಾವಾಗ’ ಎಂದು ದೂರುದಾರರೊಬ್ಬರು ಪ್ರಶ್ನಿಸಿದರು.

‘ಉತ್ತರ ಭಾರತ ರಾಜ್ಯಗಳ ಕೆಲವರು ಕೃತ್ಯ ಎಸಗುತ್ತಿರುವುದಾಗಿ ಪೊಲೀಸರು ಹೇಳುತ್ತಿದ್ದಾರೆ. ಆರೋಪಿಗಳನ್ನು ಹಿಡಿದುಕೊಂಡು ಬರಲು ಹೆಚ್ಚಿನ ಸಿಬ್ಬಂದಿ ಹಾಗೂ ಹಣಕಾಸಿನ ವ್ಯವಸ್ಥೆ ಬೇಕು. ಈ ಎರಡಕ್ಕೂ ಕೊರತೆ ಇರುವುದಾಗಿ ಪೊಲೀಸರು ಅಳಲು ತೋಡಿಕೊಳ್ಳುತ್ತಾರೆ. ವಂಚನೆ ಮೊತ್ತಕ್ಕಿಂತಲೂ ದುಪ್ಪಟ್ಟು ಮೊತ್ತ ತನಿಖೆಗೆ ಖರ್ಚಾಗುತ್ತಿದೆ. ಹೀಗಾಗಿ, ಇಂಥ ಪ್ರಕರಣಗಳನ್ನು ಪೊಲೀಸರು ಗಂಭೀರವಾಗಿ ಪರಿಗಣಿಸುತ್ತಿಲ್ಲ’ ಎಂದೂ ಅವರು ಆರೋಪಿಸಿದರು.

‘ಸಾಮಾನ್ಯರಿಂದ ಹಿಡಿದು ಪ್ರಭಾವಿಗಳವರೆಗೂ ಬಹುತೇಕರು ಸಾಮಾಜಿಕ ಜಾಲತಾಣಗಳಲ್ಲಿ ಖಾತೆ ತೆರೆದಿದ್ದಾರೆ. ದೊಡ್ಡ ಸ್ನೇಹಿತರ ಬಳಗ ಹೊಂದಿದ್ದಾರೆ. ಇಂಥವರನ್ನೇ ಗುರಿಯಾಗಿಸಿಕೊಂಡು ಸೈಬರ್ ವಂಚಕರು ನಕಲಿ ಖಾತೆ ಸೃಷ್ಟಿಸುತ್ತಿದ್ದಾರೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸೈಬರ್ ಕ್ರೈಂ ಠಾಣೆ ಇನ್‌ಸ್ಪೆಕ್ಟರ್ ಹೇಳಿದರು.

‘ಇಂಟರ್‌ನೆಟ್ ಪ್ರೋಟೊಕಾಲ್ (ಐ.ಪಿ) ಆಧರಿಸಿ ತನಿಖೆ ಆರಂಭಿಸಲಾಗುತ್ತದೆ. ಬಹುತೇಕ ಐ.ಪಿ.ಗಳೇ ನಕಲಿ ಆಗಿರುತ್ತವೆ. ಇತ್ತೀಚೆಗೆ ಕೆಲಸದ ಒತ್ತಡ ಹೆಚ್ಚಿದ್ದು, ಆರೋಪಿಗಳ ಪತ್ತೆ ಕಷ್ಟವಾಗಿದೆ’ ಎಂದೂ ಹೇಳಿದರು.

ಸಚಿವರು, ಶಾಸಕರು, ಐಎಎಸ್, ಐಪಿಎಸ್, ಕೆಎಎಸ್, ಸಾಹಿತಿಗಳು, ಸಿನಿಮಾ ಕಲಾವಿದರು, ವೈದ್ಯರು, ಉದ್ಯಮಿಗಳು, ಲೇಖಕರು, ಪತ್ರಕರ್ತರು.... ಹೀಗೆ ಪ್ರತಿಯೊಂದು ಕ್ಷೇತ್ರದ ಹಲವು ವ್ಯಕ್ತಿಗಳ ಹೆಸರಿನಲ್ಲಿ ನಕಲಿ ಖಾತೆ ತೆರೆಯಲಾಗಿದೆ.

ಹಿರಿಯ ಐಪಿಎಸ್ ಅಧಿಕಾರಿಗಳ ಹೆಸರಿನಲ್ಲಿ ನಕಲಿ ಖಾತೆ ತೆರೆದಿದ್ದ ಪ್ರಕರಣದಲ್ಲಿ ಪೊಲೀಸರು ಚುರುಕಿನ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದರು. ಆದರೆ, ಸಾಮಾನ್ಯರ ವಿಚಾರದಲ್ಲಿ ತನಿಖೆ ವಿಳಂಬವಾಗುತ್ತಿದೆ. ಸೈಬರ್ ಅಪರಾಧ ತನಿಖೆಗಾಗಿ ಪ್ರತ್ಯೇಕ ಸೆನ್ ಠಾಣೆಗಳನ್ನು ತೆರೆಯಲಾಗಿದ್ದು, ದೂರು ಸ್ವೀಕರಿಸುವುದಕ್ಕಷ್ಟೇ ಬಹುತೇಕ ಠಾಣೆಗಳು ಸೀಮಿತವಾಗಿರುವ ಆರೋಪವಿದೆ.

ಪ್ರಕರಣ ಭೇದಿಸಲು ಪೊಲೀಸರಿಗೆ ತರಬೇತಿ: ಕಮಲ್ ಪಂತ್



ಕಮಲ್ ಪಂತ್

‘ಸಾಮಾಜಿಕ ಜಾಲತಾಣಗಳ ನಕಲಿ ಖಾತೆ ಪ್ರಕರಣಗಳನ್ನು ಭೇದಿಸಲು ಪೊಲೀಸರಿಗೆ ತರಬೇತಿ ನೀಡಲಾಗಿದೆ. ನಕಲಿ ಖಾತೆಗಳು ಕಂಡುಬಂದರೆ ಸಾರ್ವಜನಿಕರು ಕೂಡಲೇ ಪೊಲೀಸರಿಗೆ ದೂರು ನೀಡಬೇಕು’ ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

‘ನಕಲಿ ಖಾತೆಗಳ ಬಗ್ಗೆ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ಎಚ್ಚರಿಕೆ ವಹಿಸುವ ಮೂಲಕ ಇಂಥ ಪ್ರಕರಣಗಳಿಗೆ ಕಡಿವಾಣ ಹಾಕಬೇಕು. ಪುರಾವೆ ಸಮೇತ ದೂರು ನೀಡಿದರೆ, ಮೊದಲಿಗೆ ನಕಲಿ ಖಾತೆ ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು. ನಂತರ, ಆರೋಪಿಗಳ ಪತ್ತೆಗೆ ತನಿಖೆ ಆರಂಭಿಸಲಾಗುವುದು’ ಎಂದೂ ತಿಳಿಸಿದರು.

ನಕಲಿ ಖಾತೆ– ತಡೆ ಹೇಗೆ

- ಖಾತೆಯಲ್ಲಿರುವ ಮಾಹಿತಿ ಪರಿಶೀಲಿಸಬೇಕು. ವಾಸಸ್ಥಳ, ಜನ್ಮಸ್ಥಳ, ಶಾಲಾ ಶಿಕ್ಷಣ ವಿವರ ಹಾಗೂ ಇತರ ಮಾಹಿತಿ.
- ಈಗಾಗಲೇ ಖಾತೆ ಹೊಂದಿರುವ ಸ್ನೇಹಿತ, ಹೊಸದೊಂದು ಖಾತೆಯಿಂದ ರಿಕ್ವೆಸ್ಟ್ ಕಳುಹಿಸಿದರೆ ಆತನನ್ನೇ ನೇರವಾಗಿ ವಿಚಾರಿಸಬೇಕು.
- ‘ಹಣ ಕಳುಹಿಸಿ’ ಎಂಬ ಸಂದೇಶ ಬಂದರೆ, ಖಾತೆದಾರರಿಗೆ ಕರೆ ಮಾಡಿ ಅಥವಾ ಖುದ್ದಾಗಿ ವಿಚಾರಿಸಿ ಮುಂದುವರಿಯುವುದು ಒಳ್ಳೆಯದು.
- ನಕಲಿ ಖಾತೆಗಳು ಕಂಡುಬಂದರೆ ‘ರಿಪೋರ್ಟ್’ ಮಾಡಲು ಅವಕಾಶವಿದೆ.
- ಫೇಸ್‌ಬುಕ್ ಹಾಗೂ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ‘ಪ್ರೈವೆಸಿ’ ಆಯ್ಕೆ ಬಳಸಿ, ಸ್ನೇಹಿತರಿಗಷ್ಟೇ ತಮ್ಮ ಖಾತೆ ವಿವರ ಕಾಣುವಂತೆ ಮಾಡಬಹುದು.

ಬೆಂಗಳೂರಿನಲ್ಲಿ ಸೈಬರ್ ಕ್ರೈಂ ಪ್ರಕರಣಗಳು (ವರ್ಷವಾರು ವಿವರ)

ವರ್ಷ	ದಾಖಲಾದ ಪ್ರಕರಣ
2017	2,023
2018	5,036
2019	10,131
2020	17,190
2021 (ಜೂನ್ 30ರವರೆಗೆ)	6,458

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1.	**ಎಸ್. ಸುಂದರೇಶ,** ನಂ. 29, 100 ಅಡಿ ರಿಂಗ್ ರಸ್ತೆ, ಬನಶಂಕರಿ 3ನೇ ಹಂತ, 6ನೇ ಬ್ಲಾಕ್, ಬೆಂಗಳೂರು	1,00001
2.	**ಎ. ಪಾರ್ಥಸಾರಥಿ,** ನಂ. 3, ಜಿಕೆಡಬ್ಲ್ಯು ಲೇಔಟ್, 1ನೇ ಕ್ರಾಸ್, ವಿಜಯನಗರ, ಬೆಂಗಳೂರು	10,000
3.	**ರಂಗನಾಥ ರಾವ್ ಎ.ವಿ.,** ನಂ. 182, 10 ಎ ಕ್ರಾಸ್, ಜೆ.ಪಿ.ನಗರ ಮೊದಲ ಹಂತ, ಬೆಂಗಳೂರು	5,001
4.	**ಚಂದ್ರಶೇಖರ್ ಎಂ.ಜಾಲಿಮಂಚಿ,** 4– ಶಾಸ್ತ್ರಿ ನಗರ, ಅಥಣಿ ರಸ್ತೆ, ಗುರುದೇವ ಶಾಲೆಯ ಹಿಂಭಾಗ, ವಿಜಯಪುರ	5,001
5.	**ಆನಂದ್,** ಬಾಣಸವಾಡಿ, ಬೆಂಗಳೂರು	5,000
6.	**ಮಹೇಶ ಎಚ್.ಕೆ.,** ಬೆಂಗಳೂರು	2,500
7.	**ಶ್ಯಾಮಸುಂದರ್,** ಬೆಂಗಳೂರು	2,500
8.	**ವನಜಾಕ್ಷಿ ದಾಸಾಚಾರ್,** ನಂ. 376, 7ನೇ ಕ್ರಾಸ್, 1ನೇ ಮೇನ್, ಗಾಯತ್ರಿ ಲೇಔಟ್, ಬಸವನಪುರ ಮುಖ್ಯರಸ್ತೆ, ಕೃಷ್ಣರಾಜಪುರ, ಬೆಂಗಳೂರು	2,000
9.	**ಪವನ್‌ಕುಮಾರ್ ಬಿ.ಎಸ್.,** ನಂ. 3436, 1ನೇ ಜಿ ಕ್ರಾಸ್, 7ನೇ ಮೇನ್, ಬಿಟಿಎಸ್ ಗ್ಯಾರೇಜ್, ವಿಜಯನಗರ, ಬೆಂಗಳೂರು	2,000
10.	**ಬಿ. ಸ್ವಾಮಿಗೌಡ** (ಕೆಇಬಿ), s/o ಕೆ.ಎಸ್. ಬೋರೇಗೌಡ, ಕ್ಯಾತನಹಳ್ಳಿ, ಪಾಂಡವಪುರ ತಾ. ಮಂಡ್ಯ	2,000
11.	**ಎಚ್. ರಾಧಾಮಣಿ,** ನಂ. 508, ರಿಚಸ್ ರೆಸಿಡೆನ್ಸಿ, ಎನ್‌ಆರ್‌ಐ ಲೇಔಟ್, ಕಲ್ಕೆರೆ, ಹೊರಮಾವು ಪೋಸ್ಟ್, ಬೆಂಗಳೂರು	2,000
12.	**ಪ್ರದೀಪ್ ಎಂ. ನಾಯ್ಕ,** ವಕೀಲರು, ನಂ. 1424, ಮಾರುತಿ ದೇವಸ್ಥಾನದ ಹತ್ತಿರ, ಕಾರವಾರ	2,000
13.	**ಆರ್.ಎಂ.ಹೆಗಡೆ,** ಸ್ಟೇಟ್ ಬ್ಯಾಂಕ್ ಕಾಲೊನಿ, ಶಿರಸಿ	2,000
14.	**ಎಂ. ಎಸ್. ವಸುಂಧರಾ,** ನಂ. 2108, ‘ಕೃತ್ತಿಕಾ’ 8ನೇ ಮುಖ್ಯರಸ್ತೆ, ‘ಡಿ’ಬ್ಲಾಕ್, ಮರಿಯಪ್ಪನ ಪಾಳ್ಯ, ರಾಜಾಜಿನಗರ, ಬೆಂಗಳೂರು	2,000
15.	**ಕೃಷ್ಣಕುಮಾರ್ ಶೆಟ್ಟಿ,** ನಂ. 79, ಸೋಮಸುಂದರಪಾಳ್ಯ, ಎಚ್‌ಎಸ್‌ಆರ್ ಲೇಔಟ್, ಬೆಂಗಳೂರು	1,234
16.	**ರಮೇಶ್ ಕೆ.ಆರ್.,** ಟಿಎಫ್7, ವಲ್ಲಭ ನಿಶಾಂತ್, ವಸಂತಪುರ, ಬೆಂಗಳೂರು	1,001
17.	**ಸಿ. ಸರ್ವಮಂಗಳಾ, ಲೇಟ್ ವೀರಥಪ್ಪ ಅಂಡ್ ಸನ್ಸ್,** ಶ್ರೀಸಾಯಿ ಗಾರ್ಡನ್, ಚಾನಲ್ ರಸ್ತೆ ಹತ್ತಿರ, ಹಿರಿಯೂರು, ಚಿತ್ರದುರ್ಗ	1,001
18.	**ಜಿ. ಮಧುಸೂದನ,** ನಂ. 75, 1ನೇ ಎ ಮೇನ್, ಎನ್.ಎಸ್. ಪಾಳ್ಯ, ಬ್ಯಾಂಕ್ ಕಾಲೊನಿ, ಬಿಟಿಎಂ ಲೇಔಟ್, 2ನೇ ಹಂತ, ಬೆಂಗಳೂರು	1,001
19.	**ರೋಹಿತ್ ಎಂ.ಎಸ್.,** ಬನಶಂಕರಿ 6ನೇ ಹಂತ, ಬೆಂಗಳೂರು	1,001
20.	**ನಿಹಾರಿಕಾ ಎಂ.,** ನಂ. 33, 3ನೇ ಬ್ಲಾಕ್, ಉಲ್ಲಾಳ ಮುಖ್ಯರಸ್ತೆ, ವಿಶ್ವೇಶ್ವರಯ್ಯ ಲೇಔಟ್, ಬೆಂಗಳೂರು	1,001
21.	**ಮನೋಹರ್ ಬಿ.ಕಮ್ಮಾರ್,** ಶಿಂಧೆ ಕಾಲೊನಿ, ಪಂಥ್ ಬಾಳೆಕುಂದ್ರಿ, ಬೆಳಗಾವಿ	1,001
22.	**ಅಲ್ಲಮಪ್ರಭು ಎನ್.ಎಂ.** ನಂ. 9, ಗೋಪಾಲಪ್ಪ ಲೇಔಟ್, ಪಾಪರೆಡ್ಡಿ ಪಾಳ್ಯ, ನಾಗರಬಾವಿ 2ನೇ ಹಂತ, ಬೆಂಗಳೂರು	1,001
23.	**ಗುರುನಾಥ್ ಎಂ., ನಿಂಬಾನಾಯ್ಕರ್,** ನನಸು ನಿಲಯ, ಹುಬ್ಬಳ್ಳಿ–ಗದಗ ರಸ್ತೆ, ಹುಲ್ಕೋಟಿ, ಗದಗ	1,001
24.	**ಸಿ.ಎ. ಸತ್ಯಪ್ರಕಾಶ್,** ನಂ, 1011, 4ನೇ ಎಂ ಬ್ಲಾಕ್, ಎಸ್‌ಜೆಆರ್ ಮಹಿಳಾ ಕಾಲೇಜು ಹತ್ತಿರ, ರಾಜಾಜಿನಗರ, ಬೆಂಗಳೂರು	1,001
25.	**ಗಂಗಾಧರ,** ನಂ. 256, 2ಜಿ ಮುಖ್ಯರಸ್ತೆ, 1ನೇ ಬ್ಲಾಕ್, 2ನೇ ಹಂತ, ನಾಗರಬಾವಿ, ಬೆಂಗಳೂರು	1,001
26.	**ಕಾವ್ಯಾ,** ನಂ. 11/31, ಶ್ರೀಶಕ್ತಿ ನಗರ, ತೆಂಕಾಸಿ, ತಮಿಳುನಾಡು	1,000
27.	**ನಾಗರಾಜ್ ಎಸ್.** ಎಚ್‌ಬಿಆರ್ ಲೇಔಟ್, ಬೆಂಗಳೂರು	1,000
28.	**ಕೆ.ಸುಬ್ಬರಾವ್,** ನಂ.8, ಪುಟ್ಟಯ್ಯ ಕಾಂಪೌಂಡ್, 5ನೇ ಅಡ್ಡರಸ್ತೆ, ಅಶ್ವತ್ಥನಗರ, ಬೆಂಗಳೂರು	25,000
29.	**ಶಂಕರ್‌ಜಿ ದಾತಾರ್,** 1–1–82, ಉದಯನಗರ, ರಾಯಚೂರು	10,000
30.	**ಡಾ.ವಿ.ಕುಮುದಾ,** 785/ಎ, 7ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು	10,000
31.	**ದಾಶರಥಿ ಎಚ್.ಆರ್,** ಫ್ಲ್ಯಾಟ್ ನಂ 2, ಒಯಸಿಸ್ ಪರ್ಲ್, ಪ್ಲಾಟ್ ನಂ.2, ಪೂರ್ಣಪ್ರಜ್ಞಾ ಲೇಔಟ್, ಕತ್ರಿಗುಪ್ಪೆ, ಬಿಎಸ್‌ಕೆ 3ನೇ ಹಂತ, ಬೆಂಗಳೂರು	6,000
32.	**ಪ್ರಸನ್ನ ಸಿಂಹ ರಾವ್,** ಕೃಷ್ಣ, 1437, ಬಿಟಿಎಂ 2ನೇ ಹಂತ, 10ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಬೆಂಗಳೂರು	5,000
33.	**ಸಾವಿತ್ರಿ,** ಎಫ್–3, ಸಾಯಿ ಮಧುರಾ ರೆಸಿಡೆನ್ಸಿ, 12ನೇ ಮುಖ್ಯರಸ್ತೆ, ಜೆ.ಪಿ ನಗರ 5ನೇ ಹಂತ, ಬೆಂಗಳೂರು	5,000
34.	**ಉಮಾ ಬೆಂತೂರ,** ಎಚ್ ನಂ. 106, ಶ್ರೀ ಹರ್ಷ ಬಿಲ್ಡಿಂಗ್, ಮಹಾಲಕ್ಷ್ಮೀ ಲೇಔಟ್, 2ನೇ ಅಡ್ಡರಸ್ತೆ, ಗೋಕುಲ ರಸ್ತೆ, ಹುಬ್ಬಳ್ಳಿ	5,000
35.	**ಈರಪ್ಪ ಜಿ.ಬೆಕಿನಾಳ,** ಇಂಗಳೇಶ್ವರ, ಬಸವನ ಬಾಗೇವಾಡಿ, ವಿಜಯಪುರ ಜಿಲ್ಲೆ	5,000
36.	**ಸೀತಾರಾಮ ಆರ್.ಭಟ್,** ಎಲ್‌ಐಸಿಯ ಉಪ ವಲಯ ವ್ಯವಸ್ಥಾಪಕ (ನಿವೃತ್ತ) ಶ್ರೀರಾಂಪುರ, 2ನೇ ಹಂತ, ಮೈಸೂರು	3,333
37.	**ಎಚ್.ಎಸ್. ಜನಾರ್ಧನ ರಾವ್,** ಬೆಂಗಳೂರು	3,000
38.	**ಅನುಜ್,** 787, 2ನೇ ಮುಖ್ಯರಸ್ತೆ, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು	2,500
39.	**ಎನ್.ರಾಧಾಕೃಷ್ಣ,** 567, ಎಫ್ ಮುಖ್ಯರಸ್ತೆ, ಶಾಂತಿನಿಕೇತನ ಲೇಔಟ್, ವೈಶ್ಯ ಬ್ಯಾಂಕ್ ಕಾಲೋನಿ, ಅರಕೆರೆ, ಬಿ.ಜಿ.ರಸ್ತೆ, ಬೆಂಗಳೂರು	2000
40.	**ರಾಯನ್ ಕೋಮಲರ್,** #170, 1ನೇ ಮುಖ್ಯರಸ್ತೆ, 2ನೇ ಹಂತ, ಅರಕೆರೆ, ಮೈಕೋ ಲೇಔಟ್, ಬೆಂಗಳೂರು	2,000
41.	**ಎಚ್.ವಿ.ಅನಂತಸುಬ್ಬರಾವ್,** ನಂ.37, 16ನೇ ಮುಖ್ಯರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು	2,000
42.	**ಚಂದ್ರಬಾಬು ಕೆ.,** 401, ಸಿರಿ ಹಾರ್ಮೊನಿ, ಉತ್ತರಹಳ್ಳಿ ಮುಖ್ಯರಸ್ತೆ, ಡಾ. ವಿಷ್ಣುವರ್ಧನ ರಸ್ತೆ, ಬೆಂಗಳೂರು	1,516
43.	**ಜಯಮ್ಮ ಜಿ.,** #101, 4ನೇ ಅಡ್ಡರಸ್ತೆ, ಜಿ ಬ್ಲಾಕ್, ರಾಮಕೃಷ್ಣ ನಗರ, ಮೈಸೂರು	1,100
44.	**ಅಮೃತ್ ಭಿಡೆ,** ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ	1,000
45.	**ಮಂಗಳಾ ಮೋಹನ್ ಸಂಜೀವಣ್ಣನವರ,** ಹೊನ್ನಸಿರಿ ಜೀವನ ಭೀಮಾ ವಿಕಾಸ್ ನಗರ, ರಾಣೆಬೆನ್ನೂರು, ಹಾವೇರಿ ಜಿಲ್ಲೆ	1,000
46.	**ಕೃಷ್ಣಪ್ಪ ಎಂ.,** ಕುಮಾರಸ್ವಾಮಿ ಲೇಔಟ್, ಬೆಂಗಳೂರು	1,000
47.	**ನಾಗರಾಜ್ ಡಿ.,** ನಂ.781, ಶ್ರೀ ಸಾಯಿಕೃಪಾ, 3ನೇ ಅಡ್ಡರಸ್ತೆ, ಗೀತಾಂಜಲಿ ಲೇಔಟ್, ನ್ಯೂ ತಿಪ್ಪಸಂದ್ರ, ಬೆಂಗಳೂರು	1,000
48.	**ಲೋಕಪ್ಪ ಮೈಲಾಪುರ,** ಲಕ್ಷ್ಮೀಪುರ, ಸಂಡೂರು, ಬಳ್ಳಾರಿ	1,000
49.	**ನೀಲಾ ಸೂರಿ/ವೆಂಡಿ ನಾಯರ್,** ಫ್ಲ್ಯಾಟ್ ನಂ.3, ಮಾಯಾ ಅಪಾರ್ಟ್‌ಮೆಂಟ್, ಅಶೋಕ ರಸ್ತೆ, ಕೂಕ್ ಟೌನ್, ಬೆಂಗಳೂರು	1,000
50.	**ಚಿದಂಬರ ಮೂರ್ತಿ ಎಚ್.ಸಿ.,** ಮೈಸೂರು ಕೈಗಾರಿಕಾ ಉಪನಗರ, ಮೈಸೂರು	1,000
51.	**ಪೂಜಾ ಆರ್.ಎಸ್,** ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ, ಬೆಂಗಳೂರು	1,000
52.	**ರಮೇಶ್ ಎನ್.ಎಸ್,** 119/ಎ 3ನೇ ಮುಖ್ಯರಸ್ತೆ, ಮಹಾಲಕ್ಷ್ಮೀ ಲೇಔಟ್, ಬೆಂಗಳೂರು	1,000
53.	**ಜ್ಯೊತಿ ಜಿ.ಡಿ.,** ನಂ.232, ವಾರ್ಡ್ ನಂ 21, ಪ್ರಶಾಂತ್ ನಗರ, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ	1,000
54.	**ಹಮ್ಜಾ ಅಲಿ,** 61, 5ನೇ ಅಡ್ಡರಸ್ತೆ, ಟಿಎಂಸಿಎಸ್ ಲೇಔಟ್, ಜೆ.ಪಿ ನಗರ, 1ನೇ ಹಂತ, ಬೆಂಗಳೂರು	1000
55.	**ಎನ್.ಶಾರದಾಕೃಷ್ಣ,** 567, ಎಫ್ ಮುಖ್ಯರಸ್ತೆ, ಶಾಂತಿನಿಕೇತನ ಲೇಔಟ್, ವೈಶ್ಯ ಬ್ಯಾಂಕ್ ಕಾಲೋನಿ, ಅರಕೆರೆ, ಬಿ.ಜಿ.ರಸ್ತೆ, ಬೆಂಗಳೂರು	1,000
57.	**ವಿಂಧ್ಯಾ ಎನ್.ಆರ್,** 567, ಎಫ್ ಮುಖ್ಯರಸ್ತೆ, ಶಾಂತಿನಿಕೇತನ ಲೇಔಟ್,ವೈಶ್ಯ ಬ್ಯಾಂಕ್ ಕಾಲೋನಿ, ಅರಕೆರೆ, ಬಿ.ಜಿ.ರಸ್ತೆ, ಬೆಂಗಳೂರು	1,000
58.	**ವೈಷ್ಣವಿ ಎನ್.ಆರ್,** ಎಫ್ ಮುಖ್ಯರಸ್ತೆ, ಶಾಂತಿನಿಕೇತನ ಲೇಔಟ್,ವೈಶ್ಯ ಬ್ಯಾಂಕ್ ಕಾಲೋನಿ, ಅರಕೆರೆ, ಬಿ.ಜಿ.ರಸ್ತೆ, ಬೆಂಗಳೂರು	1,000
59.	**ಎಂ.ಕೆ.ರಾಜೇಶ್, ಎಸ್/ಒ ಎಂ.ಬಿ. ಕೃಷ್ಣಮೂರ್ತಿ,** 15/318 ಜೈಲು ಕ್ವಾರ್ಟಸ್ ಹಿಂಭಾಗ, ಕೋರ್ಟ್ ರಸ್ತೆ, ಚಾಮರಾಜನಗರ	1,000
60.	**ಜಾಕ್ವೆಲಿನ್ ಆ್ಯನ್ ಹಲ್ದರ್,** ಫ್ಲ್ಯಾಟ್ 103, ವಕೀಲ್ ಡ್ಯಾಫೊಡಿಲ್ಸ್, ವಕೀಲ್ ವಿಸ್ಪರಿಂಗ್ ವುಡ್ಸ್, ಇಗ್ಗಲೂರು ಗ್ರಾಮ, ಆನೇಕಲ್ ತಾಲ್ಲೂಕು, ಬೆಂಗಳೂರು	1,000
61.	**ಟಿ.ಪ್ರೇಮಾವತಿ,** #113, ಶ್ರೀರಂಗನಾಥ ನಿಲಯ, ಗಣಪತಿ ಲೇಔಟ್, 4ನೇ ಅಡ್ಡರಸ್ತೆ, ವಿದ್ಯಾನಗರ, ಶಿವಮೊಗ್ಗ	1,000
62.	**ಸಿದ್ದಪ್ಪ ಕೆ.ಎಂ.,** ರಿಶಿಕಾ ನಿಲಯ, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಶರಾವತಿ ನಗರ, ಶಿವಮೊಗ್ಗ	1,000
	ಒಟ್ಟು ಸಂಗ್ರಹವಾದ ಮೊತ್ತ : 1,27,23,423	

ಪ್ರಜಾವಾಣಿ
ಸಿನಿ ಸಿಪ್ ಚಪ್ಪರಿಸಿದಷ್ಟೂ ನೆನಪು..
ಅಣ್ಣಾವ್ರ ದಿಲೀಪ್ ಕುಮಾರ್ ಶೂಟಿಂಗ್ ನೋಡಿದ್ದು...

ಸಿನಿಮಾ ತೆರೆಮೇಲೆ ಕಾಣದ ಅಪರೂಪದ ನೆನಪು ಸಹೃದಯರಿಗೆ ಗುಟುಕಿನ ರೂಪದಲ್ಲಿ... https://bit.ly/3yZSYAf

ಪರಸ್ಪರ ಅಂತರ ಕಾಯ್ದುಕೊಳ್ಳಿ

ರಾಜ್ಯದ ವಿವಿಧೆಡೆ 9 ಅಧಿಕಾರಿಗಳ ಮನೆ ಮೇಲೆ ಎಸಿಬಿ ದಾಳಿ

ಬ್ರೇಕ್ ಇನ್‌ಸ್ಪೆಕ್ಟರ್ ಬಳಿ 30 ನಿವೇಶನ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಇಲಾಖೆ ಮೋಟಾರು ವಾಹನ ನಿರೀಕ್ಷಕರ (ಬ್ರೇಕ್ ಇನ್‌ಸ್ಪೆಕ್ಟರ್) ಬಳಿ 30 ನಿವೇಶನ, 82 ಎಕರೆ ಕೃಷಿ ಜಮೀನು, ಬೆಂಗಳೂರಿನಲ್ಲಿ ಶಾಲಾ ಕಟ್ಟಡ, ತುಮಕೂರಿನಲ್ಲಿ ಫಾರ್ಮ್ ಹೌಸ್, 3 ಕಾರು, 4 ದ್ವಿಚಕ್ರ ವಾಹನ!

ಬೆಂಗಳೂರಿನ ಕೋರಮಂಗಲ ಆರ್‌ಟಿಒ ಕಚೇರಿಯಲ್ಲಿ ಮೋಟಾರು ವಾಹನ ಹಿರಿಯ ನಿರೀಕ್ಷಕರಾಗಿರುವ ಎ.ಕೃಷ್ಣಮೂರ್ತಿ ಮನೆ ಮತ್ತು ಕಚೇರಿಗಳ ಮೇಲೆ ಭ್ರಷ್ಟಾಚಾರ ನಿಗ್ರಹ ದಳದ(ಎಸಿಬಿ) ಅಧಿಕಾರಿಗಳು ದಾಳಿ ನಡೆಸಿದಾಗ ಇವರು ಸಂಪಾದಿಸಿರುವ ಆಸ್ತಿಗೆ ಸಂಬಂಧಿಸಿದ ಇಷ್ಟು ಬೃಹತ್ ಪ್ರಮಾಣದ ದಾಖಲೆಗಳು ಪತ್ತೆಯಾಗಿವೆ.

ಹಂಪಿನಗರ, ದೊಮ್ಮಲೂರಿನಲ್ಲಿ ತಲಾ ಒಂದು ವಾಸದ ಮನೆ ಇವರ ಬಳಿ ಇದೆ ಎಂಬುದನ್ನು ಎಸಿಬಿ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಮುಖ್ಯ ಯೋಜನಾಧಿಕಾರಿ ಆಗಿರುವ ಆರ್. ಪಿ. ಕುಲಕರ್ಣಿ ಅವರು ಬೆಂಗಳೂರಿನಲ್ಲಿ ಒಂದು ವಾಸದ ಮನೆ, 4 ಫ್ಲಾಟ್, 3 ನಿವೇಶನ, 2 ಕಾರು ಹೊಂದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲಾ ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಎಂಜಿನಿಯರ್ ಜಿ. ಶ್ರೀಧರ್ ಅವರು ಮೈಸೂರಿನಲ್ಲಿ 1 ಮನೆ, ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ವಾಸದ ಮನೆ, ವಿವಿಧ ನಗರಗಳಲ್ಲಿ 4 ನಿವೇಶನ ಹೊಂದಿದ್ದಾರೆ.

ಬೀದರ್ ಜಿಲ್ಲೆ ಬಸವಕಲ್ಯಾಣದ ಗ್ರಾಮೀಣ ನೀರು ಸರಬರಾಜು ಅಭಿವೃದ್ಧಿ ಉಪ ವಿಭಾಗದ ಕಿರಿಯ ಎಂಜಿನಿಯರ್ ಸುರೇಶ್ ಅವರು ಬಸವಕಲ್ಯಾಣದಲ್ಲಿ ಮನೆ, ಬಾಲ್ಕಿಯಲ್ಲಿ ಪೆಟ್ರೋಲ್ ಬಂಕ್, ವಿವಿಧ ನಗರಗಳಲ್ಲಿ 4 ನಿವೇಶನ ಹೊಂದಿದ್ದಾರೆ. ಕೆಆರ್‌ಐಡಿಎಲ್ ಉಡುಪಿ ಜಿಲ್ಲೆ ಕಾರ್ಯಪಾಲಕ ಎಂಜಿನಿಯರ್ ಕೃಷ್ಣ ಎಸ್. ಹೆಬ್ಸೂರು ಅವರು ಉಡುಪಿಯಲ್ಲಿ ಮನೆ, ಬೆಂಗಳೂರಿನ ಜಿಗಣಿ, ಹುಬ್ಬಳ್ಳಿಯಲ್ಲಿ ತಲಾ ಒಂದು ನಿವೇಶನ ಹೊಂದಿದ್ದಾರೆ.

ಮಂಡ್ಯ ಜಿಲ್ಲೆ ಉಪ ಅರಣ್ಯ ಸಂರಕ್ಷಣಾಧಿಕಾರಿ(ಸಾಮಾಜಿಕ ಅರಣ್ಯ) ಟಿ. ವೆಂಕಟೇಶ್ ಅವರು ಮೈಸೂರಿನಲ್ಲಿ 2 ನಿವೇಶನ, ಬೇರೆ ನಗರಗಳಲ್ಲಿ 9 ನಿವೇಶನ, 12 ಎಕರೆ ಕೃಷಿ ಭೂಮಿ ಹೊಂದಿದ್ದಾರೆ. ಮಾಲೂರು ನಗರ ಯೋಜನಾ ಪ್ರಾಧಿಕಾರದ ಸಹಾಯಕ ನಿರ್ದೇಶಕ ಎಚ್.ಆರ್. ಕೃಷ್ಣಮೂರ್ತಿ ಅವರು ಬೆಂಗಳೂರು, ಶಿವಮೊಗ್ಗ ಮತ್ತು ದಾವಣಗೆರೆಯಲ್ಲಿ ತಲಾ ಒಂದು ಮನೆ, ವಿವಿಧೆಡೆ 4 ನಿವೇಶನ, ಚನ್ನಗಿರಿ ತಾಲ್ಲೂಕಿನಲ್ಲಿ 15 ಎಕರೆ ಕೃಷಿ ಭೂಮಿ ಹೊಂದಿರುವುದು ಬೆಳಕಿಗೆ ಬಂದಿದೆ ಎಂದು ಎಸಿಬಿ ಮೂಲಗಳು ತಿಳಿಸಿವೆ.

ಗುರುವಾರ ಬೆಳಿಗ್ಗೆ 43 ತಂಡಗಳನ್ನು ಮಾಡಿಕೊಂಡು ಎಸಿಬಿ ಅಧಿಕಾರಿಗಳು ಏಕ ಕಾಲದಲ್ಲಿ ದಾಳಿ ಆರಂಭಿಸಿದ್ದು, ಶೋಧ ಮುಂದುವರಿದಿದೆ ಎಂದು ಮೂಲಗಳ ಹೇಳಿವೆ.

ಎಂಜಿನಿಯರ್ 35 ಎಕರೆ ಕೃಷಿ ಭೂಮಿ ಒಡೆಯ

ಕೆಪಿಟಿಸಿಎಲ್ ವಿಜಯಪುರದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸಿದ್ದರಾಮ ಮಲ್ಲಿಕಾರ್ಜುನ ಬಿರಾದಾರ ಅವರು ವಿಜಯಪುರದಲ್ಲಿ 3 ನಿವೇಶನ, 3 ವಾಸದ ಮನೆ, 4 ನಿವೇಶನ, 35 ಎಕರೆ ಕೃಷಿ ಭೂಮಿ, 2 ಕಾರು ಹೊಂದಿದ್ದಾರೆ ಎಂಬುದಕ್ಕೆ ದಾಖಲೆಗಳು ಎಸಿಬಿ ದಾಳಿ ವೇಳೆ ಪತ್ತೆಯಾಗಿದೆ.

ಬಳ್ಳಾರಿಯ ಜೆಸ್ಕಾಂ ಎಲೆಕ್ಟ್ರಿಕ್ ಇನ್‌ಸ್ಪೆಕ್ಟರ್ ಎ.ಎನ್. ವಿಜಯಕುಮಾರ್ ಅವರು ಬೆಂಗಳೂರು ಮತ್ತು ಬಳ್ಳಾರಿಯಲ್ಲಿ ತಲಾ ಒಂದು ವಾಸದ ಮನೆ, ವಿವಿಧ ನಗರಗಳಲ್ಲಿ 8 ನಿವೇಶನ, 2 ಕಾರು ಹೊಂದಿರುವುದು ಬೆಳಕಿಗೆ ಬಂದಿದೆ.

ಸಾರಿಗೆ ಅಧಿಕಾರಿ ಫಾರಂ ಹೌಸ್ ತಪಾಸಣೆ

ತುಮಕೂರು: ಬೆಂಗಳೂರಿನ ಕೋರಮಂಗಲ ಪ್ರಾದೇಶಿಕ ಸಾರಿಗೆ ಕಚೇರಿಯ ಹಿರಿಯ ಮೋಟಾರು ವಾಹನ ನಿರೀಕ್ಷಕ ಎ.ಕೃಷ್ಣಮೂರ್ತಿ ಅವರ ಕೊರಟಗೆರೆ ತಾಲ್ಲೂಕಿನ ದೇವರಹಳ್ಳಿ ಫಾರಂ ಹೌಸ್ ಮೇಲೆ ಎಸಿಬಿ ಅಧಿಕಾರಿಗಳು ಗುರುವಾರ ದಾಳಿ ಮಾಡಿ ತಪಾಸಣೆ ನಡೆಸಿದರು.

ಐವರು ಅಧಿಕಾರಿಗಳಿದ್ದ ತಂಡ ಬೆಳಿಗ್ಗೆ ಫಾರಂ ಹೌಸ್‌ಗೆ ಆಗಮಿಸಿತು. ಕೃಷ್ಣಮೂರ್ತಿ ಹೊಸದಾಗಿ ನಿರ್ಮಿಸುತ್ತಿರುವ ಐಷಾರಾಮಿ ಕಟ್ಟಡದಲ್ಲಿ ದಾಖಲೆ ಪತ್ರಗಳಿಗಾಗಿ ಶೋಧಿಸಿದರು.

ಮೊದಲಿಗೆ ಅಲ್ಲಿ ಕೆಲಸ ಮಾಡುತ್ತಿದ್ದವರನ್ನು ಒಂಡೆದೆ ಕುಳ್ಳಿರಿಸಿದರು. ನಂತರ ಕಟ್ಟಡದ ಮೂಲೆಮೂಲೆಯನ್ನೂ ತಪಾಸಣೆ ಮಾಡಿದರು. ಕೊಠಡಿಯೊಂದರ ಬೀಗ ಒಡೆದು ಅದರಲ್ಲಿದ್ದ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡರು ಎನ್ನಲಾಗಿದೆ. ಮಧ್ಯಾಹ್ನದ ನಂತರ ವಾಪಸ್ ತೆರಳಿದರು.

ಬಸವ ಕಲ್ಯಾಣದಲ್ಲಿರುವ ಕಿರಿಯ ಎಂಜಿನಿಯರ್ ಸುರೇಶ ಮೋರೆ ಅವರ ಮನೆಯಲ್ಲಿ ಪತ್ತೆಯಾದ ಚಿನ್ನಾಭರಣ ಮತ್ತು ನಗದು

ಕಿರಿಯ ಎಂಜಿನಿಯರ್ ಮನೆಯಲ್ಲಿ 760 ಗ್ರಾಂ ಚಿನ್ನ, ₹ 17 ಲಕ್ಷ ನಗದು ಪತ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): 'ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಿರಿಯ ಎಂಜಿನಿಯರ್ ಸುರೇಶ ಮೋರೆ ಅವರ ಮನೆಯಲ್ಲಿ 760 ಗ್ರಾಂ ಚಿನ್ನಾಭರಣ, 1960 ಗ್ರಾಂ ಬೆಳ್ಳಿ, ₹10 ಲಕ್ಷದ ಬಾಂಡ್ ಮತ್ತು ₹17 ಲಕ್ಷ ನಗದು, ಮೆಹಕರ್‌ನಲ್ಲಿನ ಪೆಟ್ರೋಲ್ ಪಂಪ್‌ನಲ್ಲಿ ₹25 ಲಕ್ಷ ನಗದು ಸಿಕ್ಕಿದೆ' ಎಂದು ಎಸಿಬಿ ಮೂಲಗಳು ತಿಳಿಸಿವೆ.

ಬಸವಕಲ್ಯಾಣದ ಶಿವಾಜಿನಗರ ಹಾಗೂ ಭಾಲ್ಕಿ ತಾಲ್ಲೂಕಿನ ಮೆಹಕರ್ ಗ್ರಾಮದಲ್ಲಿರುವ ಮನೆಗಳ ಮೇಲೆ ಎಸಿಬಿ ಅಧಿಕಾರಿಗಳು ಗುರುವಾರ ದಾಳಿ ಮಾಡಿದರು.

'ಭಾಲ್ಕಿ ಹಾಗೂ ಬಸವಕಲ್ಯಾಣದಲ್ಲಿ 4 ನಿವೇಶನಗಳು ಹಾಗೂ ಎರಡಂತಸ್ತಿನ ಮನೆ ಇವರ ಹೆಸರಲ್ಲಿದೆ. ಅವರ ಬಳಿ ₹1.65 ಕೋಟಿಗೂ ಹೆಚ್ಚಿನ ಆಸ್ತಿ ಪತ್ತೆಯಾಗಿದೆ. ನ್ಯಾಯಯುತವಾಗಿ ಅವರ ಬಳಿ ₹45 ಲಕ್ಷ ಬೆಲೆ ಬಾಳುವಷ್ಟು ಮಾತ್ರ ಆಸ್ತಿ ಇರಬೇಕಾಗಿತ್ತು' ಎಂದು ಎಸಿಬಿಯವರು ಮಾಹಿತಿ ನೀಡಿದ್ದಾರೆ.

ಕೇರಳ: ಮತ್ತೆ ಐವರಲ್ಲಿ ಝಿಕಾ ವೈರಸ್ ಪತ್ತೆ

ತಿರುವನಂತಪುರಂ (ಪಿಟಿಐ): ಕೇರಳದಲ್ಲಿ ವ್ಯಾಪಕವಾಗುತ್ತಿರುವ ಝಿಕಾ ವೈರಸ್ ಸೋಂಕು ಮತ್ತೆ ಐವರಲ್ಲಿ ದೃಢಪಟ್ಟಿದೆ. ಇವರಲ್ಲಿ ನಾಲ್ವರು ಮಹಿಳೆಯರು. ಈ ಮೂಲಕ ರಾಜ್ಯದಲ್ಲಿ ಝಿಕಾ ಸೋಂಕಿತರ ಒಟ್ಟಾರೆ ಸಂಖ್ಯೆ 28ಕ್ಕೆ ಏರಿಕೆಯಾದಂತಾಗಿದೆ.

ಹೊಸ ಪ್ರಕರಣಗಳಲ್ಲಿ ಇಬ್ಬರು ಇಲ್ಲಿನ ಅನಾಯರಾ ಮೂಲದವರಾಗಿದ್ದು, ಮೂರು ಕಿ.ಮೀ ವ್ಯಾಪ್ತಿಯಲ್ಲಿಯೇ ರೋಗದ ಕ್ಲಸ್ಟರ್ ಅನ್ನು ಗುರುತಿಸಲಾಗಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಗುರುವಾರ ತಿಳಿಸಿದ್ದಾರೆ. ಇತರ ಸ್ಥಳಗಳಿಗೆ ಸೋಂಕು ಹರಡುವುದನ್ನು ತಡೆಯಲು ಈ ಪ್ರದೇಶದಲ್ಲಿ ಸೊಳ್ಳೆಗಳನ್ನು ನಾಶಪಡಿಸಲು ಆರೋಗ್ಯ ಇಲಾಖೆ ಕ್ರಮ ಕೈಗೊಂಡಿದೆ.

ಕ್ಷೇತ್ರಕ್ಕೆ ತೆರಳದೆ ಇಲಾಖೆ ಕುರಿತು ಅರಿಯುವಂತೆ ತಾಕೀತು

ರಾಜ್ಯ ಖಾತೆ ಸಚಿವರಿಗೆ ಬಡ್ತಿ: ಪ್ರಧಾನಿ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೇಂದ್ರ ಸಂಪುಟಕ್ಕೆ ಹೊಸದಾಗಿ ಸೇರಿದವರ ಕಾರ್ಯವೈಖರಿ ಅವಲೋಕಿಸಿ, ಬಡ್ತಿ ನೀಡಲಾಗುವುದು' ಎಂದು ರಾಜ್ಯ ಖಾತೆ ಸಚಿವರಿಗೆ ಭರವಸೆ ನೀಡಿರುವ ಪ್ರಧಾನಿ ಮೋದಿ, 'ವ್ಯರ್ಥವಾಗಿ ಸಮಯ ಕಳೆಯದೆ ನಿಮ್ಮ ಖಾತೆಯ ಬಗ್ಗೆ ಅರಿತುಕೊಳ್ಳಿ' ಎಂದು ತಾಕೀತು ಮಾಡಿದ್ದಾರೆ.

'ಇಷ್ಟವಿಲ್ಲದ ಇಲಾಖೆ ನೀಡಲಾಗಿದೆ, ರಾಜ್ಯ ಖಾತೆ ವಹಿಸಲಾಗಿದೆ ಎಂದು ಯಾರೂ ಭಾವಿಸಬೇಕಿಲ್ಲ. ಎಲ್ಲ ಇಲಾಖೆಗಳಿಗೂ ಮಹತ್ವವಿದೆ. ಆಡಳಿತ ನಿರ್ವಹಣೆ ಕುರಿತ ಪ್ರತಿಯೊಬ್ಬರ ದಕ್ಷತೆ ಬಡ್ತಿಗೆ ದಾರಿಯಾಗಲಿದೆ' ಎಂದು ಪ್ರಧಾನಿ ಹೇಳಿದ್ದಾಗಿ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ನೀವು ಕೇಂದ್ರ ಸಚಿವರಾಗಿದ್ದಕ್ಕೆ ಅಭಿಮಾನಿಗಳು, ಬೆಂಬಲಿಗರು ಸನ್ಮಾನ ಮಾಡಲು ಬಯಸುತ್ತಾರೆ. ಆದರೆ, ತಕ್ಷಣ ಕ್ಷೇತ್ರಕ್ಕೆ ತೆರಳಬೇಡಿ. ಖಾತೆಯ ಬಗ್ಗೆ ಪೂರ್ಣ ಮಾಹಿತಿ ಪಡೆಯಿರಿ. ಸಂಸತ್‌ನ ಮುಂಗಾರು ಅಧಿವೇಶನದ ನಂತರವಷ್ಟೇ ಊರುಗಳತ್ತ ತೆರಳಿ' ಎಂದು ನೂತನ ಸಚಿವರಿಗೆ ಪ್ರಧಾನಿ ತಾಕೀತು ಮಾಡಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಗಮನಕ್ಕೆ ತರಲಿ: 'ಯಾವುದೇ ಸಚಿವಾಲಯ ಇರಲಿ. ಪ್ರತಿ ನಿರ್ಧಾರ, ಆದೇಶ, ಪ್ರಕಟಣೆ, ಕಡತ ವಿಲೇವಾರಿ ಬಗ್ಗೆ ರಾಜ್ಯ ಖಾತೆ ಸಚಿವರ ಗಮನಕ್ಕೆ ಬರದೇ ಇರಕೂಡದು ಎಂದೂ ಪ್ರಧಾನಿ ಸಂಪುಟ ದರ್ಜೆ ಸಚಿವರಿಗೆ ಸೂಚಿಸುವ ಮೂಲಕ ಕಿರಿಯರನ್ನು ಹುರಿದುಂಬಿಸಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

'ಇಲಾಖೆಗೆ ಸಂಬಂಧಿಸಿದ ಪ್ರಮುಖ ನಿರ್ಧಾರ ಕೈಗೊಳ್ಳುವಾಗ ಕಿರಿಯ ಸಚಿವರ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡುವಂತಾದರೆ, ಕೆಲಸ ಮಾಡುವುದೂ ಸುಲಭವಾಗಲಿದೆ. ಪಾರದರ್ಶಕತೆಯೂ ಇದ್ದಂತಾಗಲಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ರಾಜ್ಯ ಖಾತೆ ಸಚಿವರೊಬ್ಬರು ಹೇಳಿದ್ದಾರೆ.

'ಯೋಜನೆಗಳ ಯಶಸ್ವಿ ಜಾರಿಯ ಹಿಂದೆ ಆಯಾ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಯ ಪಾತ್ರವೂ ಮುಖ್ಯ. ಆಸಕ್ತ, ಅನುಭವಿ ಅಧಿಕಾರಿಗಳ ನೇಮಕಕ್ಕೂ ಸರ್ಕಾರ ಸಂಬಂಧಿಸಿದ ಸಚಿವರಿಗೇ ಮುಕ್ತ ಅವಕಾಶ ನೀಡಿದೆ. ರಾಜ್ಯ ಸರ್ಕಾರಗಳು ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರದೊಂದಿಗೆ ಸಹಕರಿಸಿದರೆ ಯೋಜನೆಗಳನ್ನು ಜನರಿಗೆ ತಲುಪಿಸುವುದೂ ಸುಲಭವಾಗಲಿದೆ' ಎಂದೂ ಅವರು ತಿಳಿಸಿದ್ದಾರೆ.

ರಾಜ್ಯದ ಶೋಭಾ ಕರಂದ್ಲಾಜೆ ಅವರಲ್ಲದೆ, ರಾಜ್ಯ ಖಾತೆ ಸಚಿವರಾಗಿ ಅಧಿಕಾರ ಸ್ವೀಕರಿಸಿರುವ ಭಗವಂತ ಖೂಬಾ, ಎ.ನಾರಾಯಣಸ್ವಾಮಿ ಅವರು ಕ್ಷೇತ್ರಗಳಿಗೆ ಭೇಟಿ ನೀಡಿಲ್ಲ.

ಸಂಪುಟ ಪುನರ್‌ರಚನೆ ಅನುಮತಿ ಕೋರುವ ಸಾಧ್ಯತೆ

ಮೋದಿ, ಶಾ ಭೇಟಿಗಾಗಿ ಯಡಿಯೂರಪ್ಪ ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಚಿವ ಸಂಪುಟ ಪುನರ್‌ರಚನೆಗೆ ಒಪ್ಪಿಗೆ ಪಡೆಯಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಶುಕ್ರವಾರ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಲಿದ್ದಾರೆ.

ಯಡಿಯೂರಪ್ಪ

ಶುಕ್ರವಾರ ಮಧ್ಯಾಹ್ನ ವಿಶೇಷ ವಿಮಾನದಲ್ಲಿ ಅವರು ದೆಹಲಿಗೆ ತೆರಳಲಿದ್ದಾರೆ. ಸಂಜೆ 7 ಕ್ಕೆ ಪ್ರಧಾನಿ ಮೋದಿಯವರು ಸಮಯ ನೀಡಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ಇದೇ ಸಂದರ್ಭದಲ್ಲಿ ಅವರು ಮೇಕೆದಾಟು ಸಮತೋಲನ ಅಣೆಕಟ್ಟೆ ಯೋಜನೆಗೆ ಅನುಮತಿ ಸೇರಿದಂತೆ ರಾಜ್ಯದ ಹಲವು ಯೋಜನೆಗಳು ಮತ್ತು ಬೇಡಿಕೆಗಳ ಕುರಿತು ಚರ್ಚೆ ನಡೆಸಿದ್ದಾರೆ. ಇದಕ್ಕಾಗಿ ಕೆಲವು ಹಿರಿಯ ಅಧಿಕಾರಿಗಳು ಗುರುವಾರ ಸಂಜೆ ದೆಹಲಿಗೆ ಪ್ರಯಾಣ ಬೆಳೆಸಿದರು ಎಂದು ಮೂಲಗಳು ಹೇಳಿವೆ.

ಸಂಪುಟ ಪುನಾರಚನೆಗೆ ಪಟ್ಟು: ಕೇಂದ್ರ ಸಂಪುಟವನ್ನು ಸಮಗ್ರವಾಗಿ ಪುನಾರಚನೆ ಮಾಡಿದ ರೀತಿಯಲ್ಲೇ ರಾಜ್ಯದಲ್ಲೂ ಹಲವರನ್ನು ಕೈಬಿಟ್ಟು ಹೊಸಬರಿಗೆ ಸಂಪುಟದಲ್ಲಿ ಅವಕಾಶ ನೀಡುವ ವಿಚಾರವನ್ನು ಪ್ರಸ್ತಾಪಿಸಲಿದ್ದಾರೆ. ಬಹಿರಂಗ ಹೇಳಿಕೆಗಳ ಮೂಲಕ ತಮಗೆ ಇರಿಸು ಮುರಿಸು ಉಂಟು ಮಾಡುತ್ತಿರುವ, ಪದೇ ಪದೇ ತಮ್ಮ ವಿರುದ್ಧ ದೂರುಗಳನ್ನು ನೀಡುತ್ತಿರುವ ಸಚಿವರನ್ನು ಕೈಬಿಡಲು ಅನುಮತಿ ಕೇಳಲಿದ್ದಾರೆ ಎಂದು ಹೇಳಲಾಗಿದೆ.

ಆದರೆ, ಯಡಿಯೂರಪ್ಪ ಅವರಿಗೆ ಸಂಪುಟ ಪುನಾರಚನೆಗೆ ಅವಕಾಶ ನೀಡುತ್ತಾರೋ ಇಲ್ಲವೋ ಎಂಬುದು ಖಚಿತವಿಲ್ಲ. ವರಿಷ್ಠರ ಲೆಕ್ಕಾಚಾರ ಏನಿದೆ ಎಂಬುದು ತಿಳಿದು ಬಂದಿಲ್ಲ. ಯಡಿಯೂರಪ್ಪ ಅವರ ಪ್ರಸ್ತಾಪ ಒಪ್ಪಿಗೆ ಆಗದೇ ಇದ್ದರೆ ಸ್ವಲ್ಪ ಸಮಯ ಕಾಯಬೇಕು ಎಂದು ಹೇಳಿ ಕಳಿಸುವ ಸಾಧ್ಯತೆ ಇದೆ. ವರಿಷ್ಠರ ಭೇಟಿಯ ಸಮನ್ವಯವನ್ನು ಅವರ ಪುತ್ರ ಬಿ.ವೈ. ವಿಜಯೇಂದ್ರ ಅವರೇ ನೋಡಿಕೊಳ್ಳುತ್ತಿದ್ದಾರೆ ಎಂದೂ ಹೇಳಲಾಗಿದೆ.

ಪ್ರಧಾನಿ ಮೋದಿ ಶುಕ್ರವಾರ 11 ಗಂಟೆಗೆ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಕೋವಿಡ್ ಮೂರನೇ ಅಲೆ ಸಿದ್ಧತೆ ಬಗ್ಗೆ ಪರಿಶೀಲನೆ ನಡೆಸಲು ವಿಡಿಯೊ ಸಂವಾದ ನಡೆಸಲಿದ್ದಾರೆ. ಅದರಲ್ಲಿ ಭಾಗವಹಿಸಿದ ಬಳಿಕ ಯಡಿಯೂರಪ್ಪ ದೆಹಲಿಗೆ ತೆರಳುವರು.

ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ಅವಕಾಶ ನೀಡಬಾರದು ಎಂದು ತಮಿಳುನಾಡಿನ ಸರ್ವಪಕ್ಷಗಳ ನಿಯೋಗವೂ ಪ್ರಧಾನಿಯವರನ್ನು ಭೇಟಿ ಮಾಡಲಿದೆ. ಈ ಮಧ್ಯೆ ಯಡಿಯೂರಪ್ಪ ಅವರ ದೆಹಲಿ ಯಾತ್ರೆ ಭೇಟಿ ಕುತೂಹಲ ಮೂಡಿದೆ. ಇತ್ತೀಚೆಗೆ ಕೇಂದ್ರ ಸಂಪುಟ ಸೇರಿರುವ ನಾಲ್ವರು ಸಚಿವರನ್ನೂ ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ ಎಂದೂ ಮೂಲಗಳು ಹೇಳಿವೆ.

ಶಾಸಕರು ದೆಹಲಿಗೆ ಹೋದರೆ ತಪ್ಪೇನು: ಕಟೀಲ್ ಪ್ರಶ್ನೆ

ಕಲಬುರ್ಗಿ: 'ಪಕ್ಷದ ಶಾಸಕರು ದೆಹಲಿಗೆ ವಿವಿಧ ಕೆಲಸಗಳಿಗಾಗಿ ಹೋಗುತ್ತಾರೆ. ಅವರು ಹೋದರೆ ತಪ್ಪೇನು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಪ್ರಶ್ನಿಸಿದರು.

'ವಿಧಾನಮಂಡಲ ಅಧಿವೇಶನದ ವೇಳೆಗೆ ಮುಖ್ಯಮಂತ್ರಿ ದೆಹಲಿಗೆ ಹೋಗುವ ಪರಿಪಾಟವಿದೆ. ಹೀಗಾಗಿ ಯಡಿಯೂರಪ್ಪ ಹೋಗುತ್ತಿದ್ದಾರೆ. ಸಚಿವ ಸಂಪುಟ ವಿಸ್ತರಣೆ ಅವರ ವಿವೇಚನೆಗೆ ಬಿಟ್ಟದ್ದು' ಎಂದು ಗುರುವಾರ ಇಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಕಾಂಗ್ರೆಸ್‌ನಲ್ಲಿ ಅಸಮಾಧಾನಗೊಂಡವರು ಬಿಜೆಪಿ ಸೇರಲು ಸಿದ್ಧರಾಗಿದ್ದಾರೆ. ಅವರಿಗೆ ಸ್ವಾಗತ ಕೋರುತ್ತೇವೆ' ಎಂದು ಬೀದರ್‌ನಲ್ಲಿ ಹೇಳಿದರು.

'ಇಂಗಾಲ ಹೊರಸೂಸುವಿಕೆ: ಗುರಿ ಮೀರಿ ಕಡಿಮೆಗೊಳಿಸಲು ಭಾರತ ಬದ್ಧ'

ನವದೆಹಲಿ (ಪಿಟಿಐ): ಹವಾಮಾನ ಬದಲಾವಣೆಗೆ ಸಂಬಂಧಿಸಿದ ಪ್ಯಾರಿಸ್ ಒಪ್ಪಂದದಂತೆ, ಭಾರತವು ಇಂಗಾಲದ ಹೊರಸೂಸುವಿಕೆ ಪ್ರಮಾಣವನ್ನು ನಿಗದಿತ ಗುರಿಯನ್ನು ಮೀರಿ ಕಡಿಮೆಗೊಳಿಸಲಿದೆ ಎಂದು ಕೇಂದ್ರ ಇಂಧನ ಸಚಿವ ಆರ್.ಕೆ.ಸಿಂಗ್ ವಿಶ್ವಾಸ ವ್ಯಕ್ತಪಡಿಸಿದರು.

ಸಿಐಐ ಗುರುವಾರ ಆಯೋಜಿಸಿದ್ದ 'ಆತ್ಮನಿರ್ಭರ ಭಾರತ: ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಸ್ವಾವಲಂಬನೆ' ಎಂಬ ವಿಷಯ ಕುರಿತ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪ್ಯಾರಿಸ್ ಒಪ್ಪಂದದ ಪ್ರಕಾರ 2030ರ ವೇಳೆಗೆ ಇಂಗಾಲದ ಹೊರಸೂಸುವಿಕೆ ಪ್ರಮಾಣವನ್ನು ಭಾರತ ಶೇ 33ಕ್ಕೆ ಇಳಿಸಬೇಕಾಗಿದೆ. ಈ ಗುರಿಯನ್ನು ಮೀರಿ ಹೊರಸೂಸುವಿಕೆ ಪ್ರಮಾಣವನ್ನು ಕಡಿಮೆಗೊಳಿಸಲು ಭಾರತ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ' ಎಂದು ಅವರು ಹೇಳಿದರು.

'2030ರ ವೇಳೆಗೆ ಭಾರತ ತನ್ನ ಒಟ್ಟು ಸಾಮರ್ಥ್ಯದ ಶೇ 40ರಷ್ಟು ಇಂಧನವನ್ನು ಪಳೆಯುಳಿಕೆಯೇತರ ಮೂಲಗಳಿಂದ ಉತ್ಪಾದಿಸಬೇಕು ಎಂಬುದನ್ನು ಸಹ ಪ್ಯಾರಿಸ್ ಒಪ್ಪಂದದಲ್ಲಿ ಹೇಳಲಾಗಿದೆ' ಎಂದು ಸಚಿವ ಸಿಂಗ್ ಹೇಳಿದರು.

ಕೋವಿಡ್ ಸಕ್ರಿಯ ಪ್ರಕರಣ 32 ಸಾವಿರಕ್ಕೆ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕಿತರಲ್ಲಿ 3,188 ಮಂದಿ ಚೇತರಿಸಿಕೊಂಡಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 32,383ಕ್ಕೆ ಇಳಿಕೆಯಾಗಿದೆ.

ಕಳೆದ ತಿಂಗಳು ಈ ಅವಧಿಯಲ್ಲಿ 1.62 ಲಕ್ಷ ಸಕ್ರಿಯ ಪ್ರಕರಣಗಳಿದ್ದವು. ಕೆಲ ದಿನಗಳಿಂದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದರಿಂದ ಸಕ್ರಿಯ ಪ್ರಕರಣಗಳು ಕೂಡ ಇಳಿಮುಖ ಮಾಡಿವೆ. ರಾಜ್ಯದಲ್ಲಿ 1,977 ಮಂದಿ ಕೋವಿಡ್ ಪೀಡಿತರಾಗಿರುವುದು ಗುರುವಾರ ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 28.78 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.28 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.42ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ.

ಬೆಂಗಳೂರಿನಲ್ಲಿ 462, ದಕ್ಷಿಣ ಕನ್ನಡದಲ್ಲಿ 224, ಮೈಸೂರಿನಲ್ಲಿ 197, ಹಾಸನದಲ್ಲಿ 158, ಉಡುಪಿಯಲ್ಲಿ 110 ಹಾಗೂ ಚಿಕ್ಕಮಗಳೂರಿನಲ್ಲಿ 109 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. 15 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 9 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಕೊರೊನಾ ಸೋಂಕಿತರಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.10 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 48 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 18 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 10, ದಕ್ಷಿಣ ಕನ್ನಡದಲ್ಲಿ 7 ಹಾಗೂ ಮೈಸೂರಿನಲ್ಲಿ 5 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 5ಕ್ಕಿಂತ ಕಡಿಮೆಯಿದೆ. ಮರಣ ಪ್ರಮಾಣದರವು ಶೇ 2.42ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 36,037ಕ್ಕೆ ಏರಿಕೆಯಾಗಿದೆ.

ದೇಶದ್ರೋಹ ಕಾಯ್ದೆ ಇನ್ನೂ ಏಕೆ?

ಒಂದನೇ ಪುಟದಿಂದ

'ಒಂದು ಗುಂಪಿಗೆ ಸೇರಿದ ಜನರನ್ನು ಸಿಲುಕಿಸುವುದಕ್ಕಾಗಿ ಬೇರೊಂದು ಗುಂಪಿನ ವ್ಯಕ್ತಿಯು ಇಂತಹ ಕಾನೂನಿನ ಅಂಶಗಳನ್ನು ಬಳಸಿಕೊಳ್ಳಬಹುದು. ಬೇರೊಂದು ಗುಂಪಿನ ಜನರ ಧ್ವನಿಯನ್ನು ಕೇಳಲು ಇಚ್ಛಿಸದ ನಿರ್ದಿಷ್ಟವಾದ ಪಕ್ಷ ಅಥವಾ ಜನರು, ಆ ಗುಂಪಿನ ವಿರುದ್ಧವೂ ಈ ಸೆಕ್ಷನ್ ಅನ್ನು ಬಳಸಿಕೊಳ್ಳಬಹುದು' ಎಂದು ಮುಖ್ಯ ನ್ಯಾಯಮೂರ್ತಿ ಕಳವಳ ವ್ಯಕ್ತಪಡಿಸಿದ್ದಾರೆ.

ಈ ಸರ್ಕಾರವು ಅನಗತ್ಯ ಮತ್ತು ಅಪ್ರಯೋಜಕ ಕಾನೂನುಗಳನ್ನು ರದ್ದುಪಡಿಸುತ್ತಿದೆ. ಹಾಗಿದ್ದರೂ ಈ ಸೆಕ್ಷನ್‌ಗೆ ಸಂಬಂಧಿಸಿ ಏಕೆ ನಿರ್ಧಾರ ಕೈಗೊಳ್ಳುತ್ತಿಲ್ಲ ಎಂಬುದು ಅರ್ಥ ಆಗುತ್ತಿಲ್ಲ. ಯಾವುದೇ ಸರ್ಕಾರ ಅಥವಾ ರಾಜ್ಯವನ್ನು ದೂಷಿಸುತ್ತಿಲ್ಲ. ದುರದೃಷ್ಟವೆಂದರೆ, ಕಾನೂನು ಜಾರಿ ಸಂಸ್ಥೆಗಳು ಈ ಕಾನೂನುಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ ಮತ್ತು ಯಾವುದೇ ಉತ್ತರದಾಯಿತ್ವವೂ ಕಾಣಿಸುತ್ತಿಲ್ಲ ಎಂದು ಪೀಠವು ಹೇಳಿದೆ.

ಯಾವುದೋ ಗ್ರಾಮೀಣ ಪ್ರದೇಶದ ಪೊಲೀಸ್ ಅಧಿಕಾರಿಯೊಬ್ಬ ಅಲ್ಲಿನ ವ್ಯಕ್ತಿಯೊಬ್ಬನನ್ನು ದೇಶದ್ರೋಹ ಪ್ರಕರಣದಲ್ಲಿ ಸಿಲುಕಿಸಬೇಕಿದ್ದರೆ ಬಹಳ ಸುಲಭದಲ್ಲಿ ಅದನ್ನು ಮಾಡಿಬಿಡಬಹುದು. ಅದೂ ಅಲ್ಲದೆ, ದೇಶದ್ರೋಹ ಪ್ರಕರಣಗಳಲ್ಲಿ ಶಿಕ್ಷೆ ಆಗಿರುವ ಪ್ರಮಾಣ ಅತ್ಯಂತ ಕಡಿಮೆ. ಹಾಗಾಗಿ, ಈ ಸೆಕ್ಷನ್ ಬಗ್ಗೆ ನಿರ್ಧಾರ ತೆಗೆದುಕೊಳ್ಳಲೇಬೇಕಿದೆ ಎಂದು ಪೀಠವು ಹೇಳಿದೆ.

ಇನ್ನೊಂದು ಅರ್ಜಿಯೂ ಇದೆ

ಐಪಿಸಿಯ 124 ಎ (ದೇಶದ್ರೋಹ) ಸೆಕ್ಷನ್ ವಿರುದ್ಧ ಸಲ್ಲಿಕೆಯಾಗಿರುವ ಬೇರೆ ಅರ್ಜಿಯ ವಿಚಾರಣೆಯು ನ್ಯಾಯಮೂರ್ತಿ ಯು.ಯು.ಲಲಿತ್ ಅವರ ನೇತೃತ್ವದ ಪೀಠದಲ್ಲಿ ನಡೆಯುತ್ತಿದೆ ಎಂದು ಮುಖ್ಯ ನ್ಯಾಯಮೂರ್ತಿಯವರಿಗೆ ಮಾಹಿತಿ ನೀಡಲಾಯಿತು. ಈ ಅರ್ಜಿಯ ಮುಂದಿನ ವಿಚಾರಣೆ ಇದೇ 27ರಂದು ನಡೆಯಲಿದೆ. ಹಾಗಾಗಿ, ಮುಂದಿನ ವಿಚಾರಣೆಗೆ ಸಂಬಂಧಿಸಿ ನಿರ್ಧಾರ ಕೈಗೊಳ್ಳುವುದಾಗಿ ರಮಣ ತಿಳಿಸಿದರು.

ಪತ್ರಕರ್ತರಾದ ಕಿಶೋರ್‌ಚಂದ್ರ ವಾಂಗ್‌ಕೇಮ್ಚಾ ಮತ್ತು ಕನ್ಹಯ್ಯಾ ಲಾಲ್ ಶುಕ್ಲಾ ಅವರು ಈ ಅರ್ಜಿ ಸಲ್ಲಿಸಿದ್ದಾರೆ. ಈ ಪ್ರಕರಣದಲ್ಲಿಯೂ ಕೇಂದ್ರಕ್ಕೆ ನೋಟಿಸ್ ನೀಡಲಾಗಿದೆ.

ಭಾರತೀಯ ಸಂಪಾದಕರ ಕೂಟವು ಸಲ್ಲಿಸಿರುವ ಅರ್ಜಿಯನ್ನು ಈಗಾಗಲೇ ಸಲ್ಲಿಕೆಯಾಗಿರುವ ಇನ್ನೊಂದು ಅರ್ಜಿಯ ಜತೆಗೆ ಸೇರಿಸಿಕೊಳ್ಳಬಹುದು ಎಂದು ಅರ್ಜಿದಾರರ ಪರ ವಕೀಲ ಶ್ಯಾಮ್ ದಿವಾನ್ ಹೇಳಿದರು. ಸೆಕ್ಷನ್ ಅನ್ನು ರದ್ದುಪಡಿಸಬೇಕು ಮತ್ತು ದುರ್ಬಳಕೆ ತಡೆಗೆ ಮಾರ್ಗಸೂಚಿ ರೂಪಿಸಬೇಕು ಎಂದೂ ಸಂಪಾದಕರ ಕೂಟದ ಅರ್ಜಿಯಲ್ಲಿ ಕೋರಲಾಗಿದೆ ಎಂದು ದಿವಾನ್ ವಿವರಿಸಿದರು.

ಆಗಸ್ಟ್ 26–ಸೆ.2ವರೆಗೆ ಜೆಇಇ–ಮುಖ್ಯ ಪರೀಕ್ಷೆ

ನವದೆಹಲಿ (ಪಿಟಿಐ): ಎಂಜಿನಿಯರಿಂಗ್ ಕೋರ್ಸ್‌ನ ಪ್ರವೇಶಕ್ಕಾಗಿ ನಡೆಯಬೇಕಿದ್ದ ನಾಲ್ಕನೇ ಆವೃತ್ತಿಯ ಜೆಇಇ–ಮುಖ್ಯ ಪರೀಕ್ಷೆಯನ್ನು ಮುಂದೂಡಲಾಗಿದ್ದು, ಪರಿಷ್ಕೃತ ವೇಳಾಪಟ್ಟಿಯಂತೆ ಆಗಸ್ಟ್ 26 ರಿಂದ ಸೆಪ್ಟೆಂಬರ್ 2ರವರೆಗೆ ನಡೆಯಲಿದೆ.

ಈ ಕ್ರಮದಿಂದ ಪರೀಕ್ಷಾರ್ಥಿಗಳಿಗೆ ಎರಡು ನಿರ್ಣಾಯಕ ಪರೀಕ್ಷೆಗಳ ನಡುವೆ ನಾಲ್ಕು ವಾರಗಳ ಸಮಯಾವಕಾಶ ಸಿಗಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಗುರುವಾರ ತಿಳಿಸಿದ್ದಾರೆ.

ಈ ಮೊದಲು ನಿಗದಿಪಡಿಸಿದ್ದಂತೆ ಈ ಪರೀಕ್ಷೆಗಳು ಜುಲೈ 27 ರಿಂದ ಆಗಸ್ಟ್ 2ರವರೆಗೆ ನಡೆಯಬೇಕಿತ್ತು. ವಿದ್ಯಾರ್ಥಿಗಳ ನಿರಂತರ ಬೇಡಿಕೆ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸಲಹೆಯನ್ನು ಆಧರಿಸಿ ಮುಂದೂಡಿಕೆ ತೀರ್ಮಾನ ಕೈಗೊಳ್ಳಲಾಗಿದೆ.

'ಈಗ ಜೆಇಇ ಮುಖ್ಯ ಪರೀಕ್ಷೆಯು ಆಗಸ್ಟ್ 26, 27, 31 ಮತ್ತು ಸೆಪ್ಟೆಂಬರ್ 1, 2ರಂದು ನಡೆಯಲಿದೆ. ಪರೀಕ್ಷೆಗಾಗಿ ದೇಶದಾದ್ಯಂತ ಒಟ್ಟು 7.32 ಲಕ್ಷ ವಿದ್ಯಾರ್ಥಿಗಳು ಈಗಾಗಲೇ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ. ಹೆಸರು ನೋಂದಣಿ ಮಾಡಿಕೊಳ್ಳುವ ಅವಧಿಯನ್ನೂ ಜುಲೈ 20ರವರೆಗೂ ವಿಸ್ತರಿಸಲಾಗಿದೆ' ಎಂದು ಸಚಿವರು ಟ್ವೀಟ್ ಮಾಡಿದ್ದಾರೆ.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ, ಇಲಾಖೆ, ವಿಭಾಗ, ರಾಯಚೂರು
ದೂರವಾಣಿ ಸಂಖ್ಯೆ : 08532-225778 & 234747

ಇ-ಪ್ರೊಕ್ಯುರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ- 1 3 & 4)

1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ:ಲೋಇ/ರಾವಿ/ತಾಂಶಾ-4/ಟೆಂಪ್ರ/2020-21/**1247** ದಿನಾಂಕ: **12-07-2021,** 2) ಕಾಮಗಾರಿ ಹೆಸರು : ರಾಯಚೂರು ಜಿಲ್ಲೆಯ ಒಟ್ಟು 10 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ ಮತ್ತು ಲಿಂಗಸುಗೂರು ತಾಲೂಕು ವಿವಿದೆಡೆ ವಿವಿಧ ರಸ್ತೆ, ಹಾಗೂ ಇನ್ನಿತರೆ ಕಾಮಗಾರಿಗಳ ನಿರ್ಮಾಣ. ಮತ್ತು ಅಭಿವೃದ್ಧಿ ಕಾಮಗಾರಿ, 3) ಕಾಮಗಾರಿಯ ಮೊತ್ತ :ಕನಿಷ್ಠ ರೂ. 1271817.83, ಗರಿಷ್ಠ ರೂ. 26549551.04, 4) ಕಾಲಾವಧಿ (ಮಳೆಗಾಲ ಸೇರಿ) : ಕನಿಷ್ಠ 1 (ಒಂದು) ತಿಂಗಳು, ಗರಿಷ್ಠ 9 (ಒಂಭತ್ತು) ತಿಂಗಳು, 5) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ : **30-07-2021 ಸಂಜೆ 4.00 ಗಂಟೆಯವರೆಗೆ,** 6) ಟೆಂಡರ್ ತೆರೆಯುವ ದಿನಾಂಕ : **31-07-2021 ಸಂಜೆ 4.30 ಗಂಟೆಯವರೆಗೆ**

ಹೆಚ್ಚಿನ ವಿವರಗಳು ವೆಬ್‌ಸೈಟ್ https://www.eproc.karnataka.gov.in ಮುಖಾಂತರ ನೋಡಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/210/ಎಂ.ಸಿ.&ಎ/2021-22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ-585105
ಫೋ.ನಂ 08472-278634/256944 Email:eerwssglb14@gmail.com
ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ತಾ.ಶಾ./2021-22/696 ದಿನಾಂಕ:13-07-2021

ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪದ್ದತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : **ಆಳಂದ ತಾಲೂಕಿನ – 01 (Indent No 34283)** , 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ : **1,16,00,000/-**, ಗರಿಷ್ಠ : **1,16,00,000/-**, 3) ಲೆಕ್ಕ ಶಿರ್ಷಿಕೆ : KKRDB, 4) ಗುತ್ತಿಗೆದಾರರ ಅರ್ಹತೆ : 3ನೇ ದರ್ಜೆ ಗುತ್ತಿಗೆದಾರರು & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ : **14-07-2021** ರಿಂದ **26-07-2021,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ-ಪ್ರೊಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : **26-07-2021 ಸಾಯಂಕಾಲ 4:00 ಗಂಟೆವರೆಗೆ,** 8) ಪ್ರೀ ಬಿಡ್ಡ್ ಸಭೆ ದಿನಾಂಕ: **19.07.2021 ಬೆ. 11.00 ಗಂಟೆಯ ನಂತರ.** 9) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **27-07-2021 ಸಾಯಂಕಾಲ 4.01 ಗಂಟೆವರೆಗೆ,** 10) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : **29-07-2021 ಬೆ. 11.00 ಗಂಟೆಯ ನಂತರ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.eproc. karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/427/ಎಂ.ಸಿ.&ಎ/2021-22

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಜಂಟಿ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ,
ಮಿನಿ ವಿಧಾನಸೌಧ ಎದುರುಗಡೆ, ಐವಾನ್-ಇ-ಶಾಹಿ ರಸ್ತೆ, ಕಲಬುರಗಿ-585103,
ಇ-ಮೇಲ್ ವಿಳಾಸ: dswoglb@gmail.com, ದೂರವಾಣಿ ಸಂಖ್ಯೆ: 08472-278621
ಸಂ/ಜಂನಿ/ಸಕಇಕ/SCSP-TSP/ಸಿಆರ್-08/2020-21 ದಿನಾಂಕ:14/07/2021

:: ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ::

ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಕೈಗೊಳ್ಳಲಾಗುತ್ತಿರುವ ಭವನಗಳ ನಿರ್ಮಾಣ ಕಾಮಗಾರಿ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿಗಳ ಅಭಿವೃದ್ಧಿ ಕಾಮಗಾರಿ (ಸಿ.ಸಿ.ರಸ್ತೆ) ಬಾಕ್ಸ್ ಚರಂಡಿ, ಕುಡಿಯುವ ನೀರಿನ ಸೌಕರ್ಯ, ವಿದ್ಯಾರ್ಥಿ ನಿಲಯ/ವಸತಿ ನಿಲಯಗಳ ಕಟ್ಟಡ ಕಾಮಗಾರಿಗಳ ತಪಾಸಣೆಗಾಗಿ 3ನೇ ತಂಡವನ್ನು ನಿಗಧಿಗೊಳಿಸಲು ಇ-ಪ್ರಕ್ಯೂರ್‌ಮೆಂಟ್ (e-Procurement) ಮೂಲಕ ಅಲ್ಪಾವಧಿ ಇ-ಟೆಂಡರ್ ಅಹ್ವಾನಿಸಲಾಗಿದೆ.
:: ಇ-ಟೆಂಡರ್ ಘಟನಾವಳಿಗಳು :: 1. ಇ-ಟೆಂಡರ್ ಪ್ರಕಟಣೆ ದಿನಾಂಕ: 14-07-2021. 2. ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: ರೂ. 68,00,000/- (ಅರವತ್ತೆಂಟು ಲಕ್ಷ). 3. ಇ.ಎಂ.ಡಿ ಮೊತ್ತ: ರೂ. 2,04,000/- (ಎರಡು ಲಕ್ಷ ನಾಲ್ಕು ಸಾವಿರ ರೂಪಾಯಿಗಳು), 4. ಇ-ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 15-07-2021 ಮಧ್ಯಾಹ್ನ 3.00 ಗಂಟೆಯಿಂದ. 5. ಇ-ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 31-07-2021 ಮಧ್ಯಾಹ್ನ 3.00 ಗಂಟೆವರೆಗೆ. 6. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ 03-08-2021 ಮಧ್ಯಾಹ್ನ 4.00 ಗಂಟೆಗೆ, 7. ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕಲಬುರಗಿ. ಮೊ.ಸಂ: 9449242142, ದೂರವಾಣಿ ಸಂಖ್ಯೆ: 08472-278621

ಸಹಿ/- ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/435/ಎಂ.ಸಿ.&ಎ/2021-22

BENGALURU DR. B. R. AMBEDKAR SCHOOL OF ECONOMICS
A Unitary University, Govt. of Karnataka

ಡಾ|| ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾನಿಲಯ, ಬೆಂಗಳೂರು
(ಕರ್ನಾಟಕ ಸರ್ಕಾರದ ಏಕೀಕೃತ ವಿಶ್ವವಿದ್ಯಾಲಯ)
ಜ್ಞಾನಭಾರತಿ ಕ್ಯಾಂಪಸ್, ನಾಗರಭಾವಿ, ಬೆಂಗಳೂರು, ಕರ್ನಾಟಕ-560072

ಪ್ರವೇಶಾತಿ ಪ್ರಕಟಣೆ 2021-22

- **ಐದು ವರ್ಷಗಳ ಸಂಯೋಜಿತ (ಇಂಟಿಗ್ರೇಟೆಡ್) ಎಂ.ಎಸ್‌ಸಿ. ಅರ್ಥಶಾಸ್ತ್ರ ಕೋರ್ಸ್, ಮೂರು ವರ್ಷಗಳ ನಂತರ ನಿರ್ಗಮಿಸಲು ಇರುವ ಆಯ್ಕೆಯೊಂದಿಗೆ**
- **ಎರಡು ವರ್ಷಗಳ ಎಂ.ಎಸ್‌ಸಿ. ಅರ್ಥಶಾಸ್ತ್ರ**

ಡಾ|| ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು (ಬೇಸ್), ಇಲ್ಲಿ ಮೇಲ್ಕಂಡ 2 ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳು ಪೂರ್ಣಾವಧಿಯ ವಿಷಯದ ವಸತಿ ಸೌಲಭ್ಯದ ಕಾರ್ಯಕ್ರಮಗಳಾಗಿವೆ (Full time, Residential).

ಅರ್ಹತೆ:

1) ಐದು ವರ್ಷಗಳ ಸಂಯೋಜಿತ (ಇಂಟಿಗ್ರೇಟೆಡ್) ಎಂ.ಎಸ್‌ಸಿ. ಅರ್ಥಶಾಸ್ತ್ರ ಕೋರ್ಸ್‌ಗಾಗಿ (ಮೂರು ವರ್ಷಗಳ ನಂತರ ಹೊರ ಹೋಗಬಹುದಾದ ಆಯ್ಕೆಯಿರುವ) : ಅಭ್ಯರ್ಥಿಯು ಇಂಗ್ಲೀಷ್‌ನ್ನು ಒಂದು ವಿಷಯವಾಗಿಸಿಕೊಂಡು ಹಾಗೂ ಗಣಿತವನ್ನು ಕೋರ್ ವಿಷಯವಾಗಿಸಿಕೊಂಡು ದ್ವಿತೀಯ ಪಿಯುಸಿ / 12ನೇ ತರಗತಿ / ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ 65% ಅಂಕಗಳನ್ನು ಪಡೆದು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ 60%) ಉತ್ತೀರ್ಣರಾಗಿರಬೇಕು. (ಭಾರತೀಯ ಮೂಲದ ಅಭ್ಯರ್ಥಿಗಳಿಗೆ 60 ಸ್ಥಾನಗಳನ್ನು +ಪಿಐಓ/ವಿದೇಶಿ ಅಭ್ಯರ್ಥಿಗಳಿಗೆ 5 ಸ್ಥಾನಗಳು).

2) ಎರಡು ವರ್ಷಗಳ ಎಂ. ಎಸ್‌ಸಿ. ಅರ್ಥಶಾಸ್ತ್ರ ಕೋರ್ಸ್‌ಗಾಗಿ ಸೇರಬಯಸುವ ಅಭ್ಯರ್ಥಿಗಳು ಅರ್ಥಶಾಸ್ತ್ರ ವಿಷಯದಲ್ಲಿ ಬಿ.ಎಸ್‌ಸಿ.(ಆನರ್ಸ್) / ಬಿ.ಎ. (ಆನರ್ಸ್) / ಬಿ.ಎಸ್‌ಸಿ./ ಬಿ.ಎ ನಲ್ಲಿ ಗಣಿತ ಮತ್ತು ಸಂಖ್ಯಾಶಾಸ್ತ್ರ /ಎಕನಾಮೆಟ್ರಿಕ್ಸ್ ಅನ್ನು ಪ್ರಧಾನ ವಿಷಯಗಳನ್ನಾಗಿಸಿಕೊಂಡು ಕನಿಷ್ಠ 55% ಅಂಕಗಳನ್ನು ಪಡೆದಿರಬೇಕು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ 50%). (ಭಾರತೀಯ ಮೂಲದ ಅಭ್ಯರ್ಥಿಗಳಿಗೆ 20 ಸ್ಥಾನಗಳನ್ನು ಮತ್ತು +ಪಿಐಓ/ ವಿದೇಶಿ ಅಭ್ಯರ್ಥಿಗಳಿಗೆ 5 ಸ್ಥಾನಗಳು)

ಅರ್ಜಿ ಶುಲ್ಕ : ಸಾಮಾನ್ಯ / ಓ.ಬಿ.ಸಿ ಅಭ್ಯರ್ಥಿಗಳಿಗೆ ರೂ. 1,000/- ಹಾಗೂ ಎಸ್.ಸಿ/ ಎಸ್.ಟಿ/ ಅಂಗವಿಕಲ ಆಭ್ಯರ್ಥಿಗಳಿಗೆ ರೂ.400/-.

ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ : **16 ಜುಲೈ 2021***, ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **8 ಆಗಸ್ಟ್, 2021***, ಆನ್‌ಲೈನ್ ಪ್ರವೇಶ ಪರೀಕ್ಷೆಯ ದಿನಾಂಕ: **25 ಆಗಸ್ಟ್ 2021***

ಬೇಸ್ ವಿಶ್ವವಿದ್ಯಾಲಯಕ್ಕೆ ಪ್ರವೇಶಾತಿಗಾಗಿ ಐ.ಬಿ.ಪಿ.ಎಸ್. ಸಂಸ್ಥೆಯಿಂದ ಅಖಿಲ ಭಾರತ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದು. ಪ್ರವೇಶಾತಿಗೆ ಸಂಬಂಧಪಟ್ಟ ದಾಖಲೆಗಳು ಮತ್ತು ಅರ್ಜಿ ನಮೂನೆಗಳನ್ನು **base.ac.in** ನಲ್ಲಿ ಆನ್‌ಲೈನ್ ಮೂಲಕ ಭರ್ತಿ ಮಾಡಬೇಕು.

*ಸಾಂಕ್ರಾಮಿಕ ಸೋಂಕು ಕೋವಿಡ್-19 ಪರಿಸ್ಥಿತಿಗೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳನ್ನು ಅವಲಂಬಿಸಿ ಎಲ್ಲಾ ದಿನಾಂಕಗಳು ಬದಲಾವಣೆಗೆ ಒಳಪಟ್ಟಿರುತ್ತವೆ.

ಡಾ. ಎನ್.ಆರ್. ಭಾನುಮೂರ್ತಿ, ಕುಲಪತಿಗಳು
ಜಿ. ಪ್ರಭು, ಭಾ.ಆ.ಸೇ., ಕುಲಸಚಿವರು
DIPR/DDU/Avanti/845/2021-22

ಸಂಪರ್ಕಿಸಿ: ಜ್ಞಾನ ಭಾರತಿ ಮುಖ್ಯ ರಸ್ತೆ, ನಾಗರಭಾವಿ P.O. , ಬೆಂಗಳೂರು, ಕರ್ನಾಟಕ 560072.
ಇ-ಮೇಲ್: info@base.ac.in, ಸಕ್ರಿಯ ಸಹಾಯಕ ದೂರವಾಣಿ : 080-29557767 ಮೊಬೈಲ್ ನಂ.: 7349333323

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

45 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆ: ಮನೆ ಮನೆ ಸಮೀಕ್ಷೆಯಿಂದ ಲಭ್ಯವಾದ ಮಾಹಿತಿ

ಶೇ 30ರಷ್ಟು ಮಂದಿಗೆ ಇನ್ನಷ್ಟೇ ಸಿಗಬೇಕಿದೆ ಲಸಿಕೆ

• ಪ್ರವೀಣ್ ಕುಮಾರ್ ಪಿ.ವಿ.

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ನೆಲೆಸಿರುವ 45 ವರ್ಷ ಮೇಲ್ಪಟ್ಟವರಲ್ಲಿ ಶೇ 30 ಮಂದಿಯಷ್ಟೇ ಕೋವಿಡ್ ಲಸಿಕೆ ಪಡೆದಿಲ್ಲ. ಬಿಬಿಎಂಪಿ ಸಿಬ್ಬಂದಿ ನಡೆಸಿರುವ ಮನೆ ಮನೆ ಸಮೀಕ್ಷೆಯಿಂದ ಈ ಮಾಹಿತಿ ಲಭ್ಯವಾಗಿದೆ.

ಎಷ್ಟು ಮಂದಿ ಲಸಿಕೆ ಪಡೆಯಲು ಬಾಕಿ ಉಳಿದಿದ್ದಾರೆ, ಲಸಿಕೆ ಪಡೆಯದಿರುವುದಕ್ಕೆ ಕಾರಣಗಳು ಏನಾದರೂ ಇವೆಯೇ ಎಂಬುದನ್ನು ಪತ್ತೆ ಹಚ್ಚುವ ಸಲುವಾಗಿ 20 ದಿನಗಳಿಂದ ಬಿಬಿಎಂಪಿ ಆರೋಗ್ಯ ವಿಭಾಗದ ಸಿಬ್ಬಂದಿ ಮನೆ ಮನೆ ಸಮೀಕ್ಷೆ ನಡೆಸಿದ್ದರು. ಇದರ ಅಂಕಿ ಅಂಶಗಳನ್ನು ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಆರೋಗ್ಯ ವಿಭಾಗವು ಸಲ್ಲಿಸಿದೆ.

ಬಿಬಿಎಂಪಿ ಪ್ರಕಾರ ನಗರದ ಎಂಟು ವಲಯಗಳಲ್ಲಿ 45 ವರ್ಷ ಮೇಲ್ಪಟ್ಟವರ ಸಂಖ್ಯೆ 24 ಲಕ್ಷ. ಅವರಲ್ಲಿ ಇದುವರೆಗೆ 16.94 ಲಕ್ಷ ಮಂದಿ ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದಿದ್ದು, 7.09 ಲಕ್ಷ ಮಂದಿ ಇನ್ನಷ್ಟೇ ಲಸಿಕೆ ಪಡೆಯಬೇಕಿದೆ.

45 ವರ್ಷ ಮೇಲ್ಪಟ್ಟವರಲ್ಲಿ ಲಸಿಕೆ ಪಡೆಯಲು ಬಾಕಿ ಇರುವವರ ಪ್ರಮಾಣ ತೀರಾ ಕಡಿಮೆ (ಶೇ 13ರಷ್ಟು) ಇರುವುದು ಯಲಹಂಕ ವಲಯದಲ್ಲಿ. ಉಳಿದ ವಲಯಗಳಿಗೆ ಹೋಲಿಸಿದರೆ ಲಸಿಕೆ ಪಡೆಯದವರ ಪ್ರಮಾಣ ಹೆಚ್ಚು ಇರುವುದು ಮಹದೇವಪುರ ವಲಯದಲ್ಲಿ (ಶೇ 56ರಷ್ಟು). ಈಚಿನ ದಿನಗಳಲ್ಲಿ ಮಹದೇವಪುರ ವಲಯದಲ್ಲೇ ಸೋಂಕು ಪತ್ತೆ ಪ್ರಮಾಣವೂ ಹೆಚ್ಚು ಇದೆ.

'ನಾವು ಸಮೀಕ್ಷೆ ಆರಂಭಿಸಿದ ಬಳಿಕ ಕೆಲವರು ಲಸಿಕೆ ಪಡೆದಿದ್ದಾರೆ. ಹಾಗಾಗಿ ಈ ಅಂಕಿ ಅಂಶಗಳಲ್ಲಿ ಸ್ವಲ್ಪ ವ್ಯತ್ಯಾಸ ಇರಬಹುದು' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. ಈ ಸಮೀಕ್ಷೆ ಆರಂಭವಾದ ಬಳಿಕ ನಗರದಲ್ಲಿ ಒಟ್ಟು 14.95 ಲಕ್ಷ ಮಂದಿಗೆ ಲಸಿಕೆ ನೀಡಲಾಗಿದೆ. ಜುಲೈ ತಿಂಗಳಲ್ಲಿ ಇದುವರೆಗೆ 9.80 ಲಕ್ಷ ಮಂದಿಗೆ ಲಸಿಕೆ ನೀಡಲಾಗಿದೆ. ಇದರಲ್ಲಿ ಎಲ್ಲ ವಯೋವರ್ಗದವರೂ ಸೇರಿದ್ದಾರೆ.

'ಯಾವ ವಲಯದಲ್ಲಿ ಎಷ್ಟು ಜನರು ಕೋವಿಡ್ ಲಸಿಕೆ ಪಡೆಯಲು ಬಾಕಿ ಇದ್ದಾರೆ ಎಂಬ ಸ್ಪಷ್ಟತೆ ಪಡೆಯಲು ಈ ಸಮೀಕ್ಷೆ ನಡೆಸಿದ್ದೇವೆ. ಜನರು ಹಿಂಜರಿಕೆಯ ಕಾರಣದಿಂದ ಲಸಿಕೆ ಪಡೆಯುತ್ತಿಲ್ಲವೇ, ಲಸಿಕೆ ಪಡೆಯಲು ಏನಾದರೂ ಸಮಸ್ಯೆಗಳಿವೆಯೇ ಎಂಬ ವಿಚಾರಗಳನ್ನು ತಿಳಿದುಕೊಳ್ಳಲೂ ಇದು ನೆರವಾಗುತ್ತದೆ. ಸಮೀಕ್ಷೆಯ ಅಂಕಿಅಂಶಗಳನ್ನು ಆಧರಿಸಿ ಎಲ್ಲರಿಗೂ ಲಸಿಕೆ ನೀಡುವುದಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದ್ದೇವೆ' ಎಂದು ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

'ಯಾವ ಪ್ರದೇಶಗಳಲ್ಲಿ ಎಷ್ಟು ಮಂದಿ ಲಸಿಕೆ ಪಡೆಯಲು ಬಾಕಿ ಇದೆ. ಅಲ್ಲಿ ಯಾವ ರೀತಿ ಲಸಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬ ಬಗ್ಗೆ ಈ ಸಮೀಕ್ಷೆ ಆಧರಿಸಿ ಪರಿಶೀಲನೆ ನಡೆಸುತ್ತಿದ್ದೇವೆ. ಈ ಸಮೀಕ್ಷೆಯ ವರದಿ ಆಧಾರದಲ್ಲಿ ವಾರ್ಡ್ ಮಟ್ಟದಲ್ಲಿ ಲಸಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಎಲ್ಲ ಬದಲಾವಣೆ ಮಾಡಿಕೊಳ್ಳಬೇಕು ಎಂಬುದನ್ನು ಪರಿಶೀಲಿಸುತ್ತಿದ್ದೇವೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ಅಂಕಿ–ಅಂಶಗಳು

24,01,870 ಬಿಬಿಎಂಪಿ ವ್ಯಾಪ್ತಿಯಲ್ಲಿ ನೆಲೆಸಿರುವ 45 ವರ್ಷ ಮೇಲಿನವರು

16,93,781 ಕೋವಿಡ್‌ನ ಮೊದಲ ಡೋಸ್ ಪಡೆದವರು (45 ವರ್ಷ ಮೇಲ್ಪಟ್ಟವರು)

7,09,175 ಮೊದಲ ಡೋಸ್ ಪಡೆಯಲು ಬಾಕಿ ಇರುವವರು (45 ವರ್ಷ ಮೇಲ್ಪಟ್ಟವರು)

45 ವರ್ಷ ಮೇಲ್ಪಟ್ಟವರಿಗೆ ಲಸಿಕೆ– ವಿವರ

ವಲಯ	45 ವರ್ಷ ಮೀರಿದವರು	ಮೊದಲ ಡೋಸ್ ಪಡೆದವರು	ಇನ್ನಷ್ಟೇ ಪಡೆಯಬೇಕಾದವರು	ಶೇಕಡಾ ಪ್ರಮಾಣ (%)
ಪೂರ್ವ	1,54,205	88,941	65,264	42
ಪಶ್ಚಿಮ	7,42,158	5,36,912	2,05,246	28
ದಕ್ಷಿಣ	3,77,448	2,94,719	84,085	22
ಬೊಮ್ಮನಹಳ್ಳಿ	2,86,290	2,32,710	53,580	19
ದಾಸರಹಳ್ಳಿ	74,539	51,390	23,149	31
ಮಹದೇವಪುರ	3,45,306	1,51,646	1,93,660	56
ಯಲಹಂಕ	1,96,764	1,70,531	25,963	13
ಆರ್.ಆರ್.ನಗರ	2,25,160	1,66,932	58,228	26

ಸುದ್ದಿ 2 ನಿಮಿಷ

'ಕೋವಿಡ್ ಮೃತರ ಕುಟುಂಬಕ್ಕೆ ₹5 ಲಕ್ಷ ಪರಿಹಾರ ನೀಡಿ'

ಬೆಂಗಳೂರು: 'ಕೋವಿಡ್‌ನಿಂದ ಮೃತರಾದವರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡಿ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬಿಟಿಎಂ ಬಡಾವಣೆ ಮತ್ತು ಕೋರಮಂಗಲ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಹಮ್ಮಿಕೊಂಡಿರುವ 'ಕಾಂಗ್ರೆಸ್ ಸಹಾಯ ಹಸ್ತ' ಕಾರ್ಯಕ್ರಮಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದರು.

'ನಮ್ಮ ಕಾರ್ಯಕರ್ತರು ಬೂತ್, ವಾರ್ಡ್, ಹೋಬಳಿ ಹಾಗೂ ಬ್ಲಾಕ್ ಮಟ್ಟದಲ್ಲಿ ಎಷ್ಟು ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದಾರೆ ಎಂಬ ಮಾಹಿತಿ ಕಲೆಹಾಕುತ್ತಿದ್ದಾರೆ. ಈ ಕುರಿತ ವೈಜ್ಞಾನಿಕ ವರದಿಯನ್ನು ಸರ್ಕಾರಕ್ಕೆ ನೀಡುತ್ತೇವೆ' ಎಂದರು.

'ಸರ್ಕಾರ ಘೋಷಿಸಿರುವ ಪರಿಹಾರ ಮೊತ್ತ ಪಡೆಯಲು ಆಟೊ ಚಾಲಕರು, ಬೀದಿಬದಿ ವ್ಯಾಪಾರಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಮೂರು ತಿಂಗಳು ಕಳೆದಿವೆ. ಹೀಗಿದ್ದರೂ ಕೆಲವರಿಗೆ ಈ ಮೊತ್ತ ಸಿಕ್ಕಿಲ್ಲ. ಬಿಜೆಪಿ ಸರ್ಕಾರದ ಯೋಜನೆಗಳು ಜಾಹೀರಾತಿಗಷ್ಟೇ ಸೀಮಿತವಾಗಿವೆ' ಎಂದು ದೂರಿದರು.

ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಸಹ ಅಧ್ಯಕ್ಷ ವಿ.ಆರ್ ಸುದರ್ಶನ್, 'ರಾಜ್ಯ, ಕೇಂದ್ರ ಸರ್ಕಾರಗಳು ಕೋವಿಡ್ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿವೆ' ಎಂದರು.

ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ಪ, ಪಾಲಿಕೆಯ ಮಾಜಿ ಸದಸ್ಯ ಮಂಜುನಾಥ ರೆಡ್ಡಿ, ಕೋರಮಂಗಲ ಬ್ಲಾಕ್ ಅಧ್ಯಕ್ಷ ಗೋವರ್ಧನ ರೆಡ್ಡಿ, ಮುಖಂಡರಾದ ಮೋಹನ್, ವಿಲೇಜ್ ವೆಂಕಟೇಶ್, ಸಂಪತ್, ಮುನಿರಾಜ್ ಇದ್ದರು.

'ನಂದಿಬೆಟ್ಟಕ್ಕೆ ರೋಪ್ ವೇ: ಇದೇ 23ಕ್ಕೆ ಸ್ಥಳ ಪರಿಶೀಲನೆ'

ಬೆಂಗಳೂರು: ನಂದಿಬೆಟ್ಟಕ್ಕೆ ರೋಪ್ ವೇ ನಿರ್ಮಿಸುವ ಕುರಿತಂತೆ ಇದೇ 23ರಂದು ಸ್ಥಳ ಪರಿಶೀಲಿಸಲು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ನಿರ್ಧರಿಸಿದ್ದಾರೆ.

ಇಲಾಖೆಯ ಪ್ರಗತಿ ಪರಿಶೀಲನೆ ಗುರುವಾರ ನಡೆಸಿದ ಅವರು, 'ಹಲವು ದಶಕಗಳಿಂದ ನನೆಗುದಿಗೆ ಬಿದ್ದಿರುವ ಈ ಯೋಜನೆಗೆ ತ್ವರಿತವಾಗಿ ಚಾಲನೆ ನೀಡಬೇಕು. ಶೀಘ್ರದಲ್ಲಿ ಟೆಂಡರ್ ಕರೆದು ಕಾಮಗಾರಿ ಆರಂಭಿಸಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ನಂದಿ ಬೆಟ್ಟಕ್ಕೆ ರೋಪ್ ವೇ ಯೋಜನೆಯ ಪ್ರಾತ್ಯಕ್ಷಿಕೆಯನ್ನು ಆರ್ಕೋನ್ ಇನ್ಫ್ರಾ ಸಂಸ್ಥೆಯವರು ಪ್ರದರ್ಶಿಸಿದರು.

ಹೈಟೆಕ್ ಹಾಥ್ ವೇ: ಸಾಂಸ್ಕೃತಿಕ ನಗರಿ ಮೈಸೂರಿನ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಕಲೆ, ಸಂಸ್ಕೃತಿ, ಜಾನಪದ ಹಾಗೂ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಎಲ್ಲವನ್ನೂ ಒಂದೇ ಸೂರಿನಡಿ ತರಲು ಅತ್ಯಾಧುನಿಕ ಹಾಥ್ ವೇ ನಿರ್ಮಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

'ರಾಜ್ಯದಲ್ಲಿ ಪ್ರವಾಸೋದ್ಯಮ ಕ್ಷೇತ್ರ ಅಭಿವೃದ್ಧಿ ಪಡಿಸಲು ಬಂಡವಾಳ ಆಕರ್ಷಿಸುವ ಸಂಬಂಧ 'ದಿ ಇಂಡಿಯಾ ಎಕ್ಸ್‌ಪೋ–2023' ಎಂಬ ಬೃಹತ್ ಮೇಳ ಆಯೋಜಿಸಬೇಕು. ಪ್ರವಾಸಿ ಮೇಳ ಏರ್ಪಡಿಸುವ ಮೂಲಕ ಬಂಡವಾಳ ಆಕರ್ಷಿಸಬೇಕು' ಎಂದೂ ಅಧಿಕಾರಿಗಳಿಗೆ ಸಲಹೆ ನೀಡಿದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,20,960 ಒಟ್ಟು ಸೋಂಕಿತರು (12,20,498 ನಿನ್ನೆಯ ವಿವರ)

12,524	11,92,664	15,771
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	462
ಗುಣಮುಖ	501
ಸಾವು	10

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

'ದೊಡ್ಡ ಪ್ರಮಾಣದ ಲಸಿಕಾ ಅಭಿಯಾನ ಅಗತ್ಯ'

ಖಾಸಗಿ ಆಸ್ಪತ್ರೆಗಳ ಒಕ್ಕೂಟದ ತಜ್ಞರ ಸಮಿತಿ ಆಗ್ರಹ • ಡಾ. ಹೇಮಾ ದಿವಾಕರ್ ಅಧ್ಯಕ್ಷತೆಯಲ್ಲಿ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಮೂರನೇ ಅಲೆಯನ್ನು ಯಶಸ್ವಿಯಾಗಿ ಎದುರಿಸಬೇಕಾದಲ್ಲಿ ದೊಡ್ಡ ಪ್ರಮಾಣದ ಲಸಿಕಾ ಅಭಿಯಾನ ಕೈಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರವೇ ಖಾಸಗಿ ಆಸ್ಪತ್ರೆಗಳಿಗೆ ಅಗತ್ಯ ಪ್ರಮಾಣದಲ್ಲಿ ಲಸಿಕೆ ಪೂರೈಕೆಗೆ ಕ್ರಮ ವಹಿಸಬೇಕು' ಎಂದು ಖಾಸಗಿ ಆಸ್ಪತ್ರೆಗಳ ಒಕ್ಕೂಟ ರಚಿಸಿದ ತಜ್ಞರ ಸಮಿತಿ ಆಗ್ರಹಿಸಿದೆ.

ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಕೋವಿಡ್ ಮೂರನೇ ಅಲೆಗೆ ಸಂಬಂಧಿಸಿದಂತೆ ದಿವಾಕರ್ಸ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ ಡಾ. ಹೇಮಾ ದಿವಾಕರ್ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚಿಸಿದೆ. ಪ್ರಾಥಮಿಕ ವರದಿಯನ್ನು ಸಿದ್ಧಪಡಿಸುವ ಸಂಬಂಧ ಸಮಿತಿ ಸಭೆ ನಡೆಸಿ, ರೂಪುರೇಷೆಯನ್ನು ತಯಾರಿಸಿದೆ.

'ಮೂರನೇ ಅಲೆ ಸಂಬಂಧ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹತ್ತು ದಿನಗಳಲ್ಲಿ 30 ಪುಟಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಫನಾ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

ವೈದ್ಯರಿಗೆ ತರಬೇತಿ: 'ಮೂರನೇ ಅಲೆ ಎದುರಿಸಲು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕಿದೆ. ವಯಸ್ಕರಿಗೆ ಚಿಕಿತ್ಸೆ ಒದಗಿಸುವ ವೈದ್ಯರಿಗೆ ಕೂಡ ಮಕ್ಕಳ ಆರೈಕೆ ಬಗ್ಗೆ ತರಬೇತಿ ಒದಗಿಸಬೇಕಿದೆ. ಸರ್ಕಾರ ಕೈಗೊಳ್ಳುವ ಕ್ರಮಗಳಿಗೆ ಸಹಕಾರ ನೀಡಬೇಕಾಗುತ್ತದೆ. ಈ ಬಗ್ಗೆ ವರದಿ ತಯಾರಿಸಲಾಗುತ್ತಿದೆ' ಎಂದು ಸಮಿತಿಯ ಅಧ್ಯಕ್ಷೆ ಡಾ. ಹೇಮಾ ದಿವಾಕರ್ ತಿಳಿಸಿದರು.

'ಸಿದ್ಧಪಡಿಸುತ್ತಿರುವ ವರದಿ ಖಾಸಗಿ ಆಸ್ಪತ್ರೆಗಳ ದೃಷ್ಟಿಕೋನದಲ್ಲಿ ಇರಲಿದೆ. ಲಸಿಕೆಯ ಬಗ್ಗೆ ಜನರಿಗೆ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಈಗ ಸಾಕಷ್ಟು ಗೊಂದಲಗಳಿವೆ. ಮೊದಲು ಸರ್ಕಾರವೇ ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಒದಗಿಸಿತು. ಬಳಿಕ ನೇರವಾಗಿ ಕಂಪನಿಗಳಿಂದ ಖರೀದಿಸಲು ಅವಕಾಶ ನೀಡಲಾಯಿತು. ಇದರಿಂದ ಕೆಲ ಆಸ್ಪತ್ರೆಗಳಿಗೆ ಮಾತ್ರ ಲಸಿಕೆ ದೊರೆತು, ಅಭಿಯಾನಕ್ಕೆ ಹಿನ್ನಡೆಯಾಯಿತು' ಎಂದು ಡಾ. ಪ್ರಸನ್ನ ಎಚ್.ಎಂ. ಹೇಳಿದರು.

'ಸರ್ಕಾರವೇ ಲಸಿಕೆ ಹಂಚಿಕೆ ಮಾಡಲಿ'

'ಲಸಿಕೆಯ ಬಗ್ಗೆ ಪ್ರಾರಂಭಿಕ ದಿನಗಳಿಂದ ಕೂಡ ಗೊಂದಲವಿದೆ. ಅಭಿಯಾನಕ್ಕೆ ವೇಗ ದೊರೆಯಲು ಹಾಗೂ ಲಸಿಕೆ ಎಲ್ಲರಿಗೂ ಸುಲಭವಾಗಿ ದೊರೆಯುವಂತಾಗಲು ಸರ್ಕಾರವೇ ನೇರವಾಗಿ ಖರೀದಿಸಿ, ಖಾಸಗಿ ಆಸ್ಪತ್ರೆಗಳಿಗೆ ಹಂಚಿಕೆ ಮಾಡುವ ವ್ಯವಸ್ಥೆಯನ್ನು ರೂಪಿಸಬೇಕು. ಪ್ರಾರಂಭಿಕ ದಿನಗಳಲ್ಲಿ ಈ ವ್ಯವಸ್ಥೆ ಇದ್ದ ಕಾರಣ ಲಸಿಕೆ ಕೇಂದ್ರಗಳಲ್ಲಿ ಜನದಟ್ಟಣೆ ಉಂಟಾಗುತ್ತಿರಲಿಲ್ಲ. ಸೇವಾ ಶುಲ್ಕವನ್ನು ಮಾತ್ರ ಆಗ ಪಡೆಯಲಾಗುತ್ತಿತ್ತು, ಅದೇ ಮಾದರಿಯನ್ನು ಈಗ ಪುನಃ ಜಾರಿ ಮಾಡಬೇಕು' ಎಂದು ಡಾ. ಪ್ರಸನ್ನ ಎಚ್.ಎಂ. ಆಗ್ರಹಿಸಿದರು.

'ಮೂರನೇ ಅಲೆಯ ಸಾಧ್ಯತೆಯ ಕಾರಣ ಸೋಂಕಿತರ ಸಂಖ್ಯೆ ಏರಿಕೆಯನ್ನು ಪ್ರಾರಂಭಿಕ ಹಂತದಲ್ಲಿಯೇ ಗುರುತಿಸಿ, ಚಿಕಿತ್ಸೆ ಒದಗಿಸಬೇಕಿದೆ. ಅದೇ ರೀತಿ, ಸೋಂಕು ಹರಡುವಿಕೆಯನ್ನು ತಡೆಯಲು ಕ್ರಮ ಕೈಗೊಳ್ಳಬೇಕು' ಎಂದು ಫನಾದ ಕಾರ್ಯದರ್ಶಿ ಡಾ. ರಾಜಶೇಖರ್ ವೈ.ಎಲ್. ತಿಳಿಸಿದರು.

'ಲಸಿಕೆಗೆ ಹಿನ್ನಡೆಗೆ ಸಬೂಬು ಸಲ್ಲ'

'ಲಸಿಕೆ ಹಿನ್ನಡೆಗೆ ರಾಜ್ಯಗಳೇ ಹೊಣೆ ಎಂದು ಕೇಂದ್ರ ಆರೋಪಿಸಿದೆ. ಇದನ್ನು ರಾಜ್ಯ ಬಿಜೆಪಿ ಸರ್ಕಾರ ಒಪ್ಪುವುದೇ? 7– 8 ತಿಂಗಳು ಕಳೆದರೂ ಲಸಿಕೆ ಉತ್ಪಾದನೆ ಹೆಚ್ಚಿಸಲು ಕ್ರಮ ಕೈಗೊಳ್ಳದ ಕೇಂದ್ರದ ಈ ಆರೋಪವು ಎಲ್‌ಕೆಜಿ ಮಕ್ಕಳು ಸಬೂಬು ಹೇಳಿದಂತೆ. ಒಟ್ಟಿನಲ್ಲಿ ಡಬಲ್ ಎಂಜಿನ್‌ಗಳೆರಡೂ ಕೆಟ್ಟು ನಿಂತಿವೆ' ಎಂದು ರಾಜ್ಯ ಕಾಂಗ್ರೆಸ್ ಲೇವಡಿ ಮಾಡಿದೆ.

ಟ್ವೀಟ್ ಮಾಡಿರುವ ಕಾಂಗ್ರೆಸ್ ಘಟಕ, 'ಆರಂಭದ ಲಸಿಕಾಕರಣಕ್ಕೆ ಹಿನ್ನಡೆಯಾಗುವುದು ಸಹಜ. ಆದರೆ, ಲಸಿಕಾಕರಣ ಆರಂಭವಾಗಿ 7–8 ತಿಂಗಳು ಕಳೆದರೂ ಪರಿಸ್ಥಿತಿ ಸುಧಾರಿಸದೆ ತೀವ್ರ ಕೊರತೆಯಾಗುತ್ತಿದೆ ಎಂದರೆ ಅದು ಸರ್ಕಾರದ ವೈಫಲ್ಯ ಹಾಗೂ ಲಸಿಕೆಗಳ ಖಾಸಗಿ ವ್ಯಾಪಾರಕ್ಕೆ ಸಹಕರಿಸಲು ಸರ್ಕಾರದ ಹುನ್ನಾರವೆಂಬುದು ಸ್ಪಷ್ಟ. ಎಷ್ಟಾದರೂ ಇದು ವ್ಯಾಪಾರಿಗಳ ಸರ್ಕಾರವಲ್ಲವೇ' ಎಂದು ಟೀಕಿಸಿದೆ.

'ಡಬಲ್ ಇಂಜಿನ್ ಸರ್ಕಾರಗಳು, 25 ವೀರಾಧಿವೀರ ಸಂಸದರು! 6 ಶೂರಾಧಿಶೂರ ಕೇಂದ್ರ ಸಚಿವರು! ಇಷ್ಟಿದ್ದೂ ಲಸಿಕೆ ಹಂಚಿಕೆಯಲ್ಲಿ ಒಕ್ಕೂಟ ಸರ್ಕಾರದಿಂದ ರಾಜ್ಯಕ್ಕೆ ಅನ್ಯಾಯ ಮುಂದುವರಿದಿದ್ದು ಏಕೆ. ಜಾಹೀರಾತಿನ ಬ್ಯಾನರ್‌ಗಳನ್ನು ಕೊಟ್ಟು ಕಳುಹಿಸಿದ ಪ್ರಧಾನಿ ನರೇಂದ್ರ ಮೋದಿ, ಲಸಿಕೆ ಕೊಡಲು ಮರೆತರೆ ರಾಜ್ಯ ಬಿಜೆಪಿ ನಾಯಕರೇ?' ಎಂದು ಪ್ರಶ್ನಿಸಿದೆ.

'ರಾಜ್ಯದಲ್ಲಿ ಮಳೆ ಆರ್ಭಟ ಜೋರಾಗಿದೆ. ಉತ್ತರ ಕರ್ನಾಟಕದಲ್ಲಿ ಪ್ರವಾಹ ಹಾಗೂ ಕೊಡಗಿನಲ್ಲಿ ಭೂಕುಸಿತದ ಭೀತಿ ಎದುರಾಗಿದೆ. 'ಎಮ್ಮೆಯ ಮೇಲೆ ಮಳೆ ಹೊಯ್ದಂತೆ' ಎಂದು ಹಿಂದಿನ ಘಟನೆಗಳಿಂದ ಪಾಠ ಕಲಿಯದೆ ಅಗತ್ಯ ಸಿದ್ಧತೆಯಿಲ್ಲದೆ ಸರ್ಕಾರ ನಿದ್ರಿಸುತ್ತಿದೆ' ಎಂದೂ ದೂರಿದೆ.

ಹೊಸಕೆರೆಹಳ್ಳಿ: ಎಆರ್‌ಒ ಕಚೇರಿ ಸ್ಥಳಾಂತರ

ಬೆಂಗಳೂರು: ಬಿಬಿಎಂಪಿಯ ಪದ್ಮನಾಭನಗರ ಉಪ ವಿಭಾಗದ ಹೊಸಕೆರೆಹಳ್ಳಿ ವಾರ್ಡ್‌ನ (ಸಂಖ್ಯೆ-161) ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಕಚೇರಿಯು ತ್ಯಾಗರಾಜನಗರದ ಚೆನ್ನಮ್ಮನ ಕೆರೆ ಅಂಗಳದ ಕಟ್ಟಡದಿಂದ ಹೊಸಕೆರೆಹಳ್ಳಿ ಸಹಾಯ ಕೇಂದ್ರದ ಪಕ್ಕದ ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ.

ಸಂಪರ್ಕ: ರಾಜ್ ಕುಮಾರ್, ಎಆರ್‌ಒ, (9480685388)

ವೇಟರ್ ಮೇಲೆ 'ಸ್ಟಾರ್' ನಟನ ಹಲ್ಲೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರಿನ ಸಂದೇಶ್ ನಾಗರಾಜ್ ಅವರಿಗೆ ಸೇರಿದ ಹೋಟೆಲ್‌ನಲ್ಲಿ 'ಸ್ಟಾರ್' ನಟರೊಬ್ಬರು ದಲಿತ ಸಮುದಾಯದ ವೇಟರ್ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಬಗ್ಗೆ ತನಿಖೆಗೆ ಆದೇಶಿಸಬೇಕು' ಎಂದು ಚಲನಚಿತ್ರ ನಿರ್ದೇಶಕ ಇಂದ್ರಜಿತ್ ಲಂಕೇಶ್ ಅವರು ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

'ಹಲ್ಲೆಯಿಂದ ವೇಟರ್ ಕಣ್ಣುಗಳಿಗೆ ಹಾನಿಯಾಗಿದೆ. ಈ ವಿಚಾರವಾಗಿ ಹೋಟೆಲ್‌ನ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಪರಿಶೀಲಿಸಿ, ಅಲ್ಲಿ ಉಳಿದಿರುವ ವೇಟರ್‌ಗಳ ವಿಚಾರಣೆಯನ್ನೂ ನಡೆಸಿ ತುರ್ತು ಕ್ರಮ ಜರುಗಿಸಬೇಕು. ಈ ಘಟನೆಯಿಂದ ದಲಿತರಲ್ಲಿ ಅವ್ಯಕ್ತವಾದ ಭಯದ ವಾತಾವರಣ ನಿರ್ಮಾಣವಾಗಿದೆ. ದಲಿತರು, ಬಡವರು, ಶೋಷಿತರ ಜೀವಕ್ಕೆ ಯಾವುದೇ ಸುರಕ್ಷತೆ ಇಲ್ಲವಾಗಿದೆ' ಎಂದು ಹೇಳಿದ್ದಾರೆ.

'ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇತ್ತೀಚಿನ ದಿನಗಳಲ್ಲಿ ಅಪರಾಧ ಪ್ರಕರಣಗಳು ಮಿತಿ ಮೀರಿವೆ. ಪೊಲೀಸ್ ವ್ಯವಸ್ಥೆಯೂ ಸಂಪೂರ್ಣವಾಗಿ ಹದಗೆಟ್ಟಿದೆ. ಪ್ರಭಾವಿಗಳು, ಉದ್ಯಮಿಗಳು, ಸೆಲೆಬ್ರಿಟಿಗಳ ದೌರ್ಜನ್ಯ ಪ್ರಕರಣಗಳು ನಡೆಯುತ್ತಿದ್ದು, ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳುವಲ್ಲಿ ಜಿಲ್ಲಾ ಪೊಲೀಸರು ವಿಫಲರಾಗಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

'ಸಾಲದ ವಿವಾದದಲ್ಲಿ ಮಹಿಳೆಯನ್ನು ಸ್ವಾರ್ಥಕ್ಕೆ ಬಳಸಿಕೊಂಡು, ಪೊಲೀಸರ ಮೇಲೆ ಒತ್ತಡ ತಂದು ಪ್ರಭಾವಿಗಳು ಮಾತ್ರ ಪ್ರಕರಣದಿಂದ ನುಣುಚಿಕೊಳ್ಳುತ್ತಿದ್ದಾರೆ. ಇದು ಸಾಮಾನ್ಯ ಮಹಿಳೆಯರಲ್ಲಿ ನ್ಯಾಯದ ಮೇಲಿನ ನಂಬಿಕೆಯನ್ನು ಪ್ರಶ್ನಿಸುವಂತಿದೆ. ಇದೇ ಸಾಮಾನ್ಯ ವ್ಯಕ್ತಿಯಾಗಿದ್ದರೆ ಸುಮ್ಮನೇ ಬಿಡುತ್ತಿದ್ದಿರಾ? ಜನಸಾಮಾನ್ಯರಿಗೆ ಒಂದು ನ್ಯಾಯ; ಪ್ರಭಾವಿಗಳಿಗೆ ಮತ್ತೊಂದು ನ್ಯಾಯವೇ? ಇದು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಸಾಕ್ಷಿ ಅಲ್ಲವೇ' ಎಂದು ಇಂದ್ರಜಿತ್ ಪ್ರಶ್ನಿಸಿದ್ದಾರೆ.

ದರ್ಶನ್ ಬೈದಿದ್ದು ನಿಜ, ಹಲ್ಲೆ ನಡೆಸಿಲ್ಲ: ಸಂದೇಶ್

ಮೈಸೂರು: 'ಲಾಕ್‌ಡೌನ್‌ಗೆ 4 ದಿನಗಳ ಮುಂಚೆ ನಟ ದರ್ಶನ್ ಅವರು ನಮ್ಮ ಹೋಟೆಲ್ ಕಾರ್ಮಿಕರೊಬ್ಬರಿಗೆ ಬೈದಿದ್ದು ನಿಜ. ಆದರೆ, ಅವರು ಹಲ್ಲೆ ನಡೆಸಿಲ್ಲ' ಎಂದು ಸಂದೇಶ್ ದಿ ಪ್ರಿನ್ಸ್ ಹೋಟೆಲ್ ಮಾಲೀಕ ಸಂದೇಶ್ ನಾಗರಾಜ್ ಅವರ ಪುತ್ರ ಸಂದೇಶ್ ತಿಳಿಸಿದರು.

ಹೋಟೆಲ್‌ನಲ್ಲಿ ನಡೆದಿದೆ ಎನ್ನಲಾದ ಗಲಾಟೆ ಸಂಬಂಧ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, 'ರಾತ್ರಿ ಸ್ವಲ್ಪ ಹೆಚ್ಚು ಕಮ್ಮಿಯಾದರೆ ದರ್ಶನ್ ಬೈಯ್ಯುತ್ತಾರೆ. ಮಹಾರಾಷ್ಟ್ರ ಮೂಲದ ಕಾರ್ಮಿಕರೊಬ್ಬರಿಗೆ ಕನ್ನಡ ಬರುತ್ತಿರಲಿಲ್ಲ. ಬಹುಶಃ ಇದರಿಂದ ಗೊಂದಲ ಉಂಟಾಗಿರಬಹುದು. ಒಂದು ವೇಳೆ ಹಲ್ಲೆ ನಡೆದಿದ್ದರೆ ನಾನೇ ಪೊಲೀಸರಿಗೆ ದೂರು ನೀಡುತ್ತಿದ್ದೆ. ಘಟನೆ ಬಳಿಕ ಕಾರ್ಮಿಕರ ಬಳಿ ಕ್ಷಮೆ ಕೇಳಿದ್ದೇನೆ' ಎಂದರು.

'ನಮ್ಮ ಹೋಟೆಲ್‌ನಲ್ಲಿರುವ ಸಿ.ಸಿ.ಟಿ.ವಿ ದೃಶ್ಯಾವಳಿಗಳು 10 ದಿನಗಳ ನಂತರ ಡಿಲೀಟ್ ಆಗುತ್ತವೆ. ಹೀಗಾಗಿ, ಅಂದಿನ ದೃಶ್ಯಗಳು ಲಭ್ಯವಿಲ್ಲ. ಘಟನೆ ಕುರಿತು ಇಂದ್ರಜಿತ್ ಲಂಕೇಶ್ 15 ದಿನಗಳ ಹಿಂದೆ ನನ್ನನ್ನು ಪ್ರಶ್ನಿಸಿದ್ದರು' ಎಂದು ಹೇಳಿದರು.

'ದರ್ಶನ್ ಜೊತೆ 15ರಿಂದ 20 ಮಂದಿ ಬರುತ್ತಾರೆ. ಇದೇ ವಿಚಾರಕ್ಕೆ ನಮ್ಮಿಬ್ಬರ ಮಧ್ಯೆ ಭಿನ್ನಾಭಿಪ್ರಾಯವೂ ಇದೆ. ಇಷ್ಟಾದರೂ, ದರ್ಶನ್ ನನ್ನ ಆತ್ಮೀಯ ಸ್ನೇಹಿತ' ಎಂದು ತಿಳಿಸಿದರು.

ಸಮಗ್ರ ತನಿಖೆಗೆ ಸೂಚನೆ: ಬೊಮ್ಮಾಯಿ

'ಪೊಲೀಸರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ. ಊಹಾಪೋಹಗಳು ಬೇಕಿಲ್ಲ. ಈ ಪ್ರಕರಣದ ಬಗ್ಗೆ ಸಮಗ್ರವಾಗಿ ವಿಚಾರಣೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.95 ಕೋಟಿ	3.10 ಕೋಟಿ
ಸಕ್ರಿಯ ಪ್ರಕರಣ	1.24 ಕೋಟಿ	4.24 ಲಕ್ಷ
ಗುಣಮುಖ	17.29 ಕೋಟಿ	3.01 ಕೋಟಿ
ಸಾವು	40.79 ಲಕ್ಷ	4.12 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.54 ಲಕ್ಷ	39,014
ಗುಣಮುಖ	3.70 ಲಕ್ಷ	39,757
ಸಾವು	8,721	544

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 57,664 ಬ್ರೆಜಿಲ್; 42,081 ಬ್ರಿಟನ್; 23,827 ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 48.99 ಅಮೆರಿಕ; 8.13 ಬ್ರೆಜಿಲ್; 7.29 ಬ್ರಿಟನ್

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): 1.26 ಲಕ್ಷ ಮಹಾರಾಷ್ಟ್ರ; 33,606 ತಮಿಳುನಾಡು; 25,022 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 61.89 ಮಹಾರಾಷ್ಟ್ರ; 31.17 ಕೇರಳ; 25.28 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ಆಲೂರು ಗ್ರಾ.ಪಂ: ಶ್ರುತಿ ಅಧ್ಯಕ್ಷೆ

ಎಚ್.ಕೆ. ಶ್ರುತಿ

ಹೆಸರಘಟ್ಟ: ದಾಸನಪುರ ಹೋಬಳಿ ಆಲೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯು ಗುರುವಾರ ನಡೆಯಿತು. ಹೆಗ್ಗಡದೇವನಪುರ ಗ್ರಾಮದ ಸದಸ್ಯೆ ಎಚ್.ಕೆ.ಶ್ರುತಿ ಅಧ್ಯಕ್ಷರಾಗಿ ಆಯ್ಕೆಯಾದರೆ, ಉಪಾಧ್ಯಕ್ಷೆಯಾಗಿ ಕುದುರೆಗೆರೆ ಗ್ರಾಮದ ಸದಸ್ಯೆ ಅನ್ನಪೂರ್ಣ ಆಯ್ಕೆಯಾದರು.

ಅಧ್ಯಕ್ಷ ಸ್ಥಾನವು ಪರಿಶಿಷ್ಟಜಾತಿ ಮಹಿಳೆ ಮತ್ತು ಉಪಾಧ್ಯಕ್ಷರ ಸ್ಥಾನವು ಸಾಮಾನ್ಯ ವರ್ಗ ಮಹಿಳೆಗೆ ಮೀಸಲಾಗಿತ್ತು. ಚುನಾವಣಾಧಿಕಾರಿಯಾಗಿ ಬೆಂಗಳೂರು ಉತ್ತರ ತಾಲ್ಲೂಕಿನ ಪಶುಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ವೈ. ಎಚ್.ಹರೀಶ್ ಕಾರ್ಯನಿರ್ವಹಿಸಿದರು.

ಪರದಾಟ... ನಗರದಲ್ಲಿ ಗುರುವಾರ ಸುರಿದ ಮಳೆಯಿಂದಾಗಿ ಕಾಕ್ಸ್‌ಟೌನ್‌ನ ವೀಲರ್ಸ್ ರಸ್ತೆಯಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರು ಪರದಾಡುವಂತಾಯಿತು –ಪ್ರಜಾವಾಣಿ ಚಿತ್ರ

'ಕೌಶಲಾಭಿವೃದ್ಧಿಯಿಂದ ಕೌಶಲ ಕರ್ನಾಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಯುವಶಕ್ತಿಯ ಕೌಶಲ ಅಭಿವೃದ್ಧಿಯಿಂದ ಕೌಶಲ ಕರ್ನಾಟಕ ನಿರ್ಮಾಣ ಸಾಧ್ಯ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಪ್ರಾಯಪಟ್ಟರು.

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ ಗುರುವಾರ ಆಯೋಜಿಸಿದ್ದ 'ವಿಶ್ವ ಯುವ ಕೌಶಲ' ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, 'ಯುವಕರಲ್ಲಿ ಕೌಶಲ ಹೆಚ್ಚಿಸಲು ಸರ್ಕಾರ ಎರಡು ವರ್ಷಗಳಲ್ಲಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ' ಎಂದರು.

'150 ಸರ್ಕಾರಿ ಐಟಿಐಗಳನ್ನು ಉನ್ನತೀಕರಿಸಿ ಇಂಡಸ್ಟ್ರಿಯಲ್ ಆಟೋಮೇಷನ್, ರೋಬೋಟಿಕ್ಸ್, ಇಂಡಸ್ಟ್ರಿ 4.0 ದಂತಹ ಅತ್ಯಾಧುನಿಕ ಪ್ರಯೋಗಾಲಯಗಳನ್ನು ಸ್ಥಾಪಿಸಲು ₹ 4,636.50 ಕೋಟಿಯ ಒಡಂಬಡಿಕೆಗೆ ಸಹಿ ಹಾಕಲಾಗಿದೆ. ಉನ್ನತೀಕರಣವನ್ನು ಶೀಘ್ರ ಪೂರ್ಣಗೊಳಿಸಿ, ಸೆಪ್ಟೆಂಬರ್‌ನಲ್ಲಿ ಉದ್ಘಾಟಿಸಲಾಗುವುದು' ಎಂದರು.

'ಬೇರೆ ರಾಜ್ಯಗಳಿಂದ ಮರಳಿದ ವಲಸೆ ಕಾರ್ಮಿಕರಿಗೆ ತರಬೇತಿ ಮತ್ತು ಕೆಲಸ ದೊರಕಿಸಲು ಕೌಶಲ್‌ಕರ್-ಡಾಟ್-ಕಾಂ ವೆಬ್ ಪೋರ್ಟಲ್ ಅಭಿವೃದ್ಧಿ ಪಡಿಸಲಾಗಿದೆ. ಕೈಗಾರಿಕೆಗಳಲ್ಲಿರುವ ಉದ್ಯೋಗ ಅವಕಾಶಗಳಿಗೆ ಅನುಸಾರವಾಗಿ 'ಸ್ಕಿಲ್ ಕನೆಕ್ಟ್' ವೆಬ್ ಪೋರ್ಟಲ್ ಮೂಲಕ ವರ್ಚುಯಲ್ ಉದ್ಯೋಗ ಮೇಳ ನಡೆಸಲಾಗುತ್ತಿದೆ. ರಾಜ್ಯದ ಯುವಕರು ವಿದೇಶಗಳಲ್ಲಿ ಉದ್ಯೋಗ ಪಡೆದುಕೊಳ್ಳಲು ನೆರವಾಗಲು 'ಅಂತರ ರಾಷ್ಟ್ರೀಯ ವಲಸೆ ಕೇಂದ್ರ' ಸ್ಥಾಪಿಸಲಾಗಿದೆ. ಬ್ರಿಟನ್ ರಾಷ್ಟ್ರೀಯ ಆರೋಗ್ಯ ಸೇವೆಯ ಜೊತೆ ಒಡಂಬಡಿಕೆ ಮಾಡಿಕೊಂಡು ಕರ್ನಾಟಕದಿಂದ ವೈದ್ಯಕೀಯ ಸಿಬ್ಬಂದಿಯನ್ನು ಕಳುಹಿಸುವ ಕಾರ್ಯ ಪ್ರಗತಿಯಲ್ಲಿದೆ' ಎಂದರು.

'ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ರಾಜ್ಯದಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಗ್ರಾಮಮಟ್ಟದ ಒಕ್ಕೂಟದ ಮುಖಾಂತರ ಸಮುದಾಯ ಹೂಡಿಕೆ ನಿಧಿಯಾಗಿ ₹ 400 ಕೋಟಿ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. 2021-22ನೇ ಸಾಲಿನಲ್ಲಿ ಈಗಾಗಲೇ 17,121 ಸ್ವ-ಸಹಾಯ ಗುಂಪುಗಳಿಗೆ ₹ 149.03 ಕೋಟಿ ಬಿಡುಗಡೆ ಮಾಡಲಾಗಿದೆ. ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದ ಅಡಿಯಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಪ್ರಧಾನ ಮಂತ್ರಿಗಳ 'ಸ್ವ-ನಿಧಿ' ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ತಲಾ ₹ 20 ಸಾವಿರ ಹೆಚ್ಚುವರಿ ಹೂಡಿಕೆ ಬಂಡವಾಳವನ್ನು ಸಾಲದ ರೂಪದಲ್ಲಿ ವಿತರಿಸಲು ಉದ್ದೇಶಿಸಲಾಗಿದೆ' ಎಂದೂ ಹೇಳಿದರು.

'ಮಿಷನ್ ಯುವ ಸಮೃದ್ಧಿ: 'ರಾಜ್ಯದಲ್ಲಿ ಕೌಶಲ ಮತ್ತು ಉದ್ಯಮಶೀಲತೆ ವಲಯದಲ್ಲಿ ಒಂದು ಕೋಟಿ ಆರ್ಥಿಕ ಅವಕಾಶ ಸೃಷ್ಟಿಸಲು ಉದ್ದೇಶಿಸಲಾಗಿದೆ' ಎಂದು ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

'ಆರ್ಥಿಕ ಅವಕಾಶ, ಉದ್ಯೋಗ ಅವಕಾಶ ಹೆಚ್ಚಿಸಲು 'ಮಿಷನ್ ಯುವ ಸಮೃದ್ಧಿ' ಹೆಸರಿನಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

ಕೌಶಲ ಕರ್ನಾಟಕ ಯೋಜನೆಯಲ್ಲಿ ತರಬೇತಿ ನೀಡಲು ನಾರಾಯಣ ಹೃದಯಾಲಯದ ಡಾ. ದೇವಿ ಶೆಟ್ಟಿ ಮತ್ತು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ನಿರ್ದೇಶಕ ಹರೀಶ್ ಕುಮಾರ್ ಒಡಂಬಡಿಕೆ ಪತ್ರ ವಿನಿಮಯ ಮಾಡಿಕೊಂಡರು. ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಮತ್ತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇದ್ದರು – ಪ್ರಜಾವಾಣಿ ಚಿತ್ರ

ಎಂಟು ಒಪ್ಪಂದಗಳಿಗೆ ಅಂಕಿತ

ಯುವಜನರಲ್ಲಿ ಕೌಶಲ ಹೆಚ್ಚಿಸಿ ಉದ್ಯೋಗಾವಕಾಶ ಸೃಷ್ಟಿಸಲು ರಾಜ್ಯ ಸರ್ಕಾರ ಮತ್ತು ಖಾಸಗಿ ಕ್ಷೇತ್ರದ ನಡುವೆ ಎಂಟು ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಬೆಂಗಳೂರು, ರಾಮನಗರ, ತುಮಕೂರು ಜಿಲ್ಲೆಗಳಲ್ಲಿ ಆಟೋಮ್ಯಾಟಿವ್ ಕ್ಷೇತ್ರಕ್ಕೆ ಸಂಬಂಧಿಸಿದ ತರಬೇತಿ ಕೋರ್ಸ್‌ಗಳನ್ನು ಆಯ್ದ ಐಟಿಐಗಳಲ್ಲಿ ಆರಂಭಿಸಲು ಟೊಯೊಟಾ ಮೋಟಾರ್ಸ್ ಜತೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಕೌಶಲ ಕರ್ನಾಟಕ ಯೋಜನೆಯಲ್ಲಿ ತರಬೇತಿ ನೀಡಲು ವಿಪ್ರೋ, ಜಿಇ, ನಾರಾಯಣ ಹೃದಯಾಲಯ, ಸೆನ್‌ಸೆರಾ ಟೆಕ್ನಾಲಜೀಸ್, ಎಲಿಸಿಯಾ, ಇಎಸ್‌ಡಿಎಂ, ಕ್ಲಸ್ಟರ್, ಆದಿತ್ಯ ಬಿರ್ಲಾ ಗ್ರೂಪ್, ಹೋಮ್ ಲೇನ್ ಜತೆ ಒಪ್ಪಂದ ಮಾಡಿಕೊಳ್ಳಲಾಯಿತು. ಅಲ್ಲದೆ, ಮಾಸ್ಟರ್ ಕ್ಯಾಮ್ ಡಿಸೈನ್ ಸಾಫ್ಟ್‌ವೇರ್‌ನಲ್ಲಿ ತರಬೇತಿ ನೀಡಲು ಕರ್ನಾಟಕ– ಜರ್ಮನ್ ಬಹು ಕೌಶಲ ಅಭಿವೃದ್ಧಿ ಕೇಂದ್ರ ಹಾಗೂ ಆಟೊ ಡೆಸ್ಕ್ ಕಂಪನಿ ಜತೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಎರಡು ಮಹಡಿ ಕಟ್ಟಡದಲ್ಲಿ ರೋಬೋಟಿಕ್ ಶಸ್ತ್ರಚಿಕಿತ್ಸೆ • 15 ತಿಂಗಳಲ್ಲಿ ನಿರ್ಮಾಣ

ಸಂಜಯ ಗಾಂಧಿ ಆಸ್ಪತ್ರೆ: ಕ್ರೀಡಾ ವಿಭಾಗಕ್ಕೆ ಹೈಟೆಕ್ ಕಟ್ಟಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯಲ್ಲಿ ರೋಬೋಟಿಕ್ ಶಸ್ತ್ರಚಿಕಿತ್ಸೆ ಮತ್ತು ಕ್ರೀಡಾ ವಿಭಾಗಕ್ಕೆ ಅತ್ಯಾಧುನಿಕ ಕಟ್ಟಡ ಮುಂದಿನ 15 ತಿಂಗಳಲ್ಲಿ ನಿರ್ಮಾಣವಾಗಲಿದೆ.

ಸಂಸ್ಥೆಯು ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಅ. ದೇವೇಗೌಡ ಅವರು ಈ ಕಟ್ಟಡದ ಶಿಲಾನ್ಯಾಸವನ್ನು ನೆರವೇರಿಸಿದರು.

'ಈಗಾಗಲೇ ರೋಬೋಟಿಕ್ ತಂತ್ರಜ್ಞಾನವನ್ನು ಬಳಸಿ ರೋಗಿಗಳಿಗೆ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ. ರಾಜ್ಯದಲ್ಲಿ ರೋಬೋಟಿಕ್ ತಂತ್ರಜ್ಞಾನ ಬಳಕೆಗೆ ಕ್ರಮವಹಿಸಿದ ಮೊದಲ ಸರ್ಕಾರಿ ಸ್ವಾಯತ್ತ ಸಂಸ್ಥೆ ಇದಾಗಿದೆ. ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು, ಚಿಕಿತ್ಸೆ ಒದಗಿಸುವಲ್ಲಿ ಸಂಸ್ಥೆ ಮುಂಚೂಣಿಯಲ್ಲಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಎಚ್.ಎಸ್. ಚಂದ್ರಶೇಖರ್ ತಿಳಿಸಿದರು.

'ಇತ್ತೀಚಿನ ದಿನಗಳಲ್ಲಿ ಅಸ್ಥಿಸಂಧಿವಾತದ ಸಮಸ್ಯೆ ಸಾಮಾನ್ಯವಾಗಿದೆ. ವಯಸ್ಸಾದವರಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಮೊಣಕಾಲು ಮಂಡಿ ಶಸ್ತ್ರಚಿಕಿತ್ಸೆಯ ಮೂಲಕ ಈ ಸಮಸ್ಯೆಗೆ ಪರಿಹಾರ ಒದಗಿಸಬಹುದು. ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗಿಂತ ರೋಬೋಟಿಕ್ ಶಸ್ತ್ರಚಿಕಿತ್ಸೆ ಹೆಚ್ಚು ನಿಖರ ಹಾಗೂ ಪರಿಣಾಮಕಾರಿ' ಎಂದು ವಿವರಿಸಿದರು.

ಕ್ರೀಡಾಗಾಯಗಳಿಗೆ ಚಿಕಿತ್ಸೆ: 'ಕ್ರೀಡಾಪಟುಗಳಿಗೆ ಗಾಯಗಳು ಕಾಡುತ್ತವೆ. ತಕ್ಷಣ ಮತ್ತು ಸೂಕ್ತ ಚಿಕಿತ್ಸೆ ನೀಡಿದಲ್ಲಿ ಕ್ರೀಡಾಪಟು ಮೊದಲಿನಂತೆ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿ ಎಲ್ಲರಿಗೂ ದುಬಾರಿ ಚಿಕಿತ್ಸೆಯನ್ನು ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗಾಗಿ, ಮನೋರಂಜನಾ ಕ್ರೀಡಾ ಚಟುವಟಿಕೆಗಳಿಂದ ಉಂಟಾಗುವ ಗಾಯಗಳಿಗೆ ಚಿಕಿತ್ಸೆ ನೀಡುತ್ತಿದ್ದೇವೆ' ಎಂದು ಡಾ.ಎಚ್.ಎಸ್. ಚಂದ್ರಶೇಖರ್ ತಿಳಿಸಿದರು.

'ಕ್ರೀಡಾ ಕೇಂದ್ರವು ಪ್ರಯೋಗಾಲಯ ಒಳಗೊಂಡಿದೆ. ಕ್ರೀಡಾಪಟುವನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸುವ ಮೊದಲು ಮತ್ತು ನಂತರ ಫಿಸಿಯೋಥೆರಪಿಸ್ಟ್ ತಂಡದೊಂದಿಗೆ ಮೌಲ್ಯಮಾಪನ ಮಾಡಲಾಗುತ್ತದೆ' ಎಂದು ಹೇಳಿದರು.

ನೂತನ ಕಟ್ಟಡದ ಶಿಲಾನ್ಯಾಸವನ್ನು ಅ. ದೇವೇಗೌಡ ನೆರವೇರಿಸಿದರು. ಸಂಸ್ಥೆಯ ನಿರ್ದೇಶಕ ಡಾ.ಎಚ್.ಎಸ್. ಚಂದ್ರಶೇಖರ್ ಇದ್ದರು. ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯ ನಿರ್ದೇಶಕ ಡಾ.ಸಿ. ನಾಗರಾಜ್ ಹಾಗೂ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕ ಡಾ. ಸಂಜಯ್ ಕೆ.ಎಸ್. ಇದ್ದರು.

₹ 29.30 ಕೋಟಿ ವೆಚ್ಚದಲ್ಲಿ ನಿರ್ಮಾಣ

ಸಂಸ್ಥೆಯ ಆವರಣದಲ್ಲಿ 1.15 ಎಕರೆಯಲ್ಲಿ ಕಟ್ಟಡ ನಿರ್ಮಿಸಲಾಗುತ್ತಿದೆ. ಎರಡು ಮಹಡಿಯ ಈ ಕಟ್ಟಡಕ್ಕೆ ₹ 29.30 ಕೋಟಿ ವೆಚ್ಚವಾಗಲಿದೆ. ಕಟ್ಟಡದ ತಳಮಹಡಿಯಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಇರಲಿದ್ದು, ಆಮ್ಲಜನಕ ಶೇಖರಣಾ ಘಟಕ ಕೂಡ ಇರಲಿದೆ. ನೆಲ ಮಹಡಿಯಲ್ಲಿ ಹೊರ ರೋಗಿಗಳ ವಿಭಾಗ, ಔಷಧ ವಿತರಣಾ ವಿಭಾಗ, ಮುಖ್ಯ ಆರೋಗ್ಯಾಧಿಕಾರಿ ಕೊಠಡಿ, ರೋಗಿಗಳ ಅವಲೋಕನೆಗಾಗಿ 10 ಹಾಸಿಗೆಗಳ ವ್ಯವಸ್ಥೆ, ಲಘು ಶಸ್ತ್ರಚಿಕಿತ್ಸಾ ಕೊಠಡಿ ಹಾಗೂ ಶೌಚಾಲಯಗಳಿರುತ್ತದೆ.

ಮೊದಲ ಮಹಡಿಯಲ್ಲಿ ಕ್ರೀಡಾ ಪ್ರಯೋಗಾಲಯ, ಓಟದ ಟ್ರ್ಯಾಕ್, ಕ್ರಯೋ ಥೆರಪಿ ಕೊಠಡಿ, ಉಗ್ರಾಣ ಸೇರಿದಂತೆ ವಿವಿಧ ಸೌಲಭ್ಯಗಳು ಇರಲಿವೆ. ಎರಡನೇ ಮಹಡಿಯಲ್ಲಿ ಕ್ರೀಡಾ ಪ್ರಯೋಗಾಲಯ, ವ್ಯಾಯಾಮ ಸ್ಥಳ, ವೈದ್ಯರ ವಿಶ್ರಾಂತಿ ಕೊಠಡಿ, ಆಡಳಿತ ಕಚೇರಿ ಸೇರಿದಂತೆ ವಿವಿಧ ಘಟಕಗಳು ಇರಲಿವೆ ಎಂದು ಸಂಸ್ಥೆ ತಿಳಿಸಿದೆ.

ಶೃಂಗೇರಿಯ ಮೆಣಸೆ ಗ್ರಾಮದ ಮಹಿಳೆ ಮೇಲೆ ಆ್ಯಸಿಡ್ ದಾಳಿ ಪ್ರಕರಣ

ನಾಲ್ಕು ಮಂದಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಮೆಣಸೆ ಗ್ರಾಮದ ವಿಚ್ಛೇದಿತ ಮಹಿಳೆಗೆ ಆ್ಯಸಿಡ್ ಎರಚಿದ್ದ ಪ್ರಕರಣದಲ್ಲಿ ನಾಲ್ವರಿಗೆ ಜೀವಾವಧಿ ಶಿಕ್ಷೆ ಹಾಗೂ ತಲಾ ₹5 ಲಕ್ಷ ದಂಡ ವಿಧಿಸಿ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಗುರುವಾರ ಆದೇಶ ನೀಡಿದೆ.

ನ್ಯಾಯಾಧೀಶರಾದ ಮಂಜುನಾಥ ಸಂಗ್ರೇಶಿ ಈ ಆದೇಶ ನೀಡಿದ್ದಾರೆ. ದಂಡದ ಮೊತ್ತವನ್ನು ಸಂತ್ರಸ್ತೆಗೆ ಪರಿಹಾರವಾಗಿ ನೀಡಬೇಕು ಎಂದು ತಿಳಿಸಿದ್ದಾರೆ.

ಶೃಂಗೇರಿ ತಾಲ್ಲೂಕಿನ ಮೆಣಸೆಯ ಗಣೇಶ್ ಅಲಿಯಾಸ್ ಗಣಿ (42), ಮಹಮದ್ ಕಬೀರ್ (36), ವಿನೋದ್‌ಕುಮಾರ್ (44), ಅಬ್ದುಲ್ ಮಜಿದ್(44) ಶಿಕ್ಷೆಗೆ ಗುರಿಯಾದವರು.

ಗಣೇಶ್ ಮಹಮದ್ ಕಬೀರ್ ವಿನೋದ್‌ಕುಮಾರ್ ಅಬ್ದುಲ್ ಮಜಿದ್

ನ್ಯಾಯ ಸಿಕ್ಕಿದೆ. ನನ್ನ ನೋವು ತಪ್ಪಿತಸ್ಥರಿಗೆ ಗೊತ್ತಾಗಬೇಕು. ಸರ್ಕಾರ ನನಗೆ ಒಂದು ಕಾಯಂ ಕೆಲಸ ಕೊಟ್ಟರೆ ಬದುಕಿಗೆ ಅನುಕೂಲವಾಗುತ್ತದೆ

ಸಂತ್ರಸ್ತೆ

ಮೆಣಸೆ ಗ್ರಾಮದಲ್ಲಿ 2015ರ ಏಪ್ರಿಲ್ 18ರಂದು ಪ್ರಕರಣ ನಡೆದಿತ್ತು. ಗಣೇಶ, ತನ್ನನ್ನು ಮದುವೆಯಾಗುವಂತೆ ವಿಚ್ಛೇದಿತ ಮಹಿಳೆಯ ಹಿಂದೆ ಬಿದ್ದಿದ್ದ. ಆತನ ಬೇಡಿಕೆಯನ್ನು ಮಹಿಳೆ ತಿರಸ್ಕರಿಸಿದ್ದರು.

ಶೃಂಗೇರಿಯಲ್ಲಿ ಮುಖ ಎತ್ತಿಕೊಂಡು ತಿರುಗಾಡದಂತೆ ಮಾಡುತ್ತೇನೆ ಎಂದು ಮಹಿಳೆಗೆ ಗಣೇಶ್ ಬೆದರಿಕೆ ಹಾಕಿದ್ದ. ಸ್ನೇಹಿತರ ಜತೆ ಸೇರಿ ಆ್ಯಸಿಡ್ ದಾಳಿ ಸಂಚು ರೂಪಿಸಿದ್ದ.

ಶೃಂಗೇರಿಯಲ್ಲಿ ಸಂತ್ರಸ್ತೆ ಬ್ಯೂಟಿಪಾರ್ಲರ್ ಇಟ್ಟುಕೊಂಡಿದ್ದರು. 2015ರ ಏ.18ರಂದು ಪಾರ್ಲರ್ ಕೆಲಸ ಮುಗಿಸಿಕೊಂಡು ರಾತ್ರಿ ಮನೆಗೆ ಹೊರಟಿದ್ದಾಗ ಬೈಕಿನಲ್ಲಿ ಹಿಂಬಾಲಿಸಿದ್ದ ಇಬ್ಬರು (ಮಜಿದ್, ಕಬೀರ್) ಹೊರನಾಡಿನ ರಸ್ತೆ ಕೇಳುವ ಸೋಗಿನಲ್ಲಿ ಮಾತನಾಡಿಸಿ, ಆ್ಯಸಿಡ್ ಎರಚಿ ಪರಾರಿಯಾಗಿದ್ದರು. ರಾತ್ರಿ 8.45ರ ಹೊತ್ತಿನಲ್ಲಿ ಈ ಘಟನೆ ನಡೆದಿತ್ತು. ಪಾರ್ಲರ್‌ನಿಂದ ಮಹಿಳೆ ಹೊರಟ ಬಗ್ಗೆ ವಿನೋದ್‌ಕುಮಾರ್ ಅವರಿಬ್ಬರಿಗೆ ಮಾಹಿತಿ ನೀಡಿದ್ದ.

ಮಹಿಳೆಯ ಬಲಗಣ್ಣು ಸುಟ್ಟಿತ್ತು. ಎಡಗಣ್ಣಿನ ದೃಷ್ಟಿ ಭಾಗಶಃ ಹಾನಿಯಾಗಿತ್ತು. ಮೈ, ಕೈ, ಕಾಲು ಸುಟ್ಟಿದ್ದವು. ಶೃಂಗೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಇನ್‌ಸ್ಪೆಕ್ಟರ್ ಸುಧೀರ್ ಎಂ.ಹೆಗ್ಡೆ ತನಿಖೆ ನಡೆಸಿ ಕೋರ್ಟ್‌ಗೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎಸ್. ಮಮತಾ ಅವರು ವಾದ ಮಂಡಿಸಿದ್ದರು.

ಅಪರಾಧ ಸುದ್ದಿ

ಶುಲ್ಕ ಕಟ್ಟಿಲ್ಲ: ಎಸ್ಸೆಸ್ಸೆಲ್ಸಿಗೆ ಬಡ್ತಿ ನೀಡಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಲ್ಕ ಕಟ್ಟದ ಕಾರಣಕ್ಕೆ ಮೂಡಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯು ಕೊರಟಗೆರೆಯ ಹನುಮಂತಪುರ ನಿವಾಸಿ, ಪರಿಶಿಷ್ಟ ಸಮುದಾಯಕ್ಕೆ ಸೇರಿದ ಗ್ರೀಷ್ಮಾ ನಾಯಕ್ ಎಂಬ ವಿದ್ಯಾರ್ಥಿನಿಗೆ ಒಂಬತ್ತನೇ ತರಗತಿಯಿಂದ 2020–21ನೇ ಶೈಕ್ಷಣಿಕ ಸಾಲಿನಲ್ಲಿ 10ನೇ ತರಗತಿಗೆ ಬಡ್ತಿ ನೀಡಿಲ್ಲ. ಹೀಗಾಗಿ, ಇದೇ 19 ಮತ್ತು 22ರಂದು ನಡೆಯಲಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುವ ಅವಕಾಶದಿಂದಲೇ ಈಕೆ ವಂಚಿತಳಾಗಿದ್ದಾಳೆ.

ಈ ವಿಷಯ ಗಮನಕ್ಕೆ ಬರುತ್ತಿದ್ದಂತೆ ಪರಿಹಾರ ಕಲ್ಪಿಸಲು ಮುಂದಾದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್, 'ನಾನೇ ಗ್ರೀಷ್ಮಾ ಜತೆ ಮಾತನಾಡಿದ್ದೇನೆ. ಪರಿಹಾರ ಸೂಚಿಸಿದ್ದೇನೆ' ಎಂದು ತಿಳಿಸಿದ್ದಾರೆ. ಆಗಸ್ಟ್ ತಿಂಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವ ಭರವಸೆಯನ್ನು ಸಚಿವರು ನೀಡಿದ್ದಾರೆ ಎಂದೂ ಗೊತ್ತಾಗಿದೆ.

'9ನೇ ತರಗತಿಯಲ್ಲಿ ಶೇ 96ರಷ್ಟು ಅಂಕ ಗಳಿಸಿದ್ದೇನೆ. ಆದರೆ, ಕಳೆದ ವರ್ಷದ ಶಾಲಾ ಶುಲ್ಕ (ವಸತಿ ಮತ್ತು ಊಟದ್ದು) ಬಾಕಿ ಇದ್ದ ಕಾರಣ ನನ್ನನ್ನು ಎಸ್ಸೆಸ್ಸೆಲ್ಸಿ ತರಗತಿಗೆ ಸೇರಿಸಿಕೊಂಡಿಲ್ಲ. ಶುಲ್ಕ ಪಾವತಿಸಲು ಸಮಯ ಕೊಟ್ಟರೆ ಸಾಕು ಪೋಷಕರು ಕಟ್ಟುತ್ತಾರೆ. ಯಾವುದೇ ರಿಯಾಯಿತಿ ಬೇಡ. 10ನೇ ತರಗತಿಯ ಪರೀಕ್ಷೆ ಬರೆಯಲು ದಯಮಾಡಿ ಅವಕಾಶ ಮಾಡಿಕೊಡಿ' ಎಂದು ಸುರೇಶ್‌ಕುಮಾರ್ ಬಳಿ ಗ್ರೀಷ್ಮಾ ಮನವಿ ಮಾಡಿದ್ದಾಳೆ.

ಡಿ. 31ರಂದು ಸುರೇಶ್ ಕುಮಾರ್‌ಗೆ ಮೊದಲ ಇ– ಮೇಲ್ ಮಾಡಿದ್ದ ಗ್ರೀಷ್ಮಾ, 'ಶುಲ್ಕ ಬಾಕಿ ಇರುವ ಕಾರಣ ಶಾಲೆಯಲ್ಲಿ ದಾಖಲಾತಿ ಮಾಡಿಕೊಂಡಿಲ್ಲ. ಸಹಾಯ ಮಾಡಿ' ಎಂದು ಮನವಿ ಮಾಡಿದ್ದಳು.

ಫೆ. 2ರಂದು ಮತ್ತೆ ಇ– ಮೇಲ್ ಮಾಡಿದ್ದ ಆಕೆ, 'ಪೂರ್ತಿ ಶುಲ್ಕ ಕಟ್ಟಲು ಹೇಳುತ್ತಿದ್ದಾರೆ. ದಯಮಾಡಿ ನನಗೆ ಸಹಾಯ ಮಾಡಿ, ಕಷ್ಟದಲ್ಲಿದ್ದೇವೆ. ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿ' ಎಂದೂ ಮನವಿ ಮಾಡಿದ್ದಳು.

ಜಿಯೊ ಟವರ್ ₹2.33 ಲಕ್ಷ ವಂಚನೆ

ಬೆಂಗಳೂರು: ರಿಲಯನ್ಸ್ ಜಿಯೊ ಮೊಬೈಲ್ ಸೇವಾ ಕಂಪನಿ ಟವರ್ ಅಳವಡಿಕೆ ನೆಪದಲ್ಲಿ ನಗರದ ನಿವಾಸಿಯೊಬ್ಬರಿಂದ ₹2.33ಲಕ್ಷ ಪಡೆದು ವಂಚಿಸಲಾಗಿದೆ. ಈ ಸಂಬಂಧ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬನಶಂಕರಿ 6ನೇ ಹಂತದ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಂಪನಿ ಪ್ರತಿನಿಧಿಗಳ ಸೋಗಿನಲ್ಲಿ ಮೇ 11ರಂದು ದೂರುದಾರರ ಮೊಬೈಲ್‌ಗೆ ಕರೆ ಮಾಡಿದ್ದ ಆರೋಪಿ, 'ನಿಮ್ಮ ಜಾಗದಲ್ಲಿ ಜಿಯೊ ಟವರ್ ಅಳವಡಿಸುತ್ತೇವೆ. ಬಾಡಿಗೆ ರೂಪದಲ್ಲಿ ಲಕ್ಷಾಂತರ ರೂಪಾಯಿ ನೀಡುತ್ತೇವೆ' ಎಂದಿದ್ದ. ಅದನ್ನ ನಂಬಿ, ಜಾಗಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಂಚಿಕೊಂಡಿದ್ದರು.'

'ಟವರ್ ಅಳವಡಿಕೆ ಅರ್ಜಿ ಭರ್ತಿ ಮಾಡಿ ಶುಲ್ಕ ಪಾವತಿಸಬೇಕೆಂದು ಹೇಳಿದ್ದ ಆರೋಪಿ ತನ್ನ ಖಾತೆಗೆ ₹ 2.33 ಲಕ್ಷ ಹಾಕಿದ್ದರು. ನಂತರ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

ಅಧಿಕಾರಿಗಳ ಮೇಲೆ ಹಲ್ಲೆ: ಅಂಗಡಿ ಮಾಲೀಕ ವಶಕ್ಕೆ

ಬೆಂಗಳೂರು: ಮಾಗಡಿ ರಸ್ತೆಯಲ್ಲಿರುವ ಅಂಗಡಿಯೊಂದರಲ್ಲಿ ತೂಕ ಪರಿಶೀಲನೆಗೆ ಹೋಗಿದ್ದ ಅಧಿಕಾರಿಗಳ ಮೇಲೆ ಹಲ್ಲೆ ನಡೆದಿದ್ದ ಅಂಗಡಿ ಮಾಲೀಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಶುಭ ವಿಜಯ್ ಸ್ಟೀಲ್ ಕಾರ್ಪೋರೇಷನ್' ಅಂಗಡಿಯಲ್ಲಿ ತೂಕ ಮಾಡುವ ವೇಳೆ ವ್ಯತ್ಯಾಸ ಕಂಡುಬರುತ್ತಿರುವುದಾಗಿ ಸಾರ್ವಜನಿಕರು ದೂರಿದ್ದರು. ಅದರನ್ವಯ ತೂಕ ಹಾಗೂ ಮಾಪನ ಇಲಾಖೆಯ ನಿರೀಕ್ಷಕಿ ನವಿತಾ ಹಾಗೂ ಸಹಾಯಕ ನಿಯಂತ್ರಕ ರವೀಶ್ ಗುರುವಾರ ಸ್ಥಳಕ್ಕೆ ಹೋಗಿ ಪರಿಶೀಲನೆ ನಡೆಸಿದ್ದರು. ತೂಕದಲ್ಲಿ ವ್ಯತ್ಯಾಸ ಪತ್ತೆ ಮಾಡಿದ್ದರು. ಅಷ್ಟಕ್ಕೆ ಕೋಪಗೊಂಡ ಮಾಲೀಕ, ಅಧಿಕಾರಿಗಳ ಮೇಲೆ ಹಲ್ಲೆ ಮಾಡಿರುವುದಾಗಿ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರ್‌ಟಿಐ ಕಾರ್ಯಕರ್ತ ಶ್ರೀಧರ್ ಹತ್ಯೆ

ಹರಪನಹಳ್ಳಿ: ಪಟ್ಟಣದ ಆರ್‌ಟಿಐ ಕಾರ್ಯಕರ್ತ ಟಿ.ಶ್ರೀಧರ್ (38) ಅವರನ್ನು ಗುರುವಾರ ಸಂಜೆ ಮಾರಕಾಸ್ತ್ರಗಳೊಂದಿಗೆ ಬಂದ ದುಷ್ಕರ್ಮಿಗಳ ಗುಂಪು ಹತ್ಯೆ ಮಾಡಿ, ಪರಾರಿಯಾಗಿದೆ.

ಎಡಿಬಿ ಕಾಲೇಜಿನ ಆವರಣದ ಸೈಕಲ್ ಪಾರ್ಕಿಂಗ್ ಸ್ಥಳದಲ್ಲಿ ತಾತ್ಕಾಲಿಕವಾಗಿ ತೆರೆದಿದ್ದ ಕ್ಯಾಂಟೀನ್ ಹಿಂಭಾಗದಲ್ಲಿ ಶ್ರೀಧರ್ ಕುರ್ಚಿಯ ಮೇಲೆ ಕುಳಿತಿದ್ದಾಗ ಸಂಜೆ ವೇಳೆಯಲ್ಲಿ ಮಾರಕಾಸ್ತ್ರಗಳೊಂದಿಗೆ ಬಂದ ನಾಲ್ವರು ದುಷ್ಕರ್ಮಿಗಳು, ತಲೆ, ಕುತ್ತಿಗೆ ಭಾಗಕ್ಕೆ ಬಲವಾಗಿ ಹೊಡೆದು ಪರಾರಿಯಾದರು.

ಕ್ಯಾಂಟೀನ್ ಒಳಗಡೆ ಟೀ ಮಾಡುತ್ತಿದ್ದವ ತಕ್ಷಣವೇ ಠಾಣೆಗೆ ಮಾಹಿತಿ ನೀಡಿದರು. ಬಳಿಕ ಸ್ಥಳಕ್ಕೆ ಬಂದ ಪೊಲೀಸರು ಶ್ರೀಧರ್ ಅವರನ್ನು ಆಸ್ಪತ್ರೆಗೆ ಕರೆತರುವಾಗ ಮಾರ್ಗ ಮಧ್ಯೆಯೇ ಮೃತಪಟ್ಟರು.

ಶ್ರೀಧರ್

ಶ್ರೀಧರ್ ಅವರು ಹಲವು ವರ್ಷಗಳಿಂದ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಪಡೆದು, ಗಣಿಗಾರಿಕೆ, ಅತಿಕ್ರಮಣ, ಸರ್ಕಾರಿ ಭೂಮಿ ಒತ್ತುವರಿ, ಅನಧಿಕೃತ ಕಲ್ಲು ಗಣಿಗಾರಿಕೆ ಹೀಗೆ ಹಲವು ವಿಷಯಗಳ ಬಗ್ಗೆ ದೂರು ದಾಖಲಿಸಿದ್ದರು. ಕೆಲ ಪ್ರಕರಣಗಳು ಇತ್ಯರ್ಥಗೊಂಡಿದ್ದರೆ, ಇನ್ನೂ ಕೆಲ ಪ್ರಕರಣಗಳು ತನಿಖಾ ಹಂತದಲ್ಲಿದ್ದವು. ಮಾಹಿತಿ ಹಕ್ಕು ಕಾರ್ಯಕರ್ತನ ಹತ್ಯೆ ಪಟ್ಟಣದ ನಾಗರಿಕರಲ್ಲಿ ಆತಂಕ ಮೂಡಿಸಿದೆ.

ಆರ್‌ಟಿಐ ಕಾರ್ಯಕರ್ತನ ಮೇಲೆ ಹಲ್ಲೆ

ರಾಮನಗರ: ಬೆಂಗಳೂರಿನ ಹೊರವಲಯದಲ್ಲಿರುವ ತಾವರೆಕೆರೆಯಲ್ಲಿ ಮಾಹಿತಿ ಹಕ್ಕು ಕಾರ್ಯಕರ್ತ ವೆಂಕಟೇಶ್ (43) ಎಂಬುವರ ಮೇಲೆ ದುಷ್ಕರ್ಮಿಗಳು ಗುರುವಾರ ಹಲ್ಲೆ ನಡೆಸಿದ್ದಾರೆ.

ವೆಂಕಟೇಶ್

ವೆಂಕಟೇಶ್ ತಾವರೆಕೆರೆಯಲ್ಲಿನ ಫಾರಂ ಹೌಸ್‌ನಲ್ಲಿದ್ದ ಸಂದರ್ಭ ನಾಲ್ಕೈದು ಜನರ ಗುಂಪು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದೆ. ಅವರ ಕೈ ಹಾಗೂ ಕಾಲಿಗೆ ಗಾಯವಾಗಿದ್ದು, ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ವೆಂಕಟೇಶ್ ಅನೇಕ ವರ್ಷದಿಂದ ಮಾಹಿತಿ ಹಕ್ಕು ಕಾರ್ಯಕರ್ತರಾಗಿದ್ದರು. ಸಾಕಷ್ಟು ವಿರೋಧ ಬೆಳೆಸಿಕೊಂಡಿದ್ದು, ಈ ದ್ವೇಷದಿಂದ ಹಲ್ಲೆ ನಡೆಸಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ತನಿಖೆಗೆ ತಂಡ: ಆರೋಪಿಗಳ ಪತ್ತೆಗೆ ತಾವರೆಕೆರೆ, ಮಾಗಡಿ, ಕುದೂರು ಠಾಣೆ ಸಬ್ ಇನ್‌ಸ್ಪೆಕ್ಟರ್‌ಗಳ ನೇತೃತ್ವದಲ್ಲಿ ಮೂರು ತನಿಖಾ ತಂಡಗಳನ್ನು ರಚಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಸಂವಾದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿಕೆ

ಇಂಡೀಕರಣ ರದ್ದತಿಗೆ ಸಂಸತ್‌ನಲ್ಲಿ ಧ್ವನಿ

ಪ್ರಜಾವಾಣಿ ವಾರ್ತೆ

ಶಿಕಾರಿಪುರ: ಇಂಡೀಕರಣ ಮೂಲಕ ಅರಣ್ಯ ಇಲಾಖೆ ಪಡೆದ ಕಂದಾಯ ಭೂಮಿಯನ್ನು ಕಂದಾಯ ಇಲಾಖೆಗೆ ಹಸ್ತಾಂತರಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕ್ರಮ ಕೈಗೊಳ್ಳಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದರು.

ತಾಲ್ಲೂಕಿನ ಬೇಗೂರು ಮರಡಿ ತಾಂಡಾದಲ್ಲಿ ಬಂಜಾರ ಸಮುದಾಯದ ಜನರೊಂದಿಗೆ ಗುರುವಾರ ನಡೆಸಿದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೇಂದ್ರ ಹಾಗೂ ರಾಜ್ಯದಲ್ಲಿ ನಿಮ್ಮದೇ ಸರ್ಕಾರಗಳಿವೆ. ಸಂಸತ್ತಿನಲ್ಲಿ ಅರಣ್ಯ ಇಂಡೀಕರಣ ಕಾನೂನಿಗೆ ತಿದ್ದುಪಡಿ ತರುವ ಮೂಲಕ ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ದೊರಕಿಸಬೇಕು. ಈ ಕುರಿತು ಕಾಂಗ್ರೆಸ್ ಸಹ ಸಂಸತ್‌ನಲ್ಲಿ ಧ್ವನಿ ಎತ್ತಲಿದೆ. ಸಹೋದರ ಡಿ.ಕೆ.ಸುರೇಶ್ ಮುಂದಿನ ಅಧಿವೇಶನದಲ್ಲಿ ವಿಷಯ ಪ್ರಸ್ತಾಪಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'2010ರಲ್ಲಿ ಸರ್ಕಾರ ಅರಣ್ಯ ಇಂಡೀಕರಣ ಮಾಡಿದ ಪರಿಣಾಮ ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ದೊರೆಯುತ್ತಿಲ್ಲ. ಈ ಕಾನೂನು ತಿದ್ದುಪಡಿ ಮಾಡಬೇಕು. ಕಂದಾಯ ಇಲಾಖೆಗೆ ಭೂಮಿ ವರ್ಗಾವಣೆಯಾದರೆ ಶಿಕಾರಿಪುರ ತಾಲ್ಲೂಕಿನ 15 ಸಾವಿರ ಕುಟುಂಬಗಳಿಗೆ ಭೂಮಿ ಹಕ್ಕುಪತ್ರ ದೊರೆಯಲಿದೆ' ಎಂದು ಮಾರವಳ್ಳಿ ಉಮೇಶ್ ಸೇರಿದಂತೆ ಹಲವರು ಮನವಿ ಮಾಡಿದರು.

'ಸಮಾಜವಾದಿ ಕ್ಯೂಬಾದ ವಿಷಯದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಕುತಂತ್ರ ನಡೆಸುತ್ತಿದ್ದಾರೆ' ಎಂದು ಆರೋಪಿಸಿ ಸೋಷಿಯಲಿಸ್ಟ್ ಸೆಂಟರ್ ಆಫ್ ಇಂಡಿಯಾದ (ಕಮ್ಯುನಿಸ್ಟ್) ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ಸಂಘಟನೆಯ₹ರಾಜ್ಯ ಕಾರ್ಯದರ್ಶಿ ಕೆ.ಉಮಾ ಇದ್ದರು.

ಕಲ್ಯಾಣರಾಮ ದೇವಸ್ಥಾನ ಶಿಲಾವಿಗ್ರಹ ಪ್ರತಿಷ್ಠಾಪನೆ ಇಂದು

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ರಾಮಚಂದ್ರಪುರ ಆಟದ ಮೈದಾನದ ಬಳಿ ಜೀರ್ಣೋದ್ಧಾರಗೊಳಿಸಿರುವ ಕಲ್ಯಾಣರಾಮ ದೇವಸ್ಥಾನದಲ್ಲಿ ಶ್ರೀರಾಮಚಂದ್ರ, ಸೀತಾ, ಲಕ್ಷ್ಮಣಸಮೇತ ಆಂಜನೇಯಸ್ವಾಮಿಯ ನೂತನ ಶಿಲಾವಿಗ್ರಹ ಪ್ರತಿಷ್ಠಾಪನಾ ಸಮಾರಂಭ ಶುಕ್ರವಾರ ನಡೆಯಲಿದೆ.

ಶಾಸಕ ಕೃಷ್ಣಬೈರೇಗೌಡ ಸೇರಿದಂತೆ ವಿವಿಧ ಮಠಗಳ ಸ್ವಾಮೀಜಿಗಳು ಹಾಗೂ ಇತರೆ ಗಣ್ಯರು ಭಾಗವಹಿಸಲಿದ್ದಾರೆ. ಸಮಾರಂಭದ ಅಂಗವಾಗಿ ವಿವಿಧ ಪೂಜಾಕೈಂಕರ್ಯಗಳು ಹಾಗೂ ಹೋಮ-ಹವನ ಕಾರ್ಯಗಳು ನೆರವೇರಲಿವೆ ಎಂದು ಕಲ್ಯಾಣರಾಮ ಮತ್ತು ಓಂಶಕ್ತಿ ದೇವಸ್ಥಾನ ಸೇವಾಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಮಾಹಿತಿ ಅಪೂರ್ಣ: ಉಮಾಪತಿಗೆ ನೋಟಿಸ್ ಸಾಧ್ಯತೆ

ನಟ ದರ್ಶನ್ ವಂಚಿಸಲು ಯತ್ನಿಸಿದ ಪ್ರಕರಣ; ಠಾಣೆಗೆ ಬಾರದ ನಿರ್ಮಾಪಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ₹ 25 ಕೋಟಿ ಸಾಲದ ಹೆಸರಿನಲ್ಲಿ ನಟ ದರ್ಶನ್ ಅವರನ್ನು ವಂಚಿಸಲು ಯತ್ನಿಸಿದ ಪ್ರಕರಣದಲ್ಲಿ ನಿರ್ಮಾಪಕ ಉಮಾಪತಿ ಅವರು ಜಯನಗರ ಪೊಲೀಸರಿಗೆ ಅಪೂರ್ಣ ಮಾಹಿತಿ ನೀಡಿದ್ದರೆಂಬುದು ಗೊತ್ತಾಗಿದೆ. ಈ ಬಗ್ಗೆ ಪೊಲೀಸರು, ಉಮಾಪತಿ ಅವರಿಗೆ ಸದ್ಯದಲ್ಲೇ ನೋಟಿಸ್ ನೀಡುವ ಸಾಧ್ಯತೆ ಇದೆ.

'ಅರುಣಕುಮಾರಿ ಎಂಬುವರು ಬ್ಯಾಂಕ್ ನೌಕರರೆಂದು ಹೇಳಿಕೊಂಡು ನನ್ನ ಬಳಿ ಬಂದು ಸುಳ್ಳು ಮಾಹಿತಿ ನೀಡುತ್ತಿದ್ದಾರೆ ಎಂಬ ಸಂಶಯವಿದೆ. ಅವರನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಲು ವಿನಂತಿಸುತ್ತೇನೆ' ಎಂದು ಉಮಾಪತಿ ಅವರು ಜೂನ್ 17ರಂದು ಜಯನಗರ ಇನ್‌ಸ್ಪೆಕ್ಟರ್ ಅವರಿಗೆ ಅರ್ಜಿಯೊಂದನ್ನು ನೀಡಿದ್ದರು.

ಪರಿಶೀಲನೆ ನಡೆಸಿದ್ದ ಇನ್‌ಸ್ಪೆಕ್ಟರ್, 'ಅರ್ಜಿಯಲ್ಲಿ ಅಪೂರ್ಣ ಮಾಹಿತಿ ಇದೆ. ಗೊಂದಲಗಳೂ ಸಾಕಷ್ಟಿವೆ. ಜೊತೆಗೆ, ಯಾವ ರೀತಿ ಅಪರಾಧವಾಗಿದೆ ಎಂಬ ಸ್ಪಷ್ಟ ವಿವರವೂ ಇರಲಿಲ್ಲ. ಸಂಶಯಗಳೇ ಹೆಚ್ಚಿವೆ. ಇದೊಂದು ಅಭಿಪ್ರಾಯದಂತಿರುವ ಅರ್ಜಿಯೆಂಬುದು ಮೇಲ್ನೋಟಕ್ಕೆ ಕಾಣುತ್ತಿದೆ. ಹೀಗಾಗಿ, ಖುದ್ದು ಠಾಣೆಗೆ ಬಂದು ವಿವರವಾದ ದೂರು ಕೊಡಿ. ಕಾನೂನು ಕ್ರಮ ಕೈಗೊಳ್ಳುತ್ತೇವೆ' ಎಂದು ತಿಳಿಸಿದ್ದರು.

ಅದಕ್ಕೆ ಮೌಖಿಕವಾಗಿ ಉತ್ತರಿಸಿದ್ದ ಉಮಾಪತಿ, 'ಮೈಸೂರಿನಲ್ಲಿರುವ ಆಸ್ತಿಗೆ ಸಂಬಂಧಪಟ್ಟ ವ್ಯಾಜ್ಯ ಇದಾಗಿದೆ. ಇದರಲ್ಲಿ ಹಲವರ ಹೆಸರು ಇದೆ. ಅವರೆಲ್ಲರ ಜೊತೆ ಚರ್ಚಿಸಿ, ಮೈಸೂರು ಪೊಲೀಸ್ ಠಾಣೆಗೆ ದೂರು ನೀಡಲಾಗುವುದು' ಎಂದು ಸುಮ್ಮನಾಗಿದ್ದರು.

ಠಾಣೆಗೆ ಬಾರದ ನಿರ್ಮಾಪಕ: ಮೈಸೂರಿನಲ್ಲಿ ದೂರು ದಾಖಲಾಗುತ್ತಿದ್ದಂತೆ ಬೆಂಗಳೂರಿನ ಜಯನಗರ ಪೊಲೀಸರ ತನಿಖೆ ಬಗ್ಗೆ ಮಾತನಾಡಿದ್ದ ಉಮಾಪತಿ, 'ಜಯನಗರ ಪೊಲೀಸರಿಗೆ ದೂರು ಕೊಟ್ಟಿದ್ದೇನೆ. ತನಿಖೆ ಬಗ್ಗೆ ಅವರೇ ಹೇಳಬೇಕು. ಮೈಸೂರು ದೂರಿನ ಬಗ್ಗೆ ಕೇಳುವ ಮಾಧ್ಯಮದವರು, ಜಯನಗರ ಠಾಣೆಗೆ ಕೊಟ್ಟ ದೂರಿನ ತನಿಖೆ ಬಗ್ಗೆ ಪೊಲೀಸರನ್ನು ಏಕೆ ಕೇಳುತ್ತಿಲ್ಲ' ಎಂದು ಪ್ರಶ್ನಿಸಿದ್ದರು.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿರುವ ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ, 'ಉಮಾಪತಿ ಅರ್ಜಿಯಲ್ಲಿ ಅಪೂರ್ಣ ಮಾಹಿತಿ ಇತ್ತು. ಠಾಣೆಗೆ ಬಂದು ವಿವರವಾದ ದೂರು ನೀಡುವಂತೆ ಅವರಿಗೆ ಹೇಳಲಾಗಿತ್ತು. ಆದರೆ, ಅವರು ಇದುವರೆಗೂ ಠಾಣೆಗೆ ಬಂದಿಲ್ಲ. ಅದು ಅವರ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಈಗಲೂ ಅವರು ಠಾಣೆಗೆ ಬಂದು ದೂರು ನೀಡಿದರೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದರು.

'ದೂರು ನೀಡಿದರೆ ಮಾತ್ರ ಕ್ರಮ ಕೈಗೊಳ್ಳಲು ಸಾಧ್ಯ. ಅರ್ಜಿ ಪರಿಶೀಲನೆ ನಡೆಸಿದ್ದ ಇನ್‌ಸ್ಪೆಕ್ಟರ್ ಅವರೇ ಪ್ರಕರಣದಲ್ಲಿ ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ' ಎಂದೂ ಅವರು ಹೇಳಿದರು.

ಜಕ್ಕೂರು ಏರೋಡ್ರಮ್ ಸುತ್ತಮುತ್ತ ಎತ್ತರದ ಕಟ್ಟಡಗಳು

ನಿಯಮ ಮೀರಿದ ಕಟ್ಟಡಗಳ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಕ್ಕೂರು ಏರೋಡ್ರಮ್‌ನ ಐದು ಕಿ.ಮೀ ವ್ಯಾಪ್ತಿಯಲ್ಲಿ ನಿಯಮ ಮೀರಿ 45 ಮೀಟರ್‌ಗಿಂತಲೂ ಎತ್ತರ ನಿರ್ಮಿಸಿರುವ ಕಟ್ಟಡಗಳನ್ನು ತೆರವುಗೊಳಿಸಲು ಬಿಬಿಎಂಪಿ ಅಧಿಕಾರಿಗಳಿಗೆ ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ ಸೂಚನೆ ನೀಡಿದರು.

ವಿಕಾಸಸೌಧದಲ್ಲಿ ಗುರುವಾರ ನಡೆದ ಸಭೆಯಲ್ಲಿ ಈ ನಿರ್ದೇಶನ ನೀಡಿರುವ ಅವರು, ಡಿಜಿಸಿಎ ನಿಯಮ ಮೀರಿ, ಪರವಾನಗಿ ಇಲ್ಲದೇ ಕಟ್ಟಡಗಳನ್ನು ನಿರ್ಮಿಸಿದ್ದಾರೆ ಎಂದರು.

ಈ ಕುರಿತು ಸಮೀಕ್ಷೆ ನಡೆಸಿದ್ದು, 45 ಮೀಟರ್‌ಗಿಂತ ಹೆಚ್ಚು ಎತ್ತರದ 15 ಕಟ್ಟಡಗಳು ಇರುವುದು ಬೆಳಕಿಗೆ ಬಂದಿದೆ. ಅವುಗಳನ್ನು ತೆರವುಗೊಳಿಸಲು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು ಎಂದರು.

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ನಡೆಸಿರುವ ಸಮೀಕ್ಷೆಯಲ್ಲಿ 11 ಕಟ್ಟಡಗಳು ಮತ್ತು ವೈಮಾನಿಕ ತರಬೇತಿ ಶಾಲೆಯಿಂದ ನಡೆಸಿದ ಸಮೀಕ್ಷೆಯಲ್ಲಿ 4 ಕಟ್ಟಡಗಳು ನಿಯಮ ಉಲ್ಲಂಘಿಸಿದ್ದು ಪತ್ತೆಯಾಗಿವೆ. ಕೆಲವರು ಸಮೀಕ್ಷೆ ನಡೆಸಲು ಅಸಹಕಾರ ತೋರಿಸಿದ್ದಾರೆ. ಹೀಗಾಗಿ ಮತ್ತೊಮ್ಮೆ ಸಮೀಕ್ಷೆ ನಡೆಸಲು ಸೂಚನೆ ನೀಡಲಾಗಿದೆ ಎಂದರು.

ಏರೋಡ್ರಮ್‌ನಲ್ಲಿ ಲ್ಯಾಂಡಿಂಗ್ ಮತ್ತು ಪಾರ್ಕಿಂಗ್ ಬಾಡಿಗೆ ಬಾಕಿ ನೀಡದ ಕಂಪನಿಗಳ ಆಸ್ತಿಯನ್ನು ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.

ಈ ಎಲ್ಲ ಕಂಪನಿಗಳಿಂದ ಸುಮಾರು ₹5 ಕೋಟಿ ಬಾಡಿಗೆ ಹಣ ಬಾಕಿ ಇದೆ. ಬಾಕಿ ಹಣ ಪಾವತಿಸಲು ನೀಡಿರುವ ಕೊನೆಯ ನೋಟಿಸ್ ಅವಧಿಯೂ ಮುಗಿದಿದೆ. ಕೆಲವು ಕಂಪನಿಗಳು ಸ್ವಲ್ಪ ಪ್ರಮಾಣದಲ್ಲಿ ಬಾಕಿ ಪಾವತಿಸಿದ್ದಾರೆ. ಎಲ್ಲ ಕಂಪನಿಗಳು ಹಣ ಪಾವತಿಸಬೇಕು. ಅದಕ್ಕಾಗಿ ಸಂಸ್ಥೆಗಳ ಮುಖ್ಯಸ್ಥರ ಜತೆ ಮಾತುಕತೆ ನಡೆಸುವಂತೆಯೂ ಅಧಿಕಾರಿಗಳಿಗೆ ಸೂಚಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Announcements

ROSHNI WEDS KAILASH

Bangalore's most well thought out wedding:
Grand signing ceremony at exclusive office during good time of good day.
Resplendent meal with 25,000 dreamy delicacies (veg, non-veg, vegan & non-existent).
Those who are not accustomed to intangible cuisine, especially spice, must pay attention to gas-tricks.
Those indulging must mandatorily wear masks.
All and sundry invited. Strictly no presence, please maintain minimum 100 metres distance.
Well-wishers may take selfie while thinking of the couple.
Virtual blessings only.
To be followed by Bangalore's largest party. Everybody turn on Radio Matrimony FM at good time on good day, dance and shower blessings at own home.
Bus leaves Kalasipalayam at 6 am.
- Family, friends and well-wishers

Change of Name

WE, ANKUR Razdan(Father) & Sananda Roy(Mother) presently residing at Cambridge Layout, Halasuru, Bangalore-560008 have changed our minor son's name from PRIYANSH RAZDAN to SHAURYA RAZDAN vide affidavit dated 15.07.2021 sworn before notary N.Kanchivaradaraju, Bangalore-72.

JC674170W NB/SUB Phool Chandra 2ATC my son name service record GAURAV instead of GOURAV notary Meer Hassan, Bangalore.

I, JAVAR residing at- No.55/4,1st A Main-Road, Kottigepalya, Near-Ganesh Temple, Vishwaneedam Post, Bangalore-560091 have- changed my-Name-to JAVARAIAH vide-Affidavit dated.15-07-2021 Sworn- Before-Notary H.R.Karunakara,Bangalore

I, DEVIKA. B.N. W/o. Yadunandana N. R/a#1, M.B.Nivas, 1st Floor, 1st Cross, Subramanyam Lane, Akkipet, Bangalore- 560053 Have Changed My Name to DEVIKA Vide Affidavit Dated: 29.06.2021 Before Notary R.Basavaraja, Bengaluru-94.

I, NARAYAN MANU NAIK, S/o. Manu, R/a#250, Abhihitlu, Bhatkal, Belke, Uttara Kannada, Karnataka- 581320 Have Changed My Name to ISHWAR MANI NAIK Vide Affidavit Dated: 15.07.2021 Before Notary A.Manjula, Bengaluru-22.

Lost

LOST DOCUMENTS

We **INTERNATIONAL FIBREGLASS PRODUCTS PVT LTD,** have lost 1 set of Original Lease cum Agreement No. 5360 executed on Dtd : 27-04-1995 by **KARNATAKA INDUSTRIAL AREAS DEVELOPMENT BOARD,** Race Course Road, Bangalore in respect of 118-B, Bommasandra Industrial Area, Anekal Taluk, Bangalore-560099.
If anybody finds the above docs please send it to **INTERNATIONAL FIBREGLASS PRODUCTS PVT. LTD,** 118-B, Bommasandra Industrial Area, Anekal Taluk, Bangalore-560099. **Call : 9844135717**

RENTAL PROPERTIES

Accommodation Available

Commercial

NEWLY CONSTRUCTED factory shed 15,000 sq.ft. Celler Ground, 1st floor , Power 132 HP with Heavy Duty Lift. Located at Magadi road near embassy school CONTACT:- linksgroup@hotmail.com Vinod 8496961123, 23322297, 23424368

FOR RENT- 9000 sqft Commercial/Industrial building @ RAJAJINAGAR INDUSTRIAL-TOWN (West-of-Chord Road,Service Road). Contact-9886698461

Accommodation Wanted

Industrial And Factory

REQUIRED FOR Rent- Industrial Shed (3500 SqFt) in KIADB Phase 2, 3 or 4 in Malur- 9980646588

REAL ESTATE SELLING

Agricultural Land

Yelahanka

EAST FACING 90×120 12-Guntas AGRICULTURAL LAND 15 lakhs* clear Documents. Nelamangala/ Rajanukunte/ Doddaballapura- 9741228396

Flat

Malleshwaram

SALE 3BHK apartment 1750sft Renaissance Park-3, Malleshwaram behind Orion Mall. 2.1Crores negotiable. 9342139450

Padmanabha Nagar

3 BHK sf Apartment For Sale/Rent at Brigade Residency Padmanabhanagar whatsapp 9844125826.

Sites

Banashankari

BSK 6TH Stage, 6th Block, 30x40 (west), Excellent location, near 100 feet road, Call- 9845026461

Hebbal

AVAILABLE/WANTED BDA Plots Arkavathy Layout, R.T.Nagar, Thanisandra, Hebbal, Jakkur, Yelahanka, HBR, Immediate settlement. "SPACELINKS" 9845129934.

Lingarajapuram

SITE FOR SALE KSFC Layout Corner Site East Facing A-KHATHA No.58 Lingarajapura (Total Sqft Area-2860) Contact 9986258271

EDUCATION SPECIAL

We are coming out with special offer for Admission Notice, Education Success Congratulation Ads

DH DECCAN HERALD Classifieds More value, more impact

For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

WEEKEND CORNER

ಕಾಂಚೀಪುರಂ
ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ವರಮಹಾಲಕ್ಷ್ಮೀ
ಹಬ್ಬದ ಮಾರಾಟ
ಸ್ನೇಹಾ ಸಭಾ ಭವನ
ನಂ. ಜಿ2, 2ನೇ ಕ್ರಾಸ್,
ಬಿ.ಎಂ.ಟಿ.ಸಿ. ಬಸ್ ನಿಲ್ದಾಣ ಹಿಂದೆ,
ಜೀವನ್ ಭೀಮ ನಗರ, ಬೆಂಗಳೂರು–560 075.
ಮೊ. : 7904413982
ದಿನಾಂಕ: 14,15,16,17,18,19 & 20th ಜುಲೈ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ – ಹಿಂತಿರಿಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
ಒಂದು ಬಾರಿಗೆ 50 ಜನರಿಗೆ ಮಾತ್ರ ಪ್ರವೇಶ
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ

RERA Registered Project: PRM/KA/RERA/1251/309/PR/191025/002967
READY FOR INTERIOR'S
SAI SHAKTHI Shreya blessed life
BBMP APPROVED
off MAGADI ROAD Behind Andhra Bank, Andrahalli Main Road, that's reachable to everything...
2/3 BHK Apartments Starting 42 Lacs* Onwards
*T&C apply
Approved by leading Financial Institutions: SBI Canara Bank HDFC
ಸಾಯಿ ಶಕ್ತಿ ಡೆವಲಪರ್ಸ್ SAI SHAKTHI Developers Simple . Honest . Different
Dr. V. Subba Reddy/Kokila 99455 39673

EDUCATION CORNER

ಸಿಲಿಕಾನ್ ಸಿಟಿ ಪಬ್ಲಿಕ್ ಸ್ಕೂಲ್
#3/1, ಹೆಚ್–ಕಾಲೋನಿ, 1ನೇ ಹಂತ,
ಇಂದಿರಾನಗರ, ಬೆಂಗಳೂರು–38
(ಸಲ್ ಸಬೀಲ್ ಎಜುಕೇಷನಲ್ ಟ್ರಸ್ಟ್– ರಾಜ್ಯ ಪಠ್ಯ ಕ್ರಮ)
ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ.
"ಉತ್ತಮ ಶಿಕ್ಷಣ ಪ್ರತಿಯೊಂದು ಮಗುವಿನ ಹಕ್ಕು." ಎಂಬ ಘೋಷವಾಕ್ಯದೊಂದಿಗೆ 2021–22ನೇ ಶೈಕ್ಷಣಿಕ ಸಾಲಿಗೆ ನಿಮ್ಮ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ" ಈ 'ಸುವರ್ಣಾವಕಾಶ'ವನ್ನು ಎಲ್ಲಾ ಪಾಲಕರು ಹಾಗೂ ಪೋಷಕರು ಪಡೆದುಕೊಳ್ಳಿ.
ಕೊರೋನ (CORONA) ಎಂಬ ಈ ಸಂದಿಗ್ದ ಪರಿಸ್ಥಿತಿಯಲ್ಲಿ ನಮ್ಮ ಶಾಲಾ ಆಡಳಿತ ಮಂಡಳಿಯು ಅತಿ ಕಡಿಮೆ ಶುಲ್ಕದೊಂದಿಗೆ 2021–22ನೇ ಶೈಕ್ಷಣಿಕ ಸಾಲಿನ ನರ್ಸರಿಯಿಂದ 10ನೇ ತರಗತಿವರೆಗೆ (Nursery to 10th Standard) ನಿಮ್ಮ ಮಕ್ಕಳನ್ನು ದಾಖಲಿಸಲು ಅವಕಾಶ ಕಲ್ಪಿಸಿದೆ.
*ಈ ಸುವರ್ಣಾವಕಾಶ ನಿಮ್ಮ ಮಕ್ಕಳಿಗೆ ನೀಡಿರಿ.
"ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು"
ಉತ್ತಮ ಶೈಕ್ಷಣಿಕ, ಸರ್ವತೋಮುಖ ಅಭಿವೃದ್ದಿಗೆ"
ಬನ್ನಿ ನಮ್ಮೊಂದಿಗೆ ಸಹಕರಿಸಿ.
ಕೊನೆಯ ಅವಕಾಶ ಜುಲೈ 31ರವರೆಗೆ (31/07/2021) ಮಾತ್ರ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
080–25219961 | 9845615398
ಪ್ರವೇಶ ಆರಂಭ: 2021–22

JOB OPPORTUNITIES

Teachers/ Professors

SURYODAYA EDUCATIONAL_TRUST, Thirupalya Bommasandra Bangalore-99 needs five years teaching experience candidates (state Board/ICSE) Principal with M.Com for PU and Degree colleges & subject Teachers for social science, English,PT and Computer for High school. Immediately contact with resume. suryodaya.educational.trust @gmail.com 7795137535, 9632081875, 7975796544

'WANTED QUALIFIED Lecturers in Mathematics, Chemistry, Hindi and a System Administrator. Apply within one week to the Director, St. Joseph's Indian Composite PU College, 23, Vittal Mallya Road, Bangalore-560001'.

Marketing & Sales

WANTED MARKETING Executives For Private Limited Company Bangalore with Good Communication Skill fluent In English, Kannada, Hindi Contact: 9108458798/ 23384085

Drivers

WANTED driver husband and wife Cook for a family of 4 at Bangalore Good salary Accommodation and food. Call 9741900909

BUSINESS

Business Offers

General

WANTEDAPPARELS Jacket Factory upto 100Machines preferably Peenya Blore, Budget 50lakh to 100lakh, Whatsapp- 6362844475, Contact- knerajeev@gmail.com

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಕೊಡಗು ಜಿಲ್ಲೆಯ ಹಾರಂಗಿ ಜಲಾಶಯ ಬಹುತೇಕ ಭರ್ತಿಯಾಗಿದ್ದು, ನಾಲ್ಕು ಕ್ರಸ್ಟ್ ಗೇಟ್‌ಗಳ ಮೂಲಕ ನದಿಗೆ ನೀರು ಹರಿಸಲಾಗುತ್ತಿದೆ

ಎತ್ತಿನಹಳ್ಳ ಸಮೀಪ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಮಣ್ಣು ಕೊಚ್ಚಿಕೊಂಡು ಬಂದಿದ್ದು, ಸಂಚಾರಕ್ಕೆ ತೊಂದರೆ ಉಂಟಾಗಿದೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆ ಆರ್ ಎಸ್	124.80	90.60	11,537	2,209
ಹಾರಂಗಿ	2,859	2,854.77	16,380	6,040
ಕಬಿನಿ	2,284	2,280	18,000	12,500
ಹೇಮಾವತಿ	2,922	2,899.19	10,089	200
ಲಿಂಗನಮಕ್ಕಿ	1,819	1,788	47,808	1,640.22
ಸೂಪಾ (ಮೀ)	564	540	3,967	545
ಮಾಣಿ	594.36	575.46	7,590	ಶೂನ್ಯ
ತುಂಗಭದ್ರಾ	1,633	1,610.86	6,717	285
ಮಲಪ್ರಭಾ	2,079.50	2,064	1,224	194
ಘಟಪ್ರಭಾ	2,175	2,139.88	10,327	124
ಭದ್ರಾ	186	159	18,214	784
ಆಲಮಟ್ಟಿ (ಮೀ)	519.60	517.68	51,024	32,552
ನಾರಾಯಣಪುರ (ಮೀ)	492.25	491.45	50,000	62,850

* ನೆಲಮಟ್ಟದಿಂದ

ಕರಾವಳಿ ಭಾಗದಲ್ಲಿ ಬಿರುಸು • 40ಕ್ಕೂ ಹೆಚ್ಚು ಮನೆಗಳಿಗೆ ಹಾನಿ • ಹಾರಂಗಿಯಿಂದ ನದಿಗೆ ನೀರು ಬಿಡುಗಡೆ

ಮಳೆ: ಅಲ್ಲಲ್ಲಿ ಭೂಕುಸಿತ, ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಹಾಸನ/ಮೈಸೂರು: ಕೊಡಗು ಜಿಲ್ಲೆಯಲ್ಲಿ ಗುರುವಾರವೂ ಧಾರಾಕಾರ ಮಳೆಯಾಗಿದ್ದು, ಹಾರಂಗಿ ಜಲಾಶಯವು ಭರ್ತಿಯಾಗುವ ಹಂತ ತಲುಪಿದೆ. ಬುಧವಾರ ರಾತ್ರಿಯಿಂದಲೇ ನದಿಗೆ 6,040 ಕ್ಯುಸೆಕ್ ನೀರು ಹರಿಸಲಾಗುತ್ತಿದೆ.

ಜಲಾಶಯದ ಗರಿಷ್ಠ ಮಟ್ಟ 2,859 ಅಡಿಯಾಗಿದ್ದು, ಗುರುವಾರ ಸಂಜೆ 2,854.77 ಅಡಿಗೆ ತಲುಪಿತ್ತು. ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ಭರ್ತಿಗೆ 4 ಅಡಿ ಬಾಕಿ ಇರುವಂತೆಯೇ ನಾಲ್ಕು ಕ್ರಸ್ಟ್ ಗೇಟ್‌ಗಳ ಮೂಲಕ ನೀರು ಬಿಡಲಾಗುತ್ತಿದೆ.

ಮಡಿಕೇರಿಯಲ್ಲಿ ಜಿಲ್ಲಾಡಳಿತ ಭವನದ ತಡೆಗೋಡೆ ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ಭೂಕುಸಿತವಾಗಿದೆ. ಹಳ್ಳ ದಾಟುವಾಗ ಕೊಚ್ಚಿ ಹೋಗಿದ್ದ ಅವಂದೂರು ಗ್ರಾಮದ ಬಾಬಿ ಚಿಣ್ಣಪ್ಪ (70) ಅವರ ಮೃತದೇಹವು ಗುರುವಾರ ಬೆಳಿಗ್ಗೆ ಪತ್ತೆಯಾಗಿದೆ. ಭಾರಿ ಮಳೆಗೆ ಕೊಡ್ಲಿಪೇಟೆ ಹೋಬಳಿ ವ್ಯಾಪ್ತಿಯಲ್ಲಿ ಎರಡು ಮನೆಗಳಿಗೆ ಹಾನಿಯಾಗಿದೆ.

ದಿಬ್ಬ ಕುಸಿತ: ಹಾಸನ ಜಿಲ್ಲೆಯಲ್ಲಿಯೂ ಧಾರಾಕಾರ ಮಳೆಯಾಗಿದೆ. ಸಕಲೇಶಪುರದ ಆನೆಮಹಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಡಾನಗುಡ್ಡೆ ಬಳಿ ದಿಬ್ಬ ಕುಸಿತವಾಗಿದೆ.

ಮನೆಗಳು ಹಾಗೂ ಅಂಗನವಾಡಿ ಕಟ್ಟಡ ಕುಸಿದು ಬೀಳುವ ಆತಂಕ ಎದುರಾಗಿದೆ. ಕಳೆದ ವರ್ಷವೂ ಇಲ್ಲಿ ಭೂಕುಸಿತವಾಗಿ ನಿವಾಸಿಗಳನ್ನು ಸ್ಥಳಾಂತರಿಸಲಾಗಿತ್ತು. ದೋಣಿಗಾಲ್‌ನಿಂದ ಮಾರನಹಳ್ಳಿವರೆಗೆ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಮೇಲೆ ಮಳೆ ನೀರಿನೊಂದಿಗೆ ಮಣ್ಣು ಕೊಚ್ಚಿಕೊಂಡು ಬಂದಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿದೆ.

ಮಲೆನಾಡು ಪ್ರದೇಶ ಸಕಲೇಶಪುರ ತಾಲ್ಲೂಕಿನ ಹೆತ್ತೂರು, ಯಸಳೂರು ಭಾಗದಲ್ಲಿ ನಿರಂತರವಾಗಿ ಗಾಳಿ ಸಮೇತ ಮಳೆ ಆಗುತ್ತಿದ್ದು ಅಡಿಕೆ, ಕಾಫಿ ತೋಟ, ಭತ್ತದ ಗದ್ದೆಗಳು ಜಲಾವೃತಗೊಂಡಿವೆ. ಶುಂಠಿ, ಭತ್ತ, ತರಕಾರಿ ಬೆಳೆಗಳು ಮಳೆಯಿಂದ ಹಾನಿಗೊಂಡಿವೆ. ಕಾಡಮನೆ, ಮಾರನಹಳ್ಳಿ, ಅತ್ತಿಹಳ್ಳಿ, ಹೊಂಗಡ ಹಳ್ಳ, ಕುಮಾರಳ್ಳಿ, ದೇವಾಲದಕೆರೆ ಸುತ್ತಮುತ್ತ ಉತ್ತಮ ಮಳೆಯಾಗಿದೆ. ಅರಕಲಗೂಡು ತಾಲ್ಲೂಕಿನಲ್ಲಿ ಐದು ದಿನಗಳಿಂದ ಸುರಿಯುತ್ತಿರುವ ಮಳೆಗೆ ಕೆರೆ, ಕಟ್ಟೆಗಳ ಒಡಲಿಗೆ ನೀರು ಹರಿದು ಬರುತ್ತಿದೆ. ಹೇಮಾವತಿ ಮತ್ತು ಕಾವೇರಿ ನದಿಯಲ್ಲಿ ನೀರಿನ ಹರಿವು ಹೆಚ್ಚಿದೆ.

ಯಗಚಿ ಜಲಾಶಯ ಭರ್ತಿಯಾಗಿದ್ದು, ನೀರು ಹೊರ ಹರಿಸಲಾಗುತ್ತಿದೆ. ಆಲೂರು ತಾಲ್ಲೂಕಿನ ಮಲ್ಲಾಪುರ, ಅರೆಹಳ್ಳದ ಕೊಪ್ಪಲು ಗ್ರಾಮದಲ್ಲಿ ತಲಾ ಒಂದು ಮನೆ ಕುಸಿದಿದೆ.

ಮಳೆ- ಸಂಚಾರ ಅಸ್ತವ್ಯಸ್ತ: (ಶಿವಮೊಗ್ಗ ವರದಿ): ಶಿವಮೊಗ್ಗ ಜಿಲ್ಲೆಯಲ್ಲಿಯೂ ಮಳೆಯ ಅಬ್ಬರ ಮುಂದುವರಿದಿದೆ. ಸೊರಬ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮರಗಳು ಧರೆಗೆ ಉರುಳಿವೆ. ಹೊಸನಗರದಲ್ಲಿಯೂ ಮನೆಗಳು ಕುಸಿದಿವೆ.

ಚಂದ್ರಗುತ್ತಿ ಸಮೀಪ ಶತಮಾನದ ಮರ ಉರುಳಿಬಿದ್ದಿದೆ. ಹಣಗೆರೆ ಮಾರ್ಗದಲ್ಲೂ ಬೃಹತ್ ಮರ ರಸ್ತೆಗೆ ಬಿದ್ದ ಪರಿಣಾಮ ಕೆಲವು ಸಮಯ ಸಂಚಾರಕ್ಕೆ ಅಡ್ಡಿಯಾಗಿತ್ತು. ಲಿಂಗನಮಕ್ಕಿ ಜಲಾಶಯದ ವ್ಯಾಪ್ತಿಯಲ್ಲಿ 12 ಸೆಂ.ಮೀ ಮಳೆಯಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದ್ದು, ದಾವಣಗೆರೆ ನಗರ, ನ್ಯಾಮತಿ, ತ್ಯಾವಣಿಗೆ, ಜಗಳೂರಿನಲ್ಲಿ ತುಂತುರು ಮಳೆಯಾಗಿದೆ.

ಗರಿಷ್ಠ ಮಳೆ ಪ್ರಮಾಣ

ಎಲ್ಲಿ, ಎಷ್ಟು: ಸೆಂ.ಮೀ.ಗಳಲ್ಲಿ

ಹೆಬ್ರಿ(ಉಡುಪಿ)	22.8
ಮಾಣಿ	19.4
ಕಿಗ್ಗಾ (ಚಿಕ್ಕಮಗಳೂರು)	18.4
ಶಾಂತಳ್ಳಿ	16.7
ಯಡೂರು	16.6
ಶ್ರೀಮಂಗಲ	16.3
ಮಾರನಹಳ್ಳಿ(ಹಾಸನ)	16
ನೆಮ್ಮಾರ್ (ಚಿಕ್ಕಮಗಳೂರು)	15.7
ಕೊಕ್ಕಡ (ದಕ್ಷಿಣ ಕನ್ನಡ)	14.9
ಗೇರುಸೊಪ್ಪ	14
ಹುಲಿಕಲ್	13.2
ಕಾರವಾರ	13
ಹೊನ್ನಾವರ	12
ಮಡಿಕೇರಿ	11.8
ಕುಮಟಾ	11.3
ಭಾಗಮಂಡಲ	11.2
ಕದ್ರಾ	11.3
ಸಕಲೇಶಪುರ	11
ಹೊಸೂರು	11
ಹೆತ್ತೂರು(ಹಾಸನ)	11
ಶುಕ್ರವಾರಸಂತೆ	11
ಸಿದ್ದಾಪುರ	10.6
ಭಟ್ಕಳ	10.5
ಹಾನುಬಾಳು (ಹಾಸನ)	10

ಮನೆಯಂಗಳಕ್ಕೆ ಉರುಳಿದ ಬಂಡೆ

ಹೊನ್ನಾವರ ತಾಲ್ಲೂಕಿನ ಹಡಿನಬಾಳದ ಕಾವೂರಿನಲ್ಲಿ ಗುರುವಾರ ಬೃಹತ್ ಬಂಡೆಯೊಂದು ಮನೆಯಂಗಳಕ್ಕೆ ಉರುಳಿರುವುದು

ಹುಬ್ಬಳ್ಳಿ: ಉತ್ತರ ಕನ್ನಡ ಜಿಲ್ಲೆಯಲ್ಲಿ ಗುರುವಾರವೂ ಮಳೆಯ ಆರ್ಭಟ ಮುಂದುವರೆದಿದೆ. ಬೆಳಗಾವಿ, ಧಾರವಾಡ ಜಿಲ್ಲೆಯಲ್ಲಿ ತುಂತುರು ಮಳೆಯಾಗಿದೆ. ಕರಾವಳಿ ಮತ್ತು ಮಲೆನಾಡಿನಾದ್ಯಂತ ವ್ಯಾಪಕ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಹಡಿನಬಾಳದ ಕಾವೂರಿನಲ್ಲಿ ಗುಡ್ಡ ಭಾಗಶಃ ಕುಸಿದಿದೆ. ಗುಡ್ಡದ ಮೇಲಿನಿಂದ ಬೃಹತ್ ಬಂಡೆಯೊಂದು ಮನೆಯಂಗಳಕ್ಕೆ ಬಂದು ಬಿದ್ದಿದೆ. ಅದೃಷ್ಟವಶಾತ್ ಯಾರಿಗೂ ಅಪಾಯವಾಗಿಲ್ಲ.

ಗೋಕರ್ಣದಲ್ಲಿ ಮಧ್ಯಾಹ್ನದವರೆಗೂ ಬಿರುಸಿನ ಮಳೆಯಾಗಿದೆ. ಹೆಸರಾಂತ ಮಹಾಬಲೇಶ್ವರ ದೇವರ ಗರ್ಭಗುಡಿಗೆ ನೀರು ನುಗ್ಗಿತ್ತು. ಎರಡು ಗಂಟೆ ಸ್ಥಳೀಯರಿಗೆ ಪೂಜೆಗೆ ಅವಕಾಶ ನೀಡಿರಲಿಲ್ಲ. ಬೆಳಗಾವಿ ನಗರ, ಸವದತ್ತಿ, ಹಿರೇಬಾಗೇವಾಡಿ ಮತ್ತು ನಿಪ್ಪಾಣಿಯಲ್ಲಿ ತುಂತುರು ಮಳೆಯಾಗಿದೆ. ದಿನವಿಡೀ ಮೋಡ ಕವಿದ ವಾತಾವರಣವಿತ್ತು. ಧಾರವಾಡ, ಹುಬ್ಬಳ್ಳಿಯಲ್ಲಿಯೂ ಆಗಾಗ ತುಂತುರು ಮಳೆಯಾಯಿತು.

ಕಬಿನಿಯಿಂದ ನದಿಗೆ ನೀರು: ಮುನ್ನೆಚ್ಚರಿಕೆ

ಮೈಸೂರು ಜಿಲ್ಲೆಯ ಕಬಿನಿ ಜಲಾಶಯದ ಒಳಹರಿವಿನ ಪ್ರಮಾಣ ಗುರುವಾರ 18,000 ಕ್ಯುಸೆಕ್‌ಗೆ ಹೆಚ್ಚಿದೆ. ಕಪಿಲಾ ನದಿಗೆ ಅಧಿಕ ನೀರು ಹರಿಸುವ ಸಾಧ್ಯತೆ ಇದ್ದು, ಪ್ರವಾಹದ ಮುನ್ನೆಚ್ಚರಿಕೆ ನೀಡಲಾಗಿದೆ.

ಪ್ರಸ್ತುತ 12,500 ಕ್ಯುಸೆಕ್ ನೀರು ಹೊರಬಿಡಲಾಗುತ್ತಿದೆ. ಜಲಾಶಯದ ನೀರಿನ ಮಟ್ಟ 2,284 ಅಡಿ ಇದ್ದು, ಗರಿಷ್ಠ ಮಟ್ಟಕ್ಕೆ 4 ಅಡಿ ಬಾಕಿ ಇದೆ. ಮೈಸೂರು ಜಿಲ್ಲೆಯಲ್ಲಿ ದಿನವಿಡೀ ತುಂತುರು ಮಳೆ ಆಗಿದೆ.

ಜಲಾಶಯಗಳಿಗೆ ಅಧಿಕ ನೀರು: ಶಿವಮೊಗ್ಗ ಜಿಲ್ಲೆಯ ಲಿಂಗನಮಕ್ಕಿ ಜಲಾಶಯಕ್ಕೆ ಒಂದೇ ದಿನ 2 ಅಡಿ, ಭದ್ರಾ ಜಲಾಶಯಕ್ಕೆ 1.6 ಅಡಿ ನೀರು ಹರಿದುಬಂದಿದೆ.

ತುಂಗಾ ಜಲಾಶಯದಿಂದ 41,700 ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ತುಂಗಾ ನದಿಯಲ್ಲಿ ನೀರಿನ ಹರಿವು ಹೆಚ್ಚಿದ್ದು, ತುಂಬಿ ಹರಿಯುತ್ತಿದೆ.

ಕರಾವಳಿಯಲ್ಲಿ ಧಾರಾಕಾರ

ಕಟಪಾಡಿಯ ವಿಶ್ವನಾಥ ದೇವಸ್ಥಾನ ಎದುರಿಗಿದ್ದ ಬೃಹತ್ ಮರವೊಂದು ಬುಡಸಹಿತ ಮನೆಯ ಮೇಲೆ ಬಿದ್ದಿರುವ ದೃಶ್ಯ.

ಮಂಗಳೂರು: ಕರಾವಳಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಗುರುವಾರ ಧಾರಾಕಾರ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5 ಮನೆಗಳು ಪೂರ್ಣ, 15 ಮನೆಗಳು ಭಾಗಶಃ ಹಾನಿಯಾಗಿವೆ. ಉಡುಪಿ ಜಿಲ್ಲೆಯಲ್ಲಿ 20 ಮನೆಗಳಿಗೆ ಹಾನಿಯಾಗಿದೆ.

ಕಡಬ ತಾಲ್ಲೂಕು ಕೊಂಬಾರಿನಲ್ಲಿ ನಿಲ್ಲಿಸಿದ್ದ ಜೀಪ್ ಮೇಲೆ ಮರ ಉರುಳಿದ್ದು, ಹಾನಿಯಾಗಿದೆ. ನೇತ್ರಾವತಿ, ಕುಮಾರಧಾರಾ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ.

ಪುತ್ತೂರು- ಪರ್ಲಡ್ಕ- ಕುಂಜೂರುಪಂಜ- ಪಾಣಾಜೆ ರಸ್ತೆಯ ಚೆಲ್ಯಡ್ಕ ಸೇತುವೆ ಗುರುವಾರ ಮುಳುಗಡೆಯಾಗಿದೆ. ಈ ರಸ್ತೆಯಲ್ಲಿ ಸಂಪರ್ಕ ಕಡಿತಗೊಂಡಿದೆ. ಪುತ್ತೂರಿನಿಂದ ಸಂಟ್ಯಾರು- ಕೈಕಾರ ಮೂಲಕವಾಗಿ ಸುತ್ತು ಬಳಸಿ ಜನರು ಸಂಚರಿಸಿದರು.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬಸ್ರೂರು ಗ್ರಾಮದಲ್ಲಿ ಮನೆ ಮೇಲೆ ಮರ ಉರುಳಿದ್ದು, ವಾರಿಜಾ ಹಾಗೂ ವೆಂಕಮ್ಮ ಅವರಿಗೆ ಗಾಯಗಳಾಗಿವೆ. ಹಲವು ಮರಗಳು, ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಧಾರಾಕಾರ ಮಳೆಗೆ ಮೂಡಿಗೆರೆ ತಾಲ್ಲೂಕಿನ ದರ್ಶನ ಗ್ರಾಮದಲ್ಲಿ ಮನೆ ಮೇಲೆ ಮರ ಉರುಳಿದೆ. ಜಯಪುರ– ಬಸರೀಕಟ್ಟೆ ಮಾರ್ಗದಲ್ಲಿ ಅಬ್ಬಿಕಲ್ಲು ಬಳಿ ಮರ ಬಿದ್ದು ಸಂಚಾರಕ್ಕೆ ಅಡಚಣೆಯಾಗಿತ್ತು.

ಚಿಕ್ಕಮಗಳೂರಿನಿಂದ ಮುತ್ತೋಡಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಬಿರುಕು ಕಾಣಿಸಿಕೊಂಡಿದ್ದು, ಸಂಚಾರ ಸ್ಥಗಿತವಾಗಿದೆ. ಬಸರೀಕಟ್ಟೆಯ ಪ್ರೌಢಶಾಲೆಯ ಮುಂಭಾಗದ ರಸ್ತೆ ಬದಿ ಮಣ್ಣು ಕುಸಿದಿದೆ. 50ಕ್ಕೂ ಹೆಚ್ಚು ವಿದ್ಯುತ್ ಕಂಬಗಳು, ನಾಲ್ಕು ವಿದ್ಯುತ್ ಪರಿವರ್ತಕಗಳು ನೆಲಕ್ಕುರುಳಿವೆ ಎಂದು ಮೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಜರ್ಮನಿಯಲ್ಲಿ ಭಾರಿ ಮಳೆ, ಪ್ರವಾಹ: 30ಕ್ಕೂ ಹೆಚ್ಚು ಮಂದಿ ಸಾವು

ಬರ್ಲಿನ್ (ಎಪಿ): ಜರ್ಮನಿಯಲ್ಲಿ ಭಾರಿ ಮಳೆ ಆಗಿದ್ದು, ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಜರ್ಮನಿ ಹಾಗೂ ಪಕ್ಕದ ಬೆಲ್ಜಿಯಂನಲ್ಲಿ 30ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಹಲವು ಮಂದಿ ಕಾಣೆಯಾಗಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಪಶ್ಚಿಮ ಯುರೋಪಿನ ಕೆಲವು ಭಾಗಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆ ಆಗಿದೆ. ಜಲಾಶಯಗಳು ಭರ್ತಿಯಾಗಿವೆ. ನದಿಗಳಲ್ಲಿ ರಾತ್ರಿ ಸಮಯದಲ್ಲಿ ಪ್ರವಾಹ ಉಂಟಾಗಿ ಅನೇಕ ಜನವಸತಿ ಪ್ರದೇಶಗಳಿಗೆ ನೀರು ನುಗ್ಗಿದೆ. ಕಾರುಗಳು ಪ್ರವಾಹದಲ್ಲಿ ತೇಲಿ ಹೋಗಿವೆ. ಬಹಳ ಕಟ್ಟಡಗಳು ಕುಸಿದಿವೆ.

ಪಶ್ಚಿಮ ಜರ್ಮನ್ ವಲಯದ ಯುಸ್ಕಿರ್ಚೆನ್ ಪ್ರದೇಶದಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ. ಕೆಲವು ಭಾಗಗಳಲ್ಲಿ ದೂರವಾಣಿ ಹಾಗೂ ಇಂಟರ್‌ನೆಟ್ ಸಂಪರ್ಕ ಕಡಿತಗೊಂಡಿದೆ. ಇದರಿಂದ ರಕ್ಷಣಾ ಕಾರ್ಯಾಚರಣೆಗೆ ಅಡಚಣೆ ಉಂಟಾಗಿದೆ. ಜ್ವಾಲಾಮುಖಿ ಪ್ರದೇಶವಾದ ಐಫೆಲ್‌ನ ಶುಲ್ಡ್ ಗ್ರಾಮದಲ್ಲಿ ರಾತ್ರಿ ಸಮಯದಲ್ಲಿ ಹಲವಾರು ಮನೆಗಳು ಕುಸಿದಿದ್ದು, 70 ಜನರು ಕಾಣೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೂರ್ವ ಜರ್ಮನಿಯಲ್ಲಿ ಪ್ರವಾಹ ಉಂಟಾಗಿ ಅನೇಕ ಜನವಸತಿ ಪ್ರದೇಶಗಳಿಗೆ ನೀರು ನುಗ್ಗಿದ್ದು ಮನೆಗಳು ನಾಶವಾಗಿವೆ ಎಎಫ್‌ಪಿ– ಚಿತ್ರ

ಪೂರ್ವ ಬೆಲ್ಜಿಯಂನಲ್ಲಿ ವ್ಯಕ್ತಿಯೊಬ್ಬರು ಕಾಣೆಯಾಗಿದ್ದಾರೆ ಎಂದು ವರದಿಯಾಗಿದೆ. ಈ ಪ್ರದೇಶದಲ್ಲಿ ಪಟ್ಟಣಗಳು ಜಲಾವೃತಗೊಂಡಿವೆ. ಜರ್ಮನಿ ಹಾಗೂ ಬೆಲ್ಜಿಯಂನಲ್ಲಿ ಸೇನೆಯು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದೆ. ಯುರೋಪಿಯನ್ ಒಕ್ಕೂಟ ಎಲ್ಲ ರೀತಿಯ ನೆರವು ಒದಗಿಸುವುದಾಗಿ ತಿಳಿಸಿದೆ.

ಯೋಗಿ ಆದಿತ್ಯನಾಥ ಕಾರ್ಯವೈಖರಿಗೆ ಪ್ರಧಾನಿ ಮೋದಿ ಅವರಿಂದ ಹೊಗಳಿಕೆ ಸುರಿಮಳೆ

ಉತ್ತರ ಪ್ರದೇಶ ಕೋವಿಡ್ ನಿರ್ವಹಣೆಗೆ ಎಣೆಯಿಲ್ಲ

ವಾರಾಣಸಿ (ಪಿಟಿಐ): ಉತ್ತರ ಪ್ರದೇಶ ಸರ್ಕಾರ ಕೋವಿಡ್ ಬಿಕ್ಕಟ್ಟನ್ನು ನಿರ್ವಹಿಸಿದ ರೀತಿಯನ್ನು ಪ್ರಧಾನಿ ನರೇಂದ್ರ ಮೋದಿ ಗುರುವಾರ ಶ್ಲಾಘಿಸಿದ್ದಾರೆ. ಉತ್ತರ ಪ್ರದೇಶ ಸರ್ಕಾರ ಕೋವಿಡ್ ಎರಡನೇ ಅಲೆಯನ್ನು ಅಭೂತಪೂರ್ವವಾಗಿ ನಿಯಂತ್ರಿಸಿದೆ ಎಂದು ಅವರು ಹೇಳಿದ್ದಾರೆ.

ಹಲವಾರು ಯೋಜನೆಗಳ ಶಿಲಾನ್ಯಾಸ ಮತ್ತು ಚಾಲನೆ ಕಾರ್ಯಕ್ರಮಗಳನ್ನು ನೆರವೇರಿಸುವ ಸಲುವಾಗಿ ಅವರು ಗುರುವಾರ ಬೆಳಗ್ಗೆ ತಮ್ಮ ಲೋಕಸಭಾ ಕ್ಷೇತ್ರವಾದ ವಾರಾಣಸಿಗೆ ಆಗಮಿಸಿದರು. ಈ ವೇಳೆ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

‘ಉತ್ತರ ಪ್ರದೇಶ ಸರ್ಕಾರವು ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ನೆಲೆಯಲ್ಲಿ ಆಡಳಿತ ಮಾಡದೇ ಅಭಿವೃದ್ಧಿ ಕೇಂದ್ರಿತ ಆಡಳಿತ ನಡೆಸುತ್ತಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಅತ್ಯುತ್ತಮವಾಗಿದೆ’ ಎಂದರು.

ಇಚ್ಛಾಶಕ್ತಿಯ ಕೊರತೆಯಿಂದಾಗಿ ಚಿಕ್ಕ ಸಮಸ್ಯೆಗಳೂ ದೈತ್ಯಾಕಾರವಾಗಿ ಕಾಣುತ್ತಿದ್ದವು. ಮಿದುಳಿನ ಉರಿಯೂತದಂಥ ಸಮಸ್ಯೆಯನ್ನೂ ಎದುರಿಸಲಾರದಂಥ ಪರಿಸ್ಥಿತಿಯನ್ನು ಉತ್ತರ ಪ್ರದೇಶದ ಜನ ನೋಡಿದ್ದಾರೆ. ಅಂತಹುದರಲ್ಲಿ, ಈ ಶತಮಾನದಲ್ಲಿ ಇಡೀ ಜಗತ್ತನ್ನೇ ಭಾದಿಸುತ್ತಿರುವ ಕೋವಿಡ್ ಬಿಕ್ಕಟ್ಟನ್ನು ಎದುರಿಸಲು ಉತ್ತರ ಪ್ರದೇಶ ಮಾಡಿದ ಪ್ರಯತ್ನಗಳು ಶ್ಲಾಘನೀಯ ಎಂದರು.

ಉತ್ತರ ಪ್ರದೇಶದಲ್ಲಿ ಈಗ ಕಾನೂನು ಸುವ್ಯವಸ್ಥೆ ಇದೆ. ಹೆಣ್ಣು ಮಕ್ಕಳ ಮೇಲೆ ಕಣ್ಣು ಹಾಕುವ ಧೈರ್ಯ ಮಾಡುವವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ. ಈಗ ಹಲವಾರು ಕಲ್ಯಾಣ ಯೋಜನೆಗಳು ಜನರನ್ನು ತಲುಪುತ್ತಿವೆ. ಹೊಸ ಹೂಡಿಕೆ, ಉದ್ಯೋಗಾವಕಾಶಗಳು ಹೆಚ್ಚಾಗುತ್ತಿವೆ. ವಾರಾಣಸಿ ಅಭಿವೃದ್ಧಿಪಡಿಸುವ ಕೆಲಸಗಳು ಮಹಾದೇವನ ಆಶೀರ್ವಾದದೊಂದಿಗೆ ಮತ್ತು ಜನರ ಪ್ರಯತ್ನದೊಂದಿದೆ ಉತ್ತಮವಾಗಿ ನಡೆಯುತ್ತಿದೆ ಎಂದರು.

ವಾರಾಣಸಿಯಲ್ಲಿ ತಾಯಿ ಮತ್ತು ಮಗು ಆರೈಕೆ ಕೇಂದ್ರವನ್ನು ಉದ್ಘಾಟಿಸಿದ ಬಳಿಕ ಕೇಂದ್ರಕ್ಕೆ ಭೇಟಿ ನೀಡಿದ ಪ್ರಧಾನಿ ಮೋದಿ

ವೈದ್ಯಕೀಯ ಕೇಂದ್ರವಾದ ಕಾಶಿ

ಅತ್ಯಂತ ಕಷ್ಟದ ಸಮಯದಲ್ಲೂ ತಾನು ಹೋರಾಡುವುದನ್ನು ಬಿಡುವುದಿಲ್ಲ ಎಂಬುದನ್ನು ಕಾಶಿ ತೋರಿಸಿಕೊಟ್ಟಿದೆ. ದೇಶದ ಪೂರ್ವವಲಯದಲ್ಲಿ ಕಾಶಿಯು ಪ್ರಮುಖ ವೈದ್ಯಕೀಯ ಕೇಂದ್ರವಾಗಿ ಹೊರಹೊಮ್ಮಿದೆ. ಮೊದಲೆಲ್ಲಾ ವೈದ್ಯಕೀಯ ಚಿಕಿತ್ಸೆಗಾಗಿ ಇಲ್ಲಿಯ ಜನರು ದೆಹಲಿ ಅಥವಾ ಮುಂಬೈಗೆ ಹೋಗುತ್ತಿದ್ದರು. ಆದರೆ ಈಗ ಎಲ್ಲಾ ವೈದ್ಯಕೀಯ ಸೌಲಭ್ಯಗಳೂ ಇಲ್ಲಿಯೇ ಸಿಗುತ್ತಿವೆ. ಕಾಶಿಯು ಕಳೆದ 7 ವರ್ಷಗಳಿಂದ ತನ್ನ ಮೂಲ ಗುರುತನ್ನು ಉಳಿಸಿಕೊಂಡು ಅಭಿವೃದ್ಧಿ ಕಡೆಗೆ ಮುನ್ನುಗ್ಗುತ್ತಿದೆ ಎಂದು ಪ್ರಧಾನಿ ಹೇಳಿದ್ದಾರೆ.

₹ 1,500 ಕೋಟಿಯ ಯೋಜನೆಗಳಿಗೆ ಶಿಲಾನ್ಯಾಸ, ಚಾಲನೆ

ಐಐಟಿ–ಬಿಎಚ್‌ಯು ಆವರಣದಲ್ಲಿ ಪ್ರಧಾನಿ ಮೋದಿ ಹಲವಾರು ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದರು ಮತ್ತು ಹಲವಾರು ಯೋಜನೆಗಳಿಗೆ ಚಾಲನೆಯನ್ನು ನೀಡಿದರು. ತಾಯಿ ಮತ್ತು ಮಕ್ಕಳ ಆರೋಗ್ಯ ಕೇಂದ್ರ, ಪ್ರವಾಸೋದ್ಯಮ ಉತ್ತೇಜಿಸುವ ಸಲುವಾಗಿ ಆರಂಭವಾಗುತ್ತಿರುವ ಹಲವು ಹಂತಗಳ ವಾಹನ ನಿಲುಗಡೆ , ಗಂಗಾ ನದಿಗೆ ರೊ–ರೊ ಪ್ರಯಾಣಿಕ ದೋಣಿ, ವಾರಾಣಸಿ–ಗಾಜಿಪುರ ಮಧ್ಯೆ ಮೂರು ಪಥದ ಫ್ಲೈಓವರ್ ಸೇತುವೆಗೆ ಚಾಲನೆ ನೀಡಿದರು. ಈ ಎಲ್ಲಾ ಯೋಜನೆಗಳ ವೆಚ್ಚ ₹ 744 ಕೋಟಿ ಎಂದು ಅಂದಾಜಿಸಲಾಗಿದೆ.

ಅಂತಾರಾಷ್ಟ್ರೀಯ ಸಹಕಾರ ಮತ್ತು ಸಮ್ಮೇಳನಾ ಕೇಂದ್ರ-ರುದ್ರಾಕ್ಷ್ ಅನ್ನು ಉದ್ಘಾಟಿಸಿದರು. ಈ ಕೇಂದ್ರವನ್ನು ಜಪಾನ್ ಸಹಯೋಗದಲ್ಲಿ ನಿರ್ಮಿಸಲಾಗಿದೆ.

ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ (ಸಿಐಪಿಇಟಿ) ಮತ್ತು ಜಲ ಜೀವನ ಯೋಜನೆ ಅಡಿ ಹಲವಾರು ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದರು. ಈ ಯೋಜನೆಗಳಿಗೆ ₹839 ಕೋಟಿ ತಗುಲಲಿದೆ ಎನ್ನಲಾಗಿದೆ.

> **ಉತ್ತರ ಪ್ರದೇಶದಲ್ಲಿ ಹಲವು ಶ್ರೀಮಂತ ರಾಷ್ಟ್ರಗಳಿಗಿಂತ ಹೆಚ್ಚು ಜನಸಂಖ್ಯೆ ಇದೆ. ಆದರೂ ಅದು ಕೊರೊನಾ ಎರಡನೇ ಅಲೆಯನ್ನು ನಿರ್ವಹಿಸಿದ ರೀತಿ ಅನುಕರಣೆಯೋಗ್ಯ.**
> **ನರೇಂದ್ರ ಮೋದಿ,** ಪ್ರಧಾನಿ

ಸೋನಿಯಾ ಗಾಂಧಿ ಭೇಟಿಯಾದ ಕಮಲ್‌ನಾಥ್

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ, ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಗುರುವಾರ ಪಕ್ಷದ ಅಧ್ಯಕ್ಷೆ ಸೋನಿಯಾ ಅವರನ್ನು ಭೇಟಿ ಮಾಡಿದ್ದು, ಕುತೂಹಲ ಕೆರಳಿಸಿದೆ.

ಕಾಂಗ್ರೆಸ್ ಪಕ್ಷದ ಸಾಂಸ್ಥಿಕ ಸಂಘಟನೆಯ ಪುನರ್‌ರಚನೆಯಲ್ಲಿ ಕಮಲ್‌ನಾಥ್ ಅವರಿಗೆ ದೊಡ್ಡ ಜವಾಬ್ದಾರಿ ಸಿಗಲಿದೆ ಎಂಬ ಮಾತುಗಳು ಕೇಳಿಬರುತ್ತಿದೆ. ಸಂಸತ್ತಿನ ಮುಂಗಾರು ಅಧಿವೇಶನ ಆರಂಭಕ್ಕೂ ಮುನ್ನ ಈ ಭೇಟಿ ನಡೆದಿದೆ.

ಹಿರಿಯ ನಾಯಕರಾದ ಕಮಲ್‌ನಾಥ್ ಅವರು ಕಾಂಗ್ರೆಸ್‌ನ ಹಿರಿಯ ನಾಯಕರ ಜೊತೆಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಪಕ್ಷದ ಸಾಂಸ್ಥಿಕ ಸಂಘಟನೆ ಸಮಗ್ರ ಬದಲಾವಣೆಗೆ ಒತ್ತಾಯಿಸಿ ಹೈಕಮಾಂಡ್‌ಗೆ ಪತ್ರ ಬರೆದಿದ್ದ 23 ನಾಯಕರಲ್ಲಿ ಕಮಲ್‌ನಾಥ್ ಒಬ್ಬರು.

ಬಿಜೆಪಿಗೆ ಪ್ರಬಲ ಸ್ಪರ್ಧೆ ಒಡ್ಡಲು ಪ್ರತ್ಯೇಕ ರಂಗವನ್ನು ರಚಿಸಲು ಎನ್‌ಸಿಪಿ ಮುಖ್ಯಸ್ಥ ಶರದ್‌ ಪವಾರ್ ಅವರು ವಿರೋಧಪಕ್ಷದ ಮುಖಂಡರನ್ನು ಭೇಟಿಯಾಗುತ್ತಿದ್ದ ಸಂದರ್ಭದಲ್ಲಿ ಕಮಲನಾಥ್ ಅವರೂ ಪವಾರ್ ಅವರನ್ನು ದೆಹಲಿ ನಿವಾಸದಲ್ಲಿ ಭೇಟಿಯಾಗಿದ್ದರು.

ಹರಿಯಾಣ ಸ್ಪೀಕರ್ ವಿರುದ್ಧ ಪ್ರತಿಭಟನೆ, ಕಾರಿಗೆ ಹಾನಿ

100 ರೈತರ ವಿರುದ್ಧ ದೇಶದ್ರೋಹ ಪ್ರಕರಣ

ಪ್ರಜಾವಾಣಿ ವಾರ್ತೆ

ಚಂಡೀಗಡ: ಕೇಂದ್ರ ಸರ್ಕಾರದ ನೂತನ ಕೃಷಿ ಕಾಯ್ದೆಗಳ ವಿರುದ್ಧ ಹರಿಯಾಣದ ಸಿರ್ಸಾದಲ್ಲಿ ಈಚೆಗೆ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ರೈತರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. ಪ್ರತಿಭಟನೆ ವೇಳೆ ಅಲ್ಲಿಗೆ ಭೇಟಿ ನೀಡಿದ್ದ ರಾಜ್ಯದ ವಿಧಾನಸಭೆ ಸ್ಪೀಕರ್ ರಣಬೀರ್ ಗಂಗ್ವಾ ಅವರ ಕಾರಿನ ಮೇಲೆ ದಾಳಿ ನಡೆಸಿದ ಸಂಬಂಧ 100ಕ್ಕೂ ಹೆಚ್ಚು ರೈತರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ. ಇದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಇದೇ 11ರಂದು ಸಿರ್ಸಾದಲ್ಲಿ ಈ ಘಟನೆ ನಡೆದಿತ್ತು. ಅಲ್ಲಿ ನಡೆಯುತ್ತಿದ್ದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಲು ಬಂದಿದ್ದ ರಣಬೀರ್ ಗಂಗ್ವಾ ಅವರನ್ನು ಪ್ರತಿಭಟನಾ ನಿರತಾ ರೈತರು ತಡೆದಿದ್ದರು. ಆಗ ನಡೆದ ಚಕಮಕಿಯಲ್ಲಿ ಗಂಗ್ವಾ ಅವರ ಕಾರಿನ ಹಿಂದಿನ ಗಾಜು ಒಡೆದಿತ್ತು. ಈ ಸಂಬಂಧ ಜುಲೈ 11ರಂದೇ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಆದರೆ ಬುಧವಾರ ಮತ್ತೊಂದು ಎಫ್‌ಐಆರ್ ದಾಖಲಿಸಿದ್ದು, ಅದರಲ್ಲಿ 100ಕ್ಕೂ ಹೆಚ್ಚು ರೈತರ ವಿರುದ್ಧ ದೇಶದ್ರೋಹ ಪ್ರಕರಣ ಮತ್ತು ಕೊಲೆಯತ್ನ ಪ್ರಕರಣ ದಾಖಲಿಸಲಾಗಿದೆ.

ರೈತರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಿರುವುದನ್ನು ಕಿಸಾನ್ ಸಂಯುಕ್ತ ಮೋರ್ಚಾ ಖಂಡಿಸಿದೆ. ‘ಈ ಪ್ರಕರಣ ಸಂಪೂರ್ಣ ಸುಳ್ಳು. ಯಾವ ಆಧಾರದಲ್ಲಿ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ ಎಂಬುದೇ ಗೊತ್ತಿಲ್ಲ. ಈ ಪ್ರಕರಣದ ವಿರುದ್ಧ ನ್ಯಾಯಾಲಯದಲ್ಲಿ ಕಾನೂನು ಹೋರಾಟ ನಡೆಸುತ್ತೇವೆ’ ಎಂದು ಕಿಸಾನ್ ಸಂಯುಕ್ತ ಮೋರ್ಚಾ ಹೇಳಿದೆ.

ಹಲವು ಸಾಮಾಜಿಕ ಕಾರ್ಯಕರ್ತರು ಮತ್ತು ವಿರೋಧ ಪಕ್ಷಗಳ ನಾಯಕರು ಹರಿಯಾಣ ಪೊಲೀಸರ ಕ್ರಮವನ್ನು ಖಂಡಿಸಿದ್ದಾರೆ.

> **ರೈತವಿರೋಧಿ ಬಿಜೆಪಿ ನಾಯಕರು ಮತ್ತು ಬಿಜೆಪಿ ಸರ್ಕಾರದ ನಿರ್ದೇಶನದ ಮೇರೆಗೆ ಘಟನೆ ನಡೆದು ಮೂರು ದಿನಗಳ ನಂತರ ರೈತರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ**
> **ಕಿಸಾನ್ ಸಂಯುಕ್ತ ಮೋರ್ಚಾ**

> **ದೇಶದ್ರೋಹ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಸುಪ್ರೀಂ ಹೇಳಿದೆ. ಆದರೆ, ಕಾರಿನ ಗಾಜು ಒಡೆದದ್ದಕ್ಕೂ ದೇಶದ್ರೋಹ ಪ್ರಕರಣ ದಾಖಲಿಸಲಾಗಿದೆ**
> **ಯೋಗೇಂದ್ರ ಯಾದವ್,** ಸ್ವರಾಜ್ ಇಂಡಿಯಾ ಸಂಸ್ಥಾಪಕ

ನವಜೋತ್ ಸಿಂಗ್ ಸಿಧುಗೆ ಹೆಚ್ಚಿನ ಹೊಣೆಗಾರಿಕೆ?

ಅಮರಿಂದರ್ ಸಿಂಗ್ ಸಿ.ಎಂ ಸ್ಥಾನ ಅಬಾಧಿತ

ನವದೆಹಲಿ: ಪಂಜಾಬ್‌ನಲ್ಲಿ ಪಕ್ಷದ ನಾಯಕತ್ವದ ಬದಲಾವಣೆಯನ್ನು ಕಾಂಗ್ರೆಸ್ ಹೈಕಮಾಂಡ್ ತಳ್ಳಿಹಾಕಿದ್ದು, ಅಮರಿಂದರ್ ಸಿಂಗ್ ಅವರು ವಿಧಾನಸಭೆಯ ಮುಂದಿನ ಚುನಾವಣೆಯವರೆಗೂ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆ ಎಂದು ತಿಳಿಸಿದೆ.

ಇದೇ ವೇಳೆ ಹಿರಿಯ ಮುಖಂಡ ನವಜೋತ್ ಸಿಂಗ್ ಅವರಿಗೆ ಪಕ್ಷದ ರಾಜ್ಯ ಘಟಕದಲ್ಲಿ ಪ್ರಮುಖ ಜವಾಬ್ದಾರಿಯನ್ನು ನೀಡಲು ಸೂತ್ರವೊಂದನ್ನು ರೂಪಿಸಲಾಗುತ್ತಿದೆ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ, ರಾಜ್ಯ ಉಸ್ತುವಾರಿ ಹರೀಶ್ ರಾವತ್ ತಿಳಿಸಿದ್ದಾರೆ.

ಅಮರಿಂದರ್ ಸಿಂಗ್ ಮತ್ತು ನವಜೋತ್ ಸಿಂಗ್ ಇಬ್ಬರೂ ಒಟ್ಟಾಗಿ ಕಾರ್ಯನಿರ್ವಹಿಸುವಂತಹ ಸೂತ್ರ ರೂಪಿಸಲಾಗುತ್ತಿದೆ. ಬಿಕ್ಕಟ್ಟು ಶಮನಗೊಳಿಸುವ ಸೂತ್ರಕ್ಕೆ ಹೈಕಮಾಂಡ್‌ನ ಅನುಮೋದನೆ ನಿರೀಕ್ಷಿಸಲಾಗಿದೆ ಎಂದು ರಾವತ್ ಸುದ್ದಿಗಾರರಿಗೆ ತಿಳಿಸಿದರು.

ಈ ಮೂಲಕ ಪಂಜಾಬ್ ಕಾಂಗ್ರೆಸ್‌ನಲ್ಲಿ ಮೂಡಿರುವ ಆಂತರಿಕ ಬಿಕ್ಕಟ್ಟನ್ನು ಅಂತ್ಯಗೊಳಿಸಲು ಹೈಕಮಾಂಡ್ ಮುಂದಾಗಿದೆ. ‘ಅಮರಿಂದರ್ ಸಿಂಗ್ ಸಿ.ಎಂ ಆಗಿ ಮುಂದುವರಿಯುವರು. ಅವರ ನೇತೃತ್ವದಲ್ಲಿಯೇ ಪಕ್ಷ ಚುನಾವಣೆ ಎದುರಿಸಲಿದೆ’ ಎಂದರು.

ಪಂಜಾಬ್ ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿದೆ. ಪಕ್ಷವು ಗೆಲುವಿನ ಗುರಿ ಮುಟ್ಟಲು ಈ ಇಬ್ಬರು ಒಟ್ಟಿಗೇ ಕೆಲಸ ನಿರ್ವಹಿಸುವುದು ಅಗತ್ಯವಾಗಿದೆ ಎಂದು ಅವರು ಪ್ರತಿಪಾದಿಸಿದರು.

ಅಮರಿಂದರ್ ಸಿಂಗ್ ಮತ್ತು ನವಜೋತ್ ಸಿಂಗ್ ಸಿಧು ನಡುವೆ ಭಿನ್ನಮತ ತಾರಕಕ್ಕೇರಿದೆ. ಸಾರ್ವಜನಿಕವಾಗಿ ಪರಸ್ಪರರ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇಬ್ಬರ ನಡುವಿನ ಭಿನ್ನಮತ ಬಗೆಹರಿಸಲು ಪಕ್ಷದ ಹೈಕಮಾಂಡ್, ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ತ್ರಿಸದಸ್ಯರ ಸಮಿತಿಯನ್ನು ರಚಿಸಿದೆ.

ಪಕ್ಷದ ಮೂಲಗಳ ಪ್ರಕಾರ, ನವಜೋತ್ ಸಿಂಗ್ ಸಿಧು ಅವರಿಗೆ ಹೈಕಮಾಂಡ್ ಉನ್ನತ ಹೊಣೆಗಾರಿಕೆ ನೀಡುವ ಸಂಭವವಿದೆ. ರಾಜ್ಯ ಘಟಕದ ಪುನರ್‌ರಚನೆ ಯತ್ನ ನಡೆಸಿದ್ದು, ಹೊಸ ಅಧ್ಯಕ್ಷರಾಗಿ ನೇಮಕವಾಗುವ ಸಂಭವವೂ ಇದೆ.

ಅಮರಿಂದರ್ ಸಿಂಗ್ ಅವರು ಪಕ್ಷದ ಅಧ್ಯಕ್ಷೆ ಸೋನಿಯಾಗಾಂಧಿ ಅವರನ್ನು ಭೇಟಿಯಾಗಿ ಚರ್ಚಿಸಿದ್ದರೆ, ನವಜೋತ್ ಸಿಂಗ್ ಸಿಧು ಅವರು ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರನ್ನು ಭೇಟಿಯಾಗಿ ಚರ್ಚಿಸಿದ್ದರು.

ರಾಜ್ಯ ಘಟಕದ ಪುನರ್ರಚನೆಯ ಕ್ರಮವಾಗಿ ಹೈಕಮಾಂಡ್ ಈಗಾಗಲೇ, ಬಹುತೇಕ ಎಲ್ಲ ಹಿರಿಯ ಮುಖಂಡರು ಮತ್ತು ಶಾಸಕರ ಅಭಿಪ್ರಾಯಗಳನ್ನು ಪಡೆದುಕೊಂಡಿದೆ.

ಗಡಿ ಸಮಸ್ಯೆ: ಪರಸ್ಪರ ಸ್ವೀಕಾರಾರ್ಹ ಪರಿಹಾರಕ್ಕೆ ಚೀನಾ ಸಿದ್ಧ– ವಾಂಗ್

ಬೀಜಿಂಗ್ (ಪಿಟಿಐ): ಚೀನಾ– ಭಾರತ ನಡುವೆ ಪರಸ್ಪರ ಸ್ವೀಕಾರಾರ್ಹ ಪರಿಹಾರ ಕಂಡುಕೊಳ್ಳಲು ಚೀನಾ ಸಿದ್ಧವಾಗಿದೆ. ಮಾತುಕತೆಗಳ ಮೂಲಕ ಈ ಸಮಸ್ಯೆಗೆ ‘ತುರ್ತು ಚಿಕಿತ್ಸೆ’ ನೀಡಬೇಕಿದೆ ಎಂದು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ತಿಳಿಸಿದ್ದಾರೆ.

ತಜಕಿಸ್ತಾನದ ದುಶಾಂಬೆಯಲ್ಲಿ ಬುಧವಾರ ನಡೆದ ಶಾಂಘೈ ಸಹಕಾರ ಸಂಘಟನೆಯ (ಎಸ್‌ಒಒ) ವಿದೇಶಾಂಗ ಸಚಿವರ ಸಭೆಯಲ್ಲಿ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು, ಪೂರ್ವ ಲಡಾಖ್ ಅಸ್ತಿತ್ವದಲ್ಲಿರುವ ಪರಿಸ್ಥಿತಿಯು ಉಭಯ ದೇಶಗಳ ನಡುವಿನ ಸಂಬಂಧದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಹೇಳಿದ್ದರು.

ಗದ್ದಲಕ್ಕೆ ಕಾರಣವಾದ ಜಾನ್ಸನ್–ಮೋದಿ ಹಸ್ತಲಾಘವದ ಚಿತ್ರ

ಬ್ರಿಟನ್ ಸಂಸತ್‌ನಲ್ಲಿ ಕಾವೇರಿದ ಚರ್ಚೆ

ಲಂಡನ್ (ಪಿಟಿಐ): ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಪ್ರಧಾನಿ ಬೋರಿಸ್ ಜಾನ್ಸನ್ ಹಸ್ತಲಾಘವ ಮಾಡುತ್ತಿದ್ದ ಚಿತ್ರವನ್ನು ಒಳಗೊಂಡ ಕರಪತ್ರ ಹಾಗೂ ಅದರಲ್ಲಿ ಮುದ್ರಿತ ವಿಷಯ ಬ್ರಿಟನ್‌ನ ಸಂಸತ್‌ನಲ್ಲಿ ಕಾವೇರಿದ ಚರ್ಚೆ ಹಾಗೂ ಗದ್ದಲಕ್ಕೆ ಕಾರಣವಾಯಿತು.

ಈ ವಿಷಯವಾಗಿ ಪ್ರಧಾನಿ ಜಾನ್ಸನ್ ಹಾಗೂ ವಿರೋಧ ಪಕ್ಷದ ನಾಯಕ ಕೀರ್ ಸ್ಟಾರ್ಮರ್ ನಡುವೆ ಆರಂಭವಾದ ಮಾತಿನ ಚಕಮಕಿ ಒಂದು ಹಂತದಲ್ಲಿ ವಿಕೋಪಕ್ಕೆ ಹೋಗಿ, ಗದ್ದಲಕ್ಕೂ ಕಾರಣವಾಯಿತು.

ಬ್ಯಾಟ್ಲೆ-ಸ್ಪೆನ್ ಕ್ಷೇತ್ರಕ್ಕೆ ಇತ್ತೀಚೆಗೆ ನಡೆದ ಉಪಚುನಾವಣೆಯಲ್ಲಿ ಈ ಕರಪತ್ರವನ್ನು ಹಂಚಲಾಗಿತ್ತು. 2019ರಲ್ಲಿ ನಡೆದ ಜಿ–7 ಶೃಂಗಸಭೆಯಲ್ಲಿ ಮೋದಿ ಹಾಗೂ ಜಾನ್ಸನ್ ಅವರು ಭೇಟಿಯಾಗಿದ್ದಾಗ, ಉಭಯ ನಾಯಕರು ಹಸ್ತಲಾಘವ ಮಾಡಿದ್ದ ಚಿತ್ರವನ್ನು ಈ ಕರಪತ್ರದಲ್ಲಿ ಮುದ್ರಿಸಲಾಗಿತ್ತು. ಭಾರತೀಯರನ್ನು ಅವಹೇಳನ ಮಾಡುವ ವಾಕ್ಯಗಳನ್ನು ಕರಪತ್ರದಲ್ಲಿ ಮುದ್ರಿಸಲಾಗಿತ್ತು.

ಈ ಕರಪತ್ರದ ಬಗ್ಗೆ ಆಗ ಬ್ರಿಟನ್‌ನಲ್ಲಿ ಭಾರಿ ಅಸಮಾಧಾನ ವ್ಯಕ್ತವಾಗಿತ್ತು. ಅದರಲ್ಲೂ ಅಲ್ಲಿನ ಭಾರತೀಯರು ಕರಪತ್ರದಲ್ಲಿನ ವಿಷಯವನ್ನು ಖಂಡಿಸಿದ್ದರು.

ಬ್ರಿಟನ್‌ನಲ್ಲಿರುವ ಭಾರತೀಯರನ್ನು ವಿರೋಧಿಸುವ ಮನಸ್ಥಿತಿ ಹಾಗೂ ಜನರಲ್ಲಿ ಒಡಕನ್ನುಂಟು ಮಾಡುವ ತಮ್ಮ ಮನೋಭಾವವನ್ನು ಲೇಬರ್ ಪಾರ್ಟಿ ಮುಖಂಡರು ಈ ಕರಪತ್ರದ ಮೂಲಕ ಹೊರಹಾಕಿದ್ದಾರೆ ಎಂದು ಜಾನ್ಸನ್ ದೂರಿದರು.

‘ಲೇಬರ್ ಪಾರ್ಟಿ ಮುಖಂಡರು ಈ ಕರಪತ್ರವನ್ನು ಹಿಂಪಡೆದುಕೊಳ್ಳಬೇಕು’ ಎಂದು ಜಾನ್ಸನ್ ಆಗ್ರಹಿಸಿದರು.

ಈ ಮಾತಿಗೆ ಒಪ್ಪದ ವಿರೋಧ ಪಕ್ಷದ ನಾಯಕ ಸ್ಟಾರ್ಮರ್, ‘ಬ್ರಿಟನ್‌ನ ಫುಟ್ಬಾಲ್ ಆಟಗಾರರ ವಿರುದ್ಧ ಕೇಳಿ ಬಂದ ಜನಾಂಗೀಯ ನಿಂದನೆಯ ವಿರುದ್ಧ ಆಡಳಿತಾರೂಢ ಕನ್ಸರ್ವೇಟಿವ್ ಪಾರ್ಟಿ ಯಾಕೆ ಹೋರಾಡಲಿಲ್ಲ’ ಎಂದು ಹರಿಹಾಯ್ದರು.

ಚಂದನಾ

ಆನ್‌ಲೈನ್‌ನಲ್ಲಿ ‘ರಿವೈಂಡ್’ಗೆ ಡಿಮ್ಯಾಂಡ್

ತೇಜಸ್

ತೇಜಸ್ ನಿರ್ಮಾಣ, ನಿರ್ದೇಶನ ಮತ್ತು ಅಭಿನಯದ ‘ರಿವೈಂಡ್’ ಚಿತ್ರ ಇದೀಗ ಆನ್‌ಲೈನ್‌ನಲ್ಲಿ ಬೇಡಿಕೆ ಪಡೆದಿದೆ. ಬುಕ್‌ಮೈ ಶೋದಲ್ಲಿ ಪ್ರಸಾರವಾಗುತ್ತಿರುವ ಈ ಚಿತ್ರಕ್ಕೆ ಇದೀಗ ನೆಟ್‌ಫ್ಲಿಕ್ಸ್‌ನಿಂದಲೂ ಬೇಡಿಕೆ ಬಂದಿದೆ. ಸುವರ್ಣ ಟಿವಿಗೆ ಪ್ರಸಾರದ ಹಕ್ಕು ಮಾರಾಟವಾಗಿದೆ ಎಂದರು ತೇಜಸ್.

ಚಿತ್ರ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಲಾಕ್‌ಡೌನ್‌ನಿಂದಾಗಿ ಚಿತ್ರಮಂದಿರಗಳು ಮುಚ್ಚಿದವು. ಅತ್ತ ಪ್ರದರ್ಶನವೂ ಅಲ್ಲ, ಇತ್ತ ಪ್ರಸಾರವೂ ಸಾಧ್ಯವಾಗದ ಇಕ್ಕಟ್ಟಿನಲ್ಲಿ ಸಿಲುಕಿದ್ದರು ತೇಜಸ್. ಕೆಲವೇ ದಿನಗಳಲ್ಲಿ ಬುಕ್‌ಮೈ ಶೋ ತನ್ನ ಒಟಿಟಿ ವೇದಿಕೆಯನ್ನು ತೆರೆಯಿತು. ಅದು ‘ರಿವೈಂಡ್’ಗೆ ವರದಾನವಾಗಿ ಪರಿಣಮಿಸಿದೆ ಎಂದು ತೇಜ್ ಕೊಂಚ ನಿರಾಳಭಾವದಲ್ಲಿ ಹೇಳಿದರು. ಚಿತ್ರ ದುಬೈನಲ್ಲೂ ಸಹಿತ ವಿವಿಧ ಅರಬ್ ರಾಷ್ಟ್ರಗಳಲ್ಲಿ ಬಿಡುಗಡೆ ಆಗಲು ಸಿದ್ಧವಾಗಿದೆ. ಚಿತ್ರದಲ್ಲಿ ತೇಜಸ್ ಹಾಗೂ ಚಂದನಾ ನಟಿಸಿದ್ದಾರೆ.

ಕಳೆದ ಜನ್ಮದಲ್ಲಿ ನಾನೂ ಭಟ್ರು ಗಂಡ ಹೆಂಡ್ತಿ ಆಗಿದ್ವಿ!

ಅಭಿಲಾಷ್ ಪಿ.ಎಸ್.

‘ನಮಸ್ಕಾರ ನಮಸ್ಕಾರ ನಮಸ್ಕಾರ’ ಎನ್ನುತ್ತಾ ಕಿರುತೆರೆಯಿಂದ ‘ಚೆಲ್ಲಾಟ’ದ ಮುಖಾಂತರ ಚಂದನವನಕ್ಕೆ ಗೋಲ್ಡನ್ ಸ್ಟಾರ್ ಗಣೇಶ್ ಅವರು ಕಾಲಿಟ್ಟು 15 ವರ್ಷಗಳಾಗಿವೆ. ಸಿನಿ ಪಯಣದಲ್ಲಿ ಹಲವು ಏರಿಳಿತ ಕಂಡ ಗಣೇಶ್, ಇದೀಗ ‘ಸಖತ್’ ಆಗಿ ‘ಗಾಳಿಪಟ–2’ ಹಾರಿಸುತ್ತಿದ್ದಾರೆ. ‘ತ್ರಿಬಲ್ ರೈಡಿಂಗ್’ನಲ್ಲಿ ‘ದಿ ಸ್ಟೋರಿ ಆಫ್ ರಾಯಗಡ’ ಹೇಳಲು ಹೊರಟಿರುವ ಗಣೇಶ್ ‘ಸಿನಿಮಾ ಪುರವಣಿ’ ಜೊತೆ ಮಾತಿಗೆ ಸಿಕ್ಕರು.

- **2006ರಲ್ಲಿ ‘ಚೆಲ್ಲಾಟ’ ಬಿಡುಗಡೆಯಾಯಿತು. ಅಲ್ಲಿಂದೀಚೆಗೆ ಇಲ್ಲಿಯವರೆಗೂ ಚಂದನವನದಲ್ಲಿ 15 ವರ್ಷದ ಸಿನಿ ಪಯಣ ಹೇಗಿತ್ತು?**

ಈ 15 ವರ್ಷಗಳ ಪಯಣ ಬಹಳ ಖುಷಿ ಕೊಟ್ಟಿದೆ. ನನಗೆ ಬಹಳ ಆನಂದ ಹಾಗೂ ಉತ್ಸಾಹ ಕೊಡುವ ಕೆಲಸವನ್ನು ನಾನು ಆಯ್ಕೆ ಮಾಡಿಕೊಂಡು ಬಂದಿದ್ದೇನೆ. ಸಿನಿಮಾಗೆ ಪ್ರವೇಶಿಸುವ ಮುನ್ನ ಉದ್ಯಮ ಅದು, ಇದು ಎಂದು ಎಲ್ಲ ಕ್ಷೇತ್ರಗಳಲ್ಲೂ ನನ್ನ ಲಕ್ ಪ್ರಯತ್ನಿಸಿದ್ದೆ. ಆದರೆ ನನ್ನ ಮನಸ್ಸು ಇದ್ದಿದ್ದು, ಸಿನಿಮಾದಲ್ಲಿ. 2005ರಲ್ಲಿ ‘ಚೆಲ್ಲಾಟ’ ಪಯಣ ಆರಂಭವಾಯಿತು. 2006ರಲ್ಲಿ ಇದು ತೆರೆ ಕಂಡಿತು. ನಾವು ಇಷ್ಟಪಟ್ಟಿದ್ದ ಉದ್ಯೋಗವನ್ನು ಆರಿಸಿ ಕೆಲಸ ಮಾಡುವುದು ಒಂದು ರೀತಿ ತಪಸ್ಸಿದ್ದಂತೆ. ಅದರ ಬಗ್ಗೆಯೇ ಧ್ಯಾನ ಮಾಡಿರುತ್ತೇವೆ. ಚಿತ್ರೀಕರಣದಲ್ಲಿ ತಲ್ಲೀನವಾಗಿರುವುದೇ ನನಗೆ ಹೆಚ್ಚು ಖುಷಿ ನೀಡುತ್ತದೆ. ವೈದ್ಯರಾಗಲು ನಾಲ್ಕೈದು ವರ್ಷ ಬೇಕಾಗುತ್ತದೆ. ಅದೇ ರೀತಿ ನಟನಾಗಲೂ ವರ್ಷಾನುಗಟ್ಟಲೆ ಬೇಕಲ್ಲವೇ? ಧಾರಾವಾಹಿಯಿಂದ ಪ್ರಾರಂಭವಾದ ನನ್ನ ಪಯಣ, ಇಲ್ಲಿಯವರೆಗೂ ಬಂದಿದೆ.

- **ಮುಂಗಾರು ಮಳೆ ಸಮಯವಿದು. ಅದರಲ್ಲಿ ನೆನೆದ ಕ್ಷಣವನ್ನು ನೆನಪಿಸಿಕೊಂಡರೆ?**

ಕಿರುತೆರೆಯಲ್ಲಿ ‘ಕಾಮಿಡಿ ಟೈಂ ಗಣೇಶ್’ ನನಗೆ ಹೆಚ್ಚು ಜನಪ್ರಿಯತೆ ತಂದುಕೊಟ್ಟಿತ್ತು. ಇದೇ ಸಮಯದಲ್ಲಿ ಯೋಗರಾಜ್ ಭಟ್ ಅವರು ಈ ಕಥೆ ರೂಪಿಸಿದ್ದರು. ಪ್ರೀತಂ ಗುಬ್ಬಿ ನನ್ನ ಶಾಲಾ ಸ್ನೇಹಿತ. ಅವನು ಈ ಕಥೆಯನ್ನು ನನಗೆ ಹೇಳಿದ. ಭಟ್ರು ಹಾಗೂ ಪ್ರೀತಂ ಇದನ್ನು ಮಾಡುತ್ತಿದ್ದಾರೆ ಎಂದರು. ಆವಾಗ ತಾನೆ ಹೀರೋ ಆಗಿ ಎರಡನೇ ಚಿತ್ರವಲ್ಲವೇ? ಜೋಷ್ ಬಹಳವಿತ್ತು. ಮೊದಲ ದಿನವೇ ಸಕಲೇಶಪುರ ಘಾಟ್‌ನಲ್ಲಿ ಫೈಟಿಂಗ್ ದೃಶ್ಯದ ಚಿತ್ರೀಕರಣವಿತ್ತು. ನಮಗೂ ಜೋಷ್, ಮಳೆಯಲ್ಲಿ ಎದ್ದು ಬಿದ್ದು ಮೈಯೆಲ್ಲ ಪರಚಿಕೊಂಡಿದ್ದೆ. ಸಂಜೆ ಸ್ನಾನ ಮಾಡುವಾಗ ಬಿಸಿನೀರು ಹಾಕಿಕೊಂಡಾಗ ಉರಿಯುತ್ತಿತ್ತು. ರಸ್ತೆಯಲ್ಲಿ ಬಿದ್ದು ಒದ್ದಾಡಿದ್ದರ ಪರಿಣಾಮ ಅದು. ಆ ದಿನಗಳನ್ನು ನೆನಪಿಸಿಕೊಂಡರೇ ಖುಷಿಯಾಗುತ್ತದೆ. 42 ದಿನದಲ್ಲಿ ಮುಗಿಸಿದ ಸಿನಿಮಾ ಅದು. ಅದೊಂದು ಅದ್ಭುತ ಅನುಭವ.

ಗಣೇಶ್

- **15 ವರ್ಷದ ಸಿನಿಪಯಣದಲ್ಲಿ ಒಂದಿಷ್ಟು ಏರಿಳಿತಗಳನ್ನು ಕಂಡಿರಲ್ಲವೇ?**

ಹೌದು. ನನ್ನ ಮೊದಲ ಎಂಟು ಚಿತ್ರಗಳು ಹಿಟ್ ಆದವು. ನಂತರ ಕೆಲ ಚಿತ್ರಗಳು ಅಷ್ಟೊಂದು ಯಶ ಕಾಣಲಿಲ್ಲ. ನಂತರದಲ್ಲಿ ‘ಮಳೆಯಲಿ ಜೊತೆಯಲಿ’, ‘ಮುಗುಳು ನಗೆ’, ‘ಶ್ರಾವಣಿ ಸುಬ್ರಹ್ಮಣ್ಯ’, ‘ಚಮಕ್’ ಹಿಟ್ ಆದವು. ‘ಮುಗುಳು ನಗೆ’ ನೋಡಿ ನನ್ನ ಹಾಗೂ ಯೋಗರಾಜ್ ಭಟ್ ಅವರ ಕಾಂಬಿನೇಷನ್ ಜನ ಮತ್ತೆ ಮೆಚ್ಚಿದರು. ಸಿನಿ ಪಯಣದಲ್ಲಿ ಏರಿಳಿತ ಇದ್ದೇ ಇರುತ್ತದೆ. ಹೀಗಾದರಷ್ಟೇ ಜೀವನ. ಬರೇ ಏರುತ್ತಿದ್ದರೆ ಅದರಲ್ಲಿ ಯಾವುದೇ ಖುಷಿ ಇಲ್ಲ. ಹೃದಯದ ಬಡಿತದಂತೆ ಏರಿಳಿತ ಇರಲೇಬೇಕು. ನಿಮ್ಮ ಬಗ್ಗೆ ನೀವು ತಿಳಿದುಕೊಳ್ಳಲು, ಸವಾಲು ಸ್ವೀಕರಿಸಲು ಈ ಏರಿಳಿತ ಕಲಿಸುತ್ತದೆ. ನನ್ನ ಕೆಲಸ ಒಳ್ಳೆಯ ಪಾತ್ರಗಳ ಮುಖಾಂತರ ಜನರನ್ನು ಮನರಂಜಿಸುವುದು. ಇದೀಗ ಪ್ರಯೋಗಗಳನ್ನು ಮಾಡುವ ಸಮಯ. ಒಟಿಟಿ ಎನ್ನುವುದು ವಿಶ್ವದ ಸಿನಿಮಾ ಪ್ರಪಂಚವನ್ನು ಅಂಗೈಯಲ್ಲಿ ಇರಿಸಿದೆ. ನಮ್ಮ ಅಭಿನಯದ ಜೊತೆಗೆ ಕಂಟೆಂಟ್ ಕೂಡಾ ಬಹಳ ಮುಖ್ಯವಾಗಿದೆ. ಕಳೆದ 10 ವರ್ಷದಲ್ಲಿ ಆದ ಬದಲಾವಣೆ ಇದು. ಲಾಕ್‌ಡೌನ್ ಎನ್ನುವುದು ಜನರಿಗೆ ಬೇರೆಯದೇ ಆಯಾಮ ನೀಡಿದೆ. ನಾನು ಈ ಅವಧಿಯನ್ನು ಸಕಾರಾತ್ಮಕವಾಗಿ ತೆಗೆದುಕೊಂಡು ಒಂದೂವರೆ ವರ್ಷ ಮಕ್ಕಳ ಜೊತೆ ಕಳೆದೆ. ಈಗ ಮತ್ತೆ ಚಿತ್ರೀಕರಣದಲ್ಲಿ ತೊಡಗಿದ್ದೇನೆ.

- **ಗಾಳಿಪಟ ಜೋಡಿ ಇದೀಗ ಮತ್ತೆ ಒಂದಾಗಿದೆ. ಹೇಗಿರುತ್ತೆ ಹೊಸ ಕಚಗುಳಿ. ಗಣಿ ಕಾಗುಣಿತ ಕಲಿತ್ರಾ?**

ಈ ಜನ್ಮದಲ್ಲಿ ನಮ್ಮದೂ ಭಟ್ರದ್ದೂ ಜಾತಕ ಕೂಡಿ ಬಂದಿದೆ. ಬಹುಷಃ ಕಳೆದ ಜನ್ಮದಲ್ಲಿ ಗಂಡ ಹೆಂಡತಿ ಆಗಿದ್ದೆವು. ಆ ಜನ್ಮದಲ್ಲಿ ಕಿರಿಕ್ ಆಗಿದೆ. ಈ ಜನ್ಮದಲ್ಲಿ ಅವರು ನನ್ನ ಮೇಲೆ ನಿರ್ದೇಶಕರಾಗಿ ಕೋಪ ತೀರಿಸಿಕೊಳ್ಳುತ್ತಿದ್ದಾರೆ. ನಾನು ಅಭಿನಯದ ಮೂಲಕ ಕೋಪ ತೀರಿಸಿಕೊಳ್ಳುತ್ತಿದ್ದೇನೆ. ‘ಏನ್ರಿ ಹುಚ್ಚುಚ್ಚಾಗಿ ಡೈಲಾಗ್ ಬರೀತೀರಿ, ಏನ್ರಿ ಇದು’ ಎಂದು ಭಟ್ರನ್ನ ಕೇಳುತ್ತಿರುತ್ತೇನೆ. ಇದೊಂದು ಕಾಂಬಿನೇಷನ್. ಆಕಸ್ಮಿಕವಾಗಿ ಆದ ಜೋಡಿ ಇದು. ಜನರ ಮನಸ್ಸಿನಲ್ಲೂ ಅಚ್ಚಳಿಯದೆ ಕುಳಿತಿದೆ. ನಮ್ಮಿಬ್ಬರಿಗೂ ಒಬ್ಬರ ಮೇಲೊಬ್ಬರಿಗೆ ನಂಬಿಕೆ ಇದೆ. ನಾನು ಏನೇ ಬರೆದರೂ ಗಣೇಶ್ ನಟಿಸುತ್ತಾನೆ ಎಂಬ ನಂಬಿಕೆ ಭಟ್ರಿಗಿದೆ. ಅವರು ಬರೆದ ಡೈಲಾಗ್‌ಗಿಂತ ಚೆನ್ನಾಗಿ ಅಭಿನಯಿಸಬೇಕು ಎನ್ನುವ ಆಸೆ ನನಗಿದೆ. ಈ ಹಗ್ಗಜಗ್ಗಾಟ ನಮ್ಮಿಬ್ಬರ ನಡುವೆ ಇದ್ದೇ ಇರುತ್ತದೆ. ನಮ್ಮ ಕಾಂಬಿನೇಷನ್‌ನ ಚಿತ್ರಗಳ ಪೈಕಿ ‘ಗಾಳಿಪಟ–2’ ಅತ್ಯದ್ಭುತವಾಗಿರುತ್ತದೆ. ನಾನು ಕಾಗುಣಿತ ಕಲಿತ್ನಾ ಇಲ್ವಾ ಎನ್ನುವುದನ್ನು ಸಿನಿಮಾದಲ್ಲೇ ನೋಡಬೇಕು.

ಸಖತ್ ಗಣೇಶ್

- **‘ಸಖತ್’ನಲ್ಲಿ ಕುರುಡನ ಪಾತ್ರದ ಸವಾಲು ಹೇಗಿದೆ?**

ಪ್ರಸ್ತುತ ಇದೇ ಸಿನಿಮಾದ ಚಿತ್ರೀಕರಣದಲ್ಲಿದ್ದೇನೆ. ಈ ಪಾತ್ರ ನನಗೆ ಸವಾಲಾಗಿದೆ. ಯಾವತ್ತೂ ತೆರೆಯ ಮೇಲೆ ಕಾಣಿಸದೇ ಇರುವ ಗಣೇಶ್‌ನನ್ನು ತೆರೆಯ ಮೇಲೆ ತೋರಿಸಬೇಕು. ನಮ್ಮ ಮೇಲೆ ನಂಬಿಕೆ ಇಟ್ಟು ಬರುವ ನಿರ್ದೇಶಕರು ಊಹಿಸಿದಕ್ಕಿಂತಲೂ ಚೆನ್ನಾಗಿ ನಾವು ಆ ಪಾತ್ರ ನಿಭಾಯಿಸಬೇಕು. ‘ಸಖತ್’ ಸಿನಿಮಾ ಬಹಳ ಮನರಂಜನೆ ಹಾಗೂ ಥ್ರಿಲ್ ನೀಡಲಿದೆ. ‘ತ್ರಿಬಲ್ ರೈಡಿಂಗ್’ ಚಿತ್ರ ಸಂಪೂರ್ಣ ಕಮರ್ಷಿಯಲ್ ಚಿತ್ರ. ‘ದಿ ಸ್ಟೋರಿ ಆಫ್ ರಾಯಗಡ’ ಸಂಪೂರ್ಣ ವಿಭಿನ್ನ ಚಿತ್ರ. ಗಣೇಶ್–ಸುನಿ ಕಾಂಬಿನೇಷನ್‌ನಲ್ಲಿ ಬಂದ ಸಿನಿಮಾಗಳಲ್ಲಿದ್ದ ಹಾಸ್ಯ, ಭಾವುಕತೆ ಇದರಲ್ಲೂ ಇದೆ. ನನ್ನ ಹೊಸ ವರ್ಷನ್ ನಿಮಗೆ ನೋಡಲು ಸಿಗಲಿದೆ.

- **‘ಕೂಲ್’ ಬಳಿಕ ನಿರ್ದೇಶನದ ಬಗ್ಗೆ ನೀವು ಯೋಚನೆ ಮಾಡಿದ್ರಾ?**

ನಿರ್ದೇಶನ ಎನ್ನುವುದು ನನಗೆ ಬಹಳ ಇಷ್ಟವಾದ ಕೆಲಸ. ಖಂಡಿತವಾಗಿಯೂ ಮುಂದೆ ಮತ್ತೆ ನಿರ್ದೇಶನಕ್ಕೆ ಇಳಿಯುತ್ತೇನೆ. ಸಮಸ್ಯೆ ಏನೆಂದರೆ ಇದಕ್ಕಾಗಿ ಒಂದೂವರೆ ಎರಡು ವರ್ಷ ಮುಡಿಪಿಡಬೇಕು. ‘ಕೂಲ್’ನಲ್ಲಿ ‘ಆ್ಯಕ್ಸಿಡೆಂಟಲ್ ಡೈರೆಕ್ಟರ್’ ನಾನು. ಲಾಕ್‌ಡೌನ್‌ನಲ್ಲಿ ತಂಡದ ಜೊತೆ ಸೇರಿ ಕೆಲ ಸ್ಕ್ರಿಪ್ಟ್ ಮಾಡಿದ್ದೆ. ಸದ್ಯಕ್ಕೆ ಒಟಿಟಿ ಕಂಟೆಂಟ್ ಅಥವಾ ವೆಬ್‌ಸೀರಿಸ್ ಬಗ್ಗೆ ಯಾವುದೇ ಚಿಂತನೆ ಇಲ್ಲ.

ರಾಜ–ರಾಣಿ ಕಾರ್ಯಕ್ರಮದಲ್ಲಿ ನಿರೂಪಕಿ ಅನುಪಮಾ ಮತ್ತು ಸ್ಪರ್ಧಿಗಳು

> ಎಲ್ಲರ ಮನೆ ದೋಸೇನೂ ತೂತೇ ಅನ್ನುವುದು ಗಾದೆ ಮಾತು.. ದೊಡ್ಡವರಿರಲಿ ಸಾಮಾನ್ಯರಿರಲಿ, ಸಂಸಾರ ಅಂದರೇನೇ ತಾಪತ್ರಯ. ಖ್ಯಾತನಾಮ ದಂಪತಿಗಳ ಸಾಂಸಾರಿಕ ತಾಪತ್ರಯಗಳನ್ನು ಆಧರಿಸಿ ಒಂದು ಗೇಮ್ ಶೋ ಬಂದಿದೆ. ಕಲರ್ಸ್ ಕನ್ನಡ ಆರಂಭಿಸುತ್ತಿರುವ ‘ರಾಜಾ ರಾಣಿ’ ತೋರಿಸುವುದೂ ದಾಂಪತ್ಯ ರಗಳೆಯನ್ನೇ...

‘ರಾಜಾ ರಾಣಿ’

ಸೆಲೆಬ್ರಿಟಿಗಳ ದಾಂಪತ್ಯ ದರ್ಶನ

ಶರತ್ ಹೆಗ್ಡೆ

ಕಿರುತೆರೆ

ಖ್ಯಾತನಾಮರು ದಂಪತಿಯಾದರೆ ಹೇಗಿರುತ್ತದೆ? ಇಂಥದ್ದೊಂದು ಕುತೂಹಲ ಹುಟ್ಟಿಸಿ ವೀಕ್ಷಕರನ್ನು ತಲುಪಲು ಮುಂದಾಗಿದೆ ಕಲರ್ಸ್ ಕನ್ನಡ ವಾಹಿನಿ. ಜುಲೈ 10ರಿಂದ ಪ್ರತಿ ಶನಿವಾರ ಸಂಜೆ 7.30ಕ್ಕೆ ‘ರಾಜಾ ರಾಣಿ’ ಕಾರ್ಯಕ್ರಮ ಪ್ರಸಾರ ಶುರುವಾಗಿದೆ.

ಖ್ಯಾತನಾಮರ ದಾಂಪತ್ಯ ಹೇಗಿರುತ್ತದೆ? ಅಲ್ಲಿ ಭಿನ್ನಾಭಿಪ್ರಾಯಗಳು ಬಂದರೆ ಅದನ್ನು ಹೇಗೆ ಅವರು ನಿಭಾಯಿಸುತ್ತಾರೆ? ಬೇರೆ ಮನಃಸ್ಥಿತಿಯ ವ್ಯಕ್ತಿಗಳು ಮದುವೆಯಾದಾಗ ಅವರ ಬದುಕು ಹೇಗಿರುತ್ತದೆ? ಹತ್ತು ಹಲವು ಸಮಸ್ಯೆಗಳ ಮಧ್ಯೆಯೂ ದಾಂಪತ್ಯವನ್ನು ಹೇಗೆ ಸಂಭ್ರಮಿಸಬಹುದು ಎನ್ನುವುದು ಇಲ್ಲಿನ ಥೀಮ್ ಎನ್ನುತ್ತಿದೆ ಕಲರ್ಸ್ ಕನ್ನಡ ವಾಹಿನಿಯ ತಂಡ.

ಸೆಲೆಬ್ರಿಟಿಗಳ ಸಂಸಾರ ತಾಪತ್ರಯಗಳು ಇಲ್ಲಿ ಕಾಣಿಸಿಕೊಳ್ಳುತ್ತಿವೆ. ಇದಕ್ಕೆ ಮನರಂಜನಾತ್ಮಕ ಅಂಶದ ಸ್ಪರ್ಶ ಕೊಟ್ಟು ಆಟ ನಡೆಸಲಾಗುತ್ತಿದೆ. ಆಟದ ಮೂಲಕವೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಮಾರ್ಗವೂ ಇರಲಿದೆ ಎಂದಿದೆ ವಾಹಿನಿಯ ಕಾರ್ಯಕ್ರಮ ತಂಡ. ಈ ಕಾರ್ಯಕ್ರಮದ ಪ್ರೋಮೊ, ವಿಡಿಯೊ ಟ್ರೈಲರ್ ಸಾಕಷ್ಟು ಕುತೂಹಲ ಹುಟ್ಟಿಸಿತ್ತು.

12 ಜೋಡಿ: ರ‍್ಯಾಪರ್ ಚಂದನ್ ಶೆಟ್ಟಿ ಹಾಗೂ ನಿವೇದಿತಾ ಗೌಡ, ನೇಹಾ ಗೌಡ ಮತ್ತು ಚಂದನ್, ಡ್ಯಾನ್ಸ್ ಮಾಸ್ಟರ್ ಮುರುಗಾನಂದ್ ಮತ್ತು ಅಗ್ನಿಸಾಕ್ಷಿಯ ‘ಮಾಯಾ’ ಇಶಿತಾ ವರ್ಷಾ, ಬಿಗ್ ಬಾಸ್ ಸ್ಪರ್ಧಿ ಸಮೀರ್ ಆಚಾರ್ಯ ಮತ್ತು ಶ್ರಾವಣಿ ದಂಪತಿ, ಮಜಾಭಾರತ ಖ್ಯಾತಿಯ ಸೌಮ್ಯಾ ಮತ್ತು ಪ್ರವೀಣ್, ಸಿಲ್ಲಿ ಲಲ್ಲಿಯ ನಟ ಪ್ರಶಾಂತ್ ಮತ್ತು ನಟಿ ರೂಪಾ ಪ್ರಭಾಕರ್, ಹಾಸ್ಯ ಮಾತುಗಾರ ಪವನ್ ವೇಣುಗೋಪಾಲ್ ಮತ್ತು ಸುಮನ್, ನಟ ಸುಜಯ್ ಶಾಸ್ತ್ರಿ ಮತ್ತು ಸಿಂಚನಾ, ಕ್ರಿಕೆಟಿಗ ಎನ್.ಸಿ. ಅಯ್ಯಪ್ಪ ಮತ್ತು ಅನು ಪೂವಮ್ಮ, ‘ಕುಲವಧು’ ಧಾರಾವಾಹಿಯ ದೀಪಿಕಾ ಮತ್ತು ಆಕರ್ಷ್ ಹಿರಿಯ ಹಾಸ್ಯನಟ ರಾಜು ತಾಳಿಕೋಟೆ ಮತ್ತು ಅವರ ಇಬ್ಬರು ಪತ್ನಿಯರಾದ ಪ್ರೇಮಾ ಕಲ್ಲೂರು ಹಾಗೂ ಪ್ರೇಮಾ ಸಿಂಧನೂರು ಭಾಗವಹಿಸಿದ್ದಾರೆ.

ನಟಿ ಅನುಪಮಾ ಗೌಡ ಈ ಕಾರ್ಯಕ್ರಮದ ನಿರೂಪಕಿ. ತೀರ್ಪುಗಾರರಾಗಿ ನಟಿ ತಾರಾ ಅನುರಾಧಾ ಹಾಗೂ ನಟ ಸೃಜನ್ ಲೋಕೇಶ್ ಇದ್ದಾರೆ.

ಈ ಕಾರ್ಯಕ್ರಮದ ಕೇಂದ್ರದಲ್ಲಿರುವುದು ಭಾವನೆಗಳೇ. ಲೋಡುಗಟ್ಟಲೆ ಮಜಾವನ್ನು ಹೊತ್ತು ತರುವ ಈ ಕೌಟುಂಬಿಕ ಕಾರ್ಯಕ್ರಮ, ವೀಕ್ಷಕರಿಗೆ ಬೇರೆಯವರ ಬೆಡ್‌ರೂಮಿನೊಳಗೆ ಇಣುಕುವ ಸುಖವನ್ನೂ, ತಂತಮ್ಮ ಸಂಸಾರ ತಾಪತ್ರಯವನ್ನು ಪರಿಹರಿಸಿಕೊಳ್ಳುವ ಉಪಾಯಗಳನ್ನೂ ಏಕಕಾಲಕ್ಕೆ ಒದಗಿಸಲಿದೆ ಎಂದು ಎಂದು ಕಲರ್ಸ್ ಕನ್ನಡದ ಪ್ರೊಗ್ರಾಮಿಂಗ್ ಮುಖ್ಯಸ್ಥ ಪ್ರಕಾಶ್ ಗೋಪಾಲಕೃಷ್ಣ ತಿಳಿಸಿದ್ದಾರೆ.

‘ಇಕ್ಕಟ್’ನಲ್ಲಿ ಸಿಲುಕಿದ ಸಂಸಾರ ನೌಕೆ

ಒಟಿಟಿ

- **ಚಿತ್ರ: ಇಕ್ಕಟ್ (ಕನ್ನಡ)**
- **ತಾರಾಗಣ: ನಾಗಭೂಷಣ, ಭೂಮಿ ಶೆಟ್ಟಿ**
- **ನಿರ್ದೇಶನ: ಈಶಮ್ ಮತ್ತು ಹಾಸೀನ್ ಖಾನ್**
- **ಪ್ರಸಾರ: ಅಮೆಜಾನ್ ಪ್ರೈಮ್ (ಜುಲೈ 21ರಿಂದ)**

ಪರಸ್ಪರ ಭಿನ್ನಾಭಿಪ್ರಾಯ ಬಂದು ವಿಚ್ಛೇದನ ಪಡೆದುಕೊಳ್ಳುವ ಹಂತದಲ್ಲಿದ್ದ ದಂಪತಿ ಲಾಕ್‌ಡೌನ್ ಕಾರಣದಿಂದಾಗಿ ಅನಿವಾರ್ಯವಾಗಿ ಜತೆಗಿರಬೇಕಾಗುತ್ತದೆ. ಈ ಸನ್ನಿವೇಶಗಳು ಹೇಗಿರುತ್ತವೆ ಎಂದು ಹೇಳಲು ಹೊರಟಿದೆ ‘ಇಕ್ಕಟ್’ ಚಿತ್ರ. ನಾಗಭೂಷಣ ಮತ್ತು ಭೂಮಿಶೆಟ್ಟಿ ಪ್ರಧಾನ ಪಾತ್ರದಲ್ಲಿದ್ದಾರೆ. ಲಾಕ್‌ಡೌನ್ ಅವಧಿಯ ಹಿನ್ನೆಲೆಯನ್ನು ಈ ಕಥೆ ಒಳಗೊಂಡಿದೆ. ಲಾಕ್‌ಡೌನ್ ಅವಧಿಯಲ್ಲೇ ಚಿತ್ರೀಕರಣ ನಡೆದಿದೆ. ಸಮಾರು 15 ಪಾತ್ರಗಳನ್ನು ಒಳಗೊಂಡಿದೆ. ಒಂದೇ ಮನೆಯೊಳಗೆ ನಡೆಯುವ ಕಥೆ ಇದು. ಲಾಕ್‌ಡೌನ್‌ನ ಅನುಭವಗಳು ಮತ್ತು ಹಾಸ್ಯಸನ್ನಿವೇಶಗಳನ್ನೂ ಒಳಗೊಂಡಿದೆ ಎಂದಿದೆ ಚಿತ್ರತಂಡ. ಚಿತ್ರದ ಟ್ರೇಲರ್ ಕೂಡಾ ಗಮನ ಸೆಳೆದಿದೆ.

‘ದೃಶ್ಯ–2’ ಚಿತ್ರದ ಚಿತ್ರೀಕರಣ ಆರಂಭ

2014ರಲ್ಲಿ ತೆರೆಕಂಡು ಅಪಾರ ಮೆಚ್ಚುಗೆ ಪಡೆದುಕೊಂಡಿದ್ದ ಚಿತ್ರ ಪಿ.ವಾಸು ನಿರ್ದೇಶನದ ‘ದೃಶ್ಯ’. ಮಲಯಾಳಂನಲ್ಲಿ ನಟ ಮೋಹನ್‌ಲಾಲ್ ನಟಿಸಿದ್ದ ‘ದೃಶ್ಯಂ’ ಚಿತ್ರದ ರಿಮೇಕ್ ಇದಾಗಿತ್ತು. ಮಲಯಾಳಂನಲ್ಲಿ ಚಿತ್ರದ ಎರಡನೇ ಭಾಗವೂ ಇತ್ತೀಚೆಗೆ ಬಿಡುಗಡೆಯಾಗಿದ್ದು, ಹಿಟ್ ಆಗಿತ್ತು.

ಕನ್ನಡದಲ್ಲೂ ಎರಡನೇ ಭಾಗ ರಿಮೇಕ್ ಆಗುತ್ತಿದ್ದು, ‘ದೃಶ್ಯ–2’ ಶೀರ್ಷಿಕೆಯ ಈ ಚಿತ್ರದ ಮುಹೂರ್ತ ಸಮಾರಂಭ ಯಲಹಂಕದ ಬಳಿಯ ವೈಟ್‌ಹೌಸ್‌ನಲ್ಲಿ ಸೋಮವಾರ ಸರಳವಾಗಿ ನೆರವೇರಿತು.

ರವಿಚಂದ್ರನ್

ಚಿತ್ರದ ಚಿತ್ರೀಕರಣವೂ ಆರಂಭವಾಗಿದ್ದು, ಕ್ರೇಜಿಸ್ಟಾರ್ ರವಿಚಂದ್ರನ್ ಈ ಚಿತ್ರದ ನಾಯಕರಾಗಿ ನಟಿಸುತ್ತಿದ್ದಾರೆ. ವಿಶೇಷವೆಂದರೆ ಹಿರಿಯ ನಟ ಅನಂತನಾಗ್ ಕೂಡಾ ಚಿತ್ರತಂಡ ಸೇರಿಕೊಂಡಿದ್ದಾರೆ.

ಚಿತ್ರತಂಡ ಸೇರಿಕೊಂಡಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ಅನಂತನಾಗ್, ‘ನಾನು ಕಳೆದ ಒಂದೂವರೆ ವರ್ಷದಿಂದ ಮನೆಬಿಟ್ಟು ಆಚೆ ಬಂದಿಲ್ಲ. ಬಹಳ ದಿನಗಳ ನಂತರ ಚಿತ್ರೀಕರಣಕ್ಕಾಗಿ ಆಚೆ ಬಂದಿರುವುದು ನನಗೆ ಖುಷಿಯಾಗಿದೆ. ಎಲ್ಲರೂ ಲಾಕ್‌ಡೌನ್ ಸಮಯದಲ್ಲಿ ದಪ್ಪ ಆಗುತ್ತಾರೆ. ನಾನು ನಾಲ್ಕು ಕೆ.ಜಿ ಕಡಿಮೆಯಾಗಿದ್ದೇನೆ’ ಎಂದು ನಕ್ಕರು.. ‘ನನಗೆ ಕಥೆ ಇಷ್ಟವಾಗಿ, ಕೇವಲ ನಾಲ್ಕೈದು ದಿನಗಳಲ್ಲಿ ಈ ಚಿತ್ರದಲ್ಲಿ ನಾನು ಅಭಿನಯಿಸುವುದು ಖಚಿತವಾಯಿತು. ಸ್ವಲ್ಪ ಸಮಯದಲ್ಲಿ ಚಿತ್ರತಂಡ ಎಲ್ಲಾ ಸಿದ್ಧತೆ ಮಾಡಿಕೊಂಡಿರುವುದು ಸಂತಸದ ವಿಷಯ. ಪಿ.ವಾಸು ಅವರ ನಿರ್ದೇಶನದಲ್ಲಿ ನಾನು ನಟಿಸುತ್ತಿರುವ ಎರಡನೇ ಚಿತ್ರವಿದು’ ಎನ್ನುತ್ತಾರೆ ಅನಂತನಾಗ್.

‘ದೃಶ್ಯ’ ಮೊದಲ ಭಾಗದಲ್ಲಿ ನಾಯಕಿಯಾಗಿ ನಟಿಸಿದ್ದ ನವ್ಯ ನಾಯರ್ ಈ ಚಿತ್ರದಲ್ಲೂ ನಾಯಕಿಯಾಗಿ ನಟಿಸುತ್ತಿದ್ದಾರೆ. ರವಿಚಂದ್ರನ್ ಅವರ ಪುತ್ರಿ ಪಾತ್ರದಲ್ಲಿ ಆರೋಹಿ ನಾರಾಯಣ್ ಕಾಣಿಸಿಕೊಳ್ಳುತ್ತಿದ್ದಾರೆ. ಪ್ರಭು ಶಿವಾಜಿ, ಸಾಧುಕೋಕಿಲ, ನೀತು ರೈ, ಪ್ರಮೋದ್ ಶೆಟ್ಟಿ, ಅಶೋಕ್, ಶಿವರಾಂ, ಉನ್ನತಿ, ಕೃಷ್ಣ ಯುಟರ್ನ್, ನಾರಾಯಣ್ ಸ್ವಾಮಿ, ಲಾಸ್ಯ ನಾಗರಾಜ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.

ಇ4 ಎಂಟರ್‌ಟೈನ್‌ಮೆಂಟ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರದ ಕಾರ್ಯಕಾರಿ ನಿರ್ಮಾಪಕರು ಸಿ.ವಿ.ಸಾರಥಿ. ಜೀತು ಜೋಸೆಫ್ ಕಥೆ ಬರೆದಿದ್ದು, ಪಿ.ವಾಸು ನಿರ್ದೇಶನ ಮಾಡುತ್ತಿದ್ದಾರೆ. ಜಿ.ಎಸ್.ವಿ ಸೀತಾರಾಂ ಛಾಯಾಗ್ರಹಣ, ಸುರೇಶ್ ಅರಸ್ ಸಂಕಲನ, ರವಿ ಸಂತೆಹಕ್ಲು ಅವರ ಕಲಾ ನಿರ್ದೇಶನ ಹಾಗೂ ಲೋಕೇಶ್ ಬಿಕೆ ಗೌಡ, ಭರತ್ ಅವರ ನಿರ್ಮಾಣ ನಿರ್ವಹಣೆ ಚಿತ್ರಕ್ಕಿದೆ.

“ When the ambience promotes success, the outcome is excellence!

FEEL OFFICE @ HOME

with the range of our home interior design solutions for your BEDROOM-OFFICE.

GET COMPLETE HOME INTERIORS AT 1-BHK @ JUST ₹ 1.5 LACS | 2-BHK @ JUST ₹ 2.5 LACS | 3-BHK @ JUST ₹ 3.0 LACS*

OUR PROMISE : Free Design Suggestions | Free Door Step Consultation | Quick Quotation | Swift Delivery | Lifetime Service Assurance | 10 Years Warranty

For complete home interiors call 9164 056 000

PRM/KA/1251/309/PR/180120/001878 THANISANDRA MAIN ROAD SKYCITY 20 FLOORS, 3-BHK 2019 Sq. Ft. 8088 779 779 READY TO OCCUPY 10 Mins. from Manyata Tech Park ₹ 84.79 Lacs - 1.12 Cr#

PRM/KA/RERA/1251/446/PR/190130/002312 HORAMAVU KALKERE SKYGRAND 13 FLOORS, 2 & 3-BHK 8880 472 472 Opp. National Public School ₹ 52.83 - 64.84 Lacs#

PRM/KA/RERA/1251/446/PR/180516/001706 HORAMAVU RAMPURA SKYSCAPE 10 FLOORS, 3-BHK (1976 Sq.Ft) 8880 099 291 READY TO OCCUPY 10 Mins. from BBMP Office ₹ 87.28 - 89.40 Lacs#

PRM/KA/RERA/1251/446/PR/210312/004002 K R PURAM SKYSHUBHAM 15 FLOORS, 2&3-BHK 8880 438 000 Behind Garden City University ₹ 36.14 - 74.70 Lacs#

PRM/KA/RERA/1251/446/PR/190722/002710 KITHAGANUR Near Garden City University ₹ 31.71 - 41.64 Lacs# (2 & 3-BHK) Ph : 9164 022 000

PRM/KA/RERA/1251/309/PR/181122/002151 YELAHANKA Kogilu Cross ₹ 34.33 - 36.01 Lacs# (2-BHK) Ph : 8880 461 461

PRM/KA/RERA/1251/309/PR/201106/003686 TUMKUR ROAD Near Sapthagiri Medical College ₹ 27.91 - 46.69 Lacs# (2 & 3-BHK) Ph : 8880 758 758

PRM/KA/RERA/1251/308/PR/201201/003733 HOSA ROAD Jn. Near BOSCH (Electronic City) ₹ 31.00 - 43.02 Lacs# (2 & 3-BHK) Ph : 9164 045 000

SCAN TO KNOW MORE ABOUT ONGOING PROJECTS | TO CHAT WITH US ON WHATSAPP | TO VIEW OUR CUSTOMERS' TESTIMONIALS

Prices mentioned are base price and may vary with dimensions, floors, and availability. Brand names mentioned in this advertisement are for demarcation & not for promotion. Travel time may vary as per the route followed. For more details/information about the projects, visit www.rera.karnataka.gov.in

*T & C Apply

www.dsmaxproperties.com

❦ ಸುಭಾಷಿತ ❦
ಕ್ಷಮೆ ಎಂಬುದು ಹೊಸ ಆರಂಭವೊಂದಕ್ಕೆ ನಿಮಗೆ ಸಿಗುವ ಮತ್ತೊಂದು ಅವಕಾಶ.
–ಡೆಸ್ಮಂಡ್ ಟುಟು

ಕೆರೆಗಳ ಒತ್ತುವರಿ ತೆರವಿಗೆ ಅಲಕ್ಷ್ಯ ಹೈಕೋರ್ಟ್‌ನಿಂದ ಖಡಕ್ ಆದೇಶ

ಕೆರೆಗಳ ಅತಿಕ್ರಮಣವನ್ನು ತೆರವುಗೊಳಿಸಿ ಎಂದು ಸರ್ಕಾರಕ್ಕೆ ಕರ್ನಾಟಕದ ಹೈಕೋರ್ಟ್ ಮತ್ತೊಮ್ಮೆ ನಿರ್ದೇಶನ ನೀಡಿದೆ. ಜಲಮೂಲಗಳ ರಕ್ಷಣೆಗೆ ಸಂಬಂಧಿಸಿದಂತೆ ಈ ನ್ಯಾಯಾಲಯ ಮತ್ತೆ ಮತ್ತೆ ಆದೇಶಗಳನ್ನು, ನಿರ್ದೇಶನಗಳನ್ನು ನೀಡುತ್ತಲೇ ಬಂದಿದೆ. ಕಳೆದ ವರ್ಷ ಅದು ರಾಜ್ಯದ ಎಲ್ಲ ಕೆರೆಗಳ ಸ್ಥಿತಿಗತಿಯ ವಿವರವಾದ ಸಮೀಕ್ಷೆಯನ್ನು ನಡೆಸುವಂತೆ ಹೇಳಿತ್ತು. ರಾಜ್ಯದ ಇತರ ಜಲಾಶಯಗಳ ಸ್ಥಿತಿ ಹಾಗಿರಲಿ, ಬೆಂಗಳೂರಿನದೇ ಜಲತಾಣಗಳ ಅರ್ಧದಷ್ಟನ್ನೂ ಸಮೀಕ್ಷೆ ಮಾಡಿಲ್ಲವೇಕೆ ಎಂದು ಕೇಳಿತ್ತು. ಕಳೆದ ಆರು ತಿಂಗಳಲ್ಲಿ ಇದೇ ವಿಷಯ ಕುರಿತು ನ್ಯಾಯಾಂಗ ಮೂರು ಬಾರಿ ಚಾಟಿ ಎತ್ತಬೇಕಾಗಿ ಬಂದಿದೆ ಎಂದರೆ ಕೆರೆಗಳನ್ನು ಸುಸ್ಥಿತಿಗೆ ತರುವುದಕ್ಕೆ ಮುಂಚೆ ಆಡಳಿತಯಂತ್ರದ ದುಃಸ್ಥಿತಿಯನ್ನು ರಿಪೇರಿ ಮಾಡಬೇಕಾದ ಅಗತ್ಯ ಹೆಚ್ಚಾಗಿದೆ ಎಂಬುದನ್ನು ತೋರಿಸುತ್ತದೆ. ರಾಜ್ಯದ ಬಹುತೇಕ ಎಲ್ಲ ಕೆರೆ-ಜಲಾಶಯಗಳೂ ದೀರ್ಘಕಾಲದ ನಿರ್ಲಕ್ಷ್ಯದಿಂದಾಗಿ ಅವನತಿಯತ್ತ ಸಾಗುತ್ತಿವೆ. ಜನವಸತಿಯಿಂದ ದೂರವಿರುವ ಕೆರೆಗಳೇನೊ ನೈಸರ್ಗಿಕ ಕಾರಣಗಳಿಂದಾಗಿ ಹೂಳು ತುಂಬಿಯೊ, ಜಲಕಳೆಗಳ ದಾಳಿಗೆ ತುತ್ತಾಗಿಯೊ ಆಟದ ಮೈದಾನಗಳಂತಾದರೆ ನಗರಗಳ ಮಧ್ಯೆ ಇರುವ ಕೆರೆಗಳಿಗೆ ಮನುಷ್ಯರಿಂದಾಗಿಯೇ ಇನ್ನೂ ಹತ್ತಾರು ಕಂಟಕಗಳು ವಕ್ಕರಿಸಿರುತ್ತವೆ. ಕಟ್ಟಡಗಳ ಭಗ್ನಾವಶೇಷಗಳ ಸುರಿಗುಂಡಿಗಳಾಗಿ, ಚರಂಡಿ ನೀರಿನ ರೊಚ್ಚೆದ್ರವ್ಯಗಳ ಮಡುಗಳಾಗಿ, ಕ್ರೀಡಾಂಗಣಗಳಾಗಿ, ಬಸ್ ನಿಲ್ದಾಣಗಳಾಗಿ ಇಲ್ಲವೆ ಒತ್ತುವರಿಯ ಮೂಲಕ ಸರ್ಕಾರದ ಮತ್ತು ಖಾಸಗಿಯವರ ಕಟ್ಟಡಗಳ ಆಡುಂಬೊಲವಾಗಿ ಕೂತಿವೆ. ಅಳಿದುಳಿದ ಕೆರೆಗಳನ್ನಾದರೂ ರಕ್ಷಿಸಿಕೊಳ್ಳಬೇಕೆಂದರೆ ಆದ್ಯತೆಯ ಮೇರೆಗೆ ಒತ್ತುವರಿಯನ್ನು ತೆರವುಗೊಳಿಸಿ, ಬಫರ್ ಝೋನ್‌ಗಳನ್ನು ಅಂದರೆ ರಕ್ಷಾಪಟ್ಟಿಯನ್ನು ಹೊಸದಾಗಿ ರೂಪಿಸಬೇಕಾಗುತ್ತದೆ. ಖಾಸಗಿ ಅತಿಕ್ರಮಗಳನ್ನು ತೆರವುಗೊಳಿಸುವಲ್ಲಿ ಕಾನೂನಿನ ಜಂಜಾಟಗಳು, ಅನುಕೂಲಸ್ಥರ ಒತ್ತಡಗಳು ಅಡ್ಡ ಬರುತ್ತಿರುತ್ತವೆ. ಕೆಲವು ಕೆರೆಗಳ ಸುತ್ತ ಸರ್ಕಾರವೇ ಕೊಳೆಗೇರಿ ನಿವಾಸಿಗಳಿಗೆ ವಸತಿ ಕಲ್ಪಿಸಿದ್ದರಿಂದ ಅವರಿಗೆ ಬದಲಿ ನಿವೇಶನಗಳನ್ನು ನೀಡದ ವಿನಾ ಖಾಲಿ ಮಾಡಿಸಲಾಗದು. ಇವೆಲ್ಲ ನಿಧಾನ ನಡೆಗಳ ನಡುವೆ 'ಸರ್ಕಾರಿ ನಿರ್ಮಿತಿಗಳನ್ನಾದರೂ ಮೊದಲು ತ್ವರಿತವಾಗಿ ತೆರವುಗೊಳಿಸಿ' ಎಂದು ಹೈಕೋರ್ಟ್ ಈ ಹಿಂದೆಯೇ ಹೇಳಿತ್ತು. ಅದಕ್ಕೂ ಸರ್ಕಾರ ಮೀನ-ಮೇಷ ಎಣಿಸುತ್ತಿದೆ ಎಂದರೆ ಏನನ್ನೋಣ? ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಕಳೆದ ವರ್ಷ ಜನವರಿ ತಿಂಗಳಲ್ಲಿ, ಕೇರಳದ ಕೊಚ್ಚಿಯ ಸಮೀಪ ನೀರಿನ ತಡಿಯಲ್ಲಿ ನಿರ್ಮಿಸಿದ್ದ ಬಹುಅಂತಸ್ತಿನ ಐದು ಐಷಾರಾಮಿ ಕಟ್ಟಡಗಳನ್ನು ಸ್ಫೋಟಿಸಿ ಬೀಳಿಸಿದಾಗ ನಮ್ಮ ಕಾನೂನುಗಳ ಶಕ್ತಿ ರಾಷ್ಟ್ರದ ಗಮನಕ್ಕೆ ಬಂದಿತ್ತು. ಜಲತಾಣಗಳ ವಿಷಯದಲ್ಲಿ ಅಂಥ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲೇಬೇಕಾದ ಅನಿವಾರ್ಯ ಬರುತ್ತಿದೆ ಎಂಬುದನ್ನು ಅದು ಸಾರಿ ಹೇಳುವಂತಿತ್ತು. ಕರ್ನಾಟಕ ಸರ್ಕಾರ ಕೂಡ ಈ ದಿಸೆಯಲ್ಲಿ ಮೊದಲ ಹೆಜ್ಜೆ ಇಟ್ಟು ತಾನೇ ಕಟ್ಟಿಸಿದ ಅನಧಿಕೃತ ಕಟ್ಟಡಗಳನ್ನು ತಾನೇ ಮುಂದಾಗಿ ಕೆಡವಿ ಕೆರೆಯಂಚುಗಳನ್ನು ತೆರವು ಮಾಡಬೇಕಿತ್ತು. ಖಾಸಗಿ ಒತ್ತುವರಿದಾರರಿಗೆ ಪರೋಕ್ಷ ಎಚ್ಚರಿಕೆಯನ್ನು ನೀಡಬೇಕಿತ್ತು. ಕೆರೆಗಳ ಉಳಿವಿಗಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ದಕ್ಷ ಸರ್ಕಾರಿ ಅಧಿಕಾರಿಗಳಿಗೂ ಬೆಂಬಲ ಸಿಕ್ಕಂತಾಗುತ್ತಿತ್ತು. ಎಂದೋ ಆಗಬೇಕಿದ್ದ ಈ ಕಾರ್ಯಾಚರಣೆಗೆಂದು ಜನರು ಪದೇ ಪದೇ ನ್ಯಾಯಾಂಗದ ಮೆಟ್ಟಿಲನ್ನು ಏರಬೇಕಾಗುತ್ತಿರಲಿಲ್ಲ. ಆಸಕ್ತ ಅಧಿಕಾರಿಗಳು ನ್ಯಾಯಾಂಗದ ನಿರ್ದೇಶನಕ್ಕಾಗಿ ಎದುರು ನೋಡಬೇಕಾಗಿರಲಿಲ್ಲ.

ಅಳಿದುಳಿದ ಕೆರೆಗಳನ್ನಾದರೂ ರಕ್ಷಿಸಿಕೊಳ್ಳಬೇಕೆಂದರೆ ಆದ್ಯತೆಯ ಮೇರೆಗೆ ಒತ್ತುವರಿಯನ್ನು ತೆರವುಗೊಳಿಸಬೇಕು

ನಾಡಿನ ಜಲಮೂಲಗಳ ಬಗ್ಗೆ ಜನರಲ್ಲಿ ಅಪಾರ ಕಳಕಳಿ ಇದೆ. ವಿಜ್ಞಾನಿಗಳು, ಪರಿಸರಾಸಕ್ತ ಜನಸಾಮಾನ್ಯರು, ನಿವೃತ್ತ ಸರ್ಕಾರಿ ಅಧಿಕಾರಿಗಳು, ಕೆರೆಗಳ ನೆರೆಯಲ್ಲಿರುವ ಜಲಪ್ರೇಮಿಗಳು ನಮ್ಮ ಕೆರೆಗಳ ದುಃಸ್ಥಿತಿಯನ್ನು ಕುರಿತು ಆಗಾಗ ಸರ್ಕಾರವನ್ನು ಹಾಗೂ ಮಹಾನಗರಪಾಲಿಕೆಯನ್ನು ಎಚ್ಚರಿಸುತ್ತಲೇ ಇದ್ದುದು, ಪದೇಪದೇ ನ್ಯಾಯಾಲಯಗಳ ಬಾಗಿಲು ತಟ್ಟುತ್ತಿರುವುದು, ತಾವೇ ಮುಂದಾಗಿ ಕೆರೆಗಳ ಜೀರ್ಣೋದ್ಧಾರಕ್ಕೆ ಟೊಂಕ ಕಟ್ಟುತ್ತಿರುವುದು ಇವೆಲ್ಲ ನಮಗೆ ಗೊತ್ತೇ ಇದೆ. ಜನಸಮುದಾಯಕ್ಕಿರುವ ಈ ಕಾಳಜಿಯನ್ನು ನ್ಯಾಯಾಂಗವೂ ಮತ್ತೆ ಮತ್ತೆ ಎತ್ತಿ ತೋರಿಸುತ್ತಿದೆ. ಬೆಂಗಳೂರಿನ ಕೆರೆಗಳ ಸ್ಥಿತಿಗತಿಯ ಸಮೀಕ್ಷೆಗೆ ರಾಷ್ಟ್ರೀಯ ಪರಿಸರ ತಾಂತ್ರಿಕ ಸಂಶೋಧನಾ ಸಂಸ್ಥೆ (ನೀರಿ) ಪರಿಣತರನ್ನೂ ಅದು ಕರೆಸಿತ್ತು. ಹಿಂದಿನ 'ಕೆರೆ ಅಭಿವೃದ್ಧಿ ಪ್ರಾಧಿಕಾರ'ವಾಗಲೀ ಅದರ ಹೊಸ ರೂಪವೆನಿಸಿದ 'ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ'ವಾಗಲೀ ಅಭಿವೃದ್ಧಿಯ ದಾಂಗುಡಿಯಿಂದ ಕೆರೆಗಳನ್ನು ಬಚಾವು ಮಾಡಲಾರದೆಂದು ಒಂದು ತಿಂಗಳ ಹಿಂದಷ್ಟೇ ಅದು ಕೆರೆ-ಜಲಾಶಯಗಳ ರಕ್ಷಣೆಗೆಂದು ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲು ಆದೇಶ ನೀಡಿತ್ತು. ಸರ್ಕಾರೇತರ ಪ್ರತಿನಿಧಿಗಳೂ ಅದರಲ್ಲಿರಬೇಕೆಂದು ಹೇಳಿತ್ತು. ಜಲಮೂಲ ರಕ್ಷಣೆಯ ಹೊಣೆ ಹೊತ್ತ ನಾನಾ ಸರ್ಕಾರಿ ಇಲಾಖೆಗಳ ಕಾರ್ಯವೈಖರಿಯ ಮೇಲ್ವಿಚಾರಣೆ ಮಾಡುವಷ್ಟು ಈ ಸಮಿತಿ ಪ್ರಬಲವಾಗಿರಬೇಕೆಂದು ಕೂಡ ಈಗ ಹೇಳಿದೆ. ಸರ್ಕಾರದ ಸ್ಪಂದನ ಸಾಲುತ್ತಿಲ್ಲವೆಂದು 'ಈಗಿರುವ ಭೂಕಂದಾಯ ಕಾಯ್ದೆಯನ್ನು ಬಿಗಿಯಾಗಿ ಅನುಷ್ಠಾನಕ್ಕೆ ತಂದು ಕೆರೆಯಂಚುಗಳನ್ನು ಕಟ್ಟುನಿಟ್ಟಾಗಿ ತೆರವುಗೊಳಿಸಿ' ಎಂತಲೂ ಹೇಳಿದೆ. ತನ್ನದೇ ಆಜ್ಞೆಗಳೆಲ್ಲ ನೀರಲ್ಲಿ ಹೋಮ ಮಾಡಿದಂತಾಗುತ್ತಿರುವಾಗ ಇನ್ನೆಷ್ಟು ಬಾರಿ, ಇನ್ನೆಷ್ಟು ಬಲವಾಗಿ ನ್ಯಾಯಾಂಗ ಹೀಗೆ ಚಾಟಿ ಬೀಸುತ್ತಿರಬೇಕೊ?

ದಿನದ ಟ್ವೀಟ್

ಇನ್ನೂ ಮುಕ್ತಾಯವಾಗಿಲ್ಲ

ಮೂರನೇ ಅಲೆಯ ಗೀಳು ನಮ್ಮನ್ನು ಆವರಿಸಿಕೊಂಡಿದೆ. ಅದು ಬರುತ್ತದೆಯೇ? ಯಾವಾಗ? ಅದು ಯಾರನ್ನು ಗುರಿಯಾಗಿಸಿಕೊಳ್ಳಲಿದೆ, ಹೀಗೆಲ್ಲ... ಎರಡನೇ ಅಲೆ ಮುಕ್ತಾಯವಾಗಿದೆ ಎಂದು ನಾವು ಭಾವಿಸಿರುವಂತಿದೆ. ಈ ಕಾರಣಕ್ಕೆ ಮೂರನೇ ಅಲೆ ಬರಲಿದೆ. ಇನ್ನೂ ನಿತ್ಯ 40 ಸಾವಿರಕ್ಕೂ ಅಧಿಕ ಪ್ರಕರಣಗಳು ದಾಖಲಾಗುತ್ತಿವೆ. ನಮ್ಮ ಅಲಕ್ಷ್ಯಕ್ಕೆ ಎರಡನೇ ಅಲೆಯಲ್ಲಿ ಬೆಲೆ ತೆತ್ತಿದ್ದೇವೆ. ಮತ್ತೆ ಆ ದುರಂತವನ್ನು ನಾವು ಆಹ್ವಾನಿಸುವುದು ಬೇಡ.

ಶೇಖರ್ ಗುಪ್ತಾ, ಪತ್ರಕರ್ತ

ಕಿಡಿನುಡಿ

ಕಾಂಗ್ರೆಸ್‌ನಲ್ಲಿ ದಲಿತ ಮುಖ್ಯಮಂತ್ರಿ ಚರ್ಚೆ ಶುರುವಾಗಿದೆ. ತಾಕತ್ತಿದ್ದರೆ ಆ ಪಕ್ಷ ಮುಂದಿನ ಮುಖ್ಯಮಂತ್ರಿ ಸ್ಥಾನಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಘೋಷಿಸಲಿ. ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿ ನಾನಲ್ಲ.

ನಳಿನ್ ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ
ಮಂಗಳವಾರ, 16-7-1996

• **ಹರಿದ್ವಾರ, ಉಜ್ಜಯಿನಿ: ನೂಕುನುಗ್ಗಲಿಗೆ 64 ಜನ ಬಲಿ**

ನವದೆಹಲಿ, ಜುಲೈ 15 (ಯುಎನ್ಐ, ಪಿಟಿಐ)– ಮಧ್ಯಪ್ರದೇಶದ ಉಜ್ಜಯಿನಿ ಹಾಗೂ ಉತ್ತರಪ್ರದೇಶದ ಹರಿದ್ವಾರಗಳಲ್ಲಿ ಪವಿತ್ರ 'ಸೋಮಾವತಿ ಅಮಾವಾಸ್ಯೆ'ಯ ದಿನವಾದ ಇಂದು ದೇವರ ದರ್ಶನಕ್ಕಾಗಿ ಉಂಟಾದ ನೂಕುನುಗ್ಗಲಿನಲ್ಲಿ ಕಾಲ್ತುಳಿತಕ್ಕೆ ಸಿಕ್ಕಿ ಒಟ್ಟು 64 ಜನ ಸತ್ತಿದ್ದಾರೆ.

ಮಧ್ಯಪ್ರದೇಶದ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್ ಅವರು ಘಟನೆ ಕುರಿತು ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶ ನೀಡಿದ್ದಾರೆ. ಸತ್ತವರ ಸಮೀಪದ ಬಂಧುಗಳಿಗೆ ಜಿಲ್ಲಾ ಆಡಳಿತ ತಲಾ 15 ಸಾವಿರ ರೂಪಾಯಿಗಳು ಹಾಗೂ ಗಾಯಗೊಂಡವರಿಗೆ ತಲಾ 3 ಸಾವಿರ ರೂಪಾಯಿ ಪರಿಹಾರವನ್ನು ಘೋಷಿಸಿದೆ.

ಉತ್ತರಪ್ರದೇಶ ಸರ್ಕಾರ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶ ನೀಡಿದೆ ಹಾಗೂ ಈ ಘಟನೆಯಲ್ಲಿ ಗಾಯಗೊಂಡಿರುವವರಿಗೆ ತಲಾ 1 ಲಕ್ಷ ರೂಪಾಯಿಗಳ ಪರಿಹಾರವನ್ನು ಘೋಷಿಸಿದೆ.

50 ವರ್ಷಗಳ ಹಿಂದೆ
ಶುಕ್ರವಾರ, 16-7-1971

• **ಕಾವೇರಿ: ಬಲವಂತವಾದರೆ ಉಭಯ ರಾಜ್ಯಗಳ ಮಧುರ ಬಾಂಧವ್ಯಕ್ಕೆ ಧಕ್ಕೆ**

ಬೆಂಗಳೂರು, ಜುಲೈ 15– ಮೈಸೂರು ರಾಜ್ಯದಲ್ಲಿ ಮಧ್ಯಕಾಲದ ಸರ್ಕಾರ ಆಡಳಿತದಲ್ಲಿರುವಾಗ, ಕಾವೇರಿ ವಿವಾದದ ಬಗ್ಗೆ ಬಲವಂತದಿಂದ ತೀರ್ಮಾನಕ್ಕೆ ಬರಲು ತಮಿಳುನಾಡು ಸರ್ಕಾರ ಪ್ರಯತ್ನಿಸುವುದು ನ್ಯಾಯವಾದುದಲ್ಲವೆಂದೂ, ಇದರಿಂದ ಎರಡು ರಾಜ್ಯಗಳ ನಡುವೆ ಇರುವ ಮಧುರ ಬಾಂಧವ್ಯಕ್ಕೆ ಧಕ್ಕೆ ಉಂಟಾಗುವುದೆಂದೂ ರಾಜ್ಯದ ಆಡಳಿತ ಕಾಂಗ್ರೆಸ್ಸಿನ ಸಮಾಜವಾದಿ ಕಾರ್ಯಾಚರಣೆ ವೇದಿಕೆ ತಿಳಿಸಿದೆ.

ಆವೇಶಪೂರಿತ: ಕಾವೇರಿ ವಿವಾದದ ಬಗ್ಗೆ ತಮಿಳುನಾಡು ವಿಧಾನಮಂಡಲ ಅಂಗೀಕರಿಸಿರುವ ನಿರ್ಣಯ ಆವೇಶದಿಂದ ಕೂಡಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ. ನದಿ ನೀರಿನ ಹಕ್ಕುಗಳನ್ನು ಕರಾರುವಾಕ್ಕಾದ ಅಂಕಿ ಅಂಶಗಳ ಆಧಾರದ ಮೇಲೆ ಮಾತ್ರ ಚರ್ಚಿಸಲು ಸಾಧ್ಯವೆಂದೂ ಅಂಕಿ ಅಂಶಗಳ ಬಗ್ಗೆ ಭಿನ್ನಾಭಿಪ್ರಾಯಗಳಿದ್ದರೆ ಅವನ್ನು ನಿಷ್ಪಕ್ಷಪಾತವಾದ ಸಮಿತಿ ಪರಿಶೀಲಿಸಿ ತೀರ್ಮಾನಿಸಬೇಕಾಗಿದೆ ಎಂದೂ ಸಮಿತಿ ತಿಳಿಸಿದೆ.

ಭೋಗದ ಬೆನ್ನು ಬಿದ್ದವರು ಬೋಗಿಯನ್ನೇ ಮಾರಲು ಅಣಿಯಾದರು

ಭ್ರಷ್ಟಾಚಾರ ಮುಗಿಲು: ಜನ ದಿಗಿಲು

ಗತಿಬಿಂಬ

ವೈ.ಗ.ಜಗದೀಶ್

'ಭ್ರಷ್ಟಾಚಾರಮುಕ್ತ, ಪಾರದರ್ಶಕ ಆಡಳಿತ ನೀಡುವ ಜತೆಗೆ ಅಭಿವೃದ್ಧಿಯ ಚಹರೆಯಲ್ಲಿ ದೇಶಕ್ಕೆ ಮಾದರಿಯಾಗುವ ನವಕರ್ನಾಟಕ ನಿರ್ಮಾಣವೇ ನಮ್ಮ ಗುರಿ' ಎಂದು ಕೂಗಿ ಹೇಳುತ್ತಿದ್ದ ಬಿಜೆಪಿ 'ಮುಕುಟಮಣಿ'ಗಳು ರಾಜ್ಯದಲ್ಲಿ ಅಧಿಕಾರ ಹಿಡಿದು ಎರಡು ವರ್ಷ ಸಮೀಪಿಸುತ್ತಿದೆ. 'ಡಬ್ಬಲ್ ಎಂಜಿನ್ ಸರ್ಕಾರ'ದ ಆಮಿಷ ಕರಗಿ ಹೋಗಿದೆ. ಎಂಜಿನ್‌ನಿಂದ ಬೋಗಿಗಳನ್ನು ಕಳಚಿ ಬಿಸಾಕಲಾಗಿದೆ. ಭೋಗದ ಬೆನ್ನು ಬಿದ್ದವರು ಬೋಗಿಯನ್ನೇ ಮಾರುವ ಸ್ಥಿತಿಗೆ ತಲುಪಿದ್ದು, ಇದೇ ರೀತಿ ಮುಂದುವರಿದರೆ ಹಳಿ ಮಾತ್ರವಲ್ಲ; ಹಳಿಯಡಿಯ ಜಲ್ಲಿಕಲ್ಲುಗಳೂ ಉಳಿಯಲಿಕ್ಕಿಲ್ಲ ಎಂಬ ಟೀಕೆಗಳು ಪರಿವಾರದ 'ಗರ್ಭಗುಡಿ'ಯಿಂದಲೇ ಠೇಂಕರಿಸತೊಡಗಿವೆ.

ನಿಷ್ಕ್ರಿಯತೆ, ಅದಕ್ಷತೆಯ ಕಾರಣ ಕೊಟ್ಟು ಎರಡೇ ವರ್ಷಗಳಲ್ಲಿ ತಮ್ಮ ಸಂಪುಟ ಸದಸ್ಯರನ್ನು ಬದಲಿಸಿರುವ ಪ್ರಧಾನಿ ನರೇಂದ್ರ ಮೋದಿ, ಹೊಸ ಮುಖಗಳಿಗೆ ಅವಕಾಶ ಕೊಟ್ಟಿದ್ದಾರೆ. ಅವರದೇ ಮೂಗಳತೆಯಲ್ಲಿ ನಡೆಯುತ್ತಿರುವ ಕರ್ನಾಟಕ ಸರ್ಕಾರ ಮಾತ್ರ ತನ್ನೆಲ್ಲ ಕ್ರಿಯಾಶೀಲತೆ, ಹೊಸತನ, ಇಚ್ಛಾಶಕ್ತಿಯನ್ನು ಕಳೆದುಕೊಂಡು ಬಸವನಹುಳುವಿನಂತೆ ವರಕುತ್ತಿದೆ. ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸಚಿವ ಗಡಣದಲ್ಲಿ ಬಹುತೇಕರು ಆಡಳಿತಾತ್ಮಕವಾಗಿ ನಿಷ್ಕ್ರಿಯರು. ಅನೇಕರು ವಿಧಾನಸೌಧ-ವಿಕಾಸಸೌಧಗಳ ತಮ್ಮ ಕೊಠಡಿಯಲ್ಲೇ ಕಾಣಿಸಿಕೊಳ್ಳುತ್ತಿಲ್ಲ. ಅಭಿವೃದ್ಧಿಯ ವಿಷಯದಲ್ಲಿ ಬಹುತೇಕರ ಧೋರಣೆ ನಕಾರ. ಮೂರು ತಲೆಮಾರಿಗೆ ಆಗುವಷ್ಟು ಸಂಪಾದನೆಯಲ್ಲಿ ಸರ್ವಕಲೆಯನ್ನೂ ಸಾಕಾರಗೊಳಿಸಿ ಭಾಗಾಕಾರ-ಗುಣಾಕಾರದ ಲೆಕ್ಕದಲ್ಲಿ ಸಕ್ರಿಯರು.

ಬೊಟ್ಟು ಮಾಡಿ ತೋರುವಷ್ಟು ಭ್ರಷ್ಟಾಚಾರ ಪ್ರಕರಣಗಳು ಹೊರಬರದೇ ಇರಲು ಎರಡು ಪ್ರಮುಖ ಕಾರಣಗಳಿವೆ. ಭ್ರಷ್ಟರ ಹಲ್ಲು ಕಿತ್ತು, ಹೆಡೆಮುರಿ ಕಟ್ಟುತ್ತಿದ್ದ ಲೋಕಾಯುಕ್ತದ ಬೆನ್ನುಮೂಳೆ ಮುರಿದು, ಹಲ್ಲು ಕಿತ್ತ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಭ್ರಷ್ಟರ ವಿರುದ್ಧದ ದೊಡ್ಡ ಅಸ್ತ್ರವೊಂದನ್ನು ಚಾಮುಂಡಿ ತಪ್ಪಲಿಗೆ ಎಸೆದುಬಿಟ್ಟಿತು. ತಮ್ಮ ಮಾನಹಾನಿ ಮಾಡುವ ಸುದ್ದಿ ಪ್ರಕಟಿಸಬಾರದು ಎಂದು ತಡೆಯಾಜ್ಞೆ ಕೋರಿ ಕೋರ್ಟ್‌ಗೆ ಹೋದ ಸಚಿವರು, ಅಧಿಕಾರಿಗಳಿಗೆ 'ರಕ್ಷಣಾ ಕವಚ' ದೊರಕಿತು. ಹೀಗಾಗಿ, ಭ್ರಷ್ಟಾಚಾರದ ಪ್ರಕರಣಗಳು ಬಾಯಿಚಪಲದ ಚರ್ಚೆಗೆ ಸೀಮಿತವಾಗಿವೆ. ಯಾರ ವಿರುದ್ಧವೂ ಬರೆಯದಂತೆ ಮಾಧ್ಯಮಗಳನ್ನು ಕೈ-ಬಾಯಿ ಕಟ್ಟಿ ಕೂರಿಸಿದ ವಿಷಮ ಸನ್ನಿವೇಶ ಸೃಷ್ಟಿಯಾಗಿದೆ.

ದಶಕದ ಹಿಂದೆ ರಾಜ್ಯದಲ್ಲಿ ಬಿಜೆಪಿಯು ಆಡಳಿತದ ಚುಕ್ಕಾಣಿ ಹಿಡಿದಿದ್ದಾಗ ಅಕ್ರಮ ಗಣಿಗಾರಿಕೆಯ ವಿಷವರ್ತುಲ ರಾಜ್ಯವನ್ನು ಹುರಿದು ಮುಕ್ಕಿತ್ತು. ಅದಕ್ಕೆ ತಕ್ಕ ಪ್ರಾಯಶ್ಚಿತ್ತವನ್ನೂ ಬಿಜೆಪಿ ತೆತ್ತಿತು. ಈಗ ರಿಯಲ್ ಎಸ್ಟೇಟ್, ಔದ್ಯಮಿಕ ಭ್ರಷ್ಟತೆ ಹಾಗೂ ಕಾಮಗಾರಿ ಗುತ್ತಿಗೆಯ ಅಕ್ರಮವೇ ಸರ್ಕಾರಕ್ಕೆ ಮಸಿ ಮೆತ್ತುತ್ತಿದೆ. ಎಲ್ಲವೂ ಚೆಂದವಾಗಿ ನಡೆಯುತ್ತಿದ್ದಾಗ, ಜನರು ನಿರುಮ್ಮಳರಾಗಿ ದುಡಿದು ತಿನ್ನುವ ಪರಿಸ್ಥಿತಿ ಇದ್ದಾಗ ಮಾಧ್ಯಮದವರು ಭ್ರಷ್ಟಾಚಾರದ ಪ್ರಕರಣಗಳ ಬೆನ್ನು ಹತ್ತುತ್ತಿದ್ದರು. ಕೋವಿಡ್ ಸಂಕಟ ಹಾಗೂ ಜನಸಮುದಾಯವೇ ಆತಂಕದ ದಿನಗಳನ್ನು ಎದುರು ನೋಡುತ್ತಿದ್ದ ಹೊತ್ತಿನೊಳಗೆ ಆಡಳಿತಗಾರರ ನಡಾವಳಿಯ ಮೇಲೆ ಕಣ್ಣಿಡಲು ಸಾಧ್ಯವಾಗದು. ಸರ್ಕಾರದ ಚುಕ್ಕಾಣಿ ಹಿಡಿದವರು ಇಂತಹ ಕಷ್ಟಕಾಲವನ್ನು ಜನೋಪಯೋಗಿ ಕೆಲಸಕ್ಕೆ ಬಳಸಬೇಕಿತ್ತು. ಆದರೆ, ದುಡ್ಡಿನ ಕೊಪ್ಪರಿಗೆ ತುಂಬಿಸುವ 'ಕಾಸಿನ ಕಾಯಕ'ದಲ್ಲಿ ತಲ್ಲೀನರಾದರು.

ಈ ಸರ್ಕಾರ ಅಸ್ತಿತ್ವಕ್ಕೆ ಬರುತ್ತಿದ್ದಂತೆಯೇ ಭೂಸುಧಾರಣೆ ಕಾಯ್ದೆಗೆ ತಿದ್ದುಪಡಿ ತರುವ ಜತೆಗೆ, ಖಾಸಗಿ ಭೂಮಿಯ ಮಧ್ಯೆ ಇರುವ ಸರ್ಕಾರಿ ಖರಾಬು ಭೂಮಿಯನ್ನು ಮಾರ್ಗಸೂಚಿ ದರಕ್ಕೆ ಭೂಮಾಲೀಕರಿಗೆ ಬಿಟ್ಟುಕೊಡುವ ನಿರ್ಣಯ ತೆಗೆದುಕೊಳ್ಳಲಾಯಿತು. ಬೆಂಗಳೂರು ಒಂದರಲ್ಲೇ ಭೂಸುಧಾರಣೆ ವ್ಯಾಜ್ಯಕ್ಕೆ (ಕೃಷಿಕರಲ್ಲದವರು ಹಾಗೂ ಹೆಚ್ಚಿನ ಆದಾಯ ಇರುವವರು ಭೂಮಿ ಖರೀದಿಸಿದ ಪ್ರಕರಣ) ಒಳಪಟ್ಟ 25 ಸಾವಿರ ಎಕರೆಗೂ ಹೆಚ್ಚು ಭೂಮಿ ಈಗ ಶ್ರೀಮಂತರು, ಕಾರ್ಪೊರೇಟ್ ಉದ್ಯಮಿಗಳ ಪಾಲಾಗುತ್ತಿದೆ. ಇದನ್ನು ವಶಕ್ಕೆ ಪಡೆದು ಹರಾಜು ಹಾಕಿದ್ದರೆ ಬೊಕ್ಕಸಕ್ಕೆ ಕನಿಷ್ಠ ₹ 25 ಸಾವಿರ ಕೋಟಿ ಬರುತ್ತಿತ್ತು. ಖಾಸಗಿ ಭೂಮಿ ಮಧ್ಯೆ ಇದ್ದ ಸರ್ಕಾರ ಭೂಮಿ ಬಿಟ್ಟುಕೊಡುವ ನಿರ್ಣಯದ ಹಿಂದೆಯೂ ರಿಯಲ್ ಎಸ್ಟೇಟ್ ವ್ಯವಹಾರದ ಕಮಟು ವಾಸನೆ ಬಡಿಯುತ್ತಿದೆ. ಭೂಮಿಯಡಿ ಎಷ್ಟು ಪ್ರಮಾಣದ ಅಮೂಲ್ಯ ಅದಿರು ಇದೆ ಎಂದು ಅಂದಾಜನ್ನೂ ಮಾಡದೆ ಜಿಂದಾಲ್ ಕಂಪನಿಗೆ 3,667 ಎಕರೆಯನ್ನು ಬಿಟ್ಟುಕೊಡುವ ನಿರ್ಧಾರವನ್ನೂ ಮಾಡಲಾಯಿತು.

ಸಚಿವರ ಕರ್ಮಕಾಂಡ ಹೇಳಿ ಮುಗಿಸುವಂತ ಹದ್ದೇ ಅಲ್ಲ. 'ಲ್ಯಾಬ್' ಆರಂಭಿಸುವ ಪ್ರಸ್ತಾವ ಸರ್ಕಾರದ ಮುಂದೆ ಬಂದಿತ್ತು. ಗುತ್ತಿಗೆದಾರರನ್ನು ಖುದ್ದು ಕರೆಯಿಸಿದ ಪ್ರಭಾವಿಯೊಬ್ಬರು, 'ಒಟ್ಟು ಬಂಡವಾಳದಲ್ಲಿ ಶೇಕಡ 40ರಷ್ಟು ಹೂಡಿಕೆ ಮಾಡುವೆ; ಶೇಕಡ 50ರಷ್ಟು ಪಾಲುದಾರಿಕೆ ಕೊಡಿ' ಎಂದು ಷರತ್ತು ಒಡ್ಡಿದರು. ಇಲ್ಲಿ ಹೂಡಿಕೆ ಮಾಡಿದರೆ ಉದ್ಧಾರವಾಗುವುದು ಅಸಾಧ್ಯ ಎಂದರಿತ ಆ ಗುತ್ತಿಗೆದಾರ ಕಡಿಮೆ 'ಪರ್ಸಂಟೇಜ್' ನಡೆಯುತ್ತಿರುವ ಪಂಜಾಬ್, ಬಿಹಾರ, ಜಾರ್ಖಂಡ್ ಕಡೆ ಮುಖ ಮಾಡಿದರು. ಈ ಸರ್ಕಾರ ಅಸ್ತಿತ್ವಕ್ಕೆ ಬರಲು ನೆರವಾದ ಸಚಿವರೊಬ್ಬರ ಮುಂದೆ ₹ 5 ಕೋಟಿ ಮೊತ್ತದ ಯೋಜನೆಯ ಪ್ರಸ್ತಾಪ ಇತ್ತು. ಪರ್ಸಂಟೇಜ್ ವ್ಯವಹಾರ ಕೈಬಿಟ್ಟ ಅವರು ₹ 1.25 ಕೋಟಿ ಕೊಡಿ ಎಂದು ನೇರಾನೇರ ಕೇಳಿಬಿಟ್ಟದ್ದೂ ಉಂಟು.

ಹಿಂದೆಲ್ಲ ಬಹುತೇಕ ಸಚಿವರು ತಮ್ಮ ವ್ಯವಹಾರಕ್ಕೆ ಮಧ್ಯವರ್ತಿಗಳನ್ನು ಇಟ್ಟುಕೊಳ್ಳುತ್ತಿದ್ದುದು ರೂಢಿ. ಈಗಿನ ಗುತ್ತಿಗೆದಾರರಿಗೆ ನೇರವಾಗಿ ಕರೆ ಮಾಡುವ ಸಚಿವರು ಶೇ 10ರಷ್ಟು ಕಮಿಷನ್ ಕೇಳುವುದು ಮಾಮೂಲಿ ಎಂಬುದು ಗುತ್ತಿಗೆದಾರರ ಸಿಟ್ಟಿನ ನುಡಿ.

ಪಿ.ಎಂ ಕೇರ್ಸ್ ನಿಧಿಯಡಿ ಆಮ್ಲಜನಕ ತಯಾರಿಕಾ ಘಟಕಗಳ ಯೋಜನೆಯ ಪ್ರಸ್ತಾವ ಕೂಡ ಸಿದ್ಧವಾಗಿ, ಟೆಂಡರ್ ಕರೆಯಬೇಕಾಗಿತ್ತು. ಘಟಕ ಸ್ಥಾಪನೆಯಾಗಿದ್ದರೆ ಕೋವಿಡ್ ಸಾವಿನ ಸಂಖ್ಯೆ 36 ಸಾವಿರ ಮುಟ್ಟುತ್ತಿರಲಿಲ್ಲ. ಆದರೆ, ಪರ್ಸಂಟೇಜ್ ಕಾರಣಕ್ಕೆ ಯೋಜನೆ ಜಾರಿಯಾಗಲೇ ಇಲ್ಲ. ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಈ ಕಡತ ತರಿಸಿ, ವಿಚಾರಣೆ ನಡೆಸಿದರೆ ಆಮ್ಲಜನಕ ಸಿಗದೇ ಜೀವವನ್ನು ಬಲಿಕೊಟ್ಟವರ ಆತ್ಮಕ್ಕಾದರೂ ಶಾಂತಿ ಸಿಕ್ಕೀತು.

ಕೋವಿಡ್‌ನಿಂದ ಭೀಕರ ಸ್ಥಿತಿ ಇದ್ದಾಗ ರೆಮ್‌ಡಿಸಿವಿರ್ ಔಷಧಿಯ ಕೃತಕ ಕೊರತೆ ಸೃಷ್ಟಿಯಾಯಿತು. ಅದರ ಹಿಂದೆ ದೊಡ್ಡ ವ್ಯವಹಾರ ಜಾಲವೇ ಇತ್ತು. ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಸಿಸಿಬಿಯನ್ನು ಹುರಿಗೊಳಿಸಿ ದಾಳಿ ನಡೆಸಿದ್ದರಿಂದಾಗಿ ಅಕ್ರಮ ಜಾಲ ತಣ್ಣಗಾಯಿತು. ಒಂದಿಷ್ಟು ಜನರ ಜೀವ ಉಳಿಯಿತು.

ಉದ್ಯಮದ ವ್ಯವಹಾರಕ್ಕೆ ರಾಜಕೀಯವನ್ನು ಬಳಸಿಕೊಂಡ, ರಾಜಕೀಯವನ್ನೇ ಉದ್ಯಮವಾಗಿ ಮಾಡಿಕೊಂಡ ಎರಡು ಬಗೆಯ ಜನ ಈ ಸರ್ಕಾರದಲ್ಲಿದ್ದಾರೆ. ಉದ್ಯಮದ ಕಾರಣಕ್ಕೆ ಸಚಿವಗಿರಿಯನ್ನು ಬಳಸಿಕೊಂಡವರು ಸುದ್ದಿವೀರರೂ ಆಗಿದ್ದು, ಈ ವಿಷಯದಲ್ಲಿ ಅವರ ನೈಪುಣ್ಯವೂ ಚೆನ್ನಾಗಿದೆ. ಹಾಗಾಗಿ, ಇವರ ಸದ್ದೇ ದೊಡ್ಡದಿದೆ. ಈ ನಾಜೂಕು ಗೊತ್ತಿಲ್ಲದೆ ತಮ್ಮ ಪಾಡಿಗೆ ತಾವು ಕೆಲಸ ಮಾಡುತ್ತಿರುವವರೂ ಇದ್ದಾರೆ. ಮಾಡಿದ ಕೆಲಸಕ್ಕೆ ಪ್ರಚಾರ ಪಡೆಯುವವರು ಕೆಲವರಿದ್ದಾರೆ. ಆದರೆ, ದುಡ್ಡನ್ನೇ ದೊಡ್ಡಪ್ಪ ಎಂದು ನಂಬಿ ಧನಜಪವನ್ನೇ ಮಾಡುವವರು ಕರ್ನಾಟಕಕ್ಕೆ ಮಾರಕ. ದುಡ್ಡು ಸಂಪಾದನೆಯನ್ನೇ ರಾಜಕೀಯವೆಂದು ನಂಬಿದವರು ಕೊನೆಯಲ್ಲಿ ಉಳಿಸಿಹೋಗುವುದೇನು ಎಂಬುದು ಅವರಿಗೆ ಕೂಡ ಗೊತ್ತಿರಲಿಕ್ಕಿಲ್ಲ. ಇದನ್ನು ಕಂಡಾಗಲೆಲ್ಲ ಬಸವಣ್ಣನವರ ವಚನವೊಂದು ನೆನಪಿಗೆ ಇಳಿಯುತ್ತದೆ.

'ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯಾ/ನೆಲನಾಳ್ವನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ ನೋಡಯ್ಯಾ..'

ರಾಜತ್ವ ಕಳೆದುಕೊಂಡ ರಾಜನ ಶವಕ್ಕೆ ಮೊಲದ ಶವಕ್ಕೆ ಇದ್ದ ಬೆಲೆಯೂ ಇಲ್ಲ ಎಂಬುದು ಇದರ ಅರ್ಥ. ಇದು ಸಚಿವರಿಗೆ, ಶಾಸಕರಿಗೆ ಅರ್ಥವಾದರೆ ರಾಜ್ಯ ಉದ್ಧಾರವಾದೀತು.

ಚುರುಮುರಿ

ತಪ್ಪು ಯಾರದು?

• ಬಿ.ಎನ್.ಮಲ್ಲೇಶ್

ದುಬ್ಬೀರ ಟಿ.ವಿ.ಯಲ್ಲಿ ಮಂಡ್ಯದ ರೋಚಕ ಮಾತಿನ ಕದನವನ್ನು ಬಾಯಿ ಬಿಟ್ಟುಕೊಂಡು ನೋಡುತ್ತಿದ್ದ. ಹೆಂಡತಿ ಸುಬ್ಬಮ್ಮ ರಿಮೋಟ್ ಕಿತ್ತುಕೊಂಡು 'ದಿನ ಬೆಳಗಾದ್ರೆ ಬರೀ ಸುಡುಗಾಡು ನ್ಯೂಸ್ ಹಾಕ್ಕಂಡು ಕೂತ್ಕಂತೀರ, ನಾನು ಸೀರಿಯಲ್ ನೋಡ್ಬೇಕು... ಇವತ್ತು ಅತ್ತೆ ಸೊಸೆ ಜಗಳ ಕ್ಲೈಮ್ಯಾಕ್ಸ್ ಇದೆ' ಎಂದಳು.

'ಲೇ ರಿಮೋಟ್ ಕೊಡೇ ಇಲ್ಲಿ... ಸೀರಿಯಲ್‌ನಲ್ಲಿ ಅತ್ತೆ– ಸೊಸೆ ಜಗಳ ಏನ್ ನೋಡ್ತೀಯ, ಕುಮಾರಣ್ಣ ಅಂಡ್ ಮಂಡ್ಯ ಸೊಸೆ ಸುಮಲತಾ ಜಗಳ ನೋಡೇ ಇಲ್ಲಿ ಎಷ್ಟು ಸಖತ್ತಾಗಿದೆ' ಎಂದ ದುಬ್ಬೀರ.

'ಅದು ನೀವೇ ನೋಡ್ಕಳಿ, ಇವತ್ತು ಅತ್ತೆ–ಸೊಸೆ ಮಧ್ಯೆ ಪಕ್ಕದ ಮನೆಯವಳು ಕಡ್ಡಿ ಕೆರೆಯೋ ಸೀನ್ ಇದೆ ನಾನು ನೋಡ್ಬೇಕು...' ಸುಬ್ಬಮ್ಮ ರಿಮೋಟ್ ಕೊಡಲಿಲ್ಲ.

'ನಿನ್ನೆಲಿ, ಅವರಿಗಿಂತ ನಮ್ಮ ಟಿ.ವಿ. ರಿಪೋರ್ಟ್ರುಗಳು ಎಷ್ಟು ಚೆನ್ನಾಗಿ ಕಡ್ಡಿ ಕೆರೀತಾರೆ ನೋಡಿಲ್ಲಿ, ಕೆಆರ್‌ಎಸ್ ಡ್ಯಾಮಿನ ಕತೆ ಎಷ್ಟು ರೋಮಾಂಚಕ ಆಗ್ತಾ ಐತೆ. ನಮ್ಮ ರಿಪೋರ್ಟ್ರುಗಳು ಕುಮಾರಣ್ಣನತ್ರ ಹೋಗಿ 'ಎಂ.ಪಿ. ಮೇಡಮ್ಮು ಹಿಂಗಂದ್ರು, ನೀವೇನಂತೀರಾ?' ಅಂತ ಉಪ್ಪು ಕಾರ ಸೇರ್ಸಿ ಕೇಳ್ತಾರೆ. ಅದಕ್ಕೆ ಕುಮಾರಣ್ಣ ಟವೆಲ್ ಕೊಡವಿ ಏನಾದ್ರು ಅಂದ್ರೆ ಅದನ್ನು ಎಂ.ಪಿ. ಮೇಡಮ್ಮತ್ರ ಹೋಗಿ 'ಕುಮಾರಣ್ಣ ಟವೆಲ್ ಕೊಡವಿ ಇಂಗಿಂಗೆ ಏನೇನೋ ಬೈದ್ರು, ನೀವೇನ್ ಬೈತೀರಾ?' ಅಂತ ಕೇಳ್ತಾರೆ. ಇಂಗೆ ಇಬ್ಬರ ನಡುವೆ ಬೆಳಿಗ್ಗೆ ಹಚ್ಚಿದ ಬೆಂಕಿ ಸಾಯಂಕಾಲ ಆಗೋದ್ರೊಳಗೆ ಬಿರುಗಾಳಿ ಆಗೋತರ ಮಾಡಿಬಿಟ್ಟರ್ತಾರೆ....' ದುಬ್ಬೀರ ನಕ್ಕ.

'ಅಷ್ಟೇ ಅಲ್ಲರೀ, ಟಿ.ವಿ. ಸ್ಕ್ರೀನ್ ಮೇಲೂ ಭುಗು ಭುಗು ಬೆಂಕಿ ಹಚ್ಚಿರ್ತಾರೆ. ನಮ್ಮಲ್ಲೇ ಮೊದಲು, ಸೂಪರ್ ಎಕ್ಸ್‌ಕ್ಲೂಸಿವ್ವು, ಭಯಂಕರ ಬ್ರೇಕಿಂಗು ಅಂತ ತೋರಿಸ್ತಿರ್ತಾರೆ. ಈಗ ಅದೇನರೆ ಇರ್ಲಿ, ಇವರ ಜಗಳದಲ್ಲಿ ತಪ್ಪು ಯಾರದು ಅಂತೀರಾ?'

'ತಪ್ಪು ಇಬ್ರುದೂ ಅಲ್ಲ'.

'ಮತ್ತೆ?'

'ಇವರ ಜಗಳಕ್ಕೆ ಕಾರಣವಾದ ಕೆಆರ್‌ಎಸ್ ಡ್ಯಾಂದೇ ತಪ್ಪು' ದುಬ್ಬೀರ ತೀರ್ಪು ನೀಡಿದ!

ಸಂಗತ

ಕನ್ನಡದಲ್ಲಿ 'ಸ್ಪರ್ಧಾತ್ಮಕ' ಬೇಡಿಕೆ

ಕೇಂದ್ರ ಸರ್ಕಾರದ ಅಧೀನ ಸಂಸ್ಥೆಗಳ ಕೆಳ ಹಂತದ ಹುದ್ದೆಗಳನ್ನು ಆಯಾ ಭಾಷಾ ಪ್ರದೇಶದವರಿಗೇ ಮೀಸಲಿರಿಸಿದಾಗ ಮಾತ್ರ ಸ್ಥಳೀಯರಿಗೆ ಉದ್ಯೋಗ ದೊರೆಯಲು ಸಾಧ್ಯ

• ಡಿ.ಎಸ್.ರಾಮಸ್ವಾಮಿ

ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಪರೀಕ್ಷೆಗಳಲ್ಲೂ ಕನ್ನಡದಲ್ಲಿ ಪ್ರಶ್ನೋತ್ತರ ಇರಬೇಕೆಂಬ ಕೂಗು ಎದ್ದಿದೆ. ಕನ್ನಡಪರ ಸಂಘಟನೆಗಳೂ ರಾಜಕಾರಣಿಗಳೂ ಇದಕ್ಕೆ ದನಿಗೂಡಿಸಿದ್ದಾರೆ. ಸದ್ಯಕ್ಕೆ ಕೇಂದ್ರ ಸರ್ಕಾರವು ಪರೀಕ್ಷಾ ಪ್ರಕ್ರಿಯೆಗೆ ತಡೆಯೊಡ್ಡಿದ್ದು, ಈ ಸಂಬಂಧ ರಚಿಸಿರುವ ಪರಿಶೀಲನಾ ಸಮಿತಿಗೆ 15 ದಿನಗಳಲ್ಲಿ ವರದಿ ನೀಡುವಂತೆ ತಿಳಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವರು ಹೇಳಿರುವುದು ಮಹತ್ವ ಪಡೆದಿದೆ.

ಈ ಮೊದಲು ಬ್ಯಾಂಕಿಂಗ್ ಪರೀಕ್ಷೆಗಳನ್ನು ಎಲ್ಲಿಯವರೆಗೆ ಬಿಎಸ್‌ಆರ್‌ಬಿ (ಬ್ಯಾಂಕಿಂಗ್ ಸರ್ವಿಸ್ ರೆಕ್ರೂಟ್‌ಮೆಂಟ್ ಬೋರ್ಡ್) ನಿರ್ವಹಿಸುತ್ತಿತ್ತೋ ಅಲ್ಲಿಯವರೆಗೂ ಆಯಾ ಪ್ರದೇಶದ ಭಾಷೆಗಳನ್ನು ಅರಿತಿರುವುದೇ ಉದ್ಯೋಗಕ್ಕೆ ಅರ್ಜಿ ಹಾಕುವ ಮೊದಲ ಅರ್ಹತೆ ಆಗಿತ್ತು. ತನ್ನ ಆಡಳಿತ ವ್ಯಾಪ್ತಿಗೆ ಬರುವ ಪ್ರದೇಶಗಳಲ್ಲಿರುವ ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಸಿಬ್ಬಂದಿಯನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಬಿಎಸ್‌ಆರ್‌ಬಿ ಆಯ್ಕೆ ಮಾಡುತ್ತಿತ್ತು. ಈ ಕಾರಣದಿಂದಲೇ ಸೇವಕ ಮತ್ತು ಗುಮಾಸ್ತ ದರ್ಜೆಯ ಹುದ್ದೆಗಳಿಗೆ ಆಯಾ ಭಾಷೆಯ ಪ್ರದೇಶದಲ್ಲಿರುವ ಬ್ಯಾಂಕ್ ಶಾಖೆಗಳಿಗೆ ಆಯಾ ಭಾಷೆ ಬಲ್ಲವರೇ ಆಯ್ಕೆಯಾಗುತ್ತಿದ್ದರು.

ಯಾವಾಗ ಐಬಿಪಿಎಸ್ (ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆ) ಜನ್ಮತಾಳಿತೋ ಆಗಿನಿಂದ ಪ್ರಾದೇಶಿಕ ಅಸ್ಮಿತೆಯನ್ನು ಕಸಿದು ಆ ಜಾಗದಲ್ಲಿ ಅರ್ಹತೆ ಅನ್ನುವ ಮಾನದಂಡ ತರಲಾಯಿತು. ಈ ಸಂಸ್ಥೆ ನಡೆಸುವ ಪರೀಕ್ಷೆಗಳು ಅಖಿಲ ಭಾರತ ಮಟ್ಟದಲ್ಲಿ ನಡೆಯುವುದರಿಂದ ಹುದ್ದೆಗೆ ತಕ್ಕ ವಿದ್ಯಾರ್ಹತೆ ಇದ್ದವರೆಲ್ಲ ಅರ್ಜಿ ಹಾಕಬಹುದು. ಈ ಕಾರಣದಿಂದಾಗಿಯೇ, ಹೊರ ರಾಜ್ಯಗಳಲ್ಲಿ ತರಬೇತಿ ಪಡೆದ ಕನ್ನಡೇತರರು ಆಯ್ಕೆಯಾಗಿ ನಮ್ಮ ಹಳ್ಳಿಗಳ ಬ್ಯಾಂಕ್ ಶಾಖೆಗಳಿಗೂ ನೇಮಕವಾಗುತ್ತಿದ್ದಾರೆ.

ಮುಖ್ಯವಾದ ಸಂಗತಿಯೆಂದರೆ, ಬ್ಯಾಂಕಿಂಗ್, ವಿಮೆ, ಸ್ಟಾಫ್ ಸೆಲೆಕ್ಷನ್ ಕಮಿಷನ್ ನಡೆಸುವ ಎಲ್.ಡಿ.ಸಿ– ಯು.ಡಿ.ಸಿ ಪರೀಕ್ಷೆಗಳಲ್ಲಿ ಕೇಳುವ ಪ್ರಶ್ನೆ ಯಾವ ಭಾಷೆಯಲ್ಲಿದ್ದರೂ ಉತ್ತರಿಸುವವರಿಗೆ ಮುಖ್ಯವಾಗಿ, ಅತಿ ಜರೂರಾಗಿ ಉತ್ತರಿಸುವ ಸಾಮರ್ಥ್ಯ ಇರಲೇಬೇಕು. ಗಣಿತ (ನ್ಯೂಮರಿಕಲ್ ಎಬಿಲಿಟಿ), ಸಾಮಾನ್ಯ ಜ್ಞಾನ (ಟೆಸ್ಟ್ ಆಫ್ ರೀಸನಿಂಗ್) ಮತ್ತು ವೇಗ ನಿಷ್ಕರ್ಷ (ಆ್ಯಪ್ಟಿಟ್ಯೂಡ್ ಟೆಸ್ಟ್) ಎಂದು ಮೂರು ವಿಭಾಗಗಳಲ್ಲಿ ತಲಾ ಅಂಕಗಳನ್ನು ನಿಗದಿತ ಸಮಯದೊಳಗೇ ಉತ್ತರಿಸಿ, ಕಡೆಯ ಸಾಮಾನ್ಯ ಇಂಗ್ಲಿಷ್ ಪರೀಕ್ಷೆಯಲ್ಲೂ ಕನಿಷ್ಠ ಅಂಕ ಪಡೆಯಬೇಕಾಗುತ್ತದೆ. ಅಂದರೆ ಇಂಗ್ಲಿಷ್ ಗೊತ್ತಿದ್ದು, ಉಳಿದ ಅವಕಾಶಗಳನ್ನು 'ಬಾಚಿಕೊಳ್ಳುವ ಚಾಕಚಕ್ಯತೆ' ಅತಿ ಮುಖ್ಯ.

ಕಳೆದ ವರ್ಷದಿಂದ ಸಂದರ್ಶನ ಕೂಡ ರದ್ದಾಗಿರುವುದರಿಂದ ಕನಿಷ್ಠ ವಿದ್ಯಾರ್ಹತೆ ಇರುವ ಯಾರು ಬೇಕಾದರೂ ಭಾರತದ ಯಾವ ಮೂಲೆಗಾದರೂ ಅರ್ಜಿ ಹಾಕಿ ಆಯ್ಕೆ ಆಗಬಹುದು. ಇಲ್ಲಿ ಕೇಳಲಾಗುವ ಪ್ರಶ್ನೆಗಳನ್ನು ಒಂದುವೇಳೆ ಕನ್ನಡವೂ ಸೇರಿದಂತೆ ಎಲ್ಲ ಭಾಷೆಗಳಲ್ಲಿ ಕೊಟ್ಟರೂ ಉತ್ತರಿಸಲು ಯಾವುದೇ ಭಾಷೆಯ ಅಗತ್ಯವಾಗಲೀ ದೀರ್ಘ ವಿವರಣೆಯಾಗಲೀ ಬೇಡ ಮತ್ತು ಆ ಎಲ್ಲ ಪ್ರಶ್ನೆಗಳೂ ಬಹು ಆಯ್ಕೆಯ ಉತ್ತರದವೇ ಆಗಿರುತ್ತವೆ. ಅಂದರೆ ಆಬ್ಜೆಕ್ಟಿವ್ ಆಗಿರುವುದರಿಂದ ಸರಿ ಉತ್ತರ ಇರುವ ಆಯ್ಕೆಗೆ ಗುಂಡು ಸುತ್ತುವುದಷ್ಟೇ ಆಗಿರುತ್ತದೆ. ಈ ಬಗೆಯ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ಪ್ರಾದೇಶಿಕ ಭಾಷೆಗಳಿಗಿಂತಲೂ ಇಂಗ್ಲಿಷ್ ಹೆಚ್ಚು ಅನುಕೂಲಕರ.

ಸಾಮಾನ್ಯ ಜ್ಞಾನ ಮತ್ತು ಗಣಿತದ ಚಿಹ್ನೆ ಇತ್ಯಾದಿಯನ್ನೆಲ್ಲ ಕನ್ನಡದಲ್ಲಿ ಅರ್ಥ ಮಾಡಿಕೊಂಡು ಉತ್ತರ ಬರೆಯುತ್ತಾರೆ ಎನ್ನುವುದೇ ಚೋದ್ಯದ ಸಂಗತಿ. ಇಂಥ ಪರೀಕ್ಷೆಗಳಿಗೆ ಉತ್ತರಿಸಲು ನಮ್ಮ ಕನಿಷ್ಠ ವಿದ್ಯಾರ್ಹತೆಯ ಜೊತೆಗೆ ಬಹಳಷ್ಟು ಮಾದರಿ ಪರೀಕ್ಷೆಗಳನ್ನು ಎದುರಿಸಿ ತಯಾರಾಗಿರಬೇಕಾಗುತ್ತದೆ.



ಮಹಾರಾಷ್ಟ್ರ, ಆಂಧ್ರಪ್ರದೇಶ, ಬಿಹಾರ ಮತ್ತು ದೆಹಲಿಯಲ್ಲಿ ಈ ಬಗೆಯ ಪರೀಕ್ಷೆಗಳಿಗೆ ತರಬೇತಿ ಕೊಟ್ಟು, ಮಾದರಿ ಪರೀಕ್ಷೆ ನಡೆಸಿ ಅಭ್ಯರ್ಥಿಗಳನ್ನು ಸಜ್ಜುಗೊಳಿಸುವ ಬಹಳಷ್ಟು ಸಂಸ್ಥೆಗಳಿವೆ. ಒಮ್ಮೆ ದಾಖಲಾದರೆ ಸಾಕು, ಅಭ್ಯರ್ಥಿ ಪರೀಕ್ಷೆಯಲ್ಲಿ ಉತ್ತೀರ್ಣ ಆಗುವ ತನಕವೂ ಈ ತರಬೇತಿ ಮುಂದುವರಿಯುತ್ತಿರುತ್ತದೆ.

ಕನ್ನಡದಲ್ಲಿ ಬ್ಯಾಂಕಿಂಗ್ ಪರೀಕ್ಷೆ ಬರೆಯಲು ಅವಕಾಶ ಕೇಳುವುದು ಸರಿಯಾದರೂ ಅದರಿಂದ ತರಬೇತಿಯಿರದ ಮತ್ತು ಅವಕಾಶವೂ ಇರದ ಅಭ್ಯರ್ಥಿಗಳಿಗೆ ಹೆಚ್ಚಿನ ಉಪಯೋಗವಾಗದು. ಕನ್ನಡಕ್ಕೆ ತರ್ಜುಮೆಯಾದ ಮೂಲ ಇಂಗ್ಲಿಷ್ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳುವುದಕ್ಕಿಂತ ಅಪಾರ್ಥ ಮಾಡಿಕೊಳ್ಳುವ ಅಪಾಯವೇ ಹೆಚ್ಚು.

ನಿಜಕ್ಕೂ ಆಗಬೇಕಾದದ್ದು ಮತ್ತು ಅಗತ್ಯ ಇರುವುದೆಂದರೆ, ಬ್ಯಾಂಕು, ವಿಮೆ, ಅಂಚೆ, ರೈಲ್ವೆಯಂತಹ ಕೇಂದ್ರ ಸರ್ಕಾರದ ಅಧೀನ ಸಂಸ್ಥೆಗಳ ಕೆಳ ಹಂತದ ಹುದ್ದೆಗಳನ್ನು ಆಯಾ ಭಾಷಾ ಪ್ರದೇಶದವರಿಗೇ ಮೀಸಲಿರಿಸುವುದು. ಆಗ ಮಾತ್ರ ಸ್ಥಳೀಯರಿಗೆ ಉದ್ಯೋಗ ದೊರಕುತ್ತದೆ. ಇಲ್ಲವಾದರೆ ಚಾಕಚಕ್ಯತೆ ಮತ್ತು ಬುದ್ಧಿವಂತಿಕೆಯ ಜೊತೆಗೆ 'ಜಾಣ'ನಾಗಿರುವ ವ್ಯಕ್ತಿ ಕೆಲಸ ಪಡೆಯುತ್ತಾನೆ. ಸ್ಥಳೀಯವಾಗಿ ಬುದ್ಧಿವಂತ ಅಂತ ಕರೆಸಿಕೊಂಡರೂ 'ಜಾಣ' ಅಲ್ಲದವನು ಮತ್ತೆ ಮತ್ತೆ ಪರೀಕ್ಷೆಗೆ ಕೂರುತ್ತ ತನ್ನ ಹಣೆಬರಹವನ್ನು ಹಳಿದುಕೊಳ್ಳುತ್ತಾನೆ.

ಲೇಖಕ: ಆಡಳಿತಾಧಿಕಾರಿ, ಭಾರತೀಯ ಜೀವ ವಿಮಾ ನಿಗಮ, ಅರಸೀಕೆರೆ

ವಾಚಕರ ವಾಣಿ

ಹಿಂದಿನ ಸಂಕಷ್ಟ ಮರುಕಳಿಸದಿರಲಿ

ದೇಶದಾದ್ಯಂತ ಕೊರೊನಾ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಆಶಾಭಾವನೆಯಲ್ಲಿರುವಾಗಲೇ ನೆರೆಯ ರಾಜ್ಯಗಳಾದ ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಕಳೆದೊಂದು ವಾರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಕೊರೊನಾ ಪ್ರಕರಣಗಳು ದಾಖಲಾಗುತ್ತಿರುವುದು ಜನರಲ್ಲಿ ಪುನಃ ಭೀತಿ ಹುಟ್ಟಿಸುತ್ತಿದೆ. ದೇಶದಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದ್ದರೂ ಭಾರತವು ಸಾಂಕ್ರಾಮಿಕ ರೋಗದ ಅಪಾಯದಿಂದ ಇನ್ನೂ ಹೊರಬಂದಿಲ್ಲ ಎಂಬುದನ್ನು ಮರೆಯಬಾರದು. ಕೊರೊನಾ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿದ್ದಂತೆ ಜನ ಚಾಲ್ತಿಯಲ್ಲಿರುವ ನಿಯಮಗಳನ್ನು ಗಾಳಿಗೆ ತೂರುತ್ತಿದ್ದಾರೆ. ಪ್ರವಾಸಿ ತಾಣಗಳು ಹಾಗೂ ದೇವಸ್ಥಾನಗಳು ತುಂಬಿತುಳುಕುತ್ತಿವೆ. ಎರಡನೇ ಅಲೆಯ ಸಂದರ್ಭದಲ್ಲಾದ ತಪ್ಪುಗಳು ಏನಾದರೂ ಮರುಕಳಿಸಿದರೆ ಮತ್ತೆ ಲಾಕ್‌ಡೌನ್ ಎದುರಾಗಬಹುದು. ಹೀಗಾಗಿ ನಾವು ಮೈಮರೆಯಬಾರದು. ಹಿಂದಿನ ದಿನಗಳ ಭೀಕರ ಅನಾಹುತಗಳು ಮರುಕಳಿಸಬಾರದು.

ಈಗಾಗಲೇ ಸಾವಿರಾರು ಜನರ ಪ್ರಾಣ ಹೋಗಿದೆ. ಹೀಗಾಗಿ ಈ ವಿಚಾರದಲ್ಲಿ ಜಾಗರೂಕರಾಗಿರಬೇಕು. ಕೊರೊನಾ ತಡೆಗಟ್ಟುವಿಕೆಯಲ್ಲಿ ಸರ್ಕಾರಗಳ ಎಚ್ಚರಿಕೆಯ ಕ್ರಮಗಳೊಂದಿಗೆ ಜನರ ಸಹಕಾರವೂ ಅತಿಮುಖ್ಯ. ಕಳೆದ ಬಾರಿಯಂತೆ ಈ ಬಾರಿಯೂ ನಿರ್ಲಕ್ಷ್ಯ ವಹಿಸಿದರೆ ಭವಿಷ್ಯದಲ್ಲಿ ಭಾರಿ ದಂಡ ತೆರಬೇಕಾದ ದುಃಸ್ಥಿತಿ ಬರುವ ಸಾಧ್ಯತೆ ಇಲ್ಲದಿಲ್ಲ.

ಭೂಮಿಕಾ ದಾಸರಡ್ಡಿ, ಬಿದರಿ

ಆಲೋಚನೆಗೆ ಹಚ್ಚುವ ಬರಹ, ಅನಗತ್ಯ ಟೀಕೆ

ಅನಕೃ ನಿಧನರಾಗಿ ಐವತ್ತು ವರ್ಷ ತುಂಬಿದ ಹಿನ್ನೆಲೆಯಲ್ಲಿ, ಅನಕೃ ಆದರ್ಶಗಳು ಮತ್ತು ವ್ಯಕ್ತಿತ್ವದ ಬಗ್ಗೆ ರಘುನಾಥ ಚ.ಹ. ಅವರು ಬರೆದ ಲೇಖನ (ಪ್ರ.ವಾ., ಜುಲೈ 14) ಸಮಯೋಚಿತವಾಗಿದೆ. ಇಂದಿನ ದಿನಗಳಲ್ಲಿ ಕರ್ನಾಟಕಕ್ಕೆ ಬೇಕಾದ ಅನಕೃ ಅವರ ಮಾದರಿಯ ಕನ್ನಡಪ್ರಜ್ಞೆ ಮತ್ತು ವೈಚಾರಿಕತೆಯ ಅಗತ್ಯವನ್ನು ಮನಮುಟ್ಟುವಂತೆ ವಿವರಿಸಿ, ಓದುಗರನ್ನು ಆಲೋಚನೆಗೆ ಹಚ್ಚುತ್ತದೆ. ಲೇಖಕರು ಅನಕೃ ಹೃದಯದಲ್ಲಿ ಬೆಳಗುತ್ತಿದ್ದ ಕನ್ನಡದ ದೀಪದ ಮೂಲಕವೇ ಅವರ ವ್ಯಕ್ತಿತ್ವದ ಮೇಲೆ ಹೊಸ ಬೆಳಕು ಚೆಲ್ಲಿದ್ದಾರೆ. ಆದರೆ ಹಿಂದೂ ಧರ್ಮದ ಮೌಲ್ಯಗಳ ಪ್ರತಿಪಾದನೆ ವಿಚಾರವಾಗಿ ಭೈರಪ್ಪನವರ ಕಾದಂಬರಿಗಳ ಬಗ್ಗೆ ಈ ಲೇಖನದಲ್ಲಿ ಟೀಕೆ ಅನಗತ್ಯವಾಗಿತ್ತು.

ಸಾಹಿತ್ಯದ ವಿದ್ಯಾರ್ಥಿಗಳು ಭೈರಪ್ಪ ಹಾಗೂ ಅನಕೃ ಕಾದಂಬರಿಗಳನ್ನು ಲೇಖನದಲ್ಲಿ ವಿವರಿಸಲಾಗಿರುವ ಹಲವಾರು ಅಂಶಗಳ ಮೇಲೆ ಆಳವಾದ ಅಧ್ಯಯನ ಮಾಡಲು ಲೇಖನ ಖಂಡಿತ ಪ್ರೇರೇಪಿಸುತ್ತದೆ. ಆದರೆ ಅನಕೃ ಸ್ಮರಣೆಯ ಸಂದರ್ಭದ ಈ ಬರಹದಲ್ಲಿ ಭೈರಪ್ಪನವರ ಕಾದಂಬರಿಗಳ ಕುರಿತಾದ ಒಂದು ಟೀಕೆಯ ಮಾತಿನಿಂದಾಗಿ, ಅನಕೃ ಕೇಂದ್ರಿತವಾಗಬೇಕಿದ್ದ ನಮ್ಮ ಗಮನವೆಲ್ಲಾ ಅನವಶ್ಯಕವಾಗಿ ಭೈರಪ್ಪನವರ ಬದುಕು ಮತ್ತು ಬರಹಗಳ ಕಡೆಗೆ ಹರಿಯುವಂತೆ ಆಗುತ್ತದೆ.

ಡಾ. ಎಂ.ರವೀಂದ್ರ, ಬೆಂಗಳೂರು

ಕೃಷಿ

ಈಗ ಶೋಭಾ ಕರಂದ್ಲಾಜೆ
ಕೇಂದ್ರ ಕೃಷಿ ಸಚಿವೆ:
'ನೇಗಿಲು ಹಿಡಿದಾ ಹೊಲದೊಳು
ಹಾಡುತ
ಉಳುವಾ ಯೋಗಿನಿ ನೋಡಲ್ಲಿ!'
(ಅವರು ಕವಯಿತ್ರಿ ಕೂಡ:ಕವನ
ಕೃಷಿಗೂ ನೀಡಲಿ, ಉತ್ತೇಜನ)!

ಸಿ.ಪಿ.ಕೆ., ಮೈಸೂರು

ಪುಸ್ತಕದ ತಿರುಳಷ್ಟೇ ಮುಖ್ಯ

'ಶಾಲಾ ಪಠ್ಯಪುಸ್ತಕದ ಮುದ್ರಣದಲ್ಲಿ ಉದಾಸೀನ ತೋರಲಾಗಿದೆ, ಹಿಂದಿನ ವರ್ಷ ಉಚಿತವಾಗಿ ವಿತರಿಸಿದ್ದ ಪಠ್ಯಪುಸ್ತಕಗಳನ್ನು ವಾಪಸ್ ಪಡೆದು ಮಕ್ಕಳಿಗೆ ನೀಡುತ್ತಿರುವುದು ತಮಾಷೆಯೆನಿಸುತ್ತದೆ' ಎಂದು ಪುಟ್ಟದಾಸು ಹೇಳಿದ್ದಾರೆ (ವಾ.ವಾ., ಜುಲೈ 14). ಆದರೆ ಖುದ್ದು ನಾನು ಸೈನಿಕ ವಸತಿ ಶಾಲೆಯಲ್ಲಿ 6ನೇ ತರಗತಿಗೆ ಸೇರುವವರೆಗೂ ಹೊಸ ಪಠ್ಯಪುಸ್ತಕಗಳಿಗೆ ನೀಟಾಗಿ ರ್‍ಯಾಪರ್ ಹಾಕಿ ಚಂದದ ಲೇಬಲ್ ಅಂಟಿಸದಿದ್ದರೆ ಅದೇನೋ ಸಮಾಧಾನವೇ ಆಗುತ್ತಿರಲಿಲ್ಲ. ಆದರೆ ಸೈನಿಕ ಶಾಲೆಯಲ್ಲಿ ಹಿಂದಿನ ತರಗತಿಯ ಪಠ್ಯಪುಸ್ತಕಗಳನ್ನು ಸಂರಕ್ಷಿಸಿಕೊಂಡು ಮುಂದಿನ ತರಗತಿಯವರಿಗೆ ನೀಡುತ್ತಾರೆ. ಅವು ಕೊಂಚ ಹಳೆಯವಾಗಿರುತ್ತವೆ, ಒಮ್ಮೊಮ್ಮೆ ಸ್ವಲ್ಪ ಹರಿದಿರುತ್ತವೆ ಕೂಡ. ಅದನ್ನು ಮೊದಲ ಬಾರಿಗೆ ಕಂಡಾಗ ನನಗೆ ಆಘಾತ ಹಾಗೂ ಬೇಸರವಾಗಿತ್ತು. ಆದರೆ ಈಗ ಅದನ್ನು ನೆನೆಸಿಕೊಂಡಾಗ ಮತ್ತು ಪ್ರಬುದ್ಧವಾಗಿ ಯೋಚಿಸಿದಾಗ, ಒಬ್ಬ ಒಳ್ಳೆಯ ವಿದ್ಯಾರ್ಥಿಗೆ ಪಠ್ಯಪುಸ್ತಕದ ಒಳಗಿರುವ ಪಾಠ ಮುಖ್ಯವೇ ಹೊರತು ಆ ಪುಸ್ತಕ ಹಳೆಯದೋ ಹೊಸದೋ ಎಂಬುದಲ್ಲ ಎನಿಸುತ್ತದೆ.

ರವಿಕಿರಣ್ ಶೇಖರ, ಬೆಂಗಳೂರು

ವನ್ಯಜೀವಿ ಬೇಟೆ: ವ್ಯಾಪಕ ಜಾಗೃತಿ ಅಗತ್ಯ

ಈಚೆಗೆ ಒಂದು ಮುಂಜಾನೆ ಹೊಲದಲ್ಲಿದ್ದಾಗ, ಹತ್ತಾರು ಕೂಲಿಕಾರ್ಮಿಕರು ದೂರದಲ್ಲಿ ಏನೋ ಗಲಾಟೆ ಮಾಡುತ್ತಿದ್ದರು. ಅದೇನೆಂದು ನೋಡಹೋದರೆ, ಅವರೆಲ್ಲ ಸೇರಿ ಒಂದು ಮೊಲವನ್ನು ಅಟ್ಟಾಡಿಸಿ ಹಿಡಿಯಲು ಪ್ರಯತ್ನಿಸುತ್ತಾ ಆ ಬಡಪಾಯಿಯ ಮೇಲೆ ಹಾರೆ, ಗುದ್ದಲಿಗಳನ್ನು ಎಸೆದು ಕೊಲ್ಲಲು ಪ್ರಯತ್ನಿಸುತ್ತಿದ್ದರು. ಅವರ ರಣಕೇಕೆಯ ನಡುವೆ 'ನಿಲ್ಲಿ' ಎಂಬ ನನ್ನ ಸಣ್ಣ ಕೂಗು ಯಾರೊಬ್ಬರಿಗೂ ಕೇಳಲಿಲ್ಲ. ಮೊಲ ಬರ್ಬರವಾಗಿ ಬೇಟೆಯಾಗಿ ಹೋಯಿತು. ಆ ಕೂಲಿಕಾರ್ಮಿಕರಿಗೆ ನೀವು ಮಾಡುತ್ತಿರುವುದು ತಪ್ಪು ಎಂದು ಹೇಳಿದರೂ ಅವರು ಕೇಳಲಿಲ್ಲ, ಅರಣ್ಯ ಇಲಾಖೆಗೆ ದೂರು ಕೊಡುತ್ತೇನೆಂದು ಎಚ್ಚರಿಸಿದರೂ ಜಗ್ಗಲಿಲ್ಲ.

ಇಂತಹ ಹಲವು ಘಟನೆಗಳು ನಮ್ಮ ಸುತ್ತಲೂ ಪ್ರತಿದಿನ ನಡೆಯುತ್ತಲೇ ಇವೆ. ಇವುಗಳನ್ನು ತಡೆಯುವ ಪ್ರಯತ್ನಗಳು ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ. ವನ್ಯಜೀವಿಗಳನ್ನು ರಕ್ಷಿಸುವುದು ಕೇವಲ ಅರಣ್ಯ ಇಲಾಖೆಯ ಕೆಲಸವಲ್ಲ, ಅದು ಸಾರ್ವಜನಿಕರೆಲ್ಲರ ಕರ್ತವ್ಯ. ಜೊತೆಗೆ ಗ್ರಾಮೀಣ ಮಟ್ಟದಲ್ಲಿ ವನ್ಯಜೀವಿ ಬೇಟೆಯ ವಿರುದ್ಧ ವ್ಯಾಪಕ ಪ್ರಚಾರ, ಬೇಟೆಗಾರರಿಗೆ ಕಠಿಣ ಶಿಕ್ಷೆಯಾಗಬೇಕಿದೆ. ಈ ಕೆಲಸವನ್ನು ಆಯಾ ಗ್ರಾಮದ ಗ್ರಾಮ ಪಂಚಾಯಿತಿಗಳಿಗೆ ವಹಿಸುವುದು ಸೂಕ್ತ. ಒಂದೆಡೆ ಅಜ್ಞಾನ, ಮತ್ತೊಂದೆಡೆ ಕಾನೂನಿನ ಬಗ್ಗೆ ಅಗೌರವ, ಉದಾಸೀನದಿಂದ ತುಂಬಿರುವವರನ್ನು ಸರಿದಾರಿಗೆ ತರುವ ಪ್ರಯತ್ನಗಳು ನಡೆಯಬೇಕು. ಆಗಮಾತ್ರ ವನ್ಯಜೀವಿಗಳ ಮಾರಣಹೋಮ ನಿಲ್ಲಲು ಮತ್ತು ಆ ಮೂಲಕ ಪರಿಸರ ಸಮತೋಲನ ಸಾಧಿಸಲು ಸಾಧ್ಯ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡ್ರೋನ್ ನಿಯಮಾವಳಿ–2021 ಕರಡು ಅಂತಿಮ

ಡ್ರೋನ್ ಕಡಿವಾಣ ಸಡಿಲ

ಸಾಂದರ್ಭಿಕ ಚಿತ್ರ

ಡ್ರೋನ್ ಕರಡು ನಿಯಮ-2021 ಅನ್ನು ನಾಗರಿಕ ವಿಮಾನಯಾನ ಸಚಿವಾಲಯವು ಗುರುವಾರ ಬಿಡುಗಡೆ ಮಾಡಿದೆ. ನಿಯಮದ ಕರಡು ಬಿಡುಗಡೆಗೂ ಮುನ್ನ, ಮಾನವರಹಿತ ವಿಮಾನ ವ್ಯವಸ್ಥೆಗಳು (ಯುಎಎಸ್) ಅಥವಾ ಡ್ರೋನ್‌ಗಳ ಸಂಚಾರ ನಿರ್ವಹಣೆಗೆ ನೀತಿ ರೂಪಿಸುವ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಹಿರಿಯ ಸಚಿವರ ಜತೆ ಸಭೆ ನಡೆಸಿದ್ದರು.

ಡ್ರೋನ್ ಬಳಕೆಗೆ ಸಂಬಂಧಿಸಿದ ಕರಡು ನಿಯಮಗಳ ಬಗ್ಗೆ ಆಕ್ಷೇಪ ಅಥವಾ ಸಲಹೆಗಳಿದ್ದರೆ ಆಗಸ್ಟ್ 5ರ ಮೊದಲು ಸರ್ಕಾರಕ್ಕೆ ಸಲ್ಲಿಸಬೇಕು.

ಮಾನವರಹಿತ ವಿಮಾನ ವ್ಯವಸ್ಥೆ ನಿಯಮಗಳು-2021 ಈ ಮಾರ್ಚ್‌ನಲ್ಲಿ ಜಾರಿಗೆ ಬಂದಿತ್ತು. ಡ್ರೋನ್ ಬಳಕೆಯ ಮೇಲೆ ಹತ್ತಾರು ನಿಯಂತ್ರಣಗಳನ್ನು ಈ ನಿಯಮಗಳು ಹೇರಿದ್ದವು. ಸಾಮಾನ್ಯ ಜನರು ಡ್ರೋನ್ ಬಳಸಬೇಕಿದ್ದರೆ 25 ಅನುಮತಿ ಪತ್ರಗಳನ್ನು ಪಡೆಯಬೇಕಿತ್ತು. ಹೊಸ ನಿಯಮಗಳು ಜಾರಿಗೆ ಬಂದರೆ ಡ್ರೋನ್ ಬಳಕೆಗೆ ಅನುಮತಿ ಪಡೆಯುವುದು ಸುಲಭವಾಗಲಿದೆ.

ಹೊಸ ನೀತಿಯಲ್ಲಿ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಲಾಗಿದೆ. 'ಅನುಮತಿ ಇಲ್ಲದೇ ಟೇಕಾಫ್ ಇಲ್ಲ', ನೇರ ಟ್ರ್ಯಾಕಿಂಗ್ ವ್ಯವಸ್ಥೆ, ಜಿಯೋ-ಫೆನ್ಸಿಂಗ್ ಮುಂತಾದ ಸುರಕ್ಷತಾ ವೈಶಿಷ್ಟ್ಯಗಳನ್ನು ಭವಿಷ್ಯದಲ್ಲಿ ಅಳವಡಿಸುವುದಾಗಿ ಪ್ರಸ್ತಾಪಿಸಿದೆ.

ಎಲ್ಲವೂ ಪಾರದರ್ಶಕವಾಗಿರಬೇಕು ಎಂಬ ಉದ್ದೇಶದಿಂದ ಅನುಮತಿ ಹಾಗೂ ಕಾರ್ಯಾಚರಣೆಗೆ ಏಕಗವಾಕ್ಷಿ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ. 'ಡಿಜಿಟಲ್ ಸ್ಕೈ ಪ್ಲಾಟ್‌ಫಾರ್ಮ್' ವೇದಿಕೆಯಲ್ಲಿ ಮಾನವ ಹಸ್ತಕ್ಷೇಪ ಕಡಿಮೆ.

ಸರಳಗೊಂಡ ನಿಯಮಗಳು

ಡ್ರೋನ್ ಹಾರಾಟ ಸಂಬಂಧ 2020ರ ಜೂನ್‌ನಲ್ಲಿ ಕರಡು ನಿಯಮಗಳನ್ನು ಹೊರಡಿಸಿ, 2021ರ ಮಾರ್ಚ್‌ನಲ್ಲಿ ಅವನ್ನು ಅನುಷ್ಠಾನಕ್ಕೆ ತರಲಾಗಿತ್ತು. ಈಗ ಜಾರಿಯಲ್ಲಿರುವ ಡ್ರೋನ್ ನಿಯಮಗಳ ಪ್ರಕಾರ ದೇಶದಲ್ಲಿ ಬಳಕೆಯಾಗುವ ಪ್ರತಿಯೊಂದು ಡ್ರೋನ್‌ಗೂ ಪ್ರತ್ಯೇಕ ನೋಂದಣಿ ಸಂಖ್ಯೆ ಪಡೆಯಲೇಬೇಕಿದೆ. ಆದರೆ ನೂತನ ಕರಡು ನಿಯಮಗಳಲ್ಲಿ ಕಡ್ಡಾಯ ನೋಂದಣಿ ಸಂಖ್ಯೆ ನಿಯಮವನ್ನು ಕೈಬಿಡಲಾಗಿದೆ. ಈಗ ಜಾರಿಯಲ್ಲಿರುವ ಡ್ರೋನ್ ನಿಯಮಗಳ ಪ್ರಕಾರ ಹಾರಾಟಕ್ಕೆ ಸಂಬಂಧಿಸಿದಂತೆ 25 ರೀತಿಯ ನೋಂದಣಿ ಮತ್ತು ಅನುಮತಿ ಅರ್ಜಿಗಳನ್ನು ಪಡೆಯಬೇಕಿತ್ತು. ನೂತನ ಕರಡು ನಿಯಮಗಳಲ್ಲಿ ಈ ಅರ್ಜಿಗಳ ಸಂಖ್ಯೆಯನ್ನು ಕೇವಲ 6ಕ್ಕೆ ಇಳಿಸಲಾಗಿದೆ. ನೋಂದಣಿ ಮತ್ತು ಹಾರಾಟಕ್ಕೆ ಸಂಬಂಧಿಸಿದಂತೆ ಜಾರಿಯಲ್ಲಿದ್ದ ಕಠಿಣ ನಿಯಮಗಳನ್ನು ನೂತನ ಕರಡು ನಿಯಮಗಳಲ್ಲಿ ಸಡಿಲಿಸಿ, ಸರಳಗೊಳಿಸಲಾಗಿದೆ.

- ಚಾಲ್ತಿ ನಿಯಮಗಳಲ್ಲಿ ಡ್ರೋನ್‌ಗಳ ಗಾತ್ರ ಮತ್ತು ತೂಕದ ಆಧಾರದಲ್ಲಿ ನೋಂದಣಿ ಶುಲ್ಕ ವಿಧಿಸಲಾಗುತ್ತಿತ್ತು. ನೂತನ ನಿಯಮಗಳಲ್ಲಿ ಎಲ್ಲಾ ಡ್ರೋನ್‌ಗಳಿಗೂ ಏಕಪ್ರಕಾರದ ನೋಂದಣಿ ನಿಯಮ ಮತ್ತು ನೋಂದಣಿ ಶುಲ್ಕ ವಿಧಿಸಲಾಗುತ್ತದೆ. ನೋಂದಣಿ ಪ್ರಕ್ರಿಯೆಯನ್ನು ಸರಳಗೊಳಿಸಲಾಗಿದೆ
- ಡ್ರೋನ್ ಮಾಲೀಕತ್ವ ಬದಲಾವಣೆ ಪ್ರಕ್ರಿಯೆಯನ್ನು ಸರಳಗೊಳಿಸಲಾಗಿದೆ. ಈಗ ದೇಶದಲ್ಲಿ ಬಳಕೆಯಾಗುತ್ತಿರುವ ಎಲ್ಲಾ ಡ್ರೋನ್‌ಗಳನ್ನು ಅಧಿಕೃತಗೊಳಿಸಲಾಗುತ್ತದೆ
- ಚಾಲ್ತಿ ನಿಯಮಗಳ ಪ್ರಕಾರ ಡ್ರೋನ್‌ಗಳ ನಿರ್ವಹಣೆ ಮತ್ತು ಕಾರ್ಯಕ್ಷಮತೆ ಪ್ರಮಾಣಪತ್ರವನ್ನು ಪಡೆಯಬೇಕು. ನಿಗದಿತ ಅವಧಿಗೊಮ್ಮೆ ಈ ಪ್ರಮಾಣಪತ್ರವನ್ನು ಪಡೆಯುವುದು ಕಡ್ಡಾಯ. ಆದರೆ ನೂತನ ಕರಡು ನಿಯಮಗಳಲ್ಲಿ ಈ ಪ್ರಮಾಣ ಪತ್ರ ಪಡೆಯಬೇಕಿಲ್ಲ
- ಈಗ ಜಾರಿಯಲ್ಲಿರುವ ನಿಯಮಗಳ ಪ್ರಕಾರ, ಡ್ರೋನ್ ಕಾರ್ಯನಿರ್ವಹಣೆ ರಹದಾರಿ ಪಡೆಯುವುದು ಕಡ್ಡಾಯವಾಗಿದೆ. ನೂತನ ಕರಡು ನಿಯಮಗಳಲ್ಲಿ ಈ ಪ್ರಕ್ರಿಯೆಯನ್ನೇ ರದ್ದುಪಡಿಸಲಾಗಿದೆ
- ಡ್ರೋನ್ ಅನ್ನು ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಬಳಸಲು ಮತ್ತು ಡ್ರೋನ್ ತಂತ್ರಜ್ಞಾನದ ಸಂಶೋಧನೆ ಮತ್ತು ಅಭಿವೃದ್ಧಿಗೆ ನಾಗರಿಕ ವಿಮಾನಯಾನ ಸಚಿವಾಲಯದಿಂದ ಮಾನ್ಯತೆ ಪಡೆಯಬೇಕು. ಕರಡು ನಿಯಮಗಳಲ್ಲಿ ಈ ಪ್ರಕ್ರಿಯೆಗಳನ್ನು ರದ್ದುಪಡಿಸಲಾಗಿದೆ
- ಈಗ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ, ಡ್ರೋನ್ ಹಾರಾಟ ತರಬೇತುದಾರ ಮತ್ತು ವಿದ್ಯಾರ್ಥಿ ಡ್ರೋನ್ ಪೈಲಟ್ ಪರವಾನಗಿ ಪಡೆಯುವುದು ಕಡ್ಡಾಯ. ನೂತನ ಕರಡು ನಿಯಮಗಳಲ್ಲಿ ಇದನ್ನು ರದ್ದುಪಡಿಸಲಾಗಿದೆ
- ಡ್ರೋನ್ ಪೋರ್ಟ್ ಸ್ಥಾಪನೆಗೆ ನಾಗರಿಕ ವಿಮಾನಯಾನ ಸಚಿವಾಲಯದಿಂದ ಅನುಮತಿ ಪಡೆಯುವುದು ಕಡ್ಡಾಯ ಎಂಬುದು ಈಗಿನ ನಿಯಮ. ಆದರೆ ನೂತನ ಕರಡು ನಿಯಮಗಳ ಪ್ರಕಾರ, ಡ್ರೋನ್ ಪೋರ್ಟ್ ಸ್ಥಾಪನೆಗೆ ಯಾವುದೇ ಮಾನ್ಯತೆ ಪಡೆಯುವ ಅವಶ್ಯಕತೆ ಇಲ್ಲ

ಉದ್ಯಮಕ್ಕೆ ಉತ್ತೇಜನ

ದೇಶದಲ್ಲಿ ಈಗ ಇರುವ ಡ್ರೋನ್ ನಿಯಮಗಳು ಅತ್ಯಂತ ಕಠಿಣವಾದವುಗಳಾಗಿವೆ. ಇದರಿಂದಾಗಿ ಡ್ರೋನ್ ನೋಂದಣಿ, ನಿರ್ವಹಣೆ ಮತ್ತು ಕಾರ್ಯಾಚರಣೆ ಉದ್ಯಮವು ನಿರೀಕ್ಷಿತಮಟ್ಟದಲ್ಲಿ ಬೆಳೆಯುತ್ತಿಲ್ಲ. ಈ ಉದ್ಯಮ ವಲಯದ ಬೆಳವಣಿಗೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಡ್ರೋನ್ ನಿಯಮಗಳಲ್ಲಿ ಬದಲಾವಣೆ ತರಲಾಗುತ್ತಿದೆ ಎಂದು ಕೇಂದ್ರ ಸರ್ಕಾರವು ಹೇಳಿದೆ.

'ಡ್ರೋನ್ ತಂತ್ರಜ್ಞಾನವು ಜಗತ್ತಿನಾದ್ಯಂತ ಮುಂದೆ ಭಾರಿ ಬದಲಾವಣೆ ತರಲಿರುವ ವಿದ್ಯಮಾನವಾಗಿದೆ. ಡ್ರೋನ್ ಬಳಕೆಯಿಂದ ಹಣ, ಸಂಪನ್ಮೂಲ, ಸಮಯ ಉಳಿತಾಯವಾಗುತ್ತದೆ. ಈ ಹೊಸ ಅಲೆಯ ಜೊತೆಯಲ್ಲಿ ತೇಲಿಹೋಗುವ ಆಯ್ಕೆ ನಮ್ಮ ಮುಂದೆ ಇದೆ. ನಮ್ಮ ಡ್ರೋನ್ ನವೋದ್ಯಮಗಳು ಈ ಅಲೆಯ ಜತೆಯಲ್ಲಿ ಸಾಗಲು ಅವಕಾಶಮಾಡಿಕೊಡುವ ಉದ್ದೇಶದಿಂದ ಈ ನಿಯಮಗಳನ್ನು ಬದಲಿಸಲಾಗುತ್ತಿದೆ' ಎಂದು ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಹೇಳಿದ್ದಾರೆ.

ಡ್ರೋನ್ ಕಾರ್ಯಾಚರಣೆ ನಿಯಮಗಳನ್ನು ಸರಳಗೊಳಿಸುವ ಮೂಲಕ ಈ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ಹೂಡಿಕೆ ಮಾಡಲು, ಹೊಸ ತಂತ್ರಜ್ಞಾನ ಅಭಿವೃದ್ಧಿ ಮಾಡಲು ಮತ್ತು ನವೋದ್ಯಮಗಳು ಆರಂಭವಾಗಲು ಉತ್ತೇಜನ ನೀಡುವ ಸಲುವಾಗಿ ಈಗ ಜಾರಿಯಲ್ಲಿರುವ ಕಠಿಣ ನಿಯಮಗಳನ್ನು ಸರಳಗೊಳಿಸಲಾಗುತ್ತಿದೆ. ಡ್ರೋನ್ ಉದ್ಯಮ ಕ್ಷೇತ್ರದಲ್ಲಿ ಇದೊಂದು ಮಹತ್ವದ ಬದಲಾವಣೆಯಾಗಲಿದೆ ಎಂದು ಅವರು ಹೇಳಿದ್ದಾರೆ.

ಡಿಜಿಟಲ್ ಸ್ಕೈ ಪ್ಲಾಟ್‌ಫಾರ್ಮ್

ಡ್ರೋನ್‌ಗೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆಗಳನ್ನು ಆನ್‌ಲೈನ್ ಮೂಲಕ ನಡೆಸಲು ನಾಗರಿಕ ವಿಮಾನಯಾನ ಸಚಿವಾಲಯವು ಡಿಜಿಟಲ್ ಸ್ಕೈ ಪ್ಲಾಟ್‌ಫಾರ್ಮ್ ಅನ್ನು ಸ್ಥಾಪಿಸಲಿದೆ. ಡ್ರೋನ್ ಖರೀದಿ, ಹಾರಾಟ ಅನುಮತಿ, ನೋಂದಣಿ, ಕಾರ್ಯಾಚರಣೆ ಸೇರಿದಂತೆ ಎಲ್ಲಾ ಅನುಮತಿಗಳನ್ನು ನೀಡಲು ಡಿಜಿಟಲ್ ಸ್ಕೈ ಪ್ಲಾಟ್‌ಫಾರ್ಮ್ ಏಕಗವಾಕ್ಷಿಯಂತೆ ಕೆಲಸ ಮಾಡಲಿದೆ ಎಂದು ಕರಡು ಡ್ರೋನ್ ನಿಯಮಗಳಲ್ಲಿ ತಿಳಿಸಲಾಗಿದೆ.

ಇದು ಸಂಪೂರ್ಣ ಆನ್‌ಲೈನ್ ವೇದಿಕೆಯಾಗಿದ್ದು, ಎಲ್ಲಾ ಅನುಮತಿ ಮತ್ತು ಪರವಾನಗಿಗಳೂ ಸ್ವಯಂಚಾಲಿತವಾಗಿ ದೊರೆಯಲಿವೆ. ಸಾರ್ವಜನಿಕರು, ಉದ್ಯಮ ಸಂಸ್ಥೆಗಳು ಸಲ್ಲಿಸಿದ ಅರ್ಜಿಗಳನ್ನು ಸ್ವಯಂಚಾಲಿತ ವ್ಯವಸ್ಥೆಯೇ ಪರಿಶೀಲಿಸಲಿದೆ ಮತ್ತು ಅರ್ಜಿಗಳನ್ನು ಅನುಮತಿಸಲಿದೆ. ಈ ವ್ಯವಸ್ಥೆಯಲ್ಲಿ ಮನುಷ್ಯರ ಹಸ್ತಕ್ಷೇಪ ಇರುವುದಿಲ್ಲ. ಇದ್ದರೂ ಅದು ಅತ್ಯಂತ ಕನಿಷ್ಠಮಟ್ಟದಲ್ಲಿ ಇರಲಿದೆ ಎಂದು ಕರಡು ಡ್ರೋನ್ ನಿಯಮಗಳಲ್ಲಿ ತಿಳಿಸಲಾಗಿದೆ.

ಡ್ರೋನ್ ಖರೀದಿ, ನೋಂದಣಿ ಮತ್ತು ಹಾರಾಟ ಸಂಬಂಧಿ ಅನುಮತಿಗಳನ್ನು ನೀಡಲಷ್ಟೇ ಡಿಜಿಟಲ್ ಸ್ಕೈ ಪ್ಲಾಟ್‌ಫಾರ್ಮ್ ಬಳಕೆಯಾಗುವುದಿಲ್ಲ. ಬದಲಿಗೆ ಡ್ರೋನ್ ಹಾರಾಟಕ್ಕೆ ಸಂಬಂಧಿಸಿದಂತೆ ಗುರುತಿಸಲಾಗುವ ಹಸಿರು, ಹಳದಿ ಮತ್ತು ಕೆಂಪು ವಲಯಗಳ ನಕ್ಷೆಯನ್ನು ಡಿಜಿಟಲ್ ಸ್ಕೈ ಪ್ಲಾಟ್‌ಫಾರ್ಮ್ ಒಳಗೊಂಡಿರಲಿದೆ. ಡ್ರೋನ್‌ಗಳು ಹಾರಾಟದ ಸಮಯದಲ್ಲೇ ಅದು ಯಾವ ವಲಯದಲ್ಲಿ ಇದೆ ಎಂಬುದರ ಮಾಹಿತಿಯನ್ನು ಡಿಜಿಟಲ್ ಸ್ಕೈ ಪ್ಲಾಟ್‌ಫಾರ್ಮ್ ನೀಡಲಿದೆ ಎಂದು ಕರಡು ನಿಯಮಗಳಲ್ಲಿ ವಿವರಿಸಲಾಗಿದೆ.

ಡ್ರೋನ್ ಹಾರಾಟಕ್ಕೆ ಸಂಬಂಧಿಸಿದಂತೆ ದೂರು ನೀಡಲು ಸಹ ಡಿಜಿಟಲ್ ಸ್ಕೈ ಪ್ಲಾಟ್‌ಫಾರ್ಮ್ ಅನ್ನು ಬಳಸಬಹುದು. ಉದ್ದಿಮೆ ಸ್ನೇಹಿ ಏಕಗವಾಕ್ಷಿ ಆನ್‌ಲೈನ್ ವ್ಯವಸ್ಥೆಯಾಗಿ ಇದನ್ನು ಅಭಿವೃದ್ಧಿಪಡಿಸಲಾಗುತ್ತದೆ ಎಂದು ಸರ್ಕಾರ ಹೇಳಿದೆ.

ಡ್ರೋನ್: ಎಲ್ಲಿ ಹಾರಾಟ?

ಭಾರತದಲ್ಲಿ ಡ್ರೋನ್ ನಿರ್ವಹಣೆಗೆ ಸಂಬಂಧಿಸಿ ಚಟುವಟಿಕೆಗಳಿಗೆ 'ಡಿಜಿಟಲ್ ಸ್ಕೈ' ವೇದಿಕೆಯನ್ನು ಸರ್ಕಾರ ರಚಿಸಲಿದೆ. ಡ್ರೋನ್ ಕಾರ್ಯಾಚರಣೆಗಾಗಿ ವಾಯುಪ್ರದೇಶದ ನಕ್ಷೆಯನ್ನು ಒದಗಿಸುವ ಈ ವೇದಿಕೆಯು ಭಾರತದ ಇಡೀ ವಾಯುಪ್ರದೇಶವನ್ನು ಕೆಂಪು, ಹಳದಿ ಮತ್ತು ಹಸಿರು ವಲಯಗಳಾಗಿ ಬೇರ್ಪಡಿಸಿದೆ.

ಡ್ರೋನ್‌ಗಳನ್ನು ಎಲ್ಲಿ ಹಾರಿಸಬಹುದು, ಎಲ್ಲಿ ಹಾರಿಸಬಾರದು ಎಂಬುದನ್ನು ಕರಡು ನಿಯಮಗಳು ಸ್ಪಷ್ಟಪಡಿಸಿವೆ. ವಿಮಾನ ನಿಲ್ದಾಣದ ಪರಿಧಿಯನ್ನು 45 ಕಿ.ಮೀ.ನಿಂದ 12 ಕಿ.ಮೀ.ಗೆ ಇಳಿಸಲಾಗಿದೆ. ಪೈಲಟ್‌ಗಳು ತಮ್ಮ ಉದ್ದೇಶಿತ ಹಾರಾಟದ ಯೋಜನೆಯನ್ನು ರೂಪಿಸಲು ಮತ್ತು ವಲಯಗಳನ್ನು ಸುಲಭವಾಗಿ ಗುರುತಿಸಲು ಯಾಂತ್ರೀಕೃತ ಅಪ್ಲಿಕೇಶನ್ ಪ್ರೋಗ್ರಾಮಿಂಗ್ ಇಂಟರ್‌ಫೇಸ್ (ಎಪಿಐ) ರೂಪಿಸಲಾಗುತ್ತದೆ.

ಕೆಂಪು ವಲಯ

ಭೂಮಿಯ ಮೇಲ್ಮೈ, ನೀರಿನ ಮೇಲ್ಮೈ ಅಥವಾ ಕೇಂದ್ರ ಸರ್ಕಾರದ ಅಧಿಸೂಚಿತ ಬಂದರು ಮಿತಿಗಳನ್ನು ಈ ವಲಯ ಸೂಚಿಸುತ್ತದೆ. ಈ ವ್ಯಾಪ್ತಿಯಲ್ಲಿ ಡ್ರೋನ್ ಕಾರ್ಯಾಚರಣೆಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಅನುಮತಿಸಲಾಗುತ್ತದೆ.

ಹಳದಿ ವಲಯ

ದೇಶದ ಜಲಗಡಿ, ಬಂದರು, ಸೂಚಿತ ಭೂಪ್ರದೇಶದ ಮೇಲ್ಮೈ ಮೇಲೆ ಡ್ರೋನ್ ಹಾರಾಟ ನಿರ್ಬಂಧವಿರುವ ಪ್ರದೇಶವನ್ನು ಹಳದಿ ವಲಯ ಎಂದು ಗುರುತಿಸಲಾಗಿದೆ. ಇಲ್ಲಿ ಡ್ರೋನ್ ಹಾರಾಟ ನಡೆಸಲು ಅನುಮತಿ ಪಡೆಯಬೇಕು.

ಹಸಿರು ವಲಯ

ಹಳದಿ ಮತ್ತು ಕೆಂಪು ವಲಯ ಎಂದು ಗುರುತಿಸದೇ ಇರುವ ಪ್ರದೇಶದಲ್ಲಿ, ನೆಲದ ಮೇಲ್ಮೈನಿಂದ 400 ಅಡಿ ಎತ್ತರದವರೆಗಿನ ಪ್ರದೇಶವನ್ನು ಹಸಿರು ವಲಯ ಎನ್ನಲಾಗಿದೆ. ಯಾವುದೇ ವಿಮಾನ ನಿಲ್ದಾಣದ ಪರಿಧಿಯಿಂದ 8-12 ಕಿ.ಮೀ. ಒಳಗೆ, ನೆಲದ ಮೇಲ್ಮೈನಿಂದ 200 ಅಡಿ ಎತ್ತರದವರೆಗಿನ ಪ್ರದೇಶವನ್ನು ಹಸಿರು ವಲಯ ಎಂದು ಗುರುತಿಸಲಾಗುತ್ತದೆ. ಇಲ್ಲಿ ಡ್ರೋನ್ ಹಾರಾಟ ನಡೆಸಲು ಯಾವುದೇ ಅನುಮತಿ ಪಡೆಯಬೇಕಿಲ್ಲ.

ಡ್ರೋನ್‌ಗಳ ವರ್ಗೀಕರಣ

ನ್ಯಾನೊ ಡ್ರೋನ್	250 ಗ್ರಾಂ ಅಥವಾ ಅದಕ್ಕಿಂತ ಕಡಿಮೆ
ಮೈಕ್ರೊ ಡ್ರೋನ್	250 ಗ್ರಾಂಗಿಂತ ದೊಡ್ಡದು ಮತ್ತು 2 ಕೆ.ಜಿಗಿಂತ ಕಡಿಮೆ
ಸಣ್ಣ ಡ್ರೋನ್	2 ಕೆ.ಜಿ.ಗಿಂತ ದೊಡ್ಡದು ಮತ್ತು 25 ಕೆ.ಜಿಗಿಂತ ಕಡಿಮೆ
ಮಧ್ಯಮ ಡ್ರೋನ್	25 ಕೆ.ಜಿ.ಗಿಂತ ದೊಡ್ಡದು ಮತ್ತು 150 ಕೆ.ಜಿ.ಗಿಂತ ಕಡಿಮೆ
ದೊಡ್ಡ ಡ್ರೋನ್	150 ಕೆ.ಜಿ.ಗಿಂತ ಹೆಚ್ಚಿನ ತೂಕ

ಮುಖ್ಯ ಅಂಶಗಳು

- ವಾಣಿಜ್ಯೇತರ ಬಳಕೆಗಾಗಿ ಮೈಕ್ರೋ ಡ್ರೋನ್‌ಗಳಿಗೆ, ನ್ಯಾನೊ ಡ್ರೋನ್‌ಗಳಿಗೆ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ಉದ್ದೇಶದ ಸಂಸ್ಥೆಗಳಿಗೆ ಪೈಲಟ್ ಪರವಾನಗಿ ಅಗತ್ಯವಿಲ್ಲ
- ಭಾರತದಲ್ಲಿ ನೋಂದಾಯಿತ ವಿದೇಶಿ ಒಡೆತನದ ಕಂಪನಿಗಳಿಂದ ಡ್ರೋನ್ ಕಾರ್ಯಾಚರಣೆಗೆ ಯಾವುದೇ ನಿರ್ಬಂಧವಿರುವುದಿಲ್ಲ

ವಿವಾದ ಸೃಷ್ಟಿಸಿದ ಅಣ್ಣಾಮಲೈ ಹೇಳಿಕೆ

6 ತಿಂಗಳಲ್ಲಿ ಮಾಧ್ಯಮದ ಮೇಲೆ ನಿಯಂತ್ರಣ

ಪ್ರಜಾವಾಣಿ ವಾರ್ತೆ

ಚೆನ್ನೈ: 'ಮುಂದಿನ ಆರು ತಿಂಗಳಲ್ಲಿ ಮಾಧ್ಯಮವನ್ನು ನಾವು ನಿಯಂತ್ರಣಕ್ಕೆ ತೆಗೆದುಕೊಳ್ಳಲಿದ್ದೇವೆ' ಎಂದು ತಮಿಳುನಾಡು ಬಿಜೆಪಿ ಘಟಕದ ನಿಯೋಜಿತ ಅಧ್ಯಕ್ಷ ಕೆ. ಅಣ್ಣಾಮಲೈ ಅವರು ಹೇಳಿದ್ದಾರೆ. ಇದು ವಿವಾದಕ್ಕೆ ಕಾರಣವಾಗಿದೆ.

ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರಾಗಿ ಅಣ್ಣಾಮಲೈ ಅವರು ಶುಕ್ರವಾರ ಅಧಿಕೃತವಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಯಾವುದೇ ಮಾಧ್ಯಮ ಸಂಸ್ಥೆಯು ದೀರ್ಘ ಕಾಲ ಸುಳ್ಳು ಹರಡಲು ಸಾಧ್ಯವಿಲ್ಲ. ಸುಳ್ಳು ಸುದ್ದಿ ಹರಡುವಿಕೆಗೆ ಕಡಿವಾಣ ಹಾಕಲಾಗುವುದು ಎಂದು ಗುರುವಾರ ನಡೆದ ರೋಡ್‌ಶೋದಲ್ಲಿ ಹೇಳಿದ್ಧಾರೆ.

'ನಮ್ಮ ಬಗ್ಗೆ ಸುಳ್ಳು ಸುದ್ದಿ ಬರೆಯುತ್ತಿರುವ ಮಾಧ್ಯಮಗಳನ್ನು ಮರೆತು ಬಿಡಿ... ಮುಂದಿನ ಆರು ತಿಂಗಳಲ್ಲಿ ಮಾಧ್ಯಮವನ್ನು ನಾವು ನಿಯಂತ್ರಣಕ್ಕೆ ತೆಗೆದುಕೊಳ್ಳಲಿದ್ದೇವೆ' ಎಂದು ಅಣ್ಣಾಮಲೈ ಹೇಳಿದ್ದಾರೆ.

ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದ ಎಲ್.ಮುರುಗನ್ ಅವರು, ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆಯ ರಾಜ್ಯ ಸಚಿವರಾಗಿದ್ದಾರೆ. ಎಲ್ಲ ಮಾಧ್ಯಮವೂ ಅವರ ಕೈಕೆಳಗೇ ಬರುತ್ತದೆ ಎಂದು ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಅಣ್ಣಾಮಲೈ ಹೇಳಿದ್ಧಾರೆ. 'ಸುಳ್ಳು ಸುದ್ದಿಯನ್ನೇ ಮುಂದಿಟ್ಟುಕೊಂಡು ದೀರ್ಘ ಕಾಲ ರಾಜಕಾರಣ ಮಾಡಲಾಗದು' ಎಂದಿದ್ದಾರೆ.

ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿದ್ದ ಅಣ್ಣಾಮಲೈ ಅವರು ಈ ಹಿಂದೆಯೂ ವಿವಾದ ಸೃಷ್ಟಿಸಿದ್ದರು. ತಮಿಳುನಾಡು ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅರವಕುರಿಚಿ ಕ್ಷೇತ್ರದ ಅಭ್ಯರ್ಥಿಯಾಗಿದ್ದ ಅವರು ಡಿಎಂಕೆ ಮುಖಂಡ ಸೆಂಥಿಲ್ ಬಾಲಾಜಿ ಅವರಿಗೆ ಬೆದರಿಕೆ ಒಡ್ಡಿದ್ದಾರೆ ಎಂದು ಆರೋಪಿಸಲಾಗಿತ್ತು.

ಅಣ್ಣಾಮಲೈ ಹೇಳಿಕೆಗೆ ತೀವ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇದು ಮಾಧ್ಯಮಕ್ಕೆ ಬಹಿರಂಗ ಬೆದರಿಕೆ ಎಂದು ಆಡಳಿತಾರೂಢ ಡಿಎಂಕೆ ಹೇಳಿದೆ.

> **ಇದು ಮಾಧ್ಯಮವನ್ನು ಅದುಮಿಡುವ, ಬಹಿರಂಗವಾಗಿ ಬೆದರಿಸುವ ಕ್ರಮ. ಅಣ್ಣಾಮಲೈ ಹೇಳಿಕೆಯನ್ನು ಖಂಡಿಸುತ್ತೇವೆ**
> **ಮನೊ ತಂಗರಾಜ್,** ತಮಿಳುನಾಡಿನ ಮಾಹಿತಿ ತಂತ್ರಜ್ಞಾನ ಸಚಿವ

ಚುನಾವಣೋತ್ತರ ಹಿಂಸೆ ಸಿಬಿಐ ತನಿಖೆಗೆ ಶಿಫಾರಸು

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ 'ಶಾಸನಬದ್ಧ ನಿಯಮಗಳಿಲ್ಲ ಬದಲಾಗಿ ಆಡಳಿತಗಾರರ ನಿಯಮಗಳು ಚಾಲ್ತಿಯಲ್ಲಿವೆ. ಇದೇ ಸ್ಥಿತಿ ಮುಂದುವರಿದರೆ ಅದು ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಸಾವಿನ ಗಂಟೆಯಾಗಲಿದೆ' ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ಕಲ್ಕತ್ತಾ ಹೈಕೋರ್ಟ್‌ಗೆ ವರದಿ ಸಲ್ಲಿಸಿದೆ.

ಪಶ್ಚಿಮ ಬಂಗಾಳದಲ್ಲಿ ಚುನಾವಣೋತ್ತರ ಹಿಂಸಾಚಾರದ ಬಗ್ಗೆ ವರದಿ ಸಲ್ಲಿಸಲು ಎನ್‌ಎಚ್‌ಆರ್‌ಸಿಗೆ ಹೈಕೋರ್ಟ್ ಸೂಚಿಸಿತ್ತು.

ಹಿಂಸಾಚಾರದ ಕುರಿತು ಸಿಬಿಐ ತನಿಖೆ ನಡೆಸಬೇಕು ಎಂದು ಎನ್‌ಎಚ್‌ಆರ್‌ಸಿ ಶಿಫಾರಸು ಮಾಡಿದೆ.

ಕೊಲೆ, ಅತ್ಯಾಚಾರ, ಕಿರುಕುಳ, ಥಳಿತದಂಥ ಬಹುತೇಕ ಹಿಂಸಾಚಾರದ ಪ್ರಕರಣಗಳು ಆಕಸ್ಮಿಕ ಅಥವಾ ತಿಳಿಯದೇ ಆದ ಘಟನೆಗಳಲ್ಲ. ಇವೆಲ್ಲವನ್ನೂ ಮುಖ್ಯ ಎದುರಾಳಿ ಪಕ್ಷದ ಜೊತೆ ಸಂಬಂಧ ಹೊಂದಿರುವ ನಿಗದಿತ ವ್ಯಕ್ತಿಗಳನ್ನು ಗುರಿಯಾಗಿಸಿಕೊಂಡು ನಡೆಸಲಾಗಿವೆ. ಈ ಹಿಂಸಾಚಾರಗಳು ಪ್ರತೀಕಾರದ ಉದ್ದೇಶವನ್ನು ಹೊಂದಿದ್ದವು. ವಿಪಕ್ಷಕ್ಕೆ ಮತ ನೀಡುವ ಅಥವಾ ಬೆಂಬಲಿಸುವ ಧೈರ್ಯ ತೋರಿದವರ ವಿರುದ್ಧ ಪ್ರತೀಕಾರ ತೆಗೆದುಕೊಳ್ಳಲಾಗಿದೆ ಎಂದು 50 ಪುಟಗಳ ವರದಿಯಲ್ಲಿ ವಿವರಿಸಲಾಗಿದೆ.

ವಿಪಕ್ಷದ ಕಾರ್ಯಕರ್ತರಿಗೆ ಸೇರಿದ ಆಸ್ತಿಯನ್ನು ಹಿಂಸಾಚಾರದಲ್ಲಿ ದೊಡ್ಡ ಪ್ರಮಾಣದಲ್ಲಿ ಧ್ವಂಸಗೊಳಿಸಲಾಗಿದೆ. ಸರ್ಕಾರದ ಸೌಲಭ್ಯಗಳನ್ನು ತಪ್ಪಿಸುವ ಸಲುವಾಗಿ ಪಡಿತರ ಚೀಟಿ ಸೇರಿ ಹಲವು ಗುರುತಿನ ಚೀಟಿಗಳನ್ನು ಅವರಿಂದ ಕಸಿಯಲಾಗಿದೆ. ಪೊಲೀಸರೂ ಈ ದುಷ್ಕೃತ್ಯದಲ್ಲಿ ಭಾಗಿಯಾಗಿದ್ದರು ಎಂದು ಸಂತ್ರಸ್ತರು ಆರೋಪಿಸಿದ್ದಾರೆ ಎಂದು ಎನ್‌ಎಚ್‌ಆರ್‌ಸಿ ಆರೋಪಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಮುಸ್ಲಿಮರು ಭಾರತದಲ್ಲಿ ತಮ್ಮ ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಚಿತ್ರದಲ್ಲಿರುವ ಉತ್ತರ ಪ್ರದೇಶದ ಅಂಗವಿಕಲನನ್ನೇ ನೋಡಿ. ಅವನಿಗೆ ಎಷ್ಟೊಂದು ಮಕ್ಕಳಿದ್ದಾರೆ. ಉತ್ತರ ಪ್ರದೇಶ ಸರ್ಕಾರವು ಜನಸಂಖ್ಯೆ ನಿಯಂತ್ರಣಕ್ಕೆ ಕ್ರಮ ತೆಗೆದುಕೊಂಡಿದೆ. ಎರಡು ಮಕ್ಕಳ ನಂತರ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯನ್ನು ಕಡ್ಡಾಯಗೊಳಿಸಿದೆ. ಕೇಂದ್ರ ಸರ್ಕಾರವೂ ಉತ್ತರ ಪ್ರದೇಶ ಸರ್ಕಾರವನ್ನು ಅನುಸರಿಸಬೇಕು. ಆಗ ಅನಗತ್ಯವಾಗಿ ಹೆಚ್ಚಿನ ಜನರಿಗೆ ಸರ್ಕಾರ ವಿವಿಧ ಸೌಲಭ್ಯಗಳನ್ನು ಒದಗಿಸುವುದು ಕಡಿಮೆಯಾಗುತ್ತದೆ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಪೋಸ್ಟ್‌ನ ಜತೆಗೆ ಚಿತ್ರವೊಂದನ್ನು ಹಂಚಿಕೊಳ್ಳಲಾಗಿದೆ.

ಇದು ಸುಳ್ಳು ಸುದ್ದಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ವೈರಲ್ ಆಗಿರುವ ಚಿತ್ರವು ಭಾರತದ್ದಲ್ಲ. ಬದಲಿಗೆ ಬಾಂಗ್ಲಾದೇಶದ ಕಾಕ್ಸ್ ಬಜಾರ್‌ನ ನಿರಾಶ್ರಿತರ ಶಿಬಿರದ ನಿವಾಸಿಗಳ ಚಿತ್ರವದು. ಚಿತ್ರದಲ್ಲಿರುವ ಅಂಗವಿಕಲ ವ್ಯಕ್ತಿಯ ಹೆಸರು ಮೊಹಮ್ಮದ್ ಅಲಂಗೀರ್. ಅಲಂಗೀರ್, ಮ್ಯಾನ್ಮಾರ್‌ನವರು. ಅಲ್ಲಿ ರೋಹಿಂಗ್ಯಾ ಮುಸ್ಲಿಮರ ಮೇಲೆ ನಡೆದ ದಾಳಿಯಲ್ಲಿ ಗಾಯಗೊಂಡಿದ್ದರು. ಅಲ್ಲಿಂದ ತಪ್ಪಿಸಿಕೊಂಡು ಬಾಂಗ್ಲಾದೇಶಕ್ಕೆ ಬಂದ ಅವರನ್ನು ಕಾಕ್ಸ್ ಬಜಾರ್‌ನ ನಿರಾಶ್ರಿತ ಶಿಬಿರದಲ್ಲಿ ಇರಿಸಲಾಗಿದೆ. ಈ ಚಿತ್ರವನ್ನು ಬಳಸಿಕೊಂಡು, ಭಾರತೀಯ ಮುಸ್ಲಿಮರ ವಿರುದ್ಧ ಅಭಿಪ್ರಾಯ ಮೂಡಿಸಲು ಸುಳ್ಳು ಸುದ್ದಿ ಹರಡಲಾಗಿದೆ' ಎಂದು 'ದಿ ಲಾಜಿಕಲ್ ಇಂಡಿಯನ್' ಹೇಳಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸುಂಟರಗಾಳಿ

ಏಳಿಸುವುದೊಂದು ಹೊರಸುಳಿವೆನ್ನ ಹೃದಯದಲಿ |
ಗಾಳಿಸುಂಟರೆಯನದು ಹರಣಗಳ ಕುಲುಕಿ ||
ಬಾಳನಲ್ಲಾಡಿಪುದು ಬೇರಿಂದ ತುದಿವರೆಗೆ |
ಧೂಳದರೊಳೀ ಜನ್ಮ – ಮಂಕುತಿಮ್ಮ || 839 ||

ಪದ-ಅರ್ಥ: ಏಳಿಸುವುದೊಂದು = ಏಳಿಸುವುದು + ಒಂದು, ಹೊರಸುಳಿವೆನ್ನ = ಹೊರಸುಳಿವು + ಎನ್ನ, ಗಾಳಿಸುಂಟರೆಯನದು = ಗಾಳಿಸುಂಟರೆಯನು (ಸುಂಟರಗಾಳಿ, ಬಿರುಗಾಳಿ) + ಅದು, ಹರಣ = ಪ್ರಾಣ, ಶಕ್ತಿ, ಬಾಳನಲ್ಲಾಡಿಪುದು = ಬಾಳನು + ಅಲ್ಲಾಡಿಪುದು, ಧೂಳದರೊಳೀ = ಧೂಳು + ಅದರೊಳು + ಈ

ವಾಚ್ಯಾರ್ಥ: ಒಂದು ಹೊರಸುಳಿವು ನನ್ನ ಹೃದಯದಲ್ಲಿ ಸುಂಟರಗಾಳಿಯನ್ನು ಎಬ್ಬಿಸಿ ನನ್ನ ಶಕ್ತಿಯನ್ನೆಲ್ಲ ಹೀರಿ, ಬಾಳನ್ನು ಬೇರಿನಿಂದ ತುದಿಯವರೆಗೆ ಅಲ್ಲಾಡಿಸುತ್ತಿದೆ. ಈ ಜನ್ಮ ಆ ಗಾಳಿಯಲ್ಲೊಂದು ಧೂಳಿಕಣ.

ವಿವರಣೆ: ಆತ ಮತ್ತು ಆಕೆ ಅಮೆರಿಕದ ಪ್ರಖ್ಯಾತ ಎಂ.ಬಿ.ಎ ಕಾಲೇಜಿನಲ್ಲಿ ಸಹಪಾಠಿಗಳು. ಕಲಿಕೆ ಮುಗಿದ ಮೇಲೆ ಭಾರತಕ್ಕೆ ಬಂದರು. ಇಬ್ಬರಿಗೂ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಕೆಲಸ ದೊರೆಯಿತು. ಇಬ್ಬರೂ ಸೇರಿ ಸುಮಾರು ಮೂರು ಕೋಟಿ ವಾರ್ಷಿಕ ವರಮಾನ. ಮನೆಯವರೆಲ್ಲ ಒಪ್ಪಿ ಮದುವೆಯಾದರು. ಕೆಲಸಕ್ಕಾಗಿ, ಸಂತೋಷಕ್ಕಾಗಿ ದೇಶ ದೇಶ ಅಲೆದರು. ದೊಡ್ಡ ಮನೆ, ದೊಡ್ಡ ಕಾರು, ಸಮಾಜದಲ್ಲಿ ಅಂತಸ್ತು ಅವರದಾದವು. ಸ್ವರ್ಗ ಇದಕ್ಕಿಂದ ಚೆನ್ನಾಗಿರುವುದು ಸಾಧ್ಯವೇ? ಒಂದು ದಿನ ಪರದೇಶದಿಂದ ಮರಳಿ ದೆಹಲಿಗೆ ಬಂದಿಳಿದಾಗ ಇನ್ನೊಬ್ಬ ಅಕಸ್ಮಾತ್ತಾಗಿ ಸಿಕ್ಕಿದ ವಿಮಾನನಿಲ್ದಾಣದಲ್ಲಿ. ಆಕೆಗೆ ಆಶ್ಚರ್ಯ, ಸಂತೋಷ. ಇನ್ನೊಬ್ಬ ಆಕೆಗೆ ಪ್ರಾಥಮಿಕ ಶಾಲೆಯಲ್ಲಿ ಸಹಪಾಠಿ. ಒಂದೇ ಊರಿನಲ್ಲಿ ಜೊತೆಗೇ ಬೆಳೆದವರು. ಇಬ್ಬರೂ ಹಳೆಯ, ಬಾಲ್ಯದ ನೆನಪುಗಳನ್ನು ಕೆದಕಿ, ಕಣ್ಣರಳಿಸಿ, ಬಾಯಿ ತುಂಬ ನಕ್ಕರು. ಆಕೆ ಇನ್ನೊಬ್ಬನಿಗೆ ಗಂಡನ ಪರಿಚಯ ಮಾಡಿದಳು. ನಂತರ ಆ ತರುಣ ಆಗಾಗ ಅವಳ ಮನೆಗೆ ಬರುತ್ತಿದ್ದ. ಆದರೆ ಗಂಡನಿಗೆ ಏನೋ ಅಡ್ಡವಾಸನೆ ಬಂದಂತೆ ತೋರಿತು. ಅವರಿಬ್ಬರ ನಡವಳಿಕೆಯಲ್ಲಿ ವ್ಯತ್ಯಾಸವಿದ್ದಂತೆ ಈತನಿಗೆ ಕಂಡಿತು. ಅದು ಸಂಶಯವಾಯಿತು, ದ್ವೇಷದ ಬೀಜವಾಯಿತು. ಅಪನಂಬಿಕೆಯ ನೆಲದಲ್ಲಿ ದ್ವೇಷದ ಬೀಜ ಮೊಳೆಯುವುದು ಬಲು ಬೇಗ. ಆಕೆಯ ಮನದಲ್ಲಿ ಯಾವ ಕಸವೂ ಇಲ್ಲ. ಆದರೆ ಈತ ಕುದಿದುಹೋದ. ಹಾಗೆ ಮನ ತೀರ ಅಸ್ವಸ್ಥವಾದ ಗಳಿಗೆಯಲ್ಲಿ ಯಾರಿಗೋ ಹಣ ಕೊಟ್ಟು ಇನ್ನೊಬ್ಬನನ್ನು ಕೊಲ್ಲಿಸಿಬಿಟ್ಟ. ತನಿಖೆ ನಡೆದಾಗ ಈತನ ಕೈವಾಡ ಬಯಲಿಗೆ ಬಂದು ಜೀವಾವಧಿ ಶಿಕ್ಷೆಯಾಗಿ ಜೈಲಿಗೆ ಹೋದ. ಅಪವಾದ ತಾಳಲಾರದೆ ಆಕೆ ಆತ್ಮಹತ್ಯೆ ಮಾಡಿಕೊಂಡಳು. ಸ್ವರ್ಗವಾಗಿದ್ದ ಮನೆ ನರಕದ ನೆಲೆಯಾಯಿತು.

ಕಗ್ಗ ಇದನ್ನು ಧ್ವನಿಪೂರ್ಣವಾಗಿ ಹೇಳುತ್ತದೆ. ಹೊರಗೆ ನಡೆದಂಥ ಒಂದು ಘಟನೆ, ಚಿಂತನೆ ನಮ್ಮ ಮನಸ್ಸಿನಲ್ಲಿ ಒಂದು ಬಿರುಗಾಳಿಯನ್ನೇಳಿಸುತ್ತದೆ. ನಮ್ಮ ಪ್ರಾಣಗಳನ್ನು, ಶಕ್ತಿಗಳನ್ನು ಕುಲುಕಿ, ಬದುಕನ್ನು ಬುಡಸಮೇತವಾಗಿ ಅಲ್ಲಾಡಿಸಿಬಿಡುತ್ತದೆ. ಹಾಗೆ ಬಿರುಗಾಳಿ ಬೀಸಿದಾಗ ಮೇಲೆದ್ದ ದೂಳಿನಲ್ಲಿ ಕಣವೊಂದು ಹೇಗೆ ಅಸಹಾಯಕವಾಗಿ, ದಿಕ್ಕುದಿಕ್ಕಿಗೆ ಹಾರಾಡಿ ಗೊತ್ತುಗುರಿಯಿಲ್ಲದೇ ಸಾಗಿ ಹೋಗುವಂತೆ ಬದುಕು ಅತಂತ್ರವಾಗುತ್ತದೆ. ಈ ಸುಂಟರಗಾಳಿ ಪ್ರಾರಂಭವಾಗುವುದು ಹೊರಗೆ, ಗದ್ದಲ ಎಬ್ಬಿಸುವುದು ಅಂತರ್ಯದಲ್ಲಿ. ಒಬ್ಬ ಮಂಥರೆ ಎಂಬ ಬಿರುಗಾಳಿ ರಾಮನ ಪಟ್ಟಾಭಿಷೇಕವನ್ನು ಬದಲಿಸಿ ಕಾಡಿಗೆ ಕಳುಹಿಸಿತು. ಒಬ್ಬ ಸಾಮಾನ್ಯನ ಕೊಂಕು ಮಾತು ರಾಮ- ಸೀತೆಯರನ್ನು ಕೊನೆಯವರೆಗೂ ಬೇರ್ಪಡಿಸಿತು. ಎಲ್ಲಿಯೋ ದೂರದಲ್ಲಿ ಚರ್ಚೆ ಮಾಡುತ್ತಿದ್ದ ವಶಿಷ್ಠ, ವಿಶ್ವಾಮಿತ್ರರ ವಾಗ್ವಾದ, ಸಂತೋಷವಾಗಿದ್ದ ಹರಿಶ್ಚಂದ್ರನ ಬದುಕನ್ನು ಧೂಳಿಯಂತೆ ಹಾರಿಸಿ, ನಲುಗಿಸಿಬಿಟ್ಟಿತು. ಆದಷ್ಟು ಹೊರಗಿನ ಸುಂಟರಗಾಳಿ ಅಂತರ್ಯದ ನೆಮ್ಮದಿಯನ್ನು ಕೆಡಿಸದಂತೆ ಎಚ್ಚರವಹಿಸುವುದು ಕ್ಷೇಮ. ❖

ದಿನ ಭವಿಷ್ಯ

ಶುಕ್ರವಾರ ಜುಲೈ 16, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುನರ್ವಸು ಸಪ್ತಮೀ ಗಂ. 49-44 (ರಾ. 2-02) ಶುಕ್ರವಾರ ನಿತ್ಯ ನಕ್ಷತ್ರ ಹಸ್ತ ಗಂ. 47-20 (ರಾ 1-05) ಪರಿಘ ನಾಮ ಯೋಗ ಗಂ. 7-45 ಗರಜ ಕರಣ ಗಂ. 21-57 ವಿಷ ಗಂ. 9-46 ಅಮೃತ ಗಂ. 32-39 ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 6-05 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 3 7

ಮೇಷ: ಕಚೇರಿ ಕೆಲಸಗಳ ಸುಗಮತೆಗಾಗಿ ಸಹವರ್ತಿಗಳ ಸಲಹೆ ಸಹಕಾರ ಕೋರಲಿದ್ದೀರಿ. ಸಂಗಾತಿಗೆ ಹೊಸ ಉದ್ಯೋಗ ದೊರೆತು ಸಂತೋಷ ಮೂಡಲಿದೆ. ನಿರ್ದಿಷ್ಟ ಕೆಲಸಗಳಿಗೆ ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿ.

ವೃಷಭ: ಕೆಲಸ ಕಾರ್ಯಗಳಿಂದ ಬಿಡುವು ಮಾಡಿಕೊಳ್ಳಲಿದ್ದೀರಿ. ಸ್ನೇಹಿತರೊಂದಿಗೆ ದಿನವನ್ನು ಸಂತೋಷದಿಂದ ಕಳೆಯಲಿದ್ದೀರಿ. ಕುಟುಂಬದ ಸದಸ್ಯರೊಂದಿಗೆ ಸಂತೋಷದ ಓಡಾಟ. ಮಕ್ಕಳಿಗಾಗಿ ವ್ಯಾಪಾರ ಸಾಧ್ಯತೆ.

ಮಿಥುನ: ವೃತ್ತಿ ಬದಲಾವಣೆಯ ಸಮಸ್ಯೆ ನಿವಾರಣೆಯಾಗುವುದು. ಹೊಸ ಕಾರ್ಯದ ಸಂಪೂರ್ಣ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ನಿಮ್ಮದಾಗಲಿದೆ. ಸಂಗಾತಿಯ ಇಷ್ಟಾರ್ಥಗಳನ್ನು ಈಡೇರಿಸಲಿದ್ದೀರಿ.

ಕರ್ಕಾಟಕ: ದುಡುಕಿನಿಂದಾಗಿ ಕಾರ್ಯ ವೈಫಲ್ಯ. ತಾಳ್ಮೆ ಹಾಗೂ ಜಾಗರೂಕತೆ ಅವಶ್ಯ. ಸಂಶೋಧನೆಯಲ್ಲಿ ಅಪಾರ ಶ್ರಮ ವಹಿಸಲಿದ್ದೀರಿ. ಹೆಚ್ಚಿನ ಕಾರ್ಯ ಸಿದ್ಧಿಯಾಗಲಿದೆ. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ಕಿರಿಕಿರಿ ಉಂಟಾದೀತು.

ಸಿಂಹ: ಕಾರ್ಯಕ್ಷೇತ್ರದಲ್ಲಿ ಒಮ್ಮತ ಮೂಡಿಸಲು ನೀವು ಅನುಸರಿಸಿದ ಮಾರ್ಗ ಮೆಚ್ಚಿ ಮೇಲಾಧಿಕಾರಿಗಳಿಂದ ಪ್ರಶಂಸೆಗೆ ಪಾತ್ರರಾಗುವಿರಿ. ಕಚೇರಿಯಲ್ಲಿ ನಿಮ್ಮ ಸ್ಥಾನಮಾನ ಗಟ್ಟಿಯಾಗಿ ಕಾರ್ಯ ಬಾಹುಳ್ಯ ಅಧಿಕಗೊಳ್ಳುವ ಸಾಧ್ಯತೆ.

ಕನ್ಯಾ: ಚಿತ್ರಕಲೆ, ಗಾಯನ ಮುಂತಾದ ಲಲಿತ ಕಲೆಗಳಲ್ಲಿ ಆಸಕ್ತಿ. ಮುಖ್ಯವಾದ ವಿಷಯವೊಂದರ ಬಗ್ಗೆ ಹೆಚ್ಚಿನ ವಿವರಕ್ಕಾಗಿ ಸ್ನೇಹಿತರ ಸಹಾಯ ಪಡೆದುಕೊಳ್ಳಬೇಕಾದೀತು. ಭಾವೋದ್ವೇಗವನ್ನು ತಗ್ಗಿಸಿಕೊಳ್ಳುವಿರಿ.

ತುಲಾ: ಉದ್ಯೋಗದಲ್ಲಿ ಸ್ಥಾನ ಮಾನಗಳು ಅಧಿಕಗೊಳ್ಳುವುದು. ರೈತಾಪಿ ವರ್ಗದವರಿಗೆ ಕೃಷಿ ಕಾರ್ಯದಲ್ಲಿ ತೊಡಗಿಕೊಳ್ಳಲು ತೊಡಕುಗಳು ಎದುರಾದೀತು. ಅನ್ನಪೂರ್ಣೇಶ್ವರಿಯ ಆರಾಧನೆಯಿಂದ ಸಮೃದ್ಧಿ ನೆಲೆಸಲಿದೆ.

ವೃಶ್ಚಿಕ: ಆತ್ಮೀಯರೊಂದಿಗೆ ಹಣಕಾಸಿನ ಪರಿಸ್ಥಿತಿಯ ಬಗ್ಗೆ ವಿಷಯ ಹಂಚಿಕೊಳ್ಳಲಿದ್ದೀರಿ. ನಿವೇಶನ ಕೊಳ್ಳುವ ವಿಚಾರ ಮುಂದೂಡುವ ಬದಲಾಗಿ ಹೊಂದಾಣಿಕೆಯಿಂದ ಮುಂದುವರೆಯುವುದು ಉತ್ತಮ.

ಧನು: ಒದಗಿಬಂದಿರುವ ಅವಕಾಶಗಳನ್ನು ಕಳೆದುಕೊಳ್ಳದೇ ಸದುಪಯೋಗ ಪಡೆದುಕೊಳ್ಳಿ. ಸ್ನೇಹಿತನ ಸಹಾಯಕ್ಕೆ ನಿಲ್ಲಬೇಕಾದ ಅವಕಾಶ ಎದುರಾದೀತು. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಉದ್ಯೋಗದ ಅವಕಾಶ ದೊರೆತು ನೆಮ್ಮದಿ.

ಮಕರ: ಹೊಸ ನಿರ್ಮಾಣ ಕಾರ್ಯಗಳ ಬಗ್ಗೆ ಒಪ್ಪಂದ ಏರ್ಪಟ್ಟು ಸಂತೋಷ ತರುವುದು. ಸಂಶೋಧನಾ ವೃತ್ತಿಯಲ್ಲಿರುವವರಿಗೆ ಪ್ರಶಸ್ತಿ, ಗೌರವಾದರಗಳು ಲಭ್ಯವಾಗಲಿವೆ. ಪ್ರವಾಸ ಸಂತಸವನ್ನು ತರುವುದು. ಉತ್ತಮ ಆರೋಗ್ಯ.

ಕುಂಭ: ಹಣಕಾಸಿನ ಅಡಚಣೆಗಳು ದೂರವಾಗಲಿವೆ. ಜೀವನದಲ್ಲಿ ಬದಲಾವಣೆ ತರುವ ಘಟನೆಯೊಂದು ಎದುರಾಗುವ ಸಾಧ್ಯತೆ ಇದೆ. ಸಂಪನ್ಮೂಲಗಳು ಕೂಡಿಬರಲಿವೆ.

ಮೀನ: ಸಮಾಜ ಸೇವೆಯ ನಿಮಿತ್ತ ಹೆಚ್ಚಿನ ಓಡಾಟ ಮಾಡಬೇಕಾದೀತು. ಸಂಗಾತಿಯ ಆರೋಗ್ಯದಲ್ಲಿ ಏರುಪೇರು ಸಂಭವ. ದೂರದಲ್ಲಿರುವ ಮಿತ್ರರೊಬ್ಬರು ಸನಿಹಕ್ಕೆ ಬರುವ ಸಾಧ್ಯತೆ ಕಂಡುಬರುತ್ತಿದೆ.

ನಿಮ್ಮ ಜನ್ಮದಿನ 16-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ನಿಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಸುಧಾರಣೆ ಕಂಡುಬರಲಿದೆ. ವ್ಯಾವಹಾರಿಕವಾಗಿ ಬಹಳಷ್ಟು ಏಳಿಗೆಯನ್ನು ಕಂಡು ಉತ್ತಮ ಬೆಳವಣಿಗೆ ಕಾಣುವಿರಿ. ಕೌಟುಂಬಿಕವಾಗಿ ಸಂತೃಪ್ತಿಯನ್ನು ಹೊಂದಲಿದ್ದೀರಿ. ಹೊಸದಾಗಿ ಆರಂಭಿಸಿದ ಜಂಟಿ ವ್ಯಾಪಾರಗಳಲ್ಲಿ ಸುಧಾರಣೆಯನ್ನು ಕಾಣುವಿರಿ.

ಪದಬಂಧ 4659

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಾಜನ ದರ್ಬಾರು (3)
3.ಉತ್ತರದವರ ಚಿಕ್ಕಪ್ಪ (2)
5.ಇಹದ ವಿರುದ್ಧ ಪದ (2)
6.ಪರಿಶುದ್ಧವಾದ ಬಂಗಾರ (4)
7.ಇದು ಕನ್ನಡಿಗರ ಯೂನಿವರ್ಸಿಟಿ (7)
10.ಪಕ್ಷದಂದು ತೋರಿದ ಭೇದಭಾವ (4)
11.ತಳಮಳದಿಂದ ನೋಡಿರುವ ಬುಡ (2)
13.ನ್ಯಾಯಾಲಯದ ತೀರ್ಪು (2)
14.ತಾರೆ ಇಲ್ಲಿ ಕಾಣುತ್ತಿದೆ (3)

ಮೇಲಿಂದ ಕೆಳಕ್ಕೆ

1.ಓಡುವಾತ ಹಿಡಿದಿರುವ ಮಡಕೆ ಚೂರು (2)
2.ಟಾರ ರಸ್ತೆ ಬದಿಯಲ್ಲಿನ ಚರಂಡಿ (3)
4.ನೀರಿನ ಚಿಲುಮೆ (3)
5.ಪದ ಹೇಳಿ ಪಡೆದಿರುವ ಡಿಗ್ರಿ (3)
6.ಅವನಿರುವ ಭೂಮಿ! (3)
8.ಈತ ಗೆಲುವನ್ನು ಪಡೆದವನು (3)
9.ನರಕಾಧಿಪತಿಯ ಹತ್ತಿರವಿರುವ ಜೋಡಿ (3)
10.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
11.ತನಯ ಈ ರೀತಿ ಮಗ್ನ (3)
12.ಗೆಳೆಯ ಇಲ್ಲಿದ್ದಾನೆ (2)



4658ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆವರಣ 3.ಕಲರವ 5.ಹಸಾದ 7.ದರ 9.ಮಾನ 10.ನಕಲಿ 11.ನಳ 12.ಸುರ 14.ಕನಸು 16.ದುರಾಚಾರಿ 17.ತಡಗುಣಿ

ಮೇಲಿಂದ ಕೆಳಕ್ಕೆ: 1.ಆಮೋದ 2.ಣಹ 3.ಕದ 4.ವದನ 6.ಸಾಮೂಹಿಕಭೋಜನ 8.ರಸಕವಳ 9.ಮಾತುಹೊರಿಸು 11.ನಗದು 13.ರಮಣಿ 14.ಕರಿ 15.ಸುತ

ಸುಡೊಕು 5045

9		7						
	6		4		9	8		7
5		8					6	
		6	5			7		9
7				6	1			
	5		8			3		6
8			3			4		2
	9			8			7	
6		4		9		1		3

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5044 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ಜನ್ಮ ಶತಾಬ್ಧಿ ಸ್ಮರಣೆ

ಕೀರ್ತಿಶೇಷ ಬಿ. ತಿಮ್ಮಣ್ಣರವರು
ಪುರಸಭಾ ಮಾಜಿ ಅಧ್ಯಕ್ಷರು, ಆನೇಕಲ್
ಜನನ: 16-07-1921
ಆನೇಕಲ್ ಪುರಸಭೆಯ ಅಧ್ಯಕ್ಷರಾಗಿ ಎರಡು ಅವಧಿಗೆ ಸೇವೆ ಸಲ್ಲಿಸಿ ಆನೇಕಲ್ ನಗರದ ಮೂಲಸೌಲಭ್ಯ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸಿ ಜನೋಪಕಾರಿಗಳಾಗಿದ್ದ ಬಿ. ತಿಮ್ಮಣ್ಣ ಅವರ ಸೇವೆ ನಮಗೆಲ್ಲಾ ದಾರಿದೀಪವಾಗಿದೆ.
ಜನ್ಮ ಶತಾಬ್ದಿಯ ಶುಭ ಕೋರುವವರು:
ಧರ್ಮಪತ್ನಿ ಹನುಮಕ್ಕ, ಮಕ್ಕಳು ಮತ್ತು ಸೊಸೆಯಂದಿರು, ಮೊಮ್ಮಕ್ಕಳು
ಶ್ರೀ ಬಿ. ಟಿ. ರಾಧಾಕೃಷ್ಣ ಮತ್ತು ಸಹೋದರರು
ಶ್ರೀ ಬಿ .ಎಂ. ರಾಜಶೇಖರ್ ಮತ್ತು ಸಹೋದರರು ಮತ್ತು ಮಕ್ಕಳು
ಬೇವಿನ ಮರದ ಕುಟುಂಬದವರು, ಆನೇಕಲ್.

ಮೊದಲನೆ ವರ್ಷದ ಪುಣ್ಯಸ್ಮರಣೆ

ಶ್ರೀಕಂಠಯ್ಯನವರು
ಶ್ರೀಭಾಗ್ಯಲಕ್ಷ್ಮೀ ಫೈನಾನ್ಸ್ (ರಿ),
ನಮ್ಮ ಪೂಜ್ಯರಾದ ಶ್ರೀಯುತರ ಮೊದಲನೇ ವರ್ಷದ ಪುಣ್ಯತಿಥಿಯನ್ನು ತಾ:18.07.2021ನೇ ಭಾನುವಾರದಂದು ಸ್ವಗ್ರಾಮ ಕೊಂಗ ಬೋರನದೊಡ್ಡಿ, ಮದ್ದೂರು ತಾ. ಇಲ್ಲಿ ನಡೆಸಲಾಗುವುದು.
ಇಂತಿ ದುಃಖತಪ್ತರು :
ಧರ್ಮಪತ್ನಿ- ಶ್ರೀಮತಿ ಸರೋಜಮ್ಮ ಮತ್ತು ಮಗನಾದ ಎಸ್. ಅನಿಲ್‌ಕುಮಾರ್ ಮತ್ತು ಕುಟುಂಬದವರು ಹಾಗೂ ಬಂಧು-ಮಿತ್ರರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

LOOKING FOR JOB OPPORTUNITY
Refer Classifieds on Wednesday

LOOKING FOR JOB OPPORTUNITY
Refer Classifieds on Wednesday

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,853
ಇಂದಿನ ಅಂತ್ಯ	15,924
▲	71
ದಿನದ ಗರಿಷ್ಠ	15,952

ವಿನಿಮಯ ದರ

$ ಡಾಲರ್	74.54
£ ಪೌಂಡ್	103.17
€ ಯುರೊ	88.31
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹510

ಸಂಕ್ಷಿಪ್ತ ಸುದ್ದಿ

ವಾಟ್ಸ್‌ಆ್ಯಪ್ ಮೂಲಕವೂ ಪಿಂಚಣಿ ವಿವರ

ನವದೆಹಲಿ (ಪಿಟಿಐ): ಪಿಂಚಣಿದಾರರ ಖಾತೆಗಳಿಗೆ ಪಿಂಚಣಿ ಮೊತ್ತವನ್ನು ಜಮಾ ಮಾಡಿದ ನಂತರ, ಅದರ ವಿವರವನ್ನು ಬ್ಯಾಂಕ್‌ಗಳು ಎಸ್‌ಎಂಎಸ್ ಹಾಗೂ ಇ-ಮೇಲ್ ಜೊತೆ ವಾಟ್ಸ್‌ಆ್ಯಪ್ ಮೂಲಕವೂ ರವಾನಿಸಬಹುದು ಎಂದು ಕೇಂದ್ರ ಸರ್ಕಾರ ಹೇಳಿದೆ.

ಪಿಂಚಣಿ ಮತ್ತು ಪಿಂಚಣಿದಾರರ ಅಭಿವೃದ್ಧಿ ಇಲಾಖೆಯು ಈ ಸಂಬಂಧ ಆದೇಶ ಹೊರಡಿಸಿದೆ. 'ಪಿಂಚಣಿ ವಿತರಣೆ ಮಾಡುವ ಬ್ಯಾಂಕ್‌ಗಳು ಪಿಂಚಣಿ ಚೀಟಿಯನ್ನು ಪಿಂಚಣಿದಾರರಿಗೆ ನೀಡಬೇಕು. ಅದರಲ್ಲಿ, ಜಮಾ ಆಗಿರುವ ಪಿಂಚಣಿ ಮೊತ್ತ, ಕಡಿತ ಮಾಡಿರುವ ತೆರಿಗೆ ಮೊತ್ತ ನಮೂದಾಗಿರಬೇಕು' ಎಂದು ಆದೇಶದಲ್ಲಿ ಹೇಳಲಾಗಿದೆ.

₹ 499ಕ್ಕೆ ಓಲಾ ಇ–ಸ್ಕೂಟರ್ ಬುಕಿಂಗ್

ನವದೆಹಲಿ (ಪಿಟಿಐ): ಓಲಾ ಕಂಪನಿಯು ತನ್ನ ವಿದ್ಯುತ್ ಚಾಲಿತ ಸ್ಕೂಟರ್ ಬುಕಿಂಗ್ ಆರಂಭಿಸಿರುವುದಾಗಿ ಗುರುವಾರ ತಿಳಿಸಿದೆ. ಮರುಪಾವತಿಸಬಹುದಾದ ₹ 499 ಠೇವಣಿ ಇರಿಸಿ ಈ ಸ್ಕೂಟರ್ ಕಾಯ್ದಿರಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕಂಪನಿಯು ವಿದ್ಯುತ್ ಚಾಲಿತ ಸ್ಕೂಟರ್‌ನ ವೈಶಿಷ್ಟ್ಯಗಳ ಬಗ್ಗೆ ಇನ್ನಷ್ಟೇ ಮಾಹಿತಿ ನೀಡಬೇಕಿದೆ. ಇದು ಗರಿಷ್ಠ ವೇಗ, ಅತಿ ಹೆಚ್ಚಿನ ಬೂಟ್ ಸ್ಪೇಸ್ ಮತ್ತು ಆಧುನಿಕ ತಂತ್ರಜ್ಞಾನ ಒಳಗೊಂಡಿರಲಿದೆ ಎಂದು ಹೇಳಿದೆ. ಎಲ್ಲರಿಗೂ ಸುಲಭವಾಗಿ ದೊರೆಯುವ ರೀತಿಯಲ್ಲಿ ಇದರ ಬೆಲೆ ಇರಲಿದೆ ಎಂದೂ ತಿಳಿಸಿದೆ.

ವಿಪ್ರೊ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿನ ನಿವ್ವಳ ಲಾಭದಲ್ಲಿ ಶೇಕಡ 35.6ರಷ್ಟು ಏರಿಕೆ ಆಗಿದೆ ಎಂದು ಐ.ಟಿ. ಸೇವಾ ಕಂಪನಿ ವಿಪ್ರೊ ಹೇಳಿದೆ. ಕಂಪನಿಯ ಲಾಭವು ₹ 3,242 ಕೋಟಿ ತಲುಪಿದೆ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು ₹ 2,390 ಕೋಟಿ ಲಾಭ ಗಳಿಸಿತ್ತು. ಕಂಪನಿಯ ಕಾರ್ಯಾಚರಣೆ ಆದಾಯವು ಶೇಕಡ 22.3ರಷ್ಟು ಜಾಸ್ತಿ ಆಗಿದ್ದು ₹ 18,252 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಾರ್ಯಾಚರಣೆ ಆದಾಯವು ₹ 14,913 ಕೋಟಿ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

'ಸಾಂಕ್ರಾಮಿಕವು ತೀವ್ರವಾಗಿ ಕಾಡಿದರೂ ನಾವು ಈ ತ್ರೈಮಾಸಿಕದಲ್ಲಿ ಅತ್ಯುತ್ತಮ ಸಾಧನೆ ತೋರಿದ್ದೇವೆ' ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಹಾಗೂ ವ್ಯವಸ್ಥಾಪಕ ನಿರ್ದೇಶಕ ಥಿಯರಿ ಡೆಲಾಪೋರ್ಟ್ ಹೇಳಿದ್ದಾರೆ.

ಫೆಬ್ರುವರಿ 9ರಿಂದ ಜಾಗತಿಕ ಹೂಡಿಕೆದಾರರ ಸಮಾವೇಶ

₹ 28 ಸಾವಿರ ಕೋಟಿ ಹೂಡಿಕೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 23 ಕಂಪನಿಗಳು ಸುಮಾರು ₹ 28 ಸಾವಿರ ಕೋಟಿ ಬಂಡವಾಳ ಹೂಡಲಿದ್ದು, ಈ ಕುರಿತ ಒಪ್ಪಂದಕ್ಕೆ ರಾಜ್ಯ ಸರ್ಕಾರ ಗುರುವಾರ ಸಹಿ ಹಾಕಿತು.

'ಇನ್ವೆಸ್ಟ್ ಕರ್ನಾಟಕ' ವೇದಿಕೆಯ ಸಹಯೋಗದೊಂದಿಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಗುರುವಾರ ಆಯೋಜಿಸಿದ್ದ ಸಮಾರಂಭದಲ್ಲಿ ರಕ್ಷಣೆ, ದತ್ತಾಂಶ ಕೇಂದ್ರ, ವೈಮಾನಿಕ ಕ್ಷೇತ್ರ ಹಾಗೂ ವಿದ್ಯುತ್ ಚಾಲಿತ ವಾಹನ ಕಂಪನಿಗಳು ಸೇರಿದಂತೆ 23 ಕಂಪನಿಗಳು ಒಪ್ಪಂದಕ್ಕೆ ಸಹಿ ಹಾಕಿದವು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 'ಕೋವಿಡ್ ಸಂಕಷ್ಟದ ನಡುವೆಯೂ ರಾಜ್ಯ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಗೆ ಒತ್ತು ನೀಡಿದೆ. ಅದರ ಫಲವಾಗಿಯೇ ವಿವಿಧ ಕಂಪನಿಗಳು ಬಂಡವಾಳ ಹೂಡಲು ಮುಂದೆ ಬಂದಿವೆ. ಇದರಿಂದ ಸ್ಥಳೀಯರಿಗೂ ಹೆಚ್ಚು ಉದ್ಯೋಗಾವಕಾಶಗಳು ಸಿಗಲಿವೆ. ಒಪ್ಪಂದದ ಅನ್ವಯ ಕಾಲಮಿತಿಯೊಳಗೆ ಯೋಜನೆಗಳನ್ನು ಜಾರಿಗೊಳಿಸಲಾಗುವುದು' ಎಂದರು.

₹1 ಲಕ್ಷ ಕೋಟಿ ಹೂಡಿಕೆ: 'ಕಳೆದ ವರ್ಷದ ಮಾರ್ಚ್‌ನಿಂದ ರಾಜ್ಯ ಸರ್ಕಾರವು ₹ 77,000 ಕೋಟಿ ಹೂಡಿಕೆಯ 520ಕ್ಕೂ ಹೆಚ್ಚು ಯೋಜನೆಗಳಿಗೆ ಅನುಮೋದನೆ ನೀಡಿದೆ. ಅಲ್ಲದೆ, ಹೆಚ್ಚುವರಿ ಪ್ರಸ್ತಾವಗಳ ಅಡಿ ₹ 23,000 ಕೋಟಿ ಮೊತ್ತದ ಒಪ್ಪಂದವೂ ಸೇರಿ ಒಟ್ಟು ₹ 1 ಲಕ್ಷ ಕೋಟಿ ಹೂಡಿಕೆ ಆಗಿದೆ' ಎಂದು ಯಡಿಯೂರಪ್ಪ ಹೇಳಿದರು.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್, 'ರಾಜ್ಯವನ್ನು ಹೂಡಿಕೆದಾರರ ನೆಚ್ಚಿನ ತಾಣವನ್ನಾಗಿಸುವ ನಿಟ್ಟಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು ಬಂಡವಾಳ ಹೂಡಿಕೆ ಉತ್ತೇಜಿಸಲು ಹಲವು ಪೂರಕ ಕ್ರಮಗಳನ್ನು ಕೈಗೊಂಡಿದೆ. ನೂತನ ಕೈಗಾರಿಕಾ ನೀತಿ (2020-25) ಹಾಗೂ ಕೈಗಾರಿಕಾ ಸೌಲಭ್ಯಗಳ ಕಾಯ್ದೆಗೆ ತಂದಿರುವ ತಿದ್ದುಪಡಿಗಳಿಂದ ಕರ್ನಾಟಕವು ಉದ್ಯಮ ಸ್ನೇಹಿ ರಾಜ್ಯಗಳ ಪಟ್ಟಿಯಲ್ಲಿ ಅತ್ಯಂತ ಪ್ರಮುಖ ಸ್ಥಾನ ಪಡೆದುಕೊಂಡಿದೆ' ಎಂದು ಹೇಳಿದರು.

'ಮುಂದಿನ ವರ್ಷ ಫೆಬ್ರುವರಿ 9ರಿಂದ 11ರವರೆಗೆ ಬೆಂಗಳೂರಿನಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ' ಎಂದರು.

'ಉದ್ಯಮಗಳಿಗೆ ನುರಿತ ಕೆಲಸಗಾರರನ್ನು ಒದಗಿಸುವ ನಿಟ್ಟಿನಲ್ಲಿ ಕೌಶಲ ಅಭಿವೃದ್ಧಿಗೆ ಒತ್ತು ನೀಡಲಾಗುವುದು' ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ರಾಜ್ಯದಲ್ಲಿ ಬಂಡವಾಳ ಹೂಡಿಕೆ

(ಕೋಟಿಗಳಲ್ಲಿ)

ಅಮೆರಿಕದ ಸಿ4ವಿ	₹ 4,015
ಸಿಂಗಪುರದ ಎಲ್‌ಎನ್‌ಜಿ ಟರ್ಮಿನಲ್ ಆಪರೇಟರ್	₹ 2,250
ಅದಾನಿ ಡೇಟಾ ಸೆಂಟರ್	₹ 5,000

ಉದ್ಯಮಸ್ನೇಹಿ ಕ್ರಮಗಳು ಮತ್ತು ಆನ್‌ಲೈನ್ ಮೂಲಕವೇ ಹೂಡಿಕೆ ಅನುಮೋದನೆಗಳು ಸಾಧ್ಯವಾದ್ದರಿಂದ ಕೋವಿಡ್ ಸಾಂಕ್ರಾಮಿಕದ ಮಧ್ಯೆಯೂ ಹೆಚ್ಚು ಹೂಡಿಕೆ ಆಗಿದೆ

ಜಗದೀಶ ಶೆಟ್ಟರ್, ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ

ಐ.ಟಿ., ಹಣಕಾಸು ವಲಯದ ಷೇರುಗಳ ಗಳಿಕೆ

ಸಾರ್ವಕಾಲಿಕ ದಾಖಲೆ ಮಟ್ಟಕ್ಕೆ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಮತ್ತು ರಾಷ್ಟ್ರೀಯ ಷೇರುಪೇಟೆಯ ಸಂವೇದಿ ಸೂಚ್ಯಂಕಗಳಾದ ಸೆನ್ಸೆಕ್ಸ್ ಹಾಗೂ ನಿಫ್ಟಿ ಸಾರ್ವಕಾಲಿಕ ದಾಖಲೆ ಮಟ್ಟದಲ್ಲಿ ಗುರುವಾರ ವಹಿವಾಟು ಅಂತ್ಯಗೊಳಿಸಿವೆ. ಎಚ್‌ಡಿಎಫ್‌ಸಿ ಬ್ಯಾಂಕ್, ಎಲ್‌ಆ್ಯಂಡ್‌ಟಿ ಮತ್ತು ಎಚ್‌ಸಿಎಲ್ ಟೆಕ್ ಕಂಪನಿಗಳ ಗಳಿಕೆಯು ಸೂಚ್ಯಂಕಗಳ ಏರಿಕೆಗೆ ಕಾರಣವಾದವು.

ಸೆನ್ಸೆಕ್ಸ್ 254 ಅಂಶ ಏರಿಕೆ ಕಂಡು ಸಾರ್ವಕಾಲಿಕ ಗರಿಷ್ಠ ಮಟ್ಟವಾದ 53,158ಕ್ಕೆ ತಲುಪಿತು. ನಿಫ್ಟಿ 71 ಅಂಶ ಹೆಚ್ಚಾಗಿ ದಾಖಲೆಯ 15,924 ಅಂಶಗಳಿಗೆ ತಲುಪಿತು.

ಮೂರು ದಿನಗಳ ಸಕಾರಾತ್ಮಕ ವಹಿವಾಟಿನಿಂದಾಗಿ ಮುಂಬೈ ಷೇರುಪೇಟೆಯ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 2.22 ಲಕ್ಷ ಕೋಟಿಗಳಷ್ಟು ಹೆಚ್ಚಾಗಿದೆ. ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 233.86 ಲಕ್ಷ ಕೋಟಿಗಳಿಗೆ ತಲುಪಿದೆ.

ಏಷ್ಯಾದ ಮಾರುಕಟ್ಟೆಗಳಲ್ಲಿನ ಸಕಾರಾತ್ಮಕ ವಹಿವಾಟು ಹಾಗೂ ಮೊದಲ ತ್ರೈಮಾಸಿಕದಲ್ಲಿ ಐ.ಟಿ, ಹಣಕಾಸು ಮತ್ತು ಲೋಹ ವಲಯದ ಕಂಪನಿಗಳ ಉತ್ತಮ ಆರ್ಥಿಕ ಸಾಧನೆಯ ನಿರೀಕ್ಷೆಯಿಂದ ಆ ವಲಯದ ಕಂಪನಿಗಳ ಷೇರುಗಳ ಬೆಲೆ ಹೆಚ್ಚಾಗಿ ಸೂಚ್ಯಂಕಗಳು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿವೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.70ರಷ್ಟು ಇಳಿಕೆ ಆಗಿದ್ದು ಒಂದು ಬ್ಯಾರಲ್‌ಗೆ 74.24 ಡಾಲರ್‌ಗಳಿಗೆ ತಲುಪಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 5 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.54ರಂತೆ ವಿನಿಮಯಗೊಂಡಿತು.

ರೇಟಿಂಗ್ಸ್ ಏಜೆನ್ಸಿ ಐಸಿಆರ್‌ಎ ಅಭಿಪ್ರಾಯ

ಆರ್ಥಿಕ ಪುನಶ್ಚೇತನಕ್ಕೆ ವೇಗ

ಮುಂಬೈ (ಪಿಟಿಐ): ಸ್ಥಳೀಯ ಮಟ್ಟದಲ್ಲಿ ಜಾರಿಯಲ್ಲಿ ಇದ್ದ ಲಾಕ್‌ಡೌನ್ ನಿರ್ಬಂಧಗಳನ್ನು ತೆರವುಗೊಳಿಸಿದ ನಂತರದಲ್ಲಿ ಆರ್ಥಿಕ ಪುನಶ್ಚೇತನವು ವೇಗ ಪಡೆದುಕೊಂಡಿದೆ ಎಂದು ರೇಟಿಂಗ್ಸ್ ಏಜೆನ್ಸಿ ಐಸಿಆರ್‌ಎ ಹೇಳಿದೆ. ಹೀಗಿದ್ದರೂ, ಪುನಶ್ಚೇತನವು ಪೂರ್ಣ ಪ್ರಮಾಣದಲ್ಲಿ ವೇಗಪಡೆದುಕೊಂಡಿಲ್ಲ ಎಂದು ಅದು ಅಭಿಪ್ರಾಯ ವ್ಯಕ್ತಪಡಿಸಿದೆ.

ಏಪ್ರಿಲ್‌ನಿಂದ ಜೂನ್‌ವರೆಗಿನ ತ್ರೈಮಾಸಿಕದಲ್ಲಿ ದೇಶದ ಅರ್ಥ ವ್ಯವಸ್ಥೆಯು ಎರಡು ಅಂಕಿಗಳ ಬೆಳವಣಿಗೆ ಸಾಧಿಸಿದೆ. ಆದರೆ ಇದು 2019–20ರ ಮೊದಲ ತ್ರೈಮಾಸಿಕದಲ್ಲಿ ಕಂಡಿದ್ದ ಬೆಳವಣಿಗೆಗೆ ಹೋಲಿಸಿದರೆ ಕಡಿಮೆ ಎಂದು ಅದು ಹೇಳಿದೆ.

ರಾಜ್ಯಗಳ ಮಟ್ಟದಲ್ಲಿ ಜಾರಿಗೆ ಬಂದಿದ್ದ ಲಾಕ್‌ಡೌನ್‌ಗಳನ್ನು ಹಂತಹಂತವಾಗಿ ತೆರವು ಮಾಡಲಾಗುತ್ತಿದೆ. ಇದು ಆರ್ಥಿಕ ಚಟುವಟಿಕೆಗಳಲ್ಲಿ ಚೇತರಿಕೆಗೆ ಕಾರಣವಾಗಿದೆ. ಆದರೂ, ಆರ್ಥಿಕ ಆರೋಗ್ಯದ ಪ್ರಮುಖ ಸೂಚಕಗಳ ಮಟ್ಟವು ಕೂವಿಡ್‌ಗೂ ಮೊದಲಿನ ಸ್ಥಿತಿಗಿಂತ ಕೆಳಗೆ ಇದೆ ಎಂದು ಸಂಸ್ಥೆಯ ವರದಿಯು ಹೇಳಿದೆ.

'ಆರ್ಥಿಕ ಪುನಶ್ಚೇತನ ಶುರುವಾಗಿದೆ ಎಂಬುದನ್ನು ಆರ್ಥಿಕ ಚಟುವಟಿಕೆಯ ಸೂಚಕಗಳು ಖಚಿತಪಡಿಸಿವೆ. ಆದರೆ, ಪುಶ್ಚೇತನವು ಪೂರ್ತಿ ಪ್ರಮಾಣದಲ್ಲಿ ಆಗುತ್ತಿಲ್ಲ' ಎಂದು ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದರು.

ಮುಂಬೈ ಧಾರಣೆ

ಶೇಂಗಾ
15-7-2021

ಜಾವಾ 70/80(ಹೊಸ)	9700-9750
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9750-9850
ದಪ್ಪ ಗುಜರಾತ್(ಹೊಸ)	9240-9350

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1430 (1415)
ಒಂದು ವಾರದ ಡೆಲಿವರಿ	1425 (1405)
ಸೋಯಾ ಕಚ್ಚಾ	1325 (1325)
ಪಾಮ್ ವಾರದ ಡೆಲಿವರಿ	1188 (1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1320 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,250 (47,900)
ಬೆಳ್ಳಿ ಕೆ.ಜಿ 69,300 (69,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1420 (1400)
ಸೋಯಾ (ರಿಫೈನ್ಡ್)	₹1355 (1345)
ಸೂರ್ಯಕಾಂತಿ (ರಿಫೈನ್ಡ್)	₹1390(1370)
ಪಾಮೋಲಿನ್	₹1190 (1180)

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	385-390
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-43000
ಹಳತು	42500-52000
ಕುಮಟ	
ಚಿಪ್ಪು	31269-33699
ಕೋಕ	19770-30600
ಹಳೆಚಾಲಿ	43099-43500
ಹೊಸಚಾಲಿ	35999-38599
ಸಿದ್ದಾಪುರ	
ಬಿಳಿಗೋಟು	26019-32899
ಕೋಕ	23099-31480
ಚಾಲಿ	35289-37899
ಕೆಂಪುಗೋಟು	26001-29699
ರಾಶಿ	38099-40219
ತಟ್ಟಿಬೆಟ್ಟೆ	30011-36189
ಶಿರಸಿ	
ಬೆಟ್ಟೆ	24199-374999
ಬಿಳಿಗೋಟು	26199-32898
ಚಾಲಿ	35072-39021
ರಾಶಿ	38139-41308
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	42000-45299
ಗೊರಬಲು	20209-34741
ರಾಶಿ	37829-42169
ಸರಕು	49009-74986
ಸಾಗರ	
ಬಿಳಿಗೋಟು	18989-31699
ಚಾಲಿ	31699-36629
ಕೆಂಪುಗೋಟು	24899-36019
ರಾಶಿ	32198-42699
ಸಿಪ್ಪೆಗೋಟು	7290-20670
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	249-391
ದ್ವಿತಳಿ (ಬಿ.ವಿ)	288-502

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11850	11200	10950	156.60ಸೆಂಟ್ಸ್
ಎಸಿ	4700	4400	4350	
ಆರ್‌ಪಿ	5750	5700	5800	ಲಂಡನ್
ಆರ್‌ಸಿ	3300	3200	3400	1762 ಡಾಲರ್ಸ್

ಎರಡು ತಿಂಗಳಲ್ಲಿ 40 ಬಾರಿ ಪೆಟ್ರೋಲ್ ದರ ಹೆಚ್ಚಳ!

ನವದೆಹಲಿ (ಪಿಟಿಐ): ಮೂರು ದಿನಗಳ ಬಿಡುವಿನ ಬಳಿಕ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಗುರುವಾರ ಇಂಧನ ದರ ಹೆಚ್ಚಿಸಿವೆ. ಪೆಟ್ರೋಲ್ ದರ ಲೀಟರಿಗೆ 35 ಪೈಸೆ ಮತ್ತು ಡೀಸೆಲ್ ದರ ಲೀಟರಿಗೆ 15 ಪೈಸೆ ಏರಿಕೆ ಆಗಿದೆ.

ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 105 ಮತ್ತು ಡೀಸೆಲ್ ದರ ಲೀಟರಿಗೆ ₹ 95.32ಕ್ಕೆ ಏರಿಕೆ ಆಗಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 101.54 ಮತ್ತು ಡೀಸೆಲ್ ದರ ಲೀಟರಿಗೆ ₹ 89.87ಕ್ಕೆ ತಲುಪಿದೆ. ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ದರದಲ್ಲಿ ವ್ಯತ್ಯಾಸ ಆಗುತ್ತದೆ.

ಮೇ 4ರಿಂದ ಇಲ್ಲಿಯವರೆಗೆ ಪೆಟ್ರೋಲ್ ದರವನ್ನು ಒಟ್ಟಾರೆ 40 ಬಾರಿ ಹೆಚ್ಚಳ ಮಾಡಿದ್ದು ಪ್ರತಿ ಲೀಟರಿಗೆ ₹ 11.14ರಷ್ಟು ಏರಿಕೆ ಆಗಿದೆ. ಡೀಸೆಲ್ ದರವನ್ನು 37 ಬಾರಿ ಹೆಚ್ಚಿಸಲಾಗಿದ್ದು, ಪ್ರತಿ ಲೀಟರಿಗೆ ₹ 9.14ರಷ್ಟು ಏರಿಕೆ ಆಗಿದೆ.

ಕರ್ನಾಟಕ, ರಾಜಸ್ಥಾನ, ಮಧ್ಯಪ್ರದೇಶ ಒಳಗೊಂಡು 15 ರಾಜ್ಯಗಳ ಬಹುತೇಕ ಕಡೆಗಳಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 100ರ ಗಡಿಯನ್ನು ದಾಟಿ ಮಾರಾಟವಾಗುತ್ತಿದೆ. ರಾಜಸ್ಥಾನ, ಒಡಿಶಾ ಮತ್ತು ಮಧ್ಯಪ್ರದೇಶದಲ್ಲಿ ಡೀಸೆಲ್ ದರವು ಲೀಟರಿಗೆ ₹ 100ರ ಗಡಿ ದಾಟಿ ಮಾರಾಟವಾಗುತ್ತಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

PUBLIC NOTICE
NATIONAL CONSUMER DISPUTES REDRESSAL COMMISSION
Phone No. 24608741 Fax No. 24651519
Website: http:/ /ncdrc.nic.in
Upbhokta Nyay Bhawan, 'F' Block, General Pool Office Complex, INA, NEW DELHI- 110 023
CONSUMER COMPLAINT NO. 2098 OF 2019
RAJA DESHPANDEY & ORS. ... Complainant(s)
Versus
MANTRI DEVELOPERS PVT. LTD. & ORS ... Opp. Party(s)
To,
THE PURCHASERS/ALLOTTEES OF THE RESIDENTIAL FLATS/APARTMENT IN THE PROJECTS OF ·"MANTRI ALPYNE" # UTTARAHALLI MAIN ROAD. BANASHANKARI. 5TH STAGE. BENGALORE- 560061 DEVELOPED BY MANTRI DEVELOPERS PVT. LTD. & ORS
Whereas the above Complainants have, through Mr. Chandrachur Bhattacharyya, Advocate, OFF: H-1559, Chhittaranjan Park, New Delhi-110019, Phone - 9810878919, filed the captioned Consumer Complaint before the Hon'ble National Consumer Disputes Redressal Commission, New Delhi on behalf and/or for the benefit of all the consumers who have either booked or have been allotted a flat/Apartment, in the project namely "MANTRI ALPYNE" # UTTARAHALLI MAIN ROAD. BANASHANKARI, 5TH STAGE. BENGALORE - 560061 being developed by the Opposite Party named above for redressal of their common grievances, and seeking the following reliefs:-
PRAYER
That in view of the above mentioned facts and circumstances this Hon'ble Commission may graciously be pleased to pass orders and:-
A. Direct opposite party no. 1 and the opposite party no. 2 to refund to the complainants and other flat owners with same interest the refundable maintenance deposit collected from each of the flat owners @ Rs 200 per sq. ft. amounting to Rs. 27.68 crores along with 12 % interest. Or in the alternative direct the opposite parties to transfer the said maintenance deposit collected from the flat buyers to the opposite party no. 3, Mantri Alpyne Apartment Owners Welfare Association along with 12% interest and handover the maintenance of the Alpyne Project to Mantri Alpyne Apartment Owners Welfare Association.
B. Direct opposite party no. 1 and the opposite party no. 2 to pay to the complainants and all other flat owners with same interest compensation@ 12 %per annum on the home buyers deposited amount with the opposite party, for the delay in handing over the possession of the apartments.
C. Direct opposite party no. 1 and the opposite party no. 2 to pay to each of the complainants and other flat buyers with same interest a sum of Rs. 10,00,000/- each on account of mental harassment and trauma.
D. Direct opposite party no. 1 and the opposite party no. 2 to pay betterment charges to 'Bruhat Bengaluru Mahanagar Palike (BBMP) as mandated in the several notices sent by BBMP to the Opposing Party No.1 especially as per the notice dated 05/03/2018.
E. Direct opposite party no. 1 and the opposite party no. 2 to refund to the complainants i and other flat buyers with same interest the diesel charges paid when the project ran on DG for more than one and a half years.
F. Award cost of the complaint to the complainants and other flat buyer, with same interest.
G. Pass any such further order or orders which this Hon'ble Commission deems fit and proper in the facts and circumstances of the present case.
AND FOR THIS ACT OF KINDNESS THE COMPLAINANTS AS IN DUTY BOUND SHALL EVER PRAY.
And whereas the Hon'ble Commission vide its order dated 05.07.2021 is pleased to direct issue of notice of the institution of the above captioned complaint to all the consumers having same interest in the matter. Accordingly all allottees of the above referred Project having the same grievance against the Opposite Party, may appear before the Commission in-person or through an Advocate/Authorized Representative on 18.10.2021 at 10:30 a.m. They can inspect the file of the aforementioned complaint in the office of the Counsel for the Complainant (s) and apply for being impleaded as a party to the complaint. They may also note that the decision of the Commission in the captioned complaint will be binding on all the consumers on whose behalf and/or for whose benefit the complaint is instituted.
By Order
(S. HANUMANTH RAO)
JOINT REGISTRAR
Dated, this 14th day of July, 2021
Seal of the National Consumer Disputes Redressal Commission

ಉದ್ಯೋಗಾವಕಾಶ

Drivers

ಬೆಂಗಳೂರಿನಲ್ಲಿ ೪ ಜನರ ಒಂದು ಕುಟುಂಬಕ್ಕೆ ಚಾಲಕ ಮತ್ತು ಅಡುಗೆ ಕೆಲಸಕ್ಕೆ ದಂಪತಿಗಳು ಬೇಕಾಗಿದ್ದಾರೆ. ಉತ್ತಮ ಸಂಬಳ, ಊಟ ಮತ್ತು ವಸತಿ ವ್ಯವಸ್ಥೆ ನೀಡಲಾಗುತ್ತದೆ. ಸಂಪರ್ಕಿಸಿ: 9741900909

Walk-in

Tata Group (Aerostructures) Hyderabad is Hiring!!!
REQUIREMENT
Position: Assembly Operator (Fitter)
Qualification: ITI - Fitter + Apprenticeship (NCVT)
Experience: 4 to 8 Years
Description: Hands on Experience in Aerostructure Assembly Process. Good understanding on Drawings, Familiar with Hand Tools and Cutting Tools.
Note: Candidates working in Aerospace industry are preferred.
Work Location: Hyderabad
Date of Interview & Timings
17-07-2021 & 09.00 AM - 06.00 PM
Venue ROYAL ORCHID CENTRAL
47/1, Dickenson Road, Manipal Centre, Bangalore - 560042.

WORK STUDY and SETTLE YOUR FUTURE with Salary.Are you a student with 10th, Plus-2, Willing to work in HOMECARE SERVICES, If yes call: 6366883838, 9606347575. MAJ HEALTH CARE SERVICES, Gandhinagar,Bangalore.

ಬೆಂಗಳೂರಿನಲ್ಲಿರುವ ಆರ್ಯುವೇದಿಕ್ ಕಂಪನಿಗೆ ಪ್ರತಿ ಜಿಲ್ಲೆಯಿಂದ ಅರ್ಯುವೇದಿಕ್ ವೈದ್ಯರು, ನೇರ ಮಾರಾಟ ಪ್ರತಿನಿದಿಗಳು ಬೇಕಾಗಿದ್ದಾರೆ. ಆಕರ್ಷಕ ಸಂಬಳ. 8892501007/ 9606701007

ಬೆಂಗಳೂರಿನಲ್ಲಿ ಉಳಿದುಕೊಂಡು ಮನೆಗೆಲಸ, ಅಡುಗೆ, ಮಕ್ಕಳು ನೋಡಿಕೊಳ್ಳಲು ಹಿಂದಿ/ ಕನ್ನಡಬಲ್ಲ ಮಹಿಳೆಯರು ಬೇಕಾಗಿದ್ದಾರೆ. ಊಟ, ವಸತಿ ಸಂಬಳ. ಸಂಪರ್ಕಿಸಿ: 7411548115.

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

General

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9141634619

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು ನೇರನೇಮಕಾತಿ 16,800-56,000/- ವಸತಿಯೂಟವಿದೆ. 7204853296, 7204396011

ತಕ್ಷಣ ಬೇಕಾಗಿದ್ದಾರೆ 7th, ಎಸ್.ಎಸ್.ಎಲ್.ಸಿ, ITI, ಡಿಗ್ರಿಯವರು (ವಿದ್ಯಾರ್ಹತೆಯಿಲದಲ್ಲದವರಿಗೂ) ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. 16,800/- 52,500/- ವಸತಿಯೂಟವಿರುತ್ತದೆ.ಸಂಪರ್ಕಿಸಿ: 8884412822, 8884412622

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ 8095344488/ 8095344466

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

Wanted

ಬಂದ ದಿನವೇ ಕೆಲಸ (ಮಾರ್ಕೇಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 - 86,000. 7259685221, 7760116548

ಭವಿಷ್ಯ

Astrology

★ಮಂತ್ರದುರ್ಗಿ ಮಾಂತ್ರಿಕರು★ ಕೇರಳ, ಕೊಳ್ಳೆಗಾಲದ ಮಂತ್ರಸಿದ್ಧ_ವಾಕ್ಸಿದ್ಧಿಯಿಂದ ಸ್ತ್ರೀಪುರುಷ ವಶೀಕರಣ ಕೆಲವೇ_ಗಂಟೆಗಳಲ್ಲಿ.ಫೋನಿನ_ಮೂಖಾಂತರ ಶಾಶ್ವತ_ಪರಿಹಾರ. (ಸ್ತ್ರೀಪುರುಷ ವಶೀಕರಣ_ಸ್ಪೆಷಲಿಸ್ಟ್) ಪಂ.ರಾಮಚಂದ್ರಭಟ್. 9008711329

★॥ಓಂಶ್ರೀಕಾಳಿಕಾದೇವಿ॥★ ಜ್ಯೋತಿಷ್ಯಾಲಯ ನಿಮ್ಮಸಮಸ್ಯೆಗಳಾದ ಪ್ರೀತಿಯಲ್ಲಿ ಮೋಸ,ನಂಬಿಕೆಯಲ್ಲಿ ಮೋಸ,ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀಪುರುಷ ವಶೀಕರಣಗಳಿಗೆ 9ಗಂಟೆಯಲ್ಲಿ 100%ಪರಿಹಾರ ಶತಸಿದ್ಧ. ಜಗನ್ನಾಥ್ ಮಂತ್ರವಾದಿ. 9880827222

★॥ಶ್ರೀದುರ್ಗಾದೇವಿ॥★ ಜ್ಯೋತಿಷ್ಯಾಲಯ. ನಿಮ್ಮಯಾವುದೇ ಕಠಿಣಸಮಸ್ಯೆಗಳಿದ್ದರೇ ಶತಸಿದ್ಧ ಪರಿಹಾರ ನೀಡುತ್ತಾರೆ.ಇಂದೇ ಕರೆಮಾಡಿ ಫೋನಿನಲ್ಲಿ ಪ್ರಶ್ನೆ, ಫೋನಿನಲ್ಲಿ ಉತ್ತರ,ಶಾಶ್ವತ ಪರಿಹಾರ. ರಾಮಚಂದ್ರ ಗುರೂಜಿ 8050498041

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ಶ್ರೀಸಾಯಿಗುರು ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಸಂತಾನಭಾಗ್ಯ, ಇನ್ನಾವುದೇ ಎಲ್ಲಿಯೂ ಪರಿಹಾರ ಕಾಣದ ಎಷ್ಟೇಕಠಿಣವಾದ ಗುಪ್ತಸಮಸ್ಯೆಗಳಿಗೆ100% ಪರಿಹಾರ 7829724990

ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

For Online Classified Booking
Name Change / Education / Property / Job / Services and many more contact
9880856233
9886213331
dhclassifieds.com

ವಾಹನ

Four Wheelers Selling

Others

ಟಾಟಾ Intra V30 ದೊಡ್ಡ ಗಾಡಿಯ ಲೋಡ್ ಅಧಿಕ ಆದಾಯ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳು

4.99%* ಬಡ್ಡಿದರ 48 ತಿಂಗಳು ಅಥವಾ 5.99%* ಬಡ್ಡಿದರ 60 ತಿಂಗಳು
ಕೊಡುಗೆಗಳು ₹25 000/-* ದವರೆಗೆ
ಎಕ್ಸ್‌ಚೇಂಜ್ ₹15 000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore 7259784441
Tumkur/Davanagere/ Chitradurga 98950 23373
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 96209 55858
Bagalkot/Bijapur/Gulbarga/ Bidar - 73899 44057
Hubli/Belgaum- 91088 64572
* ಷರತ್ತುಗಳು ಅನ್ವಯಿಸುತ್ತದೆ.

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್: 7837015557

ಪ್ರವಾಸ

Travel

23-7-2021 ಕಾರವಾರ, ಹೊನ್ನಾವರ, 13-8-2021 ಚಿಕ್ಕಮಗಳೂರು, ಶೃಂಗೇರಿ, ಸಿರಿಮನೆಫಾಲ್ಸ್. 27-8-2021 ಅಷ್ಟವಿನಾಯಕ, 27-9-2021 ಕಾಶಿ, ಗಯಾ, ಅಲಹಾಬಾದ್. ಅನುಗ್ರಹಯಾತ್ರ. 9880079351

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಥ್ರೋಡೌನ್ ಸಿಬ್ಬಂದಿ ದಯಾನಂದ್‌ಗೆ ಸೋಂಕು

ರಿಷಭ್ ಪಂತ್‌ಗೆ ಕೋವಿಡ್

ಇಂಗ್ಲೆಂಡ್‌ನ ವೆಂಬ್ಲಿ ಕ್ರೀಡಾಂಗಣದಲ್ಲಿ ಈಚೆಗೆ ನಡೆದಿದ್ದ ಯುರೊ ಕಪ್ ಫುಟ್‌ಬಾಲ್ ಪಂದ್ಯವನ್ನು ವೀಕ್ಷಿಸಲು ತೆರಳಿದ್ದ ರಿಷಭ್ ಪಂತ್ –ಟ್ವಿಟರ್ ಚಿತ್ರ

ನವದೆಹಲಿ/ಲಂಡನ್ (ಪಿಟಿಐ): ಇಂಗ್ಲೆಂಡ್ ಪ್ರವಾಸದಲ್ಲಿರುವ ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ರಿಷಭ್ ಪಂತ್ ಮತ್ತು ಥ್ರೋಡೌನ್ ಪರಿಣತ ದಯಾನಂದ ಗರಣಿ ಅವರಿಗೆ ಕೋವಿಡ್–19 ತಗುಲಿರುವುದು ಖಚಿತವಾಗಿದೆ.

ತಂಡದಲ್ಲಿರುವ ಇನ್ನೊಬ್ಬ ವಿಕೆಟ್ ಕೀಪರ್ ವೃದ್ಧಿಮಾನ್ ಸಹಾ ಮತ್ತು ಬೌಲಿಂಗ್ ಕೋಚ್ ಭರತ್ ಅರುಣ್ ಅವರನ್ನೂ ಐಸೊಲೇಷನ್‌ಗೆ ಒಳಪಡಿಸಲಾಗಿದೆ. ಇವರಿಬ್ಬರೂ ದಯಾನಂದ ಗರಾನಿ ಅವರೊಂದಿಗೆ ಹೆಚ್ಚು ಸಂಪರ್ಕದಲ್ಲಿದ್ದರು. ಆದ್ದರಿಂದ ಮುನ್ನೆಚ್ಚರಿಕೆಯಾಗಿ ಪ್ರತ್ಯೇಕವಾಸಕ್ಕೆ ಒಳಪಡಿಸಲಾಗಿದೆ.

ಈ ನಾಲ್ವರೂ ಈಗ ಲಂಡನ್‌ನಲ್ಲಿದ್ದಾರೆ. ತಂಡದ ಉಳಿದ ಆಟಗಾರರು ಡರ್‌ಹ್ಯಾಮ್ ನಲ್ಲಿ ಗುರುವಾರ ಸಂಜೆ ಸೇರಿದರು. ಅವರು ಲಂಡನ್‌ನಿಂದ ಡರ್‌ಹ್ಯಾಮ್‌ಗೆ ಬಸ್‌ನಲ್ಲಿ ಐದು ಗಂಟೆಗಳ ಕಾಲ ಪ್ರಯಾಣ ಮಾಡಿದರು. ಹೋದ ತಿಂಗಳು ನಡೆದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದ ನಂತರ ತಂಡಕ್ಕೆ 20 ದಿನಗಳ ರಜೆ ನೀಡಲಾಗಿತ್ತು. ಬಹುತೇಕರು ತಮ್ಮ ಕುಟುಂಬದೊಂದಿಗೆ ವಿಹಾರಕ್ಕೆ ತೆರಳಿದ್ದರು.

ಜುಲೈ 20ರಿಂದ ಅಭ್ಯಾಸ ಪಂದ್ಯ ಆರಂಭವಾಗಲಿದೆ. ಆದರೆ ರಿಷಭ್ ಮತ್ತು ಸಹಾ ಹೊರಗುಳಿಯಲಿದ್ದಾರೆ. ಪಂತ್ ಕಳೆದ ಎಂಟು ದಿನಗಳಿಂದ ಲಕ್ಷಣರಹಿತ ಸೋಂಕು ಇರುವುದರಿಂದ ಪ್ರತ್ಯೇಕವಾಸದಲ್ಲಿದ್ದಾರೆಂದು ಬಿಸಿಸಿಐ ಮೂಲಗಳು ಖಚಿತಪಡಿಸಿವೆ.

ಇನ್ನೊಂದು ಮೂಲದ ಪ್ರಕಾರ ಸದ್ಯ ಇಂಗ್ಲೆಂಡ್‌ನಲ್ಲಿ ತಾರಕಕ್ಕೇರುತ್ತಿರುವ ಡೆಲ್ಟಾ ವೈರಸ್ ಸೋಂಕು ಪಂತ್ ಅವರಿಗೆ ತಗುಲಿದೆಯೆನ್ನಲಾಗಿದೆ. 'ರಿಷಭ್ ಪಂತ್ ಅವರು ಸುರಕ್ಷಿತ ಜಾಗವೊಂದರಲ್ಲಿ ಪ್ರತ್ಯೇಕವಾಸದಲ್ಲಿದ್ದಾರೆ. ಅವರು ಗುರುವಾರ ಡರ್‌ಹ್ಯಾಮ್ ಗೆ ತೆರಳುವ ತಂಡದೊಂದಿಗೆ ಹೋಗುತ್ತಿಲ್ಲ' ಎಂದು ಮೂಲಗಳು ಖಚಿತಪಡಿಸಿವೆ. ಇನ್ನೂ ಎರಡ್ಮೂರು ದಿನಗಳ ನಂತರ ಮತ್ತೊಮ್ಮೆ ಅವರಿಗೆ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ.

ತಂಡದ ಆರಂಭಿಕ ಬ್ಯಾಟ್ಸ್‌ಮನ್ ಶುಭಮನ್ ಗಿಲ್ ಅವರು ಗಾಯಗೊಂಡಿದ್ದರು. ಅದರಿಂದಾಗಿ ಅವರು ತಂಡದ ಬಯೋಬಬಲ್‌ನಿಂದ ಹೊರಗುಳಿದು ಚಿಕಿತ್ಸೆ ಪಡೆಯುತ್ತಿದ್ದಾರೆ.

'ಸದ್ಯದ ಮಾಹಿತಿಯಂತೆ ಒಬ್ಬ ಆಟಗಾರ ಮಾತ್ರ ಸೋಂಕಿಗೊಳಗಾಗಿದ್ದಾರೆ. ಮತ್ತೆ ಯಾರಿಗೂ ಸೋಂಕು ತಗುಲಿಲ್ಲ' ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ತಿಳಿಸಿದ್ದಾರೆ.

ಆಗಸ್ಟ್ 4ರಿಂದ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ಐದು ಟೆಸ್ಟ್‌ಗಳ ಸರಣಿಯಲ್ಲಿ ಆಡಲಿದೆ. ಈ ಸರಣಿಯು ಎರಡನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ಗೆ ಆರಂಭವೂ ಆಗಲಿದೆ.

ಯೂರೊ ಕಪ್ ಟೂರ್ನಿಗೆ ತೆರಳಿದ್ದ ಪಂತ್

ಇಲ್ಲಿ ಹೋದ ತಿಂಗಳು ನಡೆದ ಯುರೊ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯವೊಂದನ್ನು ನೋಡಲು ರಿಷಭ್ ಪಂತ್ ತೆರಳಿದ್ದರು. ಅಲ್ಲಿಗೆ ಹೋಗಿದ್ದ ತಮ್ಮ ಚಿತ್ರಗಳನ್ನೂ ಅವರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದರು. ಕೆಲವು ದಿನಗಳ ನಂತರ ಸ್ವಲ್ಪ ಜ್ವರದಿಂದ ಬಳಲಿದ ರಿಷಭ್ ಪಂತ್ ಅವರನ್ನು ಪರೀಕ್ಷೆಗೊಳಪಡಿಸಲಾಯಿತು. ಆಗ ಸೋಂಕು ಪತ್ತೆಯಾಗಿದೆ.

ಶಾ ಎಚ್ಚರಿಕೆ ಪತ್ರ

'ಕೋವಿಶೀಲ್ಡ್ ಲಸಿಕೆಯು ಕೋವಿಡ್‌ನಿಂದ ರಕ್ಷಣೆ ನೀಡುತ್ತದೆ. ಆದರೆ, ಸಂಪೂರ್ಣವಾಗಿ ಸೋಂಕು ಬರದಂತೆ ತಡೆಗಟ್ಟುವುದಿಲ್ಲ. ಆದ್ದರಿಂದ ಎಚ್ಚರಿಕೆಯಿಂದ ಇರಿ. ಜನಸಂದಣಿ ಹೆಚ್ಚು ಇರುವ ಸ್ಥಳಗಳಿಗೆ ಹೋಗದಿರಿ. ಮುನ್ನೆಚ್ಚರಿಕೆ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಂಡವನ್ನು ಎಚ್ಚರಿಸಿದ್ದಾರೆ.

ಅಂಧರ ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ ಪ್ರಕಾಶ ಜಯರಾಮಯ್ಯ, ಬಸಪ್ಪ ವಡ್ಡಗೋಳ್ ಮತ್ತು ಸುನೀಲ್ ರಮೇಶ್ ಅವರನ್ನು ಗುರುವಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಗೌರವಿಸಿ ತಲಾ ₹ 2 ಲಕ್ಷ ಪ್ರೋತ್ಸಾಹಧನದ ವಿತರಿಸಲಾಯಿತು. ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಹಾಗೂ ವಿಧಾನಪರಿಷತ್ ಸದಸ್ಯ ಕೆ.ಗೋವಿಂದರಾಜು, ಸಮರ್ಥನಂ ಸಂಸ್ಥೆಯ ಮಹಾಂತೇಶ, ಉಪಮುಖ್ಯಮಂತ್ರಿ ಸಿ.ಅಶ್ವತ್ಥನಾರಾಯಣ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಚಿವ ನಾರಾಯಣಗೌಡ ಇದ್ದರು.

ಮಾರ್ಚ್‌ನಲ್ಲಿ ಖೇಲೊ ಇಂಡಿಯಾ ಕ್ರೀಡಾಕೂಟ: ಬೆಂಗಳೂರು ಆತಿಥ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯ ಮಟ್ಟದ ಖೇಲೊ ಇಂಡಿಯಾ ಕ್ರೀಡಾಕೂಟದ ಎರಡನೇ ಆವೃತ್ತಿಗೆ ಮುಂದಿನ ವರ್ಷ ಮಾರ್ಚ್ ಐದರಂದು ಚಾಲನೆ ಸಿಗಲಿದೆ.

ಉಪಮುಖ್ಯಮಂತ್ರಿ ಸಿ. ಅಶ್ವತ್ಥನಾರಾಯಣ ಹಾಗೂ ಯುವಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ ಅವರ ನೇತೃತ್ವದಲ್ಲಿ ವಿಕಾಸಸೌಧದಲ್ಲಿ ಗುರುವಾರ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ₹ 40 ಕೋಟಿ ವೆಚ್ಚ ಅಂದಾಜಿಸಲಾಗಿದ್ದು ರಾಜ್ಯ ಸರ್ಕಾರ ₹ 20 ಕೋಟಿ ಅನುದಾನ ನೀಡಲಿದೆ ಎಂದು ಸಚಿವರು ಸಭೆಯಲ್ಲಿ ತಿಳಿಸಿದರು.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ಉದ್ಘಾಟನೆಗೊಳ್ಳಲಿರುವ ಕೂಟ 12 ದಿನ ನಡೆಯಲಿದ್ದು 18 ಸ್ಪರ್ಧೆಗಳು ಇರುತ್ತವೆ. 158 ವಿಶ್ವವಿದ್ಯಾಲಯಗಳಿಂದ 3182 ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದು ತಾಂತ್ರಿಕ ಅಧಿಕಾರಿಗಳು, ಸಹಾಯಕ ಸಿಬ್ಬಂದಿ ಸೇರಿದಂತೆ ಆರುಸಾವಿರ ಮಂದಿ ಭಾಗವಹಿಸಲಿದ್ದಾರೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಆಯುಕ್ತ ಗೋಪಾಲಕೃಷ್ಣ, ವಿಧಾನಪರಿಷತ್ ಸದಸ್ಯ ಹಾಗೂ ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಕೆ.ಗೋವಿಂದರಾಜು, ಖೇಲೊ ಇಂಡಿಯಾದ ಮುಖ್ಯಸ್ಥರು, ರಾಜೀವಗಾಂಧಿ ವಿಶ್ವವಿದ್ಯಾಲಯ ಮತ್ತು ಜೈನ್ ವಿಶ್ವವಿದ್ಯಾಲಯದ ಮುಖ್ಯಸ್ಥರು ಸಭೆಯಲ್ಲಿ ಭಾಗವಹಿಸಿದ್ದರು.

ಟೋಕಿಯೊ ಒಲಿಂಪಿಕ್ಸ್ 2020 ಭಾರತದ ಕನಸಿನ ಪಯಣ

ಜೂಡೊ: ಸುಶೀಲಾಗೆ ಒಲಿಯುವುದೇ ಪದಕ?

ಸುಶೀಲಾ ದೇವಿ –ಟ್ವಿಟರ್ ಚಿತ್ರ

ಜೂಡೊ ಒಲಿಂಪಿಕ್ಸ್‌ಗೆ ಸೇರ್ಪಡೆಯಾದದ್ದು 1964ರ ಟೋಕಿಯೊ ಕ್ರೀಡಾಕೂಟದ ಮೂಲಕ. 2000ರ ಸಿಡ್ನಿ ಒಲಿಂಪಿಕ್ಸ್‌ನಲ್ಲಿ ಹಾಫ್ ಲೈಟ್‌ವೇಟ್ ವಿಭಾಗದಲ್ಲಿ ಕಣಕ್ಕಿಳಿದಿದ್ದ ಲಾರೆಂಬಮ್ ಬ್ರಜೇಶೋರಿ ದೇವಿ ಸೆಮಿಫೈನಲ್ ತಲುಪಿದ್ದು, ಈ ಕ್ರೀಡೆಯಲ್ಲಿ ಭಾರತೀಯರೊಬ್ಬರ ಶ್ರೇಷ್ಠ ಸಾಧನೆಯಾಗಿದೆ. ಕಂಚಿನ ಪದಕದ ಸುತ್ತಿನಲ್ಲಿ ಪರಾಭವಗೊಂಡರೂ ಅವರು ತೋರಿದ ಸಾಮರ್ಥ್ಯ ಹಲವರಲ್ಲಿ ಸ್ಫೂರ್ತಿ ತುಂಬಲು ನೆರವಾಯಿತು.

ಸುಶೀಲಾದೇವಿ ಈ ಬಾರಿ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಭಾರತದ ಏಕೈಕ ಜೂಡೊ ಪಟು. ಏಷ್ಯಾದ ಕೋಟಾದಡಿ ಅವರಿಗೆ ಸ್ಥಾನ ದೊರೆತಿದೆ. 48 ಕೆಜಿ ಕ್ಲಾಸ್ ವಿಭಾಗದಲ್ಲಿ ಸ್ಪರ್ಧಿಸಲಿರುವ ಅವರು, 2014ರಲ್ಲಿ ಗ್ಲಾಸ್ಗೊದಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಮುಡಿಗೇರಿಸಿಕೊಂಡವರು. 26 ವರ್ಷದ ಮಣಿಪುರದ ಪಟುವಿಗೆ ಇದು ಮೊದಲ ಒಲಿಂಪಿಕ್ಸ್. ಇದನ್ನು ಸ್ಮರಣೀಯವಾಗಿರಿಸಿಕೊಳ್ಳುವ ಹಂಬಲದಲ್ಲಿ ಅವರಿದ್ದಾರೆ.

ಕವಾಸ್ ಬಿಲಿಮೊರಿಯಾ ಮತ್ತು ನರೇಂದರ್ ಸಿಂಗ್ 1992ರ ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ಕಣಕ್ಕಿಳಿಯುವ ಮೂಲಕ ಈ ಕ್ರೀಡೆಯಲ್ಲಿ ಮೊದಲ ಬಾರಿ ದೇಶವನ್ನು ಪ್ರತಿನಿಧಿಸಿದರು. 1996ರ ಅಟ್ಲಾಂಟ ಒಲಿಂಪಿಕ್ಸ್‌ನಲ್ಲೂ ನರೇಂದರ್ ಸಿಂಗ್ ಸ್ಪರ್ಧೆಯಿತ್ತು. ಇದೇ ಕೂಟದಲ್ಲಿ ಬಿಎಸ್‌ಎಫ್‌ನಿಂದ ಸ್ಪರ್ಧಿಸಿದ್ದ ಕರ್ನಾಟಕದ ನಜೀಬ್ ಅಗಾ (65 ಕೆಜಿ ವಿಭಾಗ) 32ರ ಘಟ್ಟದಲ್ಲಿ ಸೋಲು ಅನುಭವಿಸಿದ್ದರು. ಸುನೀತ್ ಠಾಕೂರ್ (ಮಹಿಳೆಯರ 52 ಕೆಜಿ) 16ರ ಘಟ್ಟದ ಪಂದ್ಯದಲ್ಲಿ ಜಪಾನ್‌ನ ಸುಗವಾರ ಎದುರು ಮಣಿದಿದ್ದರು. ಆರತಿ ಕೊಹ್ಲಿ (ಮಹಿಳೆಯರ 72 ಕೆಜಿ ವಿಭಾಗ) ಅವರು 32ರ ಘಟ್ಟದ ಹಣಾಹಣಿಯಲ್ಲಿ ನಿರಾಸೆ ಅನುಭವಿಸಿದ್ದರು.

TOKYO 2020

ಇನ್ನು 7 ದಿನ

2004ರ ಅಥೆನ್ಸ್ ಕೂಟದಲ್ಲಿ ಎಕ್ಸ್ಟ್ರಾ ಲೈಟ್‌ವೇಟ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಅಕ್ರಮ್ ಶಾ ಅವರು ಗಳಿಸಿದ್ದು ಒಂಬತ್ತನೇ ಸ್ಥಾನ. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಗರಿಮಾ ಚೌಧರಿ ಕಣಕ್ಕಿಳಿದಿದ್ದರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಅವತಾರ್ ಸಿಂಗ್ ಅವರಿಗೆ ಅರ್ಹತೆ ಸಿಕ್ಕಿತ್ತು. 90 ಕೆಜಿ ವಿಭಾಗದಲ್ಲಿ ಕಣಕ್ಕಿಳಿದಿದ್ದ ಅವರು ಮೊದಲ ಸುತ್ತಿನಲ್ಲೇ ಸೋತು ನಿರ್ಗಮಿಸಿದ್ದರು.

ಸಿ.ಎ.ಭವಾನಿ ದೇವಿ– ಟ್ವಿಟರ್ ಚಿತ್ರ

ಫೆನ್ಸಿಂಗ್: 1896ರ ಅಥೆನ್ಸ್ ಕೂಟದಲ್ಲೇ ಈ ಕ್ರೀಡೆಯನ್ನು ಪರಿಚಯಿಸಲಾಯಿತಾದರೂ ಭಾರತೀಯರೊಬ್ಬರು ಭಾಗವಹಿಸಲು ಸಾಧ್ಯವಾಗುತ್ತಿರುವುದು ಈ ಬಾರಿಯ ಒಲಿಂಪಿಕ್ಸ್‌ಗೆ. ಸಿ.ಎ. ಭವಾನಿದೇವಿ ಅರ್ಹತೆ ಗಿಟ್ಟಿಸಿದ ಭಾರತದ ಮೊದಲ ಫೆನ್ಸಿಂಗ್ ಪಟು ಎಂಬ ಇತಿಹಾಸ ಬರೆದಿದ್ದಾರೆ. ಅಡ್ಜಸ್ಟೆಡ್ ಅಫಿಶೀಯಲ್ ರ್‍ಯಾಂಕಿಂಗ್ (ಎಒಆರ್) ಆಧಾರದಲ್ಲಿ ಟೋಕಿಯೊ ಟಿಕೆಟ್ ಗಳಿಸಿರುವ ತಮಿಳುನಾಡಿನ ಈ ಪಟು ಎಂಟು ಬಾರಿಯ ರಾಷ್ಟ್ರೀಯ ಚಾಂಪಿಯನ್ ಎಂಬುದು ವಿಶೇಷ. ಟೋಕಿಯೊ ಕೂಟದಲ್ಲಿ ಸೇಬರ್ ವಿಭಾಗದಲ್ಲಿ ಅವರು ಕಣಕ್ಕಿಳಿಯುವರು.

2018ರಲ್ಲಿ ಕ್ಯಾನ್‌ಬೆರಾದಲ್ಲಿ ನಡೆದ ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್‌ನ ಸೇಬರ್ ವಿಭಾಗದಲ್ಲಿ ಭವಾನಿ ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನೂ ಹಲವು ಪದಕಗಳನ್ನು ಒಲಿಸಿಕೊಂಡಿರುವ ಅವರು ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಸ್ಪಾರ್ಕಸೆನ್ ಟ್ರೋಫಿ ಚೆಸ್: ಕ್ರಾಮ್ನಿಕ್ ವಿರುದ್ಧ ಡ್ರಾ ಸಾಧಿಸಿದ ಆನಂದ್

ಡಾರ್ಟ್‌ಮಂಡ್ (ಪಿಟಿಐ): ಮಾಜಿ ವಿಶ್ವ ಚಾಂಪಿಯನ್, ಭಾರತದ ವಿಶ್ವನಾಥನ್ ಆನಂದ್ ಅವರು ಇಲ್ಲಿ ನಡೆಯುತ್ತಿರುವ ಸ್ಪಾರ್ಕಸೆನ್ ಟ್ರೋಫಿ ಚೆಸ್ ಟೂರ್ನಿಯಲ್ಲಿ ರಷ್ಯಾದ ಗ್ರ್ಯಾಂಡ್‌ಮಾಸ್ಟರ್ ವ್ಲಾದಿಮಿರ್ ಕ್ರಾಮ್ನಿಕ್ ಎದುರು ಗುರುವಾರ ಡ್ರಾ ಸಾಧಿಸಿದ್ದಾರೆ. ಇಬ್ಬರ ನಡುವಿನ ನಾಲ್ಕು ಪಂದ್ಯಗಳ ಹಣಾಹಣಿಯಲ್ಲಿ ಇದು ಎರಡನೇ ಪಂದ್ಯವಾಗಿತ್ತು.

ಎರಡನೇ ಪಂದ್ಯದ ಮುಕ್ತಾಯದ ವೇಳೆಗೆ ಆನಂದ್ 1.5–0.5ರ ಮುನ್ನಡೆ ಸಾಧಿಸಿದ್ದಾರೆ. ಬುಧವಾರ ನಡೆದ ಮೊದಲ ಪಂದ್ಯದಲ್ಲಿ ಬಿಳಿ ಕಾಯಿಗಳೊಂದಿಗೆ ಆಡಿದ ಭಾರತದ ಆಟಗಾರ 66 ನಡೆಗಳಲ್ಲಿ ಕ್ರಾಮ್ನಿಕ್ ವಿರುದ್ಧ ಜಯ ಗಳಿಸಿದರು.

ಕಳೆದ ವಾರ ಜಗ್ರೆಬ್‌ನಲ್ಲಿ ನಡೆದ ಕ್ರೊವೇಷ್ಯಾ ಗ್ರ್ಯಾಂಡ್ ಚೆಸ್ ಟೂರ್ ಟೂರ್ನಿಯಲ್ಲಿ ಆಡಿ ಆನಂದ್ ಇಲ್ಲಿಗೆ ಬಂದಿದ್ದರು.

ಚೆಸ್: ಪ್ರಗ್ನಾನಂದ, ಅಧಿಬನ್‌ಗೆ ಜಯ

ಆರ್.ಪ್ರಗ್ನಾನಂದ ಪಿಟಿಐ ಚಿತ್ರ

ಸೋಚಿ, ರಷ್ಯಾ(ಪಿಟ್ರೈ): ಭಾರತದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಆರ್. ಪ್ರಗ್ನಾನಂದ ಮತ್ತು ಬಿ.ಅಧಿಬನ್ ಇಲ್ಲಿ ನಡೆಯುತ್ತಿರುವ ಫಿಡೆ ಚೆಸ್ ವಿಶ್ವಕಪ್‌ನ ಮೊದಲ ಪಂದ್ಯಗಳಲ್ಲಿ ಜಯ ಗಳಿಸಿದರು. ನಿಹಾಲ್ ಸರೀನ್ ಡ್ರಾಗೆ ಸಮಾಧಾನಪಟ್ಟುಕೊಂಡರು.

ಚೆನ್ನೈನ ಪ್ರಗ್ನಾನಂದ ಅಮೆರಿಕದ ಅನುಭವಿ ಆಟಗಾರ ಗಾಬ್ರಿಯೆಲ್ ಸರ್ಗಿಸಿಯನ್ ಅವರನ್ನು ಮಣಿಸಿದರೆ ಅಧಿಬನ್ ಅವರು ನ್ಯೂರಿಸ್ ಡೆಲ್ಗಾಡೊ ರಮಿರೆಜ್ ಎದುರು ಜಯ ಗಳಿಸಿದರು. ರಷ್ಯಾದ ಸನಾನ್ ಜುಗಿರೊವ್ ವಿರುದ್ಧ ನಿಹಾಲ್ ಸರೀನ್ ಡ್ರಾ ಸಾಧಿಸಿದರು. ಗ್ರ್ಯಾಂಡ್ ಮಾಸ್ಟರ್ ಪಿ.ಇನಿಯನ್ ತಮಗಿಂತ ಹೆಚ್ಚು ರೇಟಿಂಗ್ ಹೊಂದಿರುವ ಇವ್ಜೆನಿ ಥೊಮಶೆವ್‌ಸ್ಕಿಗೆ ಮಣಿದರು.

ಭಾರತದ ಪಿ.ಹರಿಕೃಷ್ಣ, ವಿದಿತ್ ಸಂತೋಷ್ ಮತ್ತು ಅರವಿಂದ್ ಚಿದಂಬರಂ ಕೂಡ ಮೊದಲ ಪಂದ್ಯಗಳನ್ನು ಡ್ರಾ ಮಾಡಿಕೊಂಡರು.

ಮಹಿಳಾ ಕ್ರಿಕೆಟ್: ಬದಲಾವಣೆ ಅಗತ್ಯ–ಪೊವಾರ್

ಚೆಮ್ಸ್‌ಫೋರ್ಡ್, ಇಂಗ್ಲೆಂಡ್ (ಪಿಟಿಐ): ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಭಾರತ ಮಹಿಳಾ ತಂಡದಲ್ಲಿ ಸಮಗ್ರ ಬದಲಾವಣೆ ಅವಶ್ಯವಿದ್ದು ನಿರಾತಂಕದಿಂದ ಆಡುವ ತಂಡ ಕಟ್ಟಬೇಕಾಗಿದೆ ಎಂದು ಕೋಚ್ ರಮೇಶ್ ಪೊವಾರ್ ಅಭಿಪ್ರಾಯಪಟ್ಟಿದ್ದಾರೆ.

ಇಂಗ್ಲೆಂಡ್ ಎದುರಿನ ಏಕದಿನ ಸರಣಿಯಲ್ಲಿ ಸೋಲುಂಡ ನಂತರ ಟಿ20 ಸರಣಿಯನ್ನೂ ಮಹಿಳಾ ತಂಡ ಕೈಚೆಲ್ಲಿತ್ತು. ಈ ಹಿನ್ನೆಲೆಯಲ್ಲಿ ಮಾತನಾಡಿದ ಅವರು ಚೆನ್ನಾಗಿ ಆಡುವವರಿಗೆ ಇತರರಿಂದ ಸಹಕಾರ ಸಿಗದೇ ಇರುವುದು ತಂಡದ ಸೋಲಿಗೆ ಕಾರಣವಾಗುತ್ತಿದೆ ಎಂದರು.

ಕೌಂಟಿ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಮೂರನೇ ಹಾಗೂ ಅಂತಿಮ ಟಿ20 ಪಂದ್ಯದಲ್ಲಿ ಭಾರತ ಎಂಟು ವಿಕೆಟ್‌ಗಳಿಂದ ಆತಿಥೇಯ ತಂಡಕ್ಕೆ ಮಣಿದಿತ್ತು. ಇಂಗ್ಲೆಂಡ್ 2–1ರಲ್ಲಿ ಸರಣಿ ತನ್ನದಾಗಿಸಿಕೊಂಡಿತ್ತು.

154 ರನ್‌ಗಳ ಗುರಿಯನ್ನು ಇಂಗ್ಲೆಂಡ್ 18.4 ಓವರ್‌ಗಳಲ್ಲಿ ಕೇವಲ ಎರಡು ವಿಕೆಟ್ ಕಳೆದುಕೊಂಡು ತಲುಪಿತ್ತು. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತ ತಂಡ ಆರಂಭದಲ್ಲಿ ಆಘಾತ ಅನುಭವಿಸಿತು. ಶೆಫಾಲಿ ವರ್ಮಾ ಖಾತೆ ತೆರೆಯುವ ಮೊದಲೇ ವಾಪಸಾಗಿದ್ದರು. ಆಗ ತಂಡದ ಮೊತ್ತ ಒಂದು ರನ್ ಆಗಿತ್ತು. 13 ರನ್ ಆಗುವಷ್ಟರಲ್ಲಿ ಹರ್ಲೀನ್ ಡಿಯೋಲ್ ಕೂಡ ಔಟಾದರು. ಈ ಸಂದರ್ಭದಲ್ಲಿ ಸ್ಮೃತಿ ಮತ್ತು ಹರ್ಮನ್‌ಪ್ರೀತ್ ಕೌರ್ (36; 26 ಎ, 5 ಬೌಂ, 1 ಸಿ) ಜೊತೆಗೂಡಿ ತಂಡದ ಮೊತ್ತವನ್ನು ಮೂರಂಕಿ ದಾಟಿಸಿದರು. ಹರ್ಮನ್‌ಪ್ರೀತ್ ಔಟಾದ ನಂತರ ಸ್ಮೃತಿ ಇನ್ನಷ್ಟು ಆಕ್ರಮಣಕಾರಿ ಆಟವಾಡಿದರು. 17ನೇ ಓವರ್ ವರೆಗೆ ಅವರು ಕ್ರೀಸ್‌ನಲ್ಲಿದ್ದರು.

ಕೊನೆಯ ಓವರ್‌ಗಳಲ್ಲಿ ರಿಚಾ ಘೋಷ್ ಮತ್ತು ದೀಪ್ತಿ ಶರ್ಮಾ ಮಿಂಚಿನ ಬ್ಯಾಟಿಂಗ್ ಮಾಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6ಕ್ಕೆ153 (ಸ್ಮೃತಿ ಮಂದಾನ 70, ಹರ್ಮನ್‌ಪ್ರೀತ್ ಕೌರ್ 36, ರಿಚಾ ಘೋಷ್ 20, ದೀಪ್ತಿ ಶರ್ಮಾ ಔಟಾಗದೆ 9; ಕ್ಯಾಥರಿನ್ ಬ್ರಂಟ್ 27ಕ್ಕೆ2, ನತಾಲಿ ಶೀವರ್ 16ಕ್ಕೆ1, ಸೋಫಿ ಎಕ್ಲೆಸ್ಟೋನ್ 35ಕ್ಕೆ3); ಇಂಗ್ಲೆಂಡ್: 18.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 154 (ಡ್ಯಾನಿಯಲ್ ವ್ಯಾಟ್ 89, ನತಾಲಿ ಶೀವರ್ 42; ದೀಪ್ತಿ ಶರ್ಮಾ 29ಕ್ಕೆ1, ಸ್ನೇಹ್ ರಾಣಾ 27ಕ್ಕೆ1). ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 8 ವಿಕೆಟ್‌ಗಳ ಜಯ; 2–1ರಲ್ಲಿ ಸರಣಿ ಗೆಲುವು.

ಆನ್‌ಲೈನ್ ಚೆಸ್ ಟೂರ್ನಿ 19ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು ಮತ್ತು ಜೂನಿಯರ್ ಬಾಲಕರ ವಿಭಾಗದವರಿಗಾಗಿ ರಾಜ್ಯಮಟ್ಟದ ಆನ್‌ಲೈನ್ ಚೆಸ್ ಟೂರ್ನಿಯನ್ನು ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆ ಇದೇ 19 ಮತ್ತು 20ರಂದು ಆಯೋಜಿಸಲಿದೆ. ಜೂನಿಯರ್ ಬಾಲಕಿಯರ ಸ್ಪರ್ಧೆ 21 ಮತ್ತು 22ರಂದು ನಡೆಯಲಿದೆ.

ಟೂರ್ನಿಯ ಮೂರೂ ವಿಭಾಗಗಳಲ್ಲಿ ಮೊದಲ ಮೂರು ಸ್ಥಾನ ಗಳಿಸಿದವರನ್ನು ರಾಷ್ಟ್ರೀಯ ಟೂರ್ನಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲು ಕಳುಹಿಸಲಾಗುವುದು. ಸ್ಪರ್ಧಿಗಳು ಮನೆಯಿಂದಲೇ ಟೂರ್ನಿಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗೆ 9036464600 ಸಂಪರ್ಕಿಸಬಹುದು ಅಥವಾ www.karanatakachess.com ವೆಬ್‌ಸೈಟ್ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿಗದ ಬಡ್ತಿ: ವಿಜೇಂದರ್ ಅಸಮಾಧಾನ

ನವದೆಹಲಿ (ಪಿಟಿಐ): ಹರಿಯಾಣ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂತರರಾಷ್ಟ್ರೀಯ ಕ್ರೀಡಾಪಟುಗಳಿಗೆ ಬಡ್ತಿ ನೀಡದಿರುವುದು ರಾಜ್ಯ ಸರ್ಕಾರದ ಲೋಪ ಎಂದು ಒಲಿಂಪಿಯನ್ ಬಾಕ್ಸರ್ ವಿಜೇಂದರ್ ಸಿಂಗ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇಲಾಖೆಯಲ್ಲಿರುವ ಎಂಟು ಕ್ರೀಡಾಪಟುಗಳು ತಮಗೆ ಬಡ್ತಿ ನೀಡುವಂತೆ ಆಗ್ರಹಿಸಿ ಕಾನೂನು ಹೋರಾಟ ಆರಂಭಿಸಿದ್ದಾರೆ. ಹತ್ತು ವರ್ಷಗಳ ಹಿಂದೆ ತಮ್ಮ ಕ್ರೀಡಾ ಸಾಧನೆಗಾಗಿ ಇವರೆಲ್ಲರೂ ಪೊಲೀಸ್ ಇಲಾಖೆಯಲ್ಲಿ ಡಿಎಸ್‌ಪಿ ಹುದ್ದೆಗೆ ನೇಮಕಗೊಂಡಿದ್ದರು. ಆದರೆ ಇದುವರೆಗೆ ಮತ್ತೊಂದು ಬಡ್ತಿ ನೀಡಿಲ್ಲ.

ಒಟ್ಟು 12 ಕ್ರೀಡಾಪಟುಗಳು ಆಗ ಈ ಹುದ್ದೆಗಳನ್ನು ಪಡೆದಿದ್ದರು. ಅದರಲ್ಲಿ ವಿಜೇಂದರ್ ಕೂಡ ಒಬ್ಬರು. ಆದರೆ ಅವರು ಕೆಲವು ವರ್ಷಗಳ ಹಿಂದೆಯೇ ರಾಜೀನಾಮೆ ನೀಡಿದ್ದಾರೆ. ಕುಸ್ತಿಪಟು ಯೋಗೇಶ್ವರ್ ದತ್ ಮತ್ತು ಹಾಕಿ ಆಟಗಾರ ಸಂದೀಪ್ ಸಿಂಗ್ ರಾಜಕೀಯಕ್ಕೆ ಧುಮುಕಿದ್ದು ಭಾರತೀಯ ಜನತಾ ಪಕ್ಷವನ್ನು ಸೇರಿಕೊಂಡಿದ್ದಾರೆ. ಆದ್ದರಿಂದ ಸರ್ಕಾರಿ ನೌಕರಿಗೆ ವಿದಾಯ ಹೇಳಿದ್ದಾರೆ.

ಬಡ್ತಿಯ ನಿರೀಕ್ಷೆಯಲ್ಲಿರುವ ಅಥ್ಲೀಟ್‌ಗಳಲ್ಲಿ 2007ರ ಟಿ20 ವಿಶ್ವಕಪ್ ವಿಜೇತ ತಂಡದ ಜೋಗಿಂದರ್ ಶರ್ಮಾ, ಮಾಜಿ ಹಾಕಿ ಆಟಗಾರ್ತಿ ಸುರಿಂದರ್ ಕೌರ್, ಮಮತಾ ಖರಬ್, ಹಾಕಿ ಆಟಗಾರ ಸರ್ದಾರ್ ಸಿಂಗ್, ಕುಸ್ತಿಪಟು ಗೀತಿಕಾ ಜಾಖಡ್, ಒಲಿಂಪಿಯನ್ ಬಾಕ್ಸರ್ ಅಖಿಲ್ ಕುಮಾರ್ ಮತ್ತು ಜಿತೇಂದರ್ ಕುಮಾರ್ ಅವರಿದ್ದಾರೆ.

S.R. GROUP OF EDUCATIONAL INSTITUTIONS HEBRI
KINNIGUDDE,HEBRI NH-169A, AGUMBE - MANIPAL HIGHWAY, UDUPI DISTRICT-576112

S.R. PU College

S.R. Public School (CBSE)

S.R. Boys Hostel

S.R. Girls Hostel

ಆಗುಂಬೆಯಿಂದ ಮಣಿಪಾಲಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಹೆಬ್ರಿಯ ಕಿನ್ನಿಗುಡ್ಡೆ ಎಂಬಲ್ಲಿ 2500ಕ್ಕೂ ಹೆಚ್ಚು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದೆ. ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆಯಿದ್ದು, ಅತ್ಯಾಧುನಿಕ ಪ್ರಯೋಗಾಲಯಗಳನ್ನು, ಸಭಾಂಗಣವನ್ನು, ಸುಸಜ್ಜಿತ ಕಟ್ಟಡಗಳನ್ನು ಹೊಂದಿರುವ ಈ ಸಂಸ್ಥೆ ಕಳೆದ 24 ವರ್ಷದಿಂದ ರಾಜ್ಯದ, ದೇಶದ ನಾನಾ ಕಡೆಯ ವಿದ್ಯಾರ್ಥಿಗಳಿಗೆ ಮೌಲ್ಯಯುತ ಶಿಕ್ಷಣ ನೀಡುತ್ತಿದೆ. ಈಗಾಗಲೇ ಅನೇಕ ವೈದ್ಯಕೀಯ, ಇಂಜಿನಿಯರಿಂಗ್ ದಾಖಲಾತಿಯನ್ನು ಸಂಸ್ಥೆಯ ವಿದ್ಯಾರ್ಥಿಗಳು ಪಡೆದಿರುವುದು ಹೆಗ್ಗಳಿಕೆ. ಇದಲ್ಲದೆ ಇಲ್ಲಿನ ವಿದ್ಯಾರ್ಥಿಗಳು ದೇಶದ ನಾನಾ ಕಡೆಯ ಪ್ರತಿಷ್ಠಿತ ಸಂಸ್ಥೆಯಲ್ಲಿ ವೈದ್ಯರಾಗಿ, ಇಂಜಿನಿಯರಾಗಿ, ನೌಕಾ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

Secretary
Mrs. Sapna N Shetty
BA(Law), LLB
S.R. Group of Educational Institutions Hebri

STATE TOPPERS
Raeesa
P-98, C-100, M-99, B-100, 3rd rank in state and 1st in Udupi in science-2019 joined MBBS at HIMS
Kazi Tasmiya Samreen
E-100, B-100, AC-100, S-100
5th rank in state in commerce-2016

OUR FACULTIES
Physics
Mr. Prashanth. H (Principal) (15 years of Experience)
Chemistry
Mr. Hariprasad (17 years of Experience)
Mr. Vinayak (11 years of Experience)
Maths
Mr. Guruprasad (15 years of Experience)
Biology
Mrs. Bhagyashree (12 years of Experience)
Commerce
Mr. Jagadeesh (12 years of Experience)
Mr. Amrith (9 years of Experience)

OUR PROUD ACHIEVERS
ADITHYA.R Joined MBBS at BHB Bangalore
GURUPRASAD. S.D Joined MBBS at Subbaih Medical College Shimoga
SURAKSHITH MOOLYA Joined MBBS at KIMS Karwar
PANCHAMI Joined MBBS at AJIMS Mangalore
STUTHI Joined SDM Medical College, Dharwad
AYISHA MEHAK Joined BIDS Bangalore
MADHUSWAPNA Joined AJIMS Mangalore
GURURAJ PALAN Joined KIMS Karwar
H. YATHIRAJ SHETTY Joined AJIMS Mangalore
SHREESHAINA Joined KMC Mangalore
SHAILESH KUMAR Joined KMC Manipal
H.R. PRITHVIRAJ Joined AJIMS Mangalore
SINCHAN B Joined SIMS Shimoga
CHETHAN HEBBAR MBBS - SIMS Shimoga Joined MD in AIIMS
RANJITHA MAYYA Joined SIMS Shimoga
SUKSHITH Joined RV Eng. College, Bangalore, Also Selected as a Navy Officer

COURSES OFFERED

Science	We also Provide
PCMB/ PCMCs (Integrated classes for NEET/ JEE (MAINS) / KCET Commerce EBAS/ EBACs (with CA/CS Foundation course) Languages: English, Kannada / Hindi/ Sanskrit	Both interactive and pre recorded classes in online mode. Seperate hostel facility for both boys and girls Special study hours and doubt clearing sessions from 6pm -8 pm Daily practice papers (DPP)- topic wise will be provided for competitive exams. Special care will be given for girls.

RESULT ABSTRACT

Years	Science	Commerce
2014	97%	100%
2015	98.33%	100%
2016	96.6%	100%
2017	100%	100%
2018	100%	100%
2019	99.56%	100%
2020	100%	99.80%

S.R. PUBLIC SCHOOL (CBSE-Residential) : Registration Open for Class V - X
(100% Result in X CBSE From 12 Years)
We provide NTSE/ NEET/ JEE Foundation classes from 6th to 10th std

S.R. ENGLISH MEDIUM HIGHER PRIMARY & HIGH SCHOOL: (State Board)
From 6 - 10th. 100% Result in X State From 13 Years
Separate hostel facilities for both boys and girls from 5th – 12th std

For Registration Contact:
MOB: 9448373109, 9448724251, 9448604417, 9844142425, 8277194408,
srpuchebri@gmail.com, www.sreduhebri.in
Scan to register

ಪಿ.ವಿ. ಸಿಂಧು –ಪ್ರಜಾವಾಣಿ ಚಿತ್ರ

ವಿರಾಮದಿಂದ ಅನುಕೂಲವೇ ಆಗಿದೆ: ಸಿಂಧು

ಹೈದರಾಬಾದ್ (ಪಿಟಿಐ): ಕೋವಿಡ್‌ನಿಂದಾಗಿ ಲಭಿಸಿರುವ ವಿರಾಮದಿಂದ ವೈಯಕ್ತಿಕ ವಾಗಿ ತಮಗೆ ಅನುಕೂಲ ಆಗಿದ್ದು ತಂತ್ರಗಾರಿಕೆ ಮತ್ತು ನೈಪುಣ್ಯ ಹೆಚ್ಚಿಸಲು ನೆರವಾಗಿದೆ ಎಂದು ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಹೇಳಿದ್ದಾರೆ.

ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಸಿಂಧು ಅವರ ಅಭ್ಯಾಸಕ್ಕೆ ಕೊರೊನಾ ಅಡ್ಡಿಯಾಗಿತ್ತು. ಒಂದು ವರ್ಷದಿಂದ ಅವರಿಗೆ ಯಾವ ಟೂರ್ನಿಯಲ್ಲೂ ಆಡಲು ಸಾಧ್ಯವಾಗಲಿಲ್ಲ. ಆದರೆ ಈ ಅವಧಿ ತಮ್ಮ ಪಾಲಿಗೆ ಅದೃಷ್ಟವಾಗಿ ಪರಿಣಮಿಸಿದೆ ಎಂದು ಸಿಂಧು ಹೇಳಿದರು.

‘ಸಾಮಾನ್ಯವಾಗಿ ಅಭ್ಯಾಸ ಮಾಡಲು ಅವಕಾಶ ಸಿಗುವುದು ಕಡಿಮೆ. ಆ ಹಿನ್ನೆಲೆಯಲ್ಲಿ ನೋಡಿದರೆ ಇದೇ ಮೊದಲ ಬಾರಿ ಅಭ್ಯಾಸಕ್ಕೆ ಸಾಕಷ್ಟು ಸಮಯ ಸಿಕ್ಕಿದೆ. ಒಲಿಂಪಿಕ್ಸ್‌ಗೆ ಸಿದ್ಧವಾಗಲು ಇದು ನೆರವಾಗಿದೆ. ಕೋವಿಡ್‌ನಿಂದಾಗಿ ಒಲಿಂಪಿಕ್ಸ್ ಸಿದ್ಧತೆಗೆ ಯಾವ ರೀತಿಯಲ್ಲೂ ತೊಂದರೆಯಾಗಲಿಲ್ಲ’ ಎಂದು ಅವರು ವಿವರಿಸಿದರು.

ಕಪ್ಪು ವರ್ಣೀಯರಿಗೆ ಗೌರವ: ನಿರ್ಧಾರ

ಲಂಡನ್ (ರಾಯಿಟರ್ಸ್): ಜನಾಂಗೀಯ ನಿಂದನೆಗೆ ವಿರೋಧ ವ್ಯಕ್ತಪಡಿಸುವ ಸಲುವಾಗಿ ಬ್ರಿಟನ್ ಮಹಿಳಾ ಫುಟ್‌ಬಾಲ್ ತಂಡದವರು ಒಲಂಪಿಕ್ಸ್‌ನಲ್ಲಿ ತಮ್ಮ ಪ್ರತಿಯೊಂದು ಪಂದ್ಯಕ್ಕೂ ಮೊದಲು ಮೊಣಕಾಲೂರಿ ಕಪ್ಪು ವರ್ಣೀಯರಿಗೆ ಗೌರವ ಸೂಚಿಸಲಿದ್ದಾರೆ.

ಒಂದು ವರ್ಷದಿಂದ ಬ್ರಿಟನ್ ಮಹಿಳಾ ತಂಡದವರು ಇದನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಆಯೋಜಕರು ನಿಯಮಗಳನ್ನು ಸಡಿಲಿಸಿ ಒಲಿಂಪಿಕ್ಸ್‌ನಲ್ಲೂ ಕಪ್ಪುವರ್ಣೀಯರಿಗೆ ಗೌರವ ಸೂಚಿಸಲು ಅವಕಾಶ ನೀಡಿದ್ದಾರೆ. ಗುಂಪು ಹಂತದಲ್ಲಿ ಬ್ರಿಟನ್ ಆತಿಥೇಯ ಜಪಾನ್ ವಿರುದ್ಧ ಮೊದಲ ಪಂದ್ಯ ಆಡಲಿದ್ದು ನಂತರ ಕೆನಡಾ ಮತ್ತು ಚಿಲಿಯನ್ನು ಎದುರಿಸಲಿದೆ.

ಟೋಕಿಯೊ ಒಲಿಂಪಿಕ್ಸ್ ಆಯೋಜಕರಿಂದ ಆರೋಗ್ಯ ಸುರಕ್ಷತಾ ಕ್ರಮ ಘೋಷಣೆ

ಗ್ರೂಪ್ ಫೋಟೊ ಇಲ್ಲ; ಅಂತರ ಕಡ್ಡಾಯ

ಟೋಕಿಯೊ (ಪಿಟಿಐ/ಎಪಿ/ರಾಯಿಟರ್ಸ್): ಈ ಬಾರಿ ಒಲಿಂಪಿಕ್ಸ್ ಪದಕ ಪ್ರದಾನ ಸಮಾರಂಭದಲ್ಲಿ ಅಥ್ಲೀಟ್‌ಗಳು, ಅತಿಥಿಗಳು ಮತ್ತು ಸ್ವಯಂಸೇವಕರು ಗುಂಪು ಫೋಟೊ ತೆಗೆಸಿಕೊಳ್ಳುವಂತಿಲ್ಲ.

ಪದಕ ಪ್ರದಾನ ವೇದಿಕೆಯಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯ. ವಿಜೇತ ಅಥ್ಲೀಟ್‌ಗಳು ತಾವಾಗಿಯೇ ಪದಕಗಳನ್ನು ಕೊರಳಿಗೆ ಹಾಕಿಕೊಳ್ಳಬೇಕು.

ಒಲಿಂಪಿಕ್ಸ್ ಸಂದರ್ಭದಲ್ಲಿ ಆರೋಗ್ಯ ಸುರಕ್ಷತೆಗೆ ಸಂಬಂಧಿಸಿದ ಅನೇಕ ಕ್ರಮಗಳನ್ನು ಗುರುವಾರ ಘೋಷಿಸಿದ್ದು ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳ ವಿಜೇತರ ನಡುವೆ ಅಂತರಕ್ಕಾಗಿ ವಿಶೇಷ ರೀತಿಯಲ್ಲಿ ಪೋಡಿಯಂ ವಿನ್ಯಾಸಗೊಳಿಸಲಾಗುವುದು ಎಂದು ತಿಳಿಸಲಾಗಿದೆ.

ಪದಕ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರೂ ಲಸಿಕೆ ಹಾಕಿಸಿಕೊಂಡಿರಬೇಕು. ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಮತ್ತು ನಿರ್ದಿಷ್ಟ ಕ್ರೀಡಾ ಫೆಡರೇಷನ್‌ನ ತಲಾ ಒಬ್ಬರು ಪ್ರತಿನಿಧಿಗೆ ಮಾತ್ರ ವೇದಿಕೆಯೇರಲು ಅವಕಾಶ ಇರುತ್ತದೆ. ಅಥ್ಲೀಟ್‌ಗಳು ಪದಕಗಳನ್ನು ತಾವೇ ಕೊರಳಿಗೆ ಹಾಕಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಕ್ರೀಡಾಂಗಣಗಳಿಗೆ ಪ್ರೇಕ್ಷಕರಿಗೆ ಪ್ರವೇಶ ನೀಡದೇ ಇರಲು ಆಯೋಜಕರು ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಕಳೆದ ವಾರ ನಿರ್ಧರಿಸಿತ್ತು.

ನರಿತಾ ವಿಮಾನ ನಿಲ್ದಾಣಕ್ಕೆ ಬಂದಿಳಿದ ಕ್ರೀಡಾಪಟುಗಳ ಆ್ಯಂಟಿಜೆನ್ ಟೆಸ್ಟ್ ಸಂದರ್ಭದಲ್ಲಿ ಒಲಿಂಪಿಕ್ಸ್ ಆಯೋಜನಾ ಸಮಿತಿಯ ಸಿಬ್ಬಂದಿ ಪಿಪಿಇ ಕಿಟ್ ಧರಿಸಿದ್ದರು –ರಾಯಿಟರ್ಸ್ ಚಿತ್ರ

ಗವರ್ನರ್ ಭೇಟಿ ಮಾಡಿದ ಬಾಕ್: ಒಲಿಂಪಿಕ್ಸ್ ಆರಂಭಕ್ಕೆ ಒಂದು ವಾರ ಬಾಕಿ ಉಳಿದಿರುವಾಗ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಂಸ್ಥೆಯ (ಐಒಸಿ) ಅಧ್ಯಕ್ಷ ಥಾಮಸ್ ಬಾಕ್ ಟೋಕಿಯೊಗೆ ಭೇಟಿ ನೀಡಿದ್ದು ಗವರ್ನರ್ ಯೂಕೆ ಕೊಯ್ಕೆ ಅವರನ್ನು ಗುರುವಾರ ಭೇಟಿ ಮಾಡಿದರು.

ಸತತ ಮೂರನೇ ದಿನವೂ ಜಪಾನ್‌ನ ಪ್ರಮುಖ ಮುಖಂಡರು ಮತ್ತು ಒಲಿಂಪಿಕ್ಸ್ ಆಯೋಜಕರನ್ನು ಭೇಟಿ ಮಾಡಿದ ಬಾಕ್ ನಿಯಮಗಳನ್ನು ಪಾಲಿಸಿಕೊಂಡು ಸುರಕ್ಷತಾ ಕ್ರಮಗಳೊಂದಿಗೆ ಟೂರ್ನಿ ಆಯೋಜಿಸಲು ಪೂರಕ ವಾತಾವರಣ ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ.

ಯೂಕೆ ಕೊಯ್ಕೆ ಅವರೊಂದಿಗೆ ಸಭೆ ನಡೆಸುವುದಕ್ಕೂ ಮುನ್ನ ಬಾಕ್ ಅವರು ಕ್ರೀಡಾ ಗ್ರಾಮಕ್ಕೆ ಭೇಟಿ ನೀಡಿದರು. ಪ್ರಧಾನಿ ಯೊಶಿಹಿಡೆ ಸುಗಾ ಅವರನ್ನು ಬುಧವಾರ ಭೇಟಿ ಮಾಡಿದ್ದ ಅವರು ಒಲಿಂಪಿಕ್ಸ್ ಆಯೋಜನಾ ಸಮಿತಿ ಅಧ್ಯಕ್ಷ ಸೀಕೊ ಹಾಶಿಮೊಟೊ ಜೊತೆ ಮಂಗಳವಾರ ಮಾತುಕತೆ ನಡೆಸಿದ್ದರು.

ಟೋಕಿಯೊದಲ್ಲಿ ಈ ವಾರದ ಆರಂಭದಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದ್ದು ಒಲಿಂಪಿಕ್ಸ್ ಮುಕ್ತಾಯದ ವರೆಗೂ ಮುಂದುವರಿಯಲಿದೆ. ಕ್ರೀಡಾಕೂಟ ಜುಲೈ 23ರಂದು ಆರಂಭಗೊಂಡು ಆಗಸ್ಟ್ ಎಂಟರಂದು ಮುಗಿಯಲಿದೆ. ಬಾರ್ ಮತ್ತು ರೆಸ್ಟೋರಂಟ್‌ಗಳನ್ನು ನಿಗದಿಗಿಂತ ಮೊದಲೇ ಮುಚ್ಚಿಸಿ ಮದ್ಯ ವ್ಯಾಪಾರಕ್ಕೆ ಕಡಿವಾಣ ಹಾಕಲು ಆಡಳಿತ ಮುಂದಾಗಿದೆ. ರೈಲುಗಳಲ್ಲಿ ಜನರ ಸಂಚಾರವನ್ನು ನಿಯಂತ್ರಿಸುವುದು ಇದರ ಉದ್ದೇಶ.

‘ಒಲಿಂಪಿಕ್ಸ್‌ನಿಂದಾಗಿ ಜಪಾನ್ ಜನತೆಗೆ ಯಾವುದೇ ಅಪಾಯ ಆಗದು. ವೈರಸ್ ವಿರುದ್ಧದ ಹೋರಾಟಕ್ಕೆ ಎಲ್ಲ ಬಗೆಯ ಪ್ರಯತ್ನಗಳನ್ನು ಮಾಡುತ್ತಿದ್ದು ಅಪಾಯ ಆಗದಂತೆ ಕೂಟ ಆಯೋಜನೆಗೆ ಬದ್ಧ’ ಎಂದು ಬಾಕ್ ಬುಧವಾರ ಹೇಳಿದ್ದರು.

ಅಥ್ಲೀಟ್‌ಗೆ ಕೋವಿಡ್

ಟೋಕಿಯೊಗೆ ಬಂದು 14 ದಿನಗಳ ಕ್ವಾರಂಟೈನ್‌ನಲ್ಲಿರುವ ಅಥ್ಲೀಟ್ ಒಬ್ಬರಿಗೆ ಕೋವಿಡ್ ದೃಢವಾಗಿದೆ ಎಂದು ಆಯೋಜಕರ ವೆಬ್‌ಸೈಟ್‌ನಲ್ಲಿ ಗುರುವಾರ ಪ್ರಕಟಿಸಲಾಗಿದೆ. ಅಥ್ಲೀಟ್ ಇನ್ನೂ ಹೋಟೆಲ್ ಕೊಠಡಿಯಲ್ಲೇ ಇದ್ದು ಕ್ರೀಡಾ ಗ್ರಾಮಕ್ಕೆ ಪ್ರವೇಶಿಸಲಿಲ್ಲ. ಕ್ರೀಡಾಪಟುವಿನ ಮಾಹಿತಿಯನ್ನು ಇನ್ನೂ ಬಹಿರಂಗಪಡಿಸಲಾಗಿಲ್ಲ.



ಬೋಟ್ ಸಿದ್ಧಗೊಳಿಸುತ್ತಿರುವ ವಿಷ್ಣು –ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಟೋಕಿಯೊದಲ್ಲಿ ಭಾರತ ರೋಯಿಂಗ್ ತಂಡ

ಟೋಕಿಯೊ (ಪಿಟಿಐ): ಒಲಿಂಪಿಕ್ಸ್‌ನ ಸೇಲಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಭಾರತದ ನೇತ್ರಾ ಕುಮನನ್ ಮತ್ತು ವಿಷ್ಣು ಸರವಣನ್ ಅವರು ಗುರುವಾರ ತಮ್ಮ ಬೋಟ್‌ಗಳನ್ನು ಪಡೆದುಕೊಂಡರು. ಅವರು ಲೇಜರ್ ಕ್ಲಾಸ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. ನೇತ್ರ ಅವರು ಸ್ಪೇನ್‌ನಲ್ಲೂ ವಿಷ್ಣು ಮಾಲ್ಟಾದಲ್ಲೂ ಅಭ್ಯಾಸ ನಡೆಸಿದ್ದರು. ವರುಣ್ ಠಕ್ಕರ್ ಮತ್ತು ಗಣಪತಿ ಚೆಂಗಪ್ಪ ಜೊತೆ ಇವರು ಟೋಕಿಯೊ ತಲುಪಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಡಿವೈಇಎಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮರ್ಥ ಆಟವಾಡಿದ ಬೆಂಗಳೂರು ಡಿವೈಇಎಸ್ ತಂಡ ಪ್ರೊ.ಪರಪ್ಪ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ‘ಎ’ ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಗುರುವಾರದ ಪಂದ್ಯದಲ್ಲಿ ರಾಜ್‌ಮಹಲ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ ಡಿವೈಇಎಸ್ 85-40ರಲ್ಲಿ ಗೆಲುವು ಸಾಧಿಸಿತು. ಶ್ರೀನಿವಾಸ 17 ಮತ್ತು ಶಶಿಧರ್ 14 ಪಾಯಿಂಟ್ ಗಳಿಸಿ ಮಿಂಚಿದರು. ರಾಜ್‌ಮಹಲ್ ಪರ ಕಾರ್ತಿಕ್ 22 ಪಾಯಿಂಟ್ ಗಳಿಸಿದರು.

ಅರವಿಂದ (20) ಮತ್ತು ಕಾರ್ತಿಕೇಯನ್ (16) ಅವರ ಉತ್ತಮ ಆಟದ ನೆರವಿನಿಂದ ಬ್ಯಾಂಕ್ ಆಫ್ ಬರೋಡ ತಂಡ ಜೆಎಸ್‌ಸಿಯನ್ನು 79-30ರಲ್ಲಿ ಸೋಲಿಸಿತು.

	ನಗದು ರಿಯಾಯಿತಿ#	ಎಕ್ಸ್‌ಚೇಂಜ್ ಆಫರ್#	ಕಾರ್ಪೊರೇಟ್ ಆಫರ್#	ಒಟ್ಟು ಉಳಿತಾಯ/ಆಫರ್ (ವರೆಗೆ)#
Alto# (ಪೆಟ್ರೋಲ್)	₹25 000	₹15 000	₹4 000	**₹44 000**
S-Presso# (ಪೆಟ್ರೋಲ್)	₹25 000	₹15 000	₹4 000	**₹44 000**
WagonR# (ಪೆಟ್ರೋಲ್)	₹15 000	₹15 000	₹4 000	**₹34 000**

S-PRESSO WAGONR ALTO

E-BOOK TODAY AT WWW.MARUTISUZUKI.COM OR VISIT YOUR NEAREST MARUTI SUZUKI DEALERSHIP.

MARUTI SUZUKI AUTHORISED DEALERS: BENGALURU: SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, PH: 8884442299. **VARUN MOTORS:** MALLESHWARAM, HEBBAL, 78991 00200. **BIMAL:** ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS PH: 080-30693069. **KALYANI:** MYSORE ROAD, BANNERGHATTA ROAD, NAGARBHAVI, BANASWADI, RAMANAGARAM, CHANNAPATNA, KANAKPURA, BANNERGATTA, BIDADI: 95909 90011. **KATARIA:** KANAKAPURA ROAD, PH: 78990 40000. **MANDOVI:** BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. **PRATHAM:** HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. **RNS MOTORS:** YESHWANTHPUR, BOMMANAHALLI, NELAMANGALA, PH: 9538965804. **TUMKUR: SAKETH:** TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

#Terms and conditions apply. Offer includes cash discounts, exchange offer and corporate/rural offer (wherever applicable) on VXI petrol variant of respective model. Corporate offer value is maximum offer value and same is applicable for select corporates only. The terms and conditions are subject to change without any prior notice. All offers are brought to you by Maruti Suzuki dealers only. Offers may vary from city to city and variant to variant for different models. Parts and accessories shown may not be a part of standard equipment. Colours shown may vary from actual body color due to printing on paper. Images used are for illustration purposes only. Offers valid till 31st July'21 or till stock lasts, whichever is earlier. For more details, contact your nearest Maruti Suzuki dealer. *Mileage as certified by test agency under rule 115 of CMVR,1989. *Mentioned mileage is for petrol variant of respective model.